UNIVERSAL
LIBRARY
OU_198311
UNIVERSAL
LIBRARY

# ಗಿರಿಜಾಕಲ್ಯಾಣ ಮಹಾಪ್ರಬಂಧಂ

(ಸಂಗ್ರಹ)

ಸಂಪಾದಕರು :

ಎಚ್. ದೇವೀರಪ್ಪ

ದೇ. ಜವರೇಗೌಡ

ಅಧಿಕೃತ ಮಾರಾಟಗಾರರು :

ಶ್ರೀ ಗೌರೀಶಂಕರ ಬುಕ್ ಡಿಪೋ

ಮೈಸೂರು.

ಮೊದಲನೆಯ ಮುದ್ರಣ ೧೯೫೧
ಎರಡನೆಯ ಮುದ್ರಣ ೧೯೫೩

ked 1965

ಎಲ್ಲ ಹಕ್ಕುಗಳು ಸಂಪಾದಕರವು

APR 1967

ಬೆಲೆ ರೂ. ೨—೮—೦

# ಪೀಠಿಕೆ

**ಕವಿ :** ಗಿರಿಜಾಶಂಕರರ ಕೀರ್ತಿಯಂತೆ, ಅವರ ದಿವ್ಯಾಶೀರ್ವಾದದಂತೆ ಕಾಲನದಿಸ್ಪರ್ಧಿಯಾಗಿ ಪ್ರವಹಿಸುತ್ತಿರುವ 'ಗಂಗಾಪ್ರಾಯೆ' ತುಂಗಭದ್ರೆಯ ಪಾವನ ಸಾನ್ನಿಧ್ಯದಲ್ಲಿ, ಹಸುರಿಡಿದ ಗಿರಿವನಗಳ ಹದುಳ ತೆಕ್ಕೆಯಲ್ಲಿ ಸತ್ಯಧರ್ಮಗಳ ನಿತ್ಯತೆಯನ್ನು ಸಾರುತ್ತ, ಭಕ್ತಜನರಿಗೆ ಸದಾ ಕಾಮಧೇನುವಾಗಿ ಮಲಗಿದೆ ಪಂಪಾಕ್ಷೇತ್ರ. ಇಂದಿನ 'ಹಾಳು ಹಂಪೆ' ಹಿಂದೊಮ್ಮೆ ಮಹಾಮುನಿಗಳ, ವಿರಕ್ತರ ಮತ್ತು ಭಕ್ತರ ನೆಲೆವನೆಯಾಗಿತ್ತು; ಭಾರತೀಯ ಸಂಸ್ಕೃತಿಯ ಪೋಷಕಕೇಂದ್ರವಾಗಿತ್ತು; ವಿಶ್ವವಿಖ್ಯಾತ ವಿಜಯನಗರ ಸಾಮ್ರಾಜ್ಯಲಕ್ಷ್ಮಿಯ ಅಕ್ಕರೆಯ ಬೀಡಾಗಿತ್ತು. ಅಂದು ಅಲ್ಲಿ ಎಲ್ಲಿ ನೋಡಿದರೂ ವೇದಮಂತ್ರಗಳ ಘೋಷ, ಶಿವ ಸಂಕೀರ್ತನೆ ಕೇಳಿಬರುತ್ತಿದ್ದುವು.

'ಸಕಳ ಪುಣ್ಯಂಗಳೋಲಗಿಪ ಪಂಪಾಪುರಂ
ಸಕಳ ಮುಕ್ತಿಗಳಲಂಕರಿಪ ಪಂಪಾಪುರಂ'

ಶೈವಾಗಮವಿದರಿಂದಲೂ, ಮಹಾವಿದ್ವಾಂಸರಿಂದಲೂ, ಕಲಾಕೋವಿದರಿಂದಲೂ ಅಲಂಕೃತವಾಗಿ ಹಿರಿಯ ವಿದ್ಯಾಪೀಠವಾಗಿ ಕಂಗೊಳಿಸುತ್ತಿತ್ತು.

ಇಂತಹ ಪವಿತ್ರಕ್ಷೇತ್ರದ 'ಶಿವಭಕ್ತರಲ್ಲದೊಡೆ ಕೈಮುಗಿಯದ, ತನ್ನ ಯುವತಿಗಲ್ಲದೆ ಮನವೆಳಸದ, ಕಾಯದಂಗವ ಹಿಡಿಯದ, ನಿಂದೆಯ ನಾಡದ, ಪರದೈವವಂ ಬಗೆಯದ, ಶಿವಲಿಂಗಪೂಜೆಯ ಭ್ರಾಂತಿ ಹಿಂಗದ, ಕಾಮವಿಕಾರಾದಿ ಷಡುವರ್ಗವರ್ಜಿಯದ' ಮಹಾದೇವ ಮತ್ತು ಅವನ ಸಹಧರ್ಮಿಣಿ ಶರ್ವಾಣಿಯರೇ ಹರಿಹರದೇವನ ತಂದೆತಾಯಿಯರು; 'ಪ್ರತ್ಯಕ್ಷ ಪಂಚಾನನ' ರಾದ ಮಾಯಿದೇವರೇ ಇವನ ಗುರು. ವಿರೂಪಾಕ್ಷನ ಕೃಪೆಯಿಂದ ಸದ್ಗುರುವಿನ ಮಹಿಮೆಯಿಂದ

. . . . . . . . . . . . . . . ಗುರುಭಕ್ತಿ ನಿ
ಷ್ಕಾಮಮಱಿವಾಚಾರ ನೀತಿ ದಯೆ ಜಂಗಮ
ಪ್ರೇಮ ಶಮೆ ದಮೆ ಶಾಂತಿ ದಾಂತಿ ಸತ್ಯವುದಾರ ಸದ್ಭಕ್ತಿ ಏಕನಿಷ್ಠೆ ।
ಸಾಮರ್ಥ್ಯವೆಲ್ಲಾ ಕಳಾಪ್ರೌಢಿ ಸದ್ಗುಣ
ಸ್ತೋಮವೆಲ್ಲಂ ನೆರೆದು . . . . . . . . . . . . . . .

ರೂಪುವಡೆದಂತೆ ಹರಿಹರನು ಬೆಳಗಿದನು. ಇವನ ಕೀರ್ತಿಕುಸುಮದ ನರುಗಂಪು ನಾಡಿನಲ್ಲೆಲ್ಲ ಹರಡಿತು. ನಾಡಿನ ಮೂಲೆಮೂಲೆಗಳಿಂದ ಇವನ ಕಾರುಣ್ಯವನ್ನು ಬಯಸಿ ಬಂದ ವಿದ್ಯಾರ್ಥಿಗಳಲ್ಲಿ ಇವನ ಸೋದ ರಳಿಯ ರಾಘವಾಂಕನು ಸಕಲ ಕಲಾಶಾಸ್ತ್ರಪಾರಂಗತನಾಗಿ ಉದ್ದಾಮ ಕವಿಯಾಗಿ ಬೆಳಗಿದನು. ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಾಯಿತು.

ಅದೇ ಸಮಯದಲ್ಲಿ ಹೊಯ್ಸಳ ದೊರೆಗಳ ಆಶ್ರಯದಲ್ಲಿ ಉನ್ನತಾಧಿಕಾರಿಯಾಗಿದ್ದ ಪದ್ಮರಸನು ಹರಿಹರನ ಪಾಂಡಿತ್ಯ ಪ್ರತಿಭೆ ಶಿವಭಕ್ತಿ ಸೌಜನ್ಯಗಳನ್ನು ಮೆಚ್ಚಿ, ಅವನನ್ನು ಹಳೆಯಬೀಡಿಗೆ ಕರೆಸಿ ಕೊಂಡು ಕರಣಿಕನ ಕೆಲಸವನ್ನು ಕೊಡಿಸಿದನು. 'ಷೋಡಶಪ್ರತಿಯ ಕರಣಿಕರೊಳಗ್ರಣಿ' ಎನ್ನಿಸಿಕೊಂಡರೂ ಈ 'ಗಾಡಿಕಾರ'ನ ಚಿತ್ತ ವಿರೂ ಪಾಕ್ಷನಿಗೆ ಮೀಸಲಾಗಿತ್ತು. ಇವನ ಅಂತರಂಗಭಿತ್ತಿಯ ಮೇಲೆ ವಿರೂ ಪಾಕ್ಷನ ಚಿತ್ರ ಸುಸ್ಪಷ್ಟವಾಗಿ ರೇಖೆಗೊಂಡಿತ್ತು. ಮೇಲುನೋಟಕ್ಕೆ ಕರಣಿಕ ನಂತೆ, ಸಂಸಾರಿಗನಂತೆ ಕಾಣಿಸಿಕೊಳ್ಳುತ್ತಿದ್ದನು. ಆದರೆ ಅಂತರಂಗದ ಪರಂಜ್ಯೋತಿ ಮಾತ್ರ ದಿನದಿನಕ್ಕೂ ಪುಟಗೊಂಡು ಹೊಗರೇರುತ್ತಿತ್ತು. 'ನೀರು ತಾವರೆಯಂತೆ ನೆಯಿ ನಾಲಗೆಯಂತೆ' ಸಂಸಾರಕ್ಕೆ ಹೊದ್ದಿಯೂ ಹೊದ್ದದಂತೆ ಇದ್ದ ಈ ಭಕ್ತಿಯೋಗಿಗೆ ಯಾವ ದಂದುಗವೂ ಅಂಟಲಿಲ್ಲ.

ಭಗವಂತನ ಕರುಣೆ, ಎಂದು, ಯಾವ ರೂಪದಲ್ಲಿ ಬರುತ್ತದೆ ಎಂಬುದನ್ನು ಯಾರೂ ಹೇಳಲಾಗುವುದಿಲ್ಲ. ಅದು ನಂಬಿಯಣ್ಣನಿಗೆ ವೃದ್ಧಮಾಹೇಶ್ವರನ ರೂಪದಲ್ಲಿ, ದುರ್ಯೋಧನನಿಗೆ ಛಲವಾಗಿ, ಬಹು ಕಾಮಿ ಕೌಶಿಕನ ರೂಪದಲ್ಲಿ, ಸುರುಚಿ ಕೈಕೆಯರ ಈರ್ಷ್ಯೆಯಾಗಿ—

ಭಕ್ತಿಜ್ಞಾನವೈರಾಗ್ಯಗಳ ರೂಪದಲ್ಲಿ, ಪ್ರಲಯಸ್ವರೂಪಿಯಾಗಿ, ಅನಂತ ರೀತಿಗಳಲ್ಲಿ ಬರಬಹುದು. ಹರಿಹರನ ಅಭ್ಯುದಯವನ್ನೂ ಅವನ ಪ್ರಾಮಾಣಿಕತೆಯನ್ನೂ ಸಹಿಸದ ಜನ ಗುಂಪುಗೂಡಿದರು; ಅವನನ್ನು ಗೇಲಿಗೆಬ್ಬಿಸಿದರು; ಅವನ ವಿಷಯವಾಗಿ ದೊರೆಯ ಮುಂದೆ ಚಾಡಿ ಹೇಳಿದರು. ಜೊತೆಗೆ, ಸಂಸಾರ ಜೀವನದಲ್ಲಿ ಏನೇನು ಕಹಿಫಲಗಳು ದೊರಕಬಹುದೋ ಅವೆಲ್ಲವೂ ಅವನಿಗೆ ದೊರಕಿದುವು. ಆದರೂ ಹರಿಹರನ ಭಕ್ತಿಯ ಸಸಿ ಈ ಸೀಗೆಯ ನಡುವೆ ಬೆಳೆಯುತ್ತಲೇ ಇತ್ತು. ವಿರೂಪಾಕ್ಷ ಅವನ ಬಾಳುಸಿರಾದನು. ಅವನ ನೋಟಮಾಟಗಳೆಲ್ಲ ವಿರೂಪಾಕ್ಷಮಯವಾದುವು. ಲೆಕ್ಕದ ವಹಿಯ ತುಂಬ ವಿರೂಪಾಕ್ಷ ಮಂತ್ರವೇ! ದುರಾತ್ಮರಾದ ಪಿಸುಣರಿಗೆ ಸದವಕಾಶ ದೊರೆಯಿತು. ನೆಟ್ಟಗೆ ದೊರೆಗೆ ದೂರು ಹೊತ್ತರು. ದೊರೆ, ಹಿಂದು ಮುಂದು ನೋಡದೆ ಸಂಜೆಯ ಹೊತ್ತಿಗೆ ಲೆಕ್ಕ ಒಪ್ಪಿಸಬೇಕೆಂದು ಹರಿಹರನಿಗೆ ಆಜ್ಞಾಪಿಸಿ ದನು. ಕರ್ತವ್ಯನಿಷ್ಠನಾದ ಈ ದೈವಭಕ್ತ ನಿಯತವೇಳೆಯಲ್ಲಿ ಲೆಕ್ಕವನ್ನು ಒಪ್ಪಿಸಿ ಪಿಸುಣರನ್ನೂ ದೊರೆಯನ್ನೂ ಬೆರಗುಗೊಳಿಸಿದನು. ತಪ್ಪಿದರೆ ಶೂಲಕ್ಕೇರಿಸಬಲ್ಲ ದೊರೆಯ ಎದುರಿಗೆ ಲೆಕ್ಕ ಒಪ್ಪಿಸುವಾಗಲೂ ಅವನ ಚಿತ್ತ ಹಂಪೆಯಲ್ಲಿ; ಅಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಸೇವೆಯೂ ಅವನ ಕಣ್ಣಿನಲ್ಲಿ ಬರೆದಂತಿತ್ತು. ಪೂಜಾಸಮಯದಲ್ಲಿ ಆರತಿಯ ಬೆಂಕಿ ಲಿಂಗದ ಎದುರಿಗಿದ್ದ ತೆರೆಗೆ ತಗುಲಿ ಉರಿಯಲಾರಂಭಿಸಿತ್ತು. ಭಕ್ತಿಯೋಗಿ ಹರಿಹರನ ಜ್ಞಾನದೃಷ್ಟಿಗೆ ಅದು ಗೋಚರವಾಯಿತು. ಅವನು ಇಲ್ಲಿದ್ದೇ ಭೋಂಕನೆ ಕೈಗಳನ್ನು ಮುಂದಕ್ಕೆ ಚಾಚಿ ತಿಕ್ಕಿ ಬೆಂಕಿಯನ್ನು ಆರಿಸಿದನು. ದೊರೆ ಅವನನ್ನು ಹುಚ್ಚನೆಂದು ಹಾಸ್ಯಮಾಡಿ ನಕ್ಕನು, ದೂಷಕರು ಗಹಗಹಿಸಿದರು. 'ಲಿಂಗಸಂಗಸೌಖ್ಯಾವೇಶಿಯ ಪರಿಯನ್ನು ಭಗವಂತ ನೊಬ್ಬನೇ ಬಲ್ಲ' ಎಂದು ಪದ್ಮರಸ ಅವರಿಗೆ ಎಚ್ಚರಿಕೆ ಕೊಟ್ಟನು.

ಪಿಸುಣರ ಹಗೆಯ ರೂಪದಲ್ಲಿ ಈಶ್ವರೇಚ್ಛೆ ಫಲಿಸಿತು. ಇಷ್ಟು ಹೊತ್ತಿಗಾಗಲೆ ಅವನನ್ನು ವೈರಾಗ್ಯಜೀವನಕ್ಕೆ ಬಿಡದೆ ಬಂಧಿಸಿದ್ದ ಪತ್ನಿ ಕೈಬಿಟ್ಟಿದ್ದಳು. ಆಳುದ್ದ ದೊಡಲನ್ನು ಗೇಣುದ್ದ ಮಾಡಿಕೊಂಡು 'ಜೀಯ ಹಸಾದ' ಎಂದು ಕೈಮುಗಿದು 'ಪೆರ್ಬಿಟ್ಟೆ' ಮಾಡಿ ರೋಸಿ

ಹೋಗಿದ್ದನು. 'ಈಶಸೇವೆಯಲ್ಲದೆ ಮನುಜಸೇವೆ ಅಗ್ರಾಹ್ಯ' ವೆಂದು ನಿಶ್ಚಯಿಸಿ ವೈರಾಗ್ಯಪರನಾಗಿ, ಶರಣಸಂತತಿಗೆ ಭಯಭಕ್ತಿಯಿಂದ ಮೆಯ್ಯಿಕ್ಕಿ ಅವರಿಂದ ಕಳುಹಿಸಿಕೊಂಡು ಪಂಪಾಪುರಾಭಿಮುಖನಾಗಿ ಹೊರಟನು. ಗೂಡಹಕ್ಕಿ ಗೂಡಿನ ಕಡೆಗೆ ಹಾರಿತು. ಹೋಗುವ ದಾರಿಯಲ್ಲಿ ಅವನು ಅನೇಕ ದೀನರನ್ನು ಅನಾಥರನ್ನು ಉದ್ಧಾರಮಾಡಿದನು. ಅವನು ಮೆಟ್ಟಿದ ಧರೆ ಪವಿತ್ರಕ್ಷೇತ್ರವಾಯಿತು; 'ಆತನಿರ್ದುದೆ ಕಾರಾಚಲ, ಆತನಿರ್ದುದೆ ಹಿಮಾದ್ರೀಂದ್ರಂ, ಆತನಿರ್ದುದೆ ವಾರಣಾಸಿ, ಆತನಿರ್ದುದೆ ವಿರೂಪಾಕ್ಷಂಗೆ ಪಂಪಾಪುರಂ' ಎನ್ನಿಸಿತು ಭಕ್ತಕೋಟಿಗೆ. ಹಂಪೆಯ ಶಿವಭಕ್ತರು ತಮ್ಮ ಗುರುವನ್ನು ಪುರದಲ್ಲೆಲ್ಲ ಮೆರೆಸಿದರು. ಹರಿಹರನಾದರೊ ಅಗಲಿದ ತಾಯಿಯನ್ನು ಮತ್ತೆ ಪಡೆದ ಮಗುವಿನಂತೆ ಪಂಪಾಧಿನಾಥನೆಡೆಗೆ ಧಾವಿಸಿಹೋಗಿ ಅವನನ್ನು ಅಪ್ಪಿಕೊಂಡನು. ಅವನ ತನು ಪುಳಕಿತವಾಯಿತು, ಕೊರಳ ಸೆರೆ ಬಿಗಿದುವು, ಕಣ್ಣುಗಳು ತುಂಬಿ ತೊರೆದುವು. ಅಂದಿನಿಂದ ಶಿವಪೂಜೆ, ಶಿವಕೀರ್ತನೆ ಮತ್ತು ಶಿವಗೋತ್ರಸಂಕೀರ್ತನೆಗಳು ಅವನ ನಿತ್ಯಕರ್ಮಗಳಾದುವು.

ಹೀಗಿರುವಾಗ ಹರೀಶ್ವರನ ಕಾವ್ಯಗಳ ಕಂಪು ಆಂಧ್ರ ದ್ರಾವಿಡ ದೇಶಗಳಲ್ಲಿ ಹರಡಿತು. ಆಂಧ್ರದೇಶದ 'ಗಣಿಕಾಗ್ರಣಿ' ಚದುರ ಚೆಲುವೆಯೊಬ್ಬಳು ಅವನ ಕಾವ್ಯರಸಗಂಗೆಯಲ್ಲಿ (ಅದರಲ್ಲಿಯೂ ನಂಬಿಯಣ್ಣನ ರಗಳೆಯಲ್ಲಿ) ಮನಮಿಂದು, ಚಿತ್ತಾಕರ್ಷಕವಾದ ಕಲಾಪ್ರೌಢಿಮೆಗೆ ಸೂರುಹೋಗಿ, ಆ ಕಲ್ಪನೆ, ಆ ಭಾವನೆ, ಆ ಶೃಂಗಾರಗಳಿಗೆ ತನ್ನನ್ನೆ ಅಲ್ಲಿಂದಲೆ ಮೆಚ್ಚುಗೊಟ್ಟಳು. ಆಕೆಯೇನೂ ನಾಡಾಡಿ ಹೆಣ್ಣಲ್ಲ; 'ಅಪೂರ್ವರೂಪಿಣಿಯತಿವ್ಯೂಹಧೈರ್ಯಾನೇಕಪೌರುಸ್ಯಣಿ, ಘನಸುಗುಣಿ.' ಹರಿಹರನನ್ನು ಒಲಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆ ಒಳಗೆ, ಪಂಪಾಕ್ಷೇತ್ರಯಾತ್ರೆಯ ತೋರಿಕೆ ಹೊರಗೆ. ಒಂದು ದಿನ ಸಂಜೆ ರಾಜವೈಭವದಿಂದ ಬಂದು 'ನಿನ್ನವನಿರವನೆನಗೆ ತೋರೆಂದು ಎರಗಿ ಬೇಡಿಕೊಳ್ವಂತೆ ವಿರೂಪಾಕ್ಷನಿಗೆ ಎರಗಿ ಕಾಣಿಕೆಯಿತ್ತು' ಹರಿಹರನನ್ನು ಕೂಡುವ ಕಾತರದಿಂದ ತನ್ನ ಬೀಡಾರಕ್ಕೆ ಹಿಂತಿರುಗಿದಳು.

ಮಧ್ಯರಾತ್ರಿಯ ಭೀಕರ ನೀರವತೆಯ ಮಡಿಲಿನಲ್ಲಿ ಪಂಪಾಕ್ಷೇತ್ರ ಪವಡಿಸಿತ್ತು. ಈ ರಮಣಿ ಪ್ರಾಣಸಖಿಯೊಂದಿಗೆ ಹರಿದೇವನ ಕುಟೀರಕ್ಕೆ ಬಂದಳು. ಕರ್ಮಬಂಧನದಿಂದ ಮುಕ್ತಿಯನ್ನು ಪಡೆಯುವ ವ್ಯಕ್ತಿ ಆಚಾರ್ಯನನ್ನು ಅರಸಿಕೊಂಡು ಬರುವಂತೆ. ಅವಳು ಅಲ್ಲಿ ಕಂಡುದೇನು? 'ಕಳಾವಿದರರಸ ರಸಿಕಚಕ್ರಿ' ಹರಿಹರನನ್ನಲ್ಲ; ಭಕ್ತರಾಜ ಹರಿಹರದೇವನನ್ನು. ವಿಭೂತಿ ರುದ್ರಾಕ್ಷಿಗಳಿಂದ ಶೋಭಿಸುತ್ತಿದ್ದ ಉಜ್ಜ್ವಲಾಂಗ; ಹೊಳೆಹೊಳೆಯುತ್ತಿದ್ದ ಕಾವಿಯ ಬಣ್ಣದ ಉಷ್ಣೀಷಬಹಿರ್ವಾಸಗಳು; ಪದ್ಮಾಸನನಾಗಿ 'ಶಾಂತಿರಸದೆರಕದಿಂ ಸಮೆದ ಪುತ್ಥಲಿಯಂತೆ' ರಂಜಿಸುತ್ತಿದ್ದನು. ಹೃದಯಕಮಲದ ನಡುವೆ ಥಳಥಳಿಸಿ ಪ್ರಜ್ವಲಿಸುತ್ತಿದ್ದ ಪರಂಜ್ಯೋತಿಲಿಂಗವು ತಾನೇ ತಾನಾಗಿ, ಉರಿಲಿಂಗವಾಗಿ, ಪರಮಾನುಭವರಸಾವೇಶದಿಂದ ಮುಖದಲ್ಲಿ ಶಿವಕಲೆಯನ್ನು ಬೀರುತ್ತಿದ್ದ ರಸಯೋಗಿಯನ್ನು ಕಂಡು ಕಾಮನು ಬಿಲ್ಲನ್ನು ಇಳುಹಿದ, ರತಿ ವಿರತಿಯನ್ನು ಹೊಂದಿದಳು, ಶಶಿ ಮಸಿಯಾಯಿತು, ಮಲಯಮಾರುತ ಮಲೆಗಳಿಗೆ ಮರಳಿದನು, ವಸಂತ ಸಂಭ್ರಾಂತನಾದನು. ಅಭಿಸಾರಿಕೆಯಾಗಿ ಬಂದವಳು ವಿರಾಗಿಣಿಯಾಗಿ ತನ್ನ ತಪ್ಪನ್ನು ಅವನ ಮುಂದೆ ಒಪ್ಪಿಕೊಂಡಳು; ಅವನನ್ನು ಗುರುವಾಗಿ ಸ್ವೀಕರಿಸಿ ದೀಕ್ಷೆ ಪಡೆದಳು.

ಹೀಗೆ ಪಂಪಾಕ್ಷೇತ್ರ ಹರಿಹರನಿಗೆ ಜನ್ಮವಿತ್ತಿತು, ಸಾಕಿ ಸಲಹಿತು, ತಿಳಿವಿನ ಅರಿವಿನ ಬೆಳಕನ್ನು ಕೊಟ್ಟಿತು. ಕವಿತಾಶಕ್ತಿಯ ಪ್ರತಿಭೆಯ ವರವಿತ್ತು ಉನ್ನತ ಕಾವ್ಯರಚನೆ ಮಾಡುವ ಶಕ್ತಿಯನ್ನು ನೀಡಿತು. ಎಲ್ಲಕ್ಕೂ ಮಿಕ್ಕು ಶಿವಭಕ್ತಿಯ ಸುಧೆಯನ್ನು ಕರುಣಿಸಿತು. ಕೊನೆಯಲ್ಲಿ ತನ್ನೊಳಗೇ ಅವನಿಗೆ ಎಡೆಮಾಡಿಕೊಟ್ಟಿತು.

**ಕಾಲ :** ಹರಿಹರದೇವ, ಕೆರೆಯ ಪದ್ಮರಸ ಮತ್ತು ರಾಘವಾಂಕ ಈ ಮೂವರ ಕಾಲದ ವಿಷಯವಾಗಿ ವಿಪುಲವಾದ ಚರ್ಚೆ ನಡೆದಿದೆ. ಹೊಯ್ಸಳ ವೀರನರಸಿಂಹಬಲ್ಲಾಳನಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸನು ಹರಿಹರನಲ್ಲಿಯೂ ಅವನ ಸೋದರಳಿಯ ರಾಘವಾಂಕನಲ್ಲಿಯೂ ವಿಶೇಷ ಪೂಜ್ಯಭಾವವನ್ನಿಟ್ಟುಕೊಂಡಿದ್ದನಲ್ಲದೆ ಅವರಿಗೆ

ಆಶ್ರಯದಾತನಾಗಿದ್ದನೆಂದು ಪದ್ಮರಾಜಪುರಾಣ, ರಾಘವಾಂಕಚಾರಿತ್ರ ಮುಂತಾದ ವೀರಶೈವ ಪುರಾಣಗಳು ಹೇಳುತ್ತವೆ. ಆದುದರಿಂದ ಈ ಮೂವರೂ ಸಮಕಾಲೀನರೆಂದು ಧಾರಾಳವಾಗಿ ಹೇಳಬಹುದು. ಆದರೆ ಇವರು ಇದ್ದ ಕಾಲ ಯಾವುದೆಂಬ ಬಗೆಗೆ ಬಲ್ಲವರಲ್ಲಿ ಒಮ್ಮತವಿಲ್ಲ.

ಹರೀಶ್ವರನ ಸೋದರಳಿಯನಾದ ರಾಘವನು ಪಂಪಾಪುರದ ರಾಜನಾದ ದೇವರಾಜನ (ಕ್ರಿ. ಶ. ೧೨೮೬-೧೩೨೮) ಸಭೆಯಲ್ಲಿ ಹರಿಶ್ಚಂದ್ರ ಕಾವ್ಯವನ್ನು ಓದಿದಂತೆಯೂ, ಓರುಗಲ್ಲಿಗೆ ಹೋಗಿ ಕಾಕತೀಯ ರುದ್ರನ (ಕ್ರಿ. ಶ. ೧೨೯೨-೧೩೩೫) ಸಭೆಯಲ್ಲಿ ವೀರೇಶಚರಿತೆಯನ್ನು ಓದಿ ಅಲ್ಲಿದ್ದ ಕುಕವಿಗಳನ್ನು ಸೋಲಿಸಿದಂತೆಯೂ ನರಸಿಂಹ ಬಲ್ಲಾಳ (ಕ್ರಿ. ಶ. ೧೨೮೩)ನ ಮಂತ್ರಿಯಾದ ಕೆರೆಯ ಪದ್ಮರಸನನ್ನು ನೋಡುವುದಕ್ಕೆ ಹೋದಂತೆಯೂ ರಾಘವಾಂಕಚಾರಿತ್ರದಿಂದ ತಿಳಿದುಬರುತ್ತದೆ. ಆದುದರಿಂದ ಹರಿಹರ ಕ್ರಿ. ಶ. ೧೨೯೦ ರಲ್ಲಿ ಇದ್ದಿರಬೇಕೆಂದು ರೆ. ಕಿಟ್ಟೆಲ್ ಅವರ ಅಭಿಪ್ರಾಯ.[1]

ಕವಿ ಚರಿತೆಕಾರರು ಕಿಟ್ಟೆಲ್ ಅವರ ಅಭಿಪ್ರಾಯವನ್ನು ಒಪ್ಪದೆ, ಈ ಮೂವರೂ ಕ್ರಿ. ಶ. ೧೧೬೫ ರಲ್ಲಿದ್ದಿರಬೇಕೆಂದು ಹೇಳುತ್ತಾರೆ. ಅವರು ಕೊಡುವ ಕಾರಣಗಳಿವು:

೧) ಕ್ರಿ. ಶ. ೧೨೨೨ ರಲ್ಲಿ ಉದ್ಭಟಕಾವ್ಯವನ್ನು ಬರೆದು ಮುಗಿಸಿದ ಸೋಮರಾಜನು ಹರಿಹರನನ್ನೂ ಕೆರೆಯ ಪದ್ಮರಸನನ್ನೂ ಸ್ತುತಿಸಿದ್ದಾನೆ.

೨) ಸು ಕ್ರಿ. ಶ. ೧೨೪೫ ರಲ್ಲಿ ಹುಟ್ಟಿದ ಸೂಕ್ತಿಸುಧಾರ್ಣವದಲ್ಲಿ ಹರಿಹರನ ಗಿರಿಜಾಕಲ್ಯಾಣದ ಪದ್ಯಗಳು ಸೇರ್ಪಡೆಯಾಗಿವೆ.

೩) ಆಗ ಇದ್ದ ಹೊಯ್ಸಳರ ದೊರೆ ೧೧೪೧ ರಿಂದ ೧೧೭೩ ರ ವರೆಗೆ ಆಳಿದ ನರಸಿಂಹಬಲ್ಲಾಳ; ರಾಘವಾಂಕ ಕವಿಯನ್ನು ಸನ್ಮಾನಿಸಿದ ಓರುಗಲ್ಲಿನ ಕಾಕತೀಯ ರುದ್ರ ಕ್ರಿ. ಶ. ೧೧೬೨ ರಲ್ಲಿದ್ದವನು. ಪಂಪಾಪುರದ ದೇವರಾಜನ ವಿಷಯ ಏನೂ ಗೊತ್ತಿಲ್ಲ.

---

1 ನಾಗವರ್ಮನ ಛಂದೋಂಬುಧಿಯ ಉಪೋದ್ಘಾತ.

೪) ಸಕಳೇಶ ಮಾದರಸನು ಬಸವಣ್ಣನ ಹಿರಿಯ ಸಮಕಾಲೀನನೂ, ಅವನ ಮೊಮ್ಮಗ ಕೆರೆಯ ಪದ್ಮರಸನು ಕಿರಿಯ ಸಮಕಾಲೀನನೂ ಆಗುತ್ತಾರೆ.

ಈ ಎರಡು ಅಭಿಪ್ರಾಯಗಳನ್ನು ಒಪ್ಪದೆ ಡಾ॥ ಅ॥ ವೆಂಕಟ ಸುಬ್ಬಯ್ಯನವರು ಇವರ ಕಾಲ ಕ್ರಿ. ಶ. ೧೩೦೦ ಎಂದು ಸಾಧಿಸಿದ್ದಾರೆ. ಅವರು ಕೊಡುವ ಕಾರಣಗಳಿವು[1] :

೧) ಸೋಮರಾಜನು ಉದ್ಭಟಕಾವ್ಯವನ್ನು ಬರೆದದ್ದು ಕ್ರಿ. ಶ. ೧೨೨೨ ರಲ್ಲಲ್ಲ, ೧೫೨೨ ರಲ್ಲಿ.

೨) ಮೂರನೆಯ ಬಲ್ಲಾಳ (ಅಂದರೆ ನರಸಿಂಹಬಲ್ಲಾಳ: ಕ್ರಿ. ಶ. ೧೨೯೧-೧೩೪೨) ನೂ ಓರಗಲ್ಲಿನ ಪ್ರತಾಪರುದ್ರನೂ ಸಮಕಾಲೀನರು.

೩) ೧೨೮೬ ರಿಂದ ೧೩೨೮ ರವರೆಗೆ ಪಂಪಾಪುರದಲ್ಲಿ ಒಬ್ಬ ದೇವರಾಯ ಆಳುತ್ತಿದ್ದನು

ಇಷ್ಟು ಇವರ ಕಾಲನಿರ್ಣಯದ ಚರಿತ್ರೆ[2].

ಹರಿಹರನು ಪಂಪಾಕ್ಷೇತ್ರದ ವರ್ಣನೆಯನ್ನು ತನ್ನ ಗಿರಿಜಾ ಕಲ್ಯಾಣದಲ್ಲಿ ಪವಣಿಸಿರುವನಷ್ಟೆ. ಸುರ-ಚಿರ ತುಂಗಭದ್ರೆಯ ಎರಡು

---

1 ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ ಪುಟ ೨೬೬.

2 ಶ್ರೀ ಬುದ್ದಯ್ಯ ಪುರಾಣಿಕರು ಇದನ್ನು ಒಪ್ಪದೆ ಹರಿಹರನ ಕಾಲ ಕ್ರಿ. ಶ. ೧೨೦೦ ಇರಬೇಕೆಂದು ಊಹಿಸುತ್ತಾರೆ. ಶಿವಾನುಭವ (೯-೨) ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಗಿರಿಜಾಕಲ್ಯಾಣದ ಪದ್ಯಭಾಗಗಳೆರಡು ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಉದಾಹೃತವಾಗಿರುವುದರಿಂದಲೂ, ಸೂಕ್ತಿಸುಧಾರ್ಣವದಲ್ಲಿ ಅದೇ ಕಾವ್ಯದ ಅನೇಕ ಪದ್ಯಗಳು ಸೇರಿರುವುದರಿಂದಲೂ ಕ್ರಿ. ಶ. ೧೨೪೫ಕ್ಕಿಂತ ಮೊದಲೆ ಹರಿಹರ ಬಾಳಿರಬೇಕೆಂದೂ, ಕುಮಾರ ಪದ್ಮರಸನು ಹೆಸರಿಸಿರುವ ಏಕಾಂತದ ರಾಮಯ್ಯನು ಕ್ರಿ. ಶ. ೧೨೦೦ ರಿಂದ ಈಚೆಯವನಿರಬೇಕೆಂದೂ ಆದುದರಿಂದ 'ಏಕಾಂತರಾಮಿ ತಂದೆಗಳ ರಗಳೆ' ಯನ್ನು ರಚಿಸಿರುವ ಹರಿಹರದೇವನು ಕ್ರಿ. ಶ. ೧೨೦೦ ರಿಂದ ಇನ್ನೂ ಈಚೆಯವನಿರಬೇಕೆಂದೂ ಹೇಳುತ್ತಾರೆ. (ಸಿದ್ಧರಾಮ ಚಾರಿತ್ರದ ಮುನ್ನುಡಿ.)

ತಡಿಗಳಲ್ಲಿಯೂ ವಿಶಾಲವಾದ ಅರಣ್ಯವಿದ್ದಿತೆಂದೂ, ಅಲ್ಲಿ ಅನಂತಗುಲ್ಮ ಲತಾವೃಕ್ಷಗುಹಾಗಹ್ವರಂಗಳೊಳ್ ಮನುಮುನಿಸ್ತೋಮವಿದ್ದಿತೆಂದೂ ಕವಿಯೇ ಹೇಳಿದ್ದಾನೆ ಆ ಕ್ಷೇತ್ರ ಆಗ ಇನ್ನೂ ಕ್ಷೇತ್ರವಾಗಿತ್ತೇ ಹೊರತು ವಿದ್ಯಾನಗರವಾಗಿರಲಿಲ್ಲ. ಆದುದರಿಂದ ಹರಿಹರನು ಕ್ರಿ. ಶ. ೧೩೬೬[1] ರಿಂದ ಈಚೆಯವನಲ್ಲವೆಂಬುದು ಖಚಿತ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಹೇಳುವಂತೆ ಏಕಾಂತದ ರಾಮಯ್ಯ (ಸು. ಕ್ರಿ. ಶ. ೧೨೦೦) ಮತ್ತು ಕುರುಗೋಡು ರಾಚಭೂಪ (ಸು. ಕ್ರಿ. ಶ. ೧೨೦೦) ಇವರ ಕಾಲದಿಂದ ಈಚೆಗೆ ಹರಿಹರ ರಾಘವಾಂಕರು ಬಾಳಿರಬೇಕು. ಕೆರೆಯ ಪದ್ಮರಸನ ಬಳಿಗೆ ಬಂದು ವಿಧವೆಯೊಬ್ಬಳು ತಾನು ಮಗನ ಮದುವೆಗೆಂದು ಕೂಡಿಟ್ಟಿದ್ದ ಹೊನ್ನುಗಳನ್ನು ಯಾರೋ ಕದ್ದೊಯ್ದರೆಂದು ದೂರು ಕೊಡಲು ಅವನು ತನಗೆ ಶಿವನು ತಂದಿತ್ತ 'ಪಡಿಯ' ಹೊನ್ನುಗಳನ್ನು ತೋರಿಸಲು ಆ ನಾಣ್ಯಗಳು ತನ್ನವೇ ಎಂದು ಆ ಬಡವೆ ಹೇಳಿದ ಹಾಗೂ ಅದನ್ನು ಕಂಡು ಪದ್ಮರಸನು ಕೊರಗಿ 'ವಿತ್ತನಾಥಾಪ್ತಂ ಸುವರ್ಣಾದ್ರಿ

---

ಶ್ರೀ ಎಸ್. ಎಸ್. ವಾಳವಾಡ ಮತ್ತು ಶ್ರೀ ಕುಂದಣಗಾರರು ಸಹ ಇವರ ಕಾಲ ಸು. ೧೩೦೦ ಇರಬೇಕೆಂದು ನಿರ್ಣಯಿಸುತ್ತಾರೆ. ನರಸಿಂಹಬಲ್ಲಾಳನ ಆಸ್ಥಾನದಲ್ಲಿ ಕರಣಿಕನಾಗಿದ್ದಾಗ ಹರಿಹರನು ತೋರಿಸಿದ ಪವಾಡವೇ ಅವರ ನಿರ್ಣಯಕ್ಕೆ ಆಧಾರ. 'ಈಶ್ವರ ಸಂವತ್ಸರದ ಮಾರ್ಗಶಿರ ದಶಮಿಾ ವಿಧುವಾಸರವೊಳು ಮಧ್ಯಾಹ್ನದವಸರದ ನೈವೇದ್ಯಕಾಲದಲ್ಲಿ ತೆರೆಯ ಮರೆಯೊಳು ಸಮರ್ಪಿಸಿದ ಧೂಪಾರತಿಯ ನಿರಿಸಲ್ತದಂಗಾರ ಸ್ಪರ್ಶಸದಿ ತಿರಸ್ಕರಣ ಬೇವುತಿರಲು' ಹರಿಹರನು ನಂದಿಸಿದನು. (ರಾಘವಾಂಕಚಾರಿತ್ರ ೧೪-೫೮, ೫೯) ಈ ಘಟನೆ ನಡೆದ ಮುಹೂರ್ತವನ್ನು ಸ್ವಾಮಿ ಕಣ್ಣುಪಿಳ್ಳೆಯವರ ಪಂಚಾಂಗದ ನೆರವಿನಿಂದ ಕ್ರಿ. ಶ. ೧೨೧೬ ನೆಯ ಡಿಶೆಂಬರ್ ೯ ನೆಯ ಸೋಮವಾರ ಮಧ್ಯಾಹ್ನ ಎಂದು ನಿರ್ಧರಿಸಿದ್ದಾರೆ. ('ಹರಿಹರದೇವ' ಪುಟ ೪೯ ರಿಂದ ೬೭ ರ ವರೆಗೆ) ಶ್ರೀ ಮಂ. ಗೋವಿಂದಪೈರವರೂ ಇವರ ಕಾಲ ಸು. ೧೨೦೦ ಇರಬೇಕೆಂದು ಹೇಳುತ್ತಾರೆ. (ಶರಣಸಾಹಿತ್ಯ ೨-೮, ೯)

1. ಗಿರಿರಾಜನ ಆಸ್ಥಾನವನ್ನು ಅಲಂಕರಿಸಿದ್ದ ರಾಜಪುತ್ರರ ಪಂಕ್ತಿಯಲ್ಲಿ ತುರುಷ್ಕರನ್ನೂ ಹರೀಶ್ವರನು ಸೇರಿಸಿದ್ದಾನೆ. ಮಲ್ಲಿಕಾಫರನ ದಂಡಯಾತ್ರೆಯ ತಾಪ ದಕ್ಷಿಣದೇಶಕ್ಕೆ ತಟ್ಟಿದ್ದರೆ ಬಹುಶಃ ಅವನು ಅವರನ್ನು ಸೇರಿಸುತ್ತಿರಲಿಲ್ಲವೆಂದು ಊಹಿಸಬಹುದು.

ವಾಸನೆಮಗಾಗಿಂತು ಚೌರ್ಯಗುಣಮಂ ಪೊತ್ತನೇ?' ಗಣಪತಿನೃಪಾಲನ ಅರಮನೆಯ ಧನವನ್ನು ಕದ್ದರೆ ಚಿಂತೆಯಿಲ್ಲ. ಬಡವಿಯ ಬಾಯ ತುತ್ತನ್ನು ಅಪಹರಿಸುವುದೆ? ಧನದ ಒಡೆಯರು ಇವನನ್ನು ಬೆನ್ನಟ್ಟಿ ಬಂದರೆ 'ಆನೇಂ ಗುಂಡಬೊಮ್ಮಯ್ಯನೇ ಕಾಯ್ವೊಡೆ?' ಎಂದು ಮುಂತಾಗಿ ಯೋಚಿಸಿದಂತೆ ಪದ್ಮರಾಜಪುರಾಣದಲ್ಲಿ[1] ಉಕ್ತವಾಗಿದೆ. ಕಾಕತೀಯ ಗಣಪತಿನೃಪಾಲನು ಕ್ರಿ. ಶ. ೧೨೦೦ ರಿಂದ ೧೨೬೦ ರ ವರೆಗೆ ರಾಜ್ಯವಾಳಿದಂತೆ ತಿಳಿದುಬರುತ್ತದೆ. ಗುಂಡಬೊಮ್ಮಯ್ಯನು ಆ ದೊರೆಯ ಸಮಕಾಲೀನನೆಂದೂ ಕಳವು ಮಾಡಿ ಬಂದು ಮರೆಹೊಕ್ಕವನನ್ನು ಕಾಪಾಡುವುದಕ್ಕಾಗಿ ಶೂಲವನ್ನೇರಿದನೆಂದೂ ಗೊತ್ತಾಗುತ್ತದೆ.[2] ಆದುದರಿಂದ ಪದ್ಮರಸನೂ ಆತನ ಸಮಕಾಲೀನರೂ ಕ್ರಿ. ಶ. ೧೨೦೦ ಕ್ಕಿಂತ ಈಚಿನವರೆಂಬುದು ಸ್ಪಷ್ಟ.

ಕವಿಚರಿತೆಕಾರರ ವಾದದ ಸತ್ಯಾಂಶ ಉದ್ಭಟಕಾವ್ಯದ ಕರ್ತೃ ಸೋಮರಾಜನ ಕಾಲವನ್ನವಲಂಬಿಸಿದೆ. ಇವನ ಕಾಲ ಕವಿಚರಿತೆಕಾರರು ಹೇಳುವಂತೆ ಕ್ರಿ. ಶ. ೧೨೨೨ ಅಲ್ಲವೆಂದೂ ೧೫೨೨ ಇರಬೇಕೆಂದೂ ಡಾಕ್ಟರ್ ಅ. ವೆಂಕಟಸುಬ್ಬಯ್ಯನವರೂ[3] ಶ್ರೀ ಗೋವಿಂದಪೈ[4] ಅವರೂ ನಿರ್ಣಯಿಸಿರುವುದರಿಂದ ಸೋಮರಾಜನ ಕಾಲ ನಮಗೆ ನೆರವಾಗುವುದಿಲ್ಲ. ಆದುದರಿಂದ ಹದಿಮೂರನೆಯ ಶತಮಾನದಲ್ಲಿ ಆಳಿದ ಇಬ್ಬರು ನರಸಿಂಹರಲ್ಲಿ ಒಬ್ಬನು ಪದ್ಮರಸಾದಿಗಳಿಗೆ ಆಶ್ರಯದಾತನಾಗಿರಬೇಕು.

ಹಾಸನ ಜಿಲ್ಲೆಯ ಬೇಲೂರಿನ ೨೪೪ ನೆಯ ಶಾಸನದಲ್ಲಿ ಪುಲಿಗೆರೆಯ ಪುರಾಣದ ಮಾಯಿದೇವಭಟ್ಟನ ಶಿಷ್ಯ (?) ಶಿವರಾತ್ರಿಯ ಮಾಯಿದೇವಂಗೆ ಹೊಯ್ಸಳ ನರಸಿಂಹನು ಕ್ರಿ. ಶ. ೧೨೮೫ ರಲ್ಲಿ ಒಂದು ದತ್ತಿ ಬಿಟ್ಟಂತೆ ಹೇಳಿದೆ. ಇದೇ ಶಾಸನದಲ್ಲಿ ಗೋಪೆಯ ಶಿವದೇವನ[5] 'ಮಗ' ಶಿವ

---

1 ಸಂಧಿ ೧೪–೭, ೮, ೯.

2 ಚನ್ನಬಸವಪುರಾಣ ೭೨ ನೆಯ ಸಂಧಿ; ಮರುಳಸಿದ್ಧಕಾವ್ಯ ೪–೪೦, ೪೧.

3 ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ: ಪುಟ ೨೧೯ ರಿಂದ ೨೨೭ ರವರೆಗೆ. 4 ಕನ್ನಡ ಸಾಹಿತ್ಯಪರಿಷತ್ಪತ್ರಿಕೆ ಸಂಪುಟ ೧೨ ಸಂಚಿಕೆ ೧. 5 ಇವನು

ಶರಣನು ಶಿವರಾತ್ರಿಯ ಮಾಯಿದೇವರಿಗೆ ಹೊದೋಟವೊಂದನ್ನು, ತಾರಣ ಸಂವತ್ಸರ ಫಾಲ್ಗುಣ ಶುದ್ಧ ಅಷ್ಟಮಿ ಬೃಹಸ್ಪತಿವಾರದಂದು (ಕ್ರಿ. ಶ. ೧೨೮೫ ನೆಯ ಫೆಬ್ರುವರಿ ೨೩) 'ಕ್ರಯಪ್ರಮಾಣಪತ್ರ' ಪೂರ್ವಕವಾಗಿ ಕೊಟ್ಟಂತೆ ಹೇಳಿದೆ. ಕ್ರಿ. ಶ. ೧೨೮೨ ರ ಒಂದು ಶಾಸನವಲ್ಲಿ ಅಪ್ಪರಸ ದೇವರಸರೆಂಬ ಶಿವಭಕ್ತರ ಮಹಿಮೆ ವರ್ಣಿತವಾಗಿದೆ[1] ಕೆರೆಯ ಪದ್ಮರಸನು ತ್ರಿಭುವನತಾತನೊಂದಿಗೆ ವಾದಮಾಡಿ ಜಯಪಡೆ

---

ಚೌಡದಾನಪುರದ ಶಾಸನಗಳಲ್ಲಿ ಹೊಗಳಿರುವ ಶಿವದೇವನೇ ಇರಬೇಕು. ಇವನ ಕಾಲ ಕ್ರಿ. ಶ. ೧೨೬೦. ಶ್ರೀ ಎಂ. ಜಿ. ನಂಜುಂಡಾರಾಧ್ಯರು ಸಂಪಾದಿಸಿರುವ 'ಶಿವ ದೇವ ವಿಜಯ' ದ ಒಂದನೆಯ ಅನುಬಂಧವನ್ನು ನೋಡಿ.

1 ಹಾಸನ ಜಿಲ್ಲೆಯ ಪುರವಣಿಯ ಶಾಸನಗಳಲ್ಲಿನ (Supplementary Inscriptions of Hassan) ಹೊಳೇನರಸೀಪುರದ ೧೧೨ ನೆಯ ಶಾಸನದಲ್ಲಿ ವಾವನೂರಿನ ಅಪ್ಪಯ್ಯದೇವರಸರ ಸ್ತುತಿಯಿದೆ. ಈ ಶಾಸನದ ಶೈಲಿ ಉನ್ನತ ಮಟ್ಟದಲ್ಲಿದೆ. ಹರಿಹರನ ಶೈಲಿಯ ಸೊಗಸು, ವಾತಿನ ನಿರರ್ಗಳತೆ, ಭಾವೌನ್ನತ್ಯ ಮತ್ತು ಭಕ್ತಿರಸವನ್ನು ಇಲ್ಲಿ ಕಾಣಬಹುದು. ಅಪ್ಪಯ್ಯದೇವರಸರಿಬ್ಬರೂ ಶಿವ ಶರಣರು. ಆದುದರಿಂದ ಈ ಶಾಸನ ಹರಿಹರದೇವಕೃತವೋ ಎಂಬ ಅನುಮಾನ ತಟಕ್ಕನೆ ಮೂಡುತ್ತದೆ. ಈ ಕೆಳಗೆ ಕೊಟ್ಟಿರುವ ಈ ಶಾಸನದ ಕೆಲವು ವಾಕ್ಯಗಳ ಶೈಲಿಯನ್ನು ಹರಿಹರನ ಕಾವ್ಯಗಳ ಶೈಲಿಯೊಡನೆ ತೂಗಿ ನೋಡಬಹುದು:

'ಶಿವನ ಉಭಯನೇತ್ರದಿಂ ಚಂದ್ರಸೂರ್ಯರೊಗೆದಂತೆ, ಪರ್ವತಯ್ಯನು ಭಯವಹ ಕಾರುಣ್ಯಕಟಾಕ್ಷದಿಂದುದಯಿಸಿದ ಅಪ್ಪಯ್ಯದೇವರಸರಂ ಕಾರುಣ್ಯಂ ಮಾಡಲುವೇಡಿ, ಚಂದ್ರಂಗೆ ಬೆಳುದಿಂಗಳಂ, ಬೆಳುದಿಂಗಳಿಂಗೆ ಪರಿಮಳಮಂ, ಪರಿಮಳಕ್ಕೆ ಸವಿಯಂ, ಸವಿಗೆ ರೂಪಂ, ರೂಪಿಂಗೆ ಸೌಂದರ್ಯಮಂ ಕೊಡುವಂತೆ ಉಪದೇಶಂ ಮಾಡೆ; ಕೈಕೊಂಡ ಅಪ್ಪಯ್ಯದೇವರಸರು ಪುಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ, ಶಾಂತಿ ಸಾಕಾರವೆತ್ತಂತೆ, ಪರಮಾರ್ಥಂ ಶರೀರವಡೆದಂತೆ, ಭಕ್ತಿಜ್ಞಾನಂ ಸಂಸಾರವಂ ಸವಿವಂತೆ ಮೆರೆವುತ್ತೆ, ಲೋಭವಡಿಯಿಡದ ಕರಪಲ್ಲವಂಗಳ, ಅನೃತವಂಕುರಿಸದ ರಸನಾಪ್ರದೇಶದ, ಸಂಸ್ಕೃತಿ ಸರಸವಾಡದ ಚರಿತ ಶುದ್ಧಿಯ .......ಅಪ್ಪಯ್ಯದೇವರಸರು..........ತಿಲಮಧ್ಯದೊಳಿರ್ಪ ತೈಲದಂತೆ, ಕಾಷ್ಠಮಧ್ಯದೊಳಿರ್ಪ ಅಗ್ನಿಯಂತೆ, ಜಲಮಧ್ಯದೊಳಿರ್ಪ ಕಮಳದಂತೆ, ತಾವು ಮಾನುಷಚರಿತರಪ್ಪುವರಿಂ ಸಂಸಾರಮಂ ಸೋಂಕದೆ ........ ಮೂಲೋಕಮಂ ತೀವಿದ ಶೈವಕೀರ್ತಿಯಂ ತಳೆದು ಸುಖದೊಳಿರೆ...........

ದಾಗ ಅವನನ್ನು ಸ್ತುತಿಸಿದವರಲ್ಲಿ ಪುಲಿಗೆರೆಯ ಮಾಯಿದೇವಪುರಾಣ ಭಟ್ಟನೂ, ಮೇಲೆ ಹೇಳಿದ 'ಪರಮಪದವಾಕ್ಯಪ್ರಮಾಣಜ್ಞ' ನಾದ ದೇವರಸನೂ (?) ಇದ್ದರೆಂದು ಸಾನಂದಚರಿತ್ರೆಯ ಉಪೋದ್ಘಾತದಿಂದಲೂ [1]ಪದ್ಮರಾಜಪುರಾಣದಿಂದಲೂ ಗೊತ್ತಾಗುತ್ತದೆ. ಆದುದರಿಂದ ಶಾಸನೋಕ್ತ ಹುಲಿಗೆಱೆಯ ಪುರಾಣದ ಮಾಯಿದೇವ ಪಂಡಿತರೂ, ಮಾವನೂರು ದೇವರಸರೂ, ಗೋಪೆಯ ಶಿವದೇವರೂ[2] ಮೇಲಿನ ಗ್ರಂಥಗಳಲ್ಲಿ ಹೇಳಿರುವ ವ್ಯಕ್ತಿಗಳಿಂದ ಭಿನ್ನರಲ್ಲವೆಂದು ಭಾವಿಸಿದರೆ ತಪ್ಪಾಗಲಾರದು. ಇದು ನಿಜವಿದ್ದ ಪಕ್ಷದಲ್ಲಿ ಪದ್ಮರಸ ರಾಘವಾಂಕರು ಸಹ ಕ್ರಿ. ಶ. ೧೨೮೫ ರಲ್ಲಿ ಜೀವಿಸಿದ್ದರೆಂದು ಹೇಳಬಹುದು.

ಪದ್ಮರಸನು ದ್ವಾರಸಮುದ್ರದಲ್ಲಿ ಪರವಾದಿಗಳನ್ನು ಜಯಿಸಲು ಹೋದಾಗ ಅವನ ಜೊತೆಯಲ್ಲಿದ್ದ ಭಕ್ತರು[3] 'ಮಹಿಮ್ನವನುದ್ಭಟಸ್ತುತಿ ಪ್ರಮುಖ ಶೈವಸ್ತವ' ಗಳನ್ನೂ ಬಸವೇಶ್ವರಾದಿಗಳ ಗೀತಂಗಳನ್ನೂ ಹರೀಶಾದ್ಯಖಿಲ ಶಿವೈಕ್ಯರ ಗದ್ಯಪದ್ಯಪದಸತ್ಪ್ರಬಂಧಾದಿ' ಗಳನ್ನೂ ಪಠಿಸುತ್ತ ನಡೆದಂತೆ ಪದ್ಮರಾಜಪುರಾಣದ ಹೇಳಿಕೆ. ಅಷ್ಟು ಹೊತ್ತಿಗಾಗಲೆ ಹರಿಹರನು ಪೂಜ್ಯತೆಯನ್ನು ಪಡೆದಿದ್ದನೆಂಬುದೇನೊ ನಿಜ. ಅವನು ಯಾವಾಗ ಹಳೆಯಬೀಡನ್ನು ಬಿಟ್ಟು ಪಂಪಾಪತಿಯ ಸನ್ನಿಧಿಯನ್ನು ಸೇರಿದನೆಂಬುದಕ್ಕೆ ತೆರೆಗೆ ಹತ್ತಿದ ಬೆಂಕಿಯನ್ನು ಆರಿಸಿದ ಪೂರ್ವೋಕ್ತ ಪವಾಡವು ನಡೆದ ಮುಹೂರ್ತ ನಮಗೆ ಸಹಾಯಕವಾಗುತ್ತದೆ. ಹದಿಮೂರನೆಯ ಶತಮಾನದಲ್ಲಿ ಬರುವ ಈಶ್ವರ ಸಂವತ್ಸರಗಳಲ್ಲಿ ಹಿಂದೆ ಹೇಳಿದ ಮುಹೂರ್ತ ಬರುವುದು ಒಂದೇ ಸಾರಿ. ಅದು ಕ್ರಿ. ಶ. ೧೨೭೭ನೆಯ

---

1 ೯-೨೯, ೩೦.

2 ಶಿವದೇವನ ಹೆಸರು ಅದೇ ಪುರಾಣದ ೨ ನೆಯ ಸಂಧಿಯಲ್ಲಿ ಬರುತ್ತದೆ.

3 ಸಕಲಜನಸೇವ್ಯ ದೋರಾಂಬುಧಿಯ ರಾಮಣ್ಣ, ಉಭಯಕವಿಶರಭಭೇರುಂಡ ಕವೀಂದ್ರರಾಘವ, ಹುಲಿಗೆರೆಯ ಮಾಯಿದೇವ ಪುರಾಣಭಟ್ಟ, ಗುರುಭಕ್ತ ಕಾಮಣ್ಣ, ವಿಶ್ವಣ್ಣ, ನಾಗನಾಥಾರ್ಯ, ದೇವರಸ, ಹಂಪೆಯುರು ರಾಮಿತಂದೆ, ನಾಗಿದೇವೋತ್ತಮ (೯-೨೯, ೩೦)

ಡಿಶಂಬರ್ ತಿಂಗಳ ಆರನೆಯ ದಿನ. ಆದುದರಿಂದ ಪದ್ಮರಸನ 'ವಾದದ ಪವಾಡ' ಈ ವರ್ಷದಿಂದ ತುಂಬ ಈಚೆಗೆ ನಡೆದಿರಬಹುದು. ಒಟ್ಟಿನಲ್ಲಿ ಹರಿಹರನು ಸುಮಾರು ಕ್ರಿ. ಶ. ೧೨೨೦ ರಷ್ಟರಲ್ಲಿ ಜನ್ಮವೆತ್ತಿ ೧೨೮೫ ರ ಸುಮಾರಿನ ವರೆಗೆ ಬದುಕಿದ್ದನೆಂದೂ, ಪುರಾಣದ ಮಾಯಿದೇವಭಟ್ಟ ಕೆರೆಯ ಪದ್ಮರಸ ರಾಘವಾಂಕ[1]ರು ಸುಮಾರು ೧೩೦೦ ರ ಪೊತ್ತಿಗೂ ಇದ್ದಿರಬಹುದೆಂದು ಸದ್ಯಕ್ಕೆ ಹೇಳಬಹುದು.

---

1 ಸೂಕ್ತಿಸುಧಾರ್ಣವ (೧೨೬೦) ಮತ್ತು ಶಬ್ದಮಣಿದರ್ಪಣಗಳಲ್ಲಿ (೧೨೬೦) ಗಿರಿಜಾಕಲ್ಯಾಣದ ಪದ್ಯಗಳು ಸೇರಿರುವುದರಿಂದ ಹರಿಹರನು ಅವರಿಗಿಂತ ಹಿಂದೆಯೇ ಇದ್ದಿರಬೇಕೆಂಬ ಸಂಶಯ ಸಹಜವಾಗಿ ಮೂಡುತ್ತದೆ. ಸೂಕ್ತಿಸುಧಾರ್ಣವ ಒಂದು ಸಂಕಲನಗ್ರಂಥವಾದುದರಿಂದಲೂ, ಕಾಲಕಾಲಕ್ಕೆ ಆ ಗ್ರಂಥ ಬೆಳೆಯುತ್ತ ಬಂದಿರುವುದರಿಂದಲೂ ಮಲ್ಲಿಕಾರ್ಜುನನೆ ಗಿರಿಜಾಕಲ್ಯಾಣದಿಂದ, ಅದರಲ್ಲಿಯೂ ಒಂದು ಮತ್ತು ನಾಲ್ಕನೆಯ ಆಶ್ವಾಸಗಳಿಂದ ಮಾತ್ರ ಪದ್ಯಗಳನ್ನು ಆರಿಸಿಕೊಂಡನೆಂದು ಹೇಳುವುದು ಕಷ್ಟವಾಗುತ್ತದೆ. ಶಬ್ದಮಣಿದರ್ಪಣದಲ್ಲಿ ಉದಾಹೃತವಾಗಿರುವುವೆಂದು ಶ್ರೀ ಡಿ.ಎಲ್. ನರಸಿಂಹಾಚಾರ್ಯರು ಹೇಳುವ ಎರಡು ಪದ್ಯಭಾಗಗಳಲ್ಲಿ ಒಂದು ಗಿರಿಜಾಕಲ್ಯಾಣದ ಅನೇಕ ಮಾತೃಕೆಗಳಲ್ಲಿ ದೊರೆಯುವುದಿಲ್ಲ. "ಮೂವಳ್ರಾಯರನೆ ಮಾರುವಂತೆಸೆದಿರ್ಕುಂ" ಈ ಭಾಗ ನಾವು ನೋಡಿದ ಶಬ್ದಮಣಿದರ್ಪಣದ ಎಂಟು ಮಾತೃಕೆಗಳಲ್ಲಿ ದೊರೆಯುವುದಿಲ್ಲ. ಆದುದರಿಂದ ಮಲ್ಲಿಕಾರ್ಜುನ ಕೇಶಿರಾಜರ ಕಾಲನಿರ್ಣಯವು ಹರಿಹರಾದಿಗಳ ಕಾಲನಿರ್ಣಯಕ್ಕೆ ಅಸುವಾಗುವುದಿಲ್ಲ. ಒಂದು ಪಕ್ಷ ಮೇಲೆ ಹೇಳಿದ ಎರಡು ಗ್ರಂಥಗಳಲ್ಲಿಯೂ ಗಿರಿಜಾಕಲ್ಯಾಣದ ಪದ್ಯಗಳು ಮೂಲಗ್ರಂಥಕರ್ತರಿಂದಲೇ ಸೇರಿಸಲ್ಪಟ್ಟವೆಯೆಂಬುದನ್ನು ಒಪ್ಪಿಕೊಂಡರೂ ಬಾಧಕವಿಲ್ಲ. ಏಕೆಂದರೆ ಗಿರಿಜಾಕಲ್ಯಾಣವು ರಚಿತವಾದ ಕೆಲವು ವರ್ಷಗಳನಂತರ ಸೂಕ್ತಿಸುಧಾರ್ಣವವೂ ಆಮೇಲೆ ಶಬ್ದಮಣಿದರ್ಪಣವೂ ಹುಟ್ಟಿರಬಹುದು. ಬಹುಶಃ ಡಾ|| ಅ. ವೆಂಕಟಸುಬ್ಬಯ್ಯನವರು ಮಲ್ಲಿಕಾರ್ಜುನನಿಗೆ ಕೊಡುವ ಕಾಲ (೧೨೬೪) ವೇ ಸರಿಯೆಂದು ಕಾಣುತ್ತದೆ.

ರಾಘವಾಂಕನು ಪಂಪಾಪುರದ ದೇವರಾಯನ ಆಸ್ಥಾನದಲ್ಲಿ ಹರಿಶ್ಚಂದ್ರಕಾವ್ಯವನ್ನು ಓದಿದಂತೆಯೂ, ರಾಜ ಅದನ್ನು ಬಹುವಾಗಿ ಮೆಚ್ಚಿ ಅವನಿಗೆ ಕವಿಶರಭಭೇರುಂಡನೆಂಬ ಪೆಂಡೆಯವನ್ನು ಕೊಟ್ಟುದಾಗಿಯೂ ಸಿದ್ಧನಂಜೇಶ(೧೬೫೦)ನ ರಾಘವಾಂಕಕಾವ್ಯದಿಂದ ಗೊತ್ತಾಗುತ್ತದೆ. ಶಿಲಾಶಾಸನಗಳಲ್ಲಿ ಕಂಪಿಲರಾಯನಿಗೆ ಕಂಪಿಲದೇವರಾಯ ಎಂಬ ಹೆಸರಿರುವುದಾಗಿಯೂ, ಕವಿಗಳು ಇವನನ್ನು ದೇವರಾಜ

**ಕಾವ್ಯರಾಶಿ :** ಹರಿಹರ ರಚಿಸಿರುವ ಗ್ರಂಥಗಳ ಸಂಖ್ಯೆ ಇನ್ನೂ ನಿಶ್ಚಿತವಾಗಿಲ್ಲ. ಗಿರಿಜಾಕಲ್ಯಾಣ, ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕಗಳ ಜೊತೆಗೆ ಅನೇಕ ಪುರಾತನರ ಮತ್ತು ನೂತನರ ಕತೆಗಳನ್ನು ರಗಳೆಯ ಮೂಲಕ ಹಾಡಿದ್ದಾನೆ. ಅವನು ಬರೆದಿರುವ ರಗಳೆಗಳೆಷ್ಟು, ನೂರೊಂದೆ, ನೂರಿಪ್ಪತ್ತೆ, ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಇವುಗಳನ್ನು ಮುಖ್ಯವಾಗಿ ಎರಡು ವಿಧವಾಗಿ ವಿಂಗಡಿಸೆ

---

ಎಂದು ಸಂಬೋಧಿಸುವುದಾಗಿಯೂ, ಇವನ ಓಲಗದಲ್ಲಿ 'ಹಂಸಸಾಗರರು, ಕವಿಭೂಷಣರು, ಹಾಸ್ಯದಲ್ಲಿ ಪ್ರತಿಮೆಯನ್ನು ಮಾತನಾಡಿಸುವವರು ಇದ್ದುದಾಗಿಯೂ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿರುವ 'ಕುಮಾರ ರಾಮು' ಗ್ರಂಥದಿಂದ ಗೊತ್ತಾಗುತ್ತದೆ. ಅಗ್ಘವಣಿ ಹಂಪಯ್ಯನೆಂಬ ವಚನಕಾರನ "ಹಂಸಪತಿ, ಗರುಡಪತಿ, ವೃಷಭಪತಿ, ಸರ್ವಜೀವಾಧಿಪತಿ ದೇವರಾಯಮಹಾರಾಯನ ಅರಸುತನ ಹೊಸತು, ಓಲಗಕ್ಕೆ ಬಾರ, ಸಿಂಹಾಸನದಲ್ಲಿ ಕುಳ್ಳಿರ, ಸ್ತ್ರೀಲಂಪಟನಾಗಿ ಅಂತಃಪುರವ ಬಿಟ್ಟು ಹೊರವಡ, ಕಪ್ಪಕಾಣಿಕೆಯ ನೊಪ್ಪಿಸಿಕೊಂಬವರಿಲ್ಲ. ಗುರುವೆಂಬ ತಳವಾರನಾಜ್ಞೆ ಕೆಟ್ಟಿತ್ತು. ತೆರೆದ ಬಾಗಿಲ ಮುಚ್ಚುವರಿಲ್ಲ. ಮುಚ್ಚಿದ ಬಾಗಿಲ ತೆರೆವರಿಲ್ಲ. ಹಂಪೆಯ ವಿರೂಪಾಕ್ಷನ ಅರಸುತನ ಕೆಟ್ಟಿತ್ತು. ಭಕ್ತರೆಂಬುವರಿನ್ನು ಬದುಕಲೇಬಾರದು" ಎಂಬ ವಚನ ವಿರೂಪಾಕ್ಷನ ಪರವಾಗಿಯೂ ಹಂಪೆಯ ರಾಜನಾದ ದೇವರಾಜನ ಪರವಾಗಿಯೂ ವ್ಯಂಗ್ಯವಾಗಿ ಕೆಲವು ವಿಷಯಗಳನ್ನು ತಿಳಿಸುತ್ತದೆಯೆಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಹೇಳುತ್ತಾರೆ. (ಪ್ರಬುದ್ಧಕರ್ಣಾಟಕ ಸಂಪುಟ ೧೯, ಸಂಚಿಕೆ ೪) ಈ ದೇವರಾಜ ಕ್ರಿ. ಶ. ೧೨೮೬ ರಿಂದ ೧೩೨೮ ರವರೆಗೆ ಆಳುತ್ತಿದ್ದನೆಂದು ಮಿ॥ ಬ್ರೌನ್ ಹೇಳುತ್ತಾರೆ.

ಇಷ್ಟೇ ಅಲ್ಲದೆ ರಾಘವಾಂಕನು ಓರಗಲ್ಲಿನ ಕಾಕತೀಯ ಪ್ರತಾಪರುದ್ರನ ಆಸ್ಥಾನಕ್ಕೆ ಹೋಗಿ ಕುಕವಿಗಳನ್ನು ಸೋಲಿಸಿ ಅವನಿಂದ ಸನ್ಮಾನ್ಯನಾಗಿ ಬಂದಂತೆ ರಾಘವಾಂಕಚಾರಿತ್ರವೇ ಮೊದಲಾದ ವೀರಶೈವ ಗ್ರಂಥಗಳಿಂದ ಗೊತ್ತಾಗುತ್ತದೆ. ಕ್ರಿ. ಶ. ೧೨೯೧ ರಿಂದ ೧೩೩೫ ರ ವರೆಗೆ ಆಳುತ್ತಿದ್ದ ದೊರೆಯೇ ಈ ಪ್ರತಾಪರುದ್ರ ಎಂದು ಡಾ॥ ಆ. ವೆಂಕಟಸುಬ್ಬಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಈ ಕಾರಣಗಳಿಂದ ರಾಘವಾಂಕನ ಕಾಲ ಕ್ರಿ. ಶ. ೧೩೦೦ ಇರಬಹುದೆಂದು ಧಾರಾಳವಾಗಿ ಒಪ್ಪಿಕೊಳ್ಳಬಹುದು.

ಬಹುದು; ಕಥನರೂಪವಾದ[1] ರಗಳೆಗಳು ಹಲವು, ಭಾವಗೀತರೂಪವಾದ[2] ರಗಳೆಗಳು ಕೆಲವು. ಕಥನರೂಪದ ಕೆಲವು ರಗಳೆಗಳಿಗೆ ತಮಿಳಿನ ಪೆರಿಯಪುರಾಣ ಆಧಾರವಾಗಿರಬಹುದಾದರೂ ಕ್ರಾಂತಿಕವಿ ಹರಿಹರ ಅವುಗಳಲ್ಲಿ ತನ್ನ ಹೃದಯದ ಮುದ್ರೆಯನ್ನು ಬಲವಾಗಿ ಊರಿದ್ದಾನೆ. ಕೆಲವು ರಗಳೆಗಳಿಗಂತು ತಾನು ಕಣ್ಣಾರೆ ಕಂಡಿರಬಹುದಾದ ಕಿವಿಯಾರೆ ಕೇಳಿರಬಹುದಾದ ನೂತನ ಶಿವಶರಣರ ಕತೆಗಳೇ ಆಧಾರ. ತಾನು ಬಾಳಿನಲ್ಲಿ ಕಂಡುಂಡ ಸಿಹಿಕಹಿ ಅನುಭವಗಳು ಭಾವಗೀತರೂಪದ ರಗಳೆಗಳಲ್ಲಿ ಮತ್ತು ಶತಕಗಳಲ್ಲಿ ವ್ಯಕ್ತಗೊಂಡಿವೆ; ಅವನ ಆತ್ಮಕತೆ ಅವುಗಳಲ್ಲಿ ಧ್ವನಿತವಾಗುತ್ತದೆಯೆಂದರೂ ತಪ್ಪಾಗಲಾರದು.[3]

ಗಿರಿಜಾಕಲ್ಯಾಣ ಸಾಂಪ್ರದಾಯಕಮಾರ್ಗದಲ್ಲಿ ಬರೆದ 'ಪ್ರಬಂಧ' ಇದು ಅವನ ಮೊದಲ ಕೃತಿಯೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದರ ಶೈಲಿ ಕ್ಲಿಷ್ಟವಾಗಿದೆ, ಸಂಸ್ಕೃತಪದಗಳ ಬಳಕೆ ಅತಿಯಾಗಿದೆ, ಆರಂಭಕವಿಮಾತ್ರ ಮಾಡಬಹುದಾದ ಗುರುಸ್ತುತಿ ಇದರಲ್ಲಿದೆ—ಇವೇ ಮೊದಲಾದ ಕಾರಣಗಳನ್ನು ಕೊಟ್ಟು ಅವರು ತಮ್ಮ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ. ಆರುನೂರು ವರ್ಷಗಳ ಹಿಂದಿನ ಕವಿಯ ಕೃತಿಗಳನ್ನು ಕಾಲಕ್ರಮಾನುಗುಣವಾಗಿ ಜೋಡಿಸುವುದು ಕಷ್ಟಸಾಧ್ಯ. ಹಾಗೆ ಮಾಡುವುದರಿಂದ ಅವನ ಪ್ರತಿಭೆ ವಿದ್ವತ್ತುಗಳಿಗೆ ಕೋಡು ಮೂಡುವುದೂ ಇಲ್ಲ. ಆದರೆ ಇಷ್ಟು ಮಾತ್ರ ನಿಜ. ಗಿರಿಜಾಕಲ್ಯಾಣದ ಶೈಲಿ, ಉದ್ದೇಶ ಮೊದಲಾದ ಆಂತರಪ್ರಮಾಣಗಳನ್ನು[4] ನೋಡಿದರೆ ಇದು ಖಂಡಿತ

---

1 ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ, ತಿರುನೀಲಕಂಠರ ರಗಳೆ, ಕಣ್ಣಪ್ಪನ ರಗಳೆ, ಕುಂಬರ ಗುಂಡಯ್ಯನ ರಗಳೆ, ಮಹಾದೇವಿಯಕ್ಕನ ರಗಳೆ ಮೊದಲಾದುವು.

2 ಪುಷ್ಪದ ರಗಳೆ, ಸಂಸಾರವ್ಯಾಮೋಹ ನಿರಸನ ರಗಳೆ, ಹಂಪೆಯ ರಗಳೆ, ಪಿಂಡೋತ್ಪತ್ತಿ ರಗಳೆ ಮೊದಲಾದುವು.

3 ಶ್ರೀ ಡಿ. ಎಲ್. ನರಸಿಂಹಾಚಾರ್ಯರ 'ಹಂಪೆಯ ಹರಿಹರ'—ಪುಟ ೬೪.

4 ಶೈಲಿಯ ಮೇಲಣ ಚರ್ಚೆಯನ್ನು ಮುಂದೆ ನೋಡಬಹುದು.

ಆರಂಭಕೃತಿಯಲ್ಲ, ಕೆಲವಾದರೂ ರಗಳೆಗಳನ್ನು ಬರೆದು ರಗಳೆಯ ಕವಿ[1] ಯೆಂದು ಅಣಕಕ್ಕೆ ಪಕ್ಕಾದನಂತರ ಇದನ್ನು ರಚಿಸಿರಬೇಕೆಂದು ಧೈರ್ಯ ವಾಗಿ ಹೇಳಬಹುದು. ಕಾಲಪ್ರಮಾಣದಲ್ಲಿ ನಮಗಿಂತ ಹರಿಹರನಿಗೆ ಹತ್ತಿರದವನಾದ ನಂಜುಂಡ (ಕ್ರಿ. ಶ. ೧೫೨೫) ಕವಿಯ ಹೇಳಿಕೆಯೂ ಈ ಅಭಿಪ್ರಾಯವನ್ನೇ ಬಲಪಡಿಸುತ್ತದೆ. ಅಷ್ಟೇ ಅಲ್ಲ; ಕೇವಲ ಗುರು ಸ್ತುತಿಯ ಆಧಾರದ ಮೇಲೆ ಇವರ ಕಾಲವನ್ನು ನಿಷ್ಕರ್ಷಿಸುವುದು ಸರಿಯಲ್ಲ. ಹರಿಹರನ ದೃಷ್ಟಿಯಲ್ಲಿ ಗುರು ಸಾಕ್ಷಾತ್ ಪರಶಿವನ ಮೂರ್ತ ಸ್ವರೂಪ. ಅವನಂತಹ ಭಕ್ತಕವಿ ಕನಸಿನಲ್ಲಾದರೂ ಸರಿಯೆ ಗುರು ವನ್ನು ಮರೆಯುತ್ತಾನೆಯೆ? ಅವನ ಎಲ್ಲ ಕೃತಿಗಳಲ್ಲಿಯೂ ಸಾಮಾನ್ಯ ವಾಗಿ ಗುರುಸ್ತುತಿಯ ವಾಕ್ಯಗಳು ಬರುತ್ತವೆ.[2]

---

1 ರಗಳೆಯ ಕವಿಯೆಂದು ತೆಗಳೆ ವಾದಿಗಳುರೆ | ಸೊಗಸೊಗುವಂತೆ ವಸ್ತುಕವ ||
ನೆಗಳಿದ ಹಂಪೆಯ ಹರಿಯಣ್ಣನ ಪದ | ಯುಗಳಕೆರಗುವೆನಳ್ತಿಯೊಳು

—ಕುಮಾರರಾಮಸಾಂಗತ್ಯ.

ಸಾಮಾನ್ಯವಾಗಿ ವೀರಶೈವಕವಿಗಳೆಲ್ಲರು ಈ ವಿಷಯದಲ್ಲಿ ಏಕಾಭಿಪ್ರಾಯವುಳ್ಳವ ರಾಗಿದ್ದಾರೆ.

2 ಉದಾಹರಣೆಗಾಗಿ:

ಶ್ರೀಪರಮಗುರು ಶಂಕರ ಪ್ರಭುವಿನಂಘ್ರಿಯಂ
ಭಾಪುರೇ ಎನೆ ನೆಗಳ್ದ ಮಾದಿರಾಜಾಂಘ್ರಿಯಂ
ಶ್ರೀಗುರು ಮಹಾದೇವರಾಜ್ಞೆಯಂ ಕೈಕೊಂಡು
ಭೋಗಿ ಹಂಪೆಯ ವಿರೂಪಾಕ್ಷನ ಮನಂಗೊಂಡು
ಪೇಳಲುದ್ಯೋಗಿಸಿದನೀಶ್ವರನ ಮಹಿಮೆಯಿಂ—ಮಹಿಮರಗಳೆ
ಹಂಪೆಯ ಶಂಕರ ದೇವರ
ಹಂಪೆಯ ಗುರು ಮಾದಿರಾಜವೆಸರ ಮತ್ತಾ
ಹಂಪೆಯ ಮಾದರಸರ ದಯೆ
ಯಿಂ ಪೊಗಳ್ದಂ ರಸಿಕ ಚಕ್ರಿ ಹರಿಹರದೇವಂ—ತಿರುನೀಲಕಂಠರ ರಗಳೆ.
ಅರವತ್ತುಮೂರರ ದಿವ್ಯಚರಿತ್ರಮಂ ಹಂಪೆಯ ಮಾದರಸರ ಕಾರುಣ್ಯದ ಶಿಶು
ಹಂಪೆಯ ಹರಿಹರದೇವಂ ಬಿನ್ನಪಂಗೆಯ್ವ ಪುರಾಣಮಂ—

ಅರುವತ್ತುಮೂರರ ಕಥಾಗರ್ಭಂ.

ಕನ್ನಡ ಸಾಹಿತ್ಯದಲ್ಲಿ ಹರಿಹರನ ರಗಳೆಗಳಿಗೆ ವಿಶಿಷ್ಟವಾದ ಸ್ಥಾನ ವಿದೆ. ಅದರಲ್ಲಿಯೂ ನಂಬಿಯಣ್ಣನ ರಗಳೆ, ಬಸವರಾಜದೇವರ ರಗಳೆ ಮೊದಲಾದುವು ಉತ್ತಮ ಕಲಾಕೃತಿಗಳು. ಗಿರಿಜಾಕಲ್ಯಾಣವಂತು ಅವನ ಅತ್ಯುತ್ತಮಕೃತಿಗಳಲ್ಲಿ ಒಂದು ಎಂಬುದು ಅವನ ಹೇಳಿಕೆಯಿಂದಲೆ ಸ್ಪಷ್ಟವಾಗುತ್ತದೆ. ಅವನಿಗಂತು ಇದರ ವಿಷಯದಲ್ಲಿ ಇತರ ಕೃತಿಗಳಿಗಿಂತ ಹೆಚ್ಚಾದ ಅಭಿಮಾನ. ತನ್ನ ಪರಮದೈವವಾದ ಪಂಪಾವಿರೂಪಾಕ್ಷನನ್ನು ಕುರಿತ ಪುಣ್ಯಕೃತಿಯಾದುದರಿಂದಲೆ ಇಷ್ಟು ಅಭಿಮಾನ. 'ನೀರಸರಜಃ ವಂತೇನಿದು ತಾರೆಲೆಯೇ ಬೀದಿವಾಡೆ ನೆರವಿಯ ತುಮುಕೇ' ಎಂದು ಬುಸುಗುಟ್ಟುತ್ತಾನೆ. ಸುರತರುವಿನಂತೆ ಸುಜನರ ಸಿರಿಯಂತೆ ಸರೋಜ ದಂತೆ ಸುಧಾಕರಕಿರಣದಂತೆ ತನ್ನ ಕಾವ್ಯ ಅಖಿಲಸೇವ್ಯವೆಂದು ಆತನಿಗೆ ಹೆಮ್ಮೆ. ಪೊಸತಾದ ಪಾವನವಾದ ರಸವತ್ತಾದ ಈ ಕೃತಿ ರಾಜಸಭೆ, ಬ್ರಹ್ಮಸಭೆ, ದೇವಸಭೆಗಳಲ್ಲಿ ಗೌರವಕ್ಕೆ ಪಾತ್ರವಾಗುತ್ತದೆಂಬ ಆತ್ಮ ಪ್ರತ್ಯಯ ಅವನಿಗೆ. ಒಳಗೆ ಕೆಚ್ಚಿಲ್ಲದ ಯಾವ ಕವಿ ತಾನೆ

ಜಾಣಂ ರಸಿಕಂ ಸುಜನ-
ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯಾ
ಕ್ಷೂಣಂ ವರಗಿರಿಜಾಕ-
ಲ್ಯಾಣವನೊರೆದಂ ವಿವೇಕಿ ಹರಿಹರದೇವಂ

ಎಂದು ಪ್ರಶಂಸೆಯನ್ನು ಮಾಡಿಕೊಳ್ಳಬಲ್ಲನು?

**ಕಥಾಗರ್ಭ :** ಹಿಮಶೈಲದ ಉತ್ತರಭಾಗದಲ್ಲಿ ಭೂದೇವಿಗೆ ಭೂಷಣಪ್ರಾಯವಾಗಿ ಸರ್ವಸುಖಕ್ಕಾಗರವಾಗಿ ಗಿರಿರಾಜನ ದೇಶ ಬೆಳಗು ತ್ತಿತ್ತು. ಅಲ್ಲಿಯ 'ಕಲ್ಲೆಲ್ಲಂ ಪರುಷಂ, ತರುವೆಲ್ಲಂ ಕಲ್ಪತರು, ಗುಲ್ಮ ಮೆಲ್ಲಾ ಷಧಿ, ಗೋವೆಲ್ಲಂ ಸುರಭಿಕುಲಂ, ಮಡುವೆಲ್ಲಂ ಸಿದ್ಧರಸಂ.' ಆ ನಾಡಿನ ರಾಜಧಾನಿ ಓಷಧಿಪ್ರಸ್ಥಪುರ. ಪರಮಶಿವಭಕ್ತನೂ ತೇಜಸ್ವಿಯೂ ಕೀರ್ತಿಶಾಲಿಯೂ ಮಹಾಪರಾಕ್ರಮಿಯೂ ಆದ ಗಿರಿರಾಜನು ಅಲ್ಲಿಯ ದೊರೆ. ಪೂಜ್ಯೆಯೂ ಶೈವಾತುರೆಯೂ ಸದ್ಗುಣಪಾತ್ರೆಯೂ ಪಿತೃಗಳ ಮನದಲ್ಲಿ ಹುಟ್ಟಿದವಳೂ ಆದ ಮೇನೆ ಅವನ ಪುಣ್ಯವಲ್ಲಭೆ. ಇವರು

ಮೈನಾಕನೆಂಬ ಕುಮಾರನನ್ನು ಪಡೆದು ವಿಮಳಮನಸ್ಕರಾಗಿ ಸಮಸುಖ ವನ್ನು ಅನುಭವಿಸುತ್ತಿದ್ದರು.

ಒಂದು ದಿನ ಮೇನಾದೇವಿ ಪತಿಯನ್ನು ಕುರಿತು ಸಾಕ್ಷಾತ್ ಪರಮೇಶ್ವರನಿಗೆ ವಧುವಾಗಲು ತಕ್ಕ ಮಗಳನ್ನು ಪಡೆಯಲು ಉಗ್ರ ತಪಸ್ಸನ್ನು ಕೈಗೊಳ್ಳಬೇಕೆಂಬ ಬಯಕೆ ತನ್ನನ್ನು ಬಾಧಿಸುತ್ತಿದ್ದುದಾಗಿ ನಿವೇದಿಸಿಕೊಂಡಳು. ಗಿರಿರಾಜನು ಸಂತೋಷದಿಂದ ಒಪ್ಪಿದನು. ಮೇನಾ ದೇವಿಯು ಮಹಾದೇವಿಯ ನಿರ್ಮಲರೂಪವನ್ನು ಹೃದಯಕಮಲದಲ್ಲಿ ತಳೆದು ತಪಸ್ಸನ್ನು ಆಚರಿಸಿದಳು. ತಪಸ್ಸು ಪುರಹರನರಸಿಯ ಮೆಲ್ಲಡಿ ಗಳನ್ನು ಮುಟ್ಟಿತು.

ಅದೇ ಸಮಯದಲ್ಲಿ ಅನಾಹೂತಳಾಗಿ ತಂದೆ ಮಾಡುತ್ತಿದ್ದ ಯಾಗವನ್ನು ನೋಡುವ ನೆವದಿಂದ ದಕ್ಷನಪುರಕ್ಕೆ ಹೋಗಿ, ಅವನ ಅನಾದರಕ್ಕೆ ಪಾತ್ರಳಾಗಿ, ಪತಿಯ ನಿಂದೆಯನ್ನು ಸಹಿಸಲಾರದೆ ಯೋಗಾಗ್ನಿ ಯಲ್ಲಿ ದೇಹವನ್ನು ತ್ಯಜಿಸಿದ್ದ ದಾಕ್ಷಾಯಣಿ ಮೇನೆಯ ಉತ್ಕಟ ತಪೋ ನಿಷ್ಠೆಗೆ ಮೆಚ್ಚಿ ಬಂದು ಅವಳ ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿ ದ್ದಳು. ಇದನ್ನರಿತ ಮೇನೆಯ ಹರ್ಷಕ್ಕೆ ಮೇರೆಯಿಲ್ಲವಾಯಿತು. ಮನೆಗೆ ಬಂದು ತನ್ನ ಇಷ್ಟಾರ್ಥ ಫಲಿಸಿದ ಸಂಗತಿಯನ್ನು ಪತಿಗೆ ತಿಳಿಸಿ ನಿಶ್ಚಿಂತ ಳಾಗಿದ್ದಳು.

ಕೆಲವುದಿನಗಳನಂತರ ಶುಭಮುಹೂರ್ತದಲ್ಲಿ ಗೌರೀದೇವಿಯು ಮೇರುಪರ್ವತದಿಂದ ಹೊರಹೊಮ್ಮುವ ಮಣಿಮಾಲೆಯಂತೆ ಮೇನೆಯಲ್ಲಿ ಉದಿಸಿದಳು. ಕೂಡಲೆ ಕಾಮನಿಗೆ ಇನ್ನೊಂದು ಭುಜ ಬಂದಂತಾಯಿತು; ಇಂದುಕಳೆ ತುಂಬಿತು; ಇಂದುಧರನ ವಾಮಾಂಗ ಪುಲಕಿತವಾಯಿತು; ಹುಟ್ಟುತ್ತಲೆ ಶಿವೆಗೆ ಶಿವನ ಚಿಂತೆ. ಶಿವಲಿಂಗದರ್ಶನ ಲೋಲುಪೆಯೂ ಶಿವಪ್ರಸಾದದಲ್ಲಿ ಚಿತ್ತವಿಟ್ಟವಳೂ ಆದ ಅವಳು ಶಿವನನ್ನೆ ನಚ್ಚಿ ಮಚ್ಚಿ ಕಣ್ಮುಚ್ಚಿರಲು ಶೈವಾಚಾರ್ಯರ ಸೂಚನೆಯ ಪ್ರಕಾರ, ಪುಣ್ಯಕ್ಕೆ ಮುಕ್ತಿಯನ್ನು ತೋರಿಸುವಂತೆ ಶಿವಲಿಂಗವನ್ನು ತಂದು ಅವಳಿಗೆ ತೋರಿಸಿ ದೊಡನೆಯೆ ಕಣ್ಣು ತೆರೆದಳು. ಪುರಜನ ಪರಿಜನ ನಾಡಿನ ಜನರೆಲ್ಲ ಆನಂದ ದಿಂದ ನಲಿದಾಡಿದರು.

ಶರ್ವೆಯೋ ತನ್ನ ಲೀಲೆಯನ್ನು ಮೆರೆಯುವುದಕ್ಕಾಗಿ ಬಂದಳೆಂಬು ದನ್ನು ಮರೆತು 'ತಾಯಿತಂದೆ' ಯರು ಆಕೆಯನ್ನು 'ಗಿರಿಜೆ' ಯೆಂದು ಕರೆದರು. ಯಾರ ಪುದಿಬೆರಳು ಅಖಿಲಜಗತ್ತಿಗೂ ತಾಯ್ತೊಟ್ಟಿಲಾಗಿ ದೆಯೋ ಅಂತಹ ಆದಿಶಕ್ತಿಯನ್ನು ರತ್ನದ ತೊಟ್ಟಿಲಲ್ಲಿಟ್ಟು ಸುವಾಸಿನಿ ಯರು ಜೋಗುಳ ಹಾಡಿದರು. ಅನಸೂಯೆ ಅರುಂಧತಿಯರೇ ಮೊದಲಾದ ಋಷಿಪತ್ನಿಯರು ಮತ್ತು ಲಕ್ಷ್ಮಿ, ಸರಸ್ವತಿಯರು ಅವಳ ಸೇವೆಗಾಗಿ ನಿಂತರು. ಗಿರಿಜಾತೆಯ ಶೈಶವಲೀಲೆ ಬಾಲಲೀಲೆಯಾಯಿತು ಅವಳು ನಕ್ಕರೆ ಅಮೃತದ ಅಗೆ ಒಗೆದಂತೆ, ಕರುಣಾನಿಳಯದ ಮೃದುಕವಾಟ ತೆರೆದಂತೆ ತೋರುತ್ತಿತ್ತು. ಅಖಿಳ ಜಗತ್ತಿಗೆ ಆಶ್ರಯಭೂತಳಾದ ಅವಳು ಗೋಡೆಯನ್ನು ನೆಮ್ಮಿ ನಿಂತು ಬಾಲ್ಯವನ್ನು ನಟಿಸಿದಳು. ಕೋಮಲಪಾದ ಗಳನ್ನು ಭೂಮಾತೆ ಬಿಡಲಾರದೆ ಅಪ್ಪುತ್ತಿರುವಳೆಂಬಂತೆ ದಟ್ಟಡಿಯಿಟ್ಟಳು. ಅವಳು ಇಟ್ಟ ತೊಟ್ಟ ಒಂದೊಂದು ಆಭರಣವೂ ಶಿವಪ್ರೇಮವನ್ನೆ ಪ್ರತಿ ಬಿಂಬಿಸುತ್ತಿದ್ದುವು. ಅವರಿವರ ಸಹಾಯವನ್ನು ಕೋರದೆ ಶಿವಮಂದಿರಕ್ಕೆ ದೇಕಿಕೊಂಡು ಹೋಗಿ ಶಿವನೊಡನೆ ಆಟಪಾಟಗಳಲ್ಲಿ ತಲ್ಲೀನಳಾಗುತ್ತಿ ದ್ದಳು. ಇದನ್ನರಿತ ಗಿರಿರಾಜನು ಸಕಲಬ್ರಹ್ಮಾಂಡವನ್ನು ರಕ್ಷಿಸುವ ರುದ್ರಾಣಿಗೆ ಹದಿನಾರು ಸಾವಿರ ಸಖಿಯರನ್ನು ರಕ್ಷಣೆಗಾಗಿ ನೇಮಿಸಿದನು. ಅವಳು ಅವರೊಡನೆ ಚೆಲುವಿನ ನೆಲೆಗಳನ್ನೆಲ್ಲ ಹೊಕ್ಕು ನುಣ್ಮಳಲಿಂದ ದಿವ್ಯಲಿಂಗವನ್ನು ರಚಿಸಿ ಮನಃಕುಸುಮದಿಂದ ಅದನ್ನು ಅರ್ಚಿಸುತ್ತಿದ್ದಳು. ಮಗಳ ಶೈವೋನ್ಮಾದವನ್ನು ಸಖಿಯರಿಂದ ಅರಿತ ಹಿಮವಂತಮೇನೆಯರು ಅವಳನ್ನು ಅಕ್ಕರೆಯಿಂದ ಕರೆದು ಅಪ್ಪಿ ಮುದ್ದಿಸಿ 'ಶಶಿಕಲೆಯನ್ನು ಸಲಹುವಂತೆ, ಪುಣ್ಯವನ್ನು ಪುಟವಿಡುವಂತೆ' ಸಲಹುತ್ತಿದ್ದರು.

ಅಷ್ಟರಲ್ಲಿ 'ಅಲರ್ಗಣೆಗೆ ಕೂರ್ಪು ಕೊಡುವ ತೆರದಿಂ' ದ ಗಿರಿಜೆಗೆ ಯೌವನೋದಯವಾಯಿತು. ಮಗಳ ರೂಪಲಾವಣ್ಯಗಳನ್ನು ನೋಡಿದ ತಂದೆತಾಯಿಯರು 'ಈ ರಮಣೀರಮಾಂಗವತಿಗೆ ವರನನಿಂದುಧರನೇ ಬಲ್ಲಂ' ಎಂದು ಉಸಿರ್ಗರೆದರು. ಒಂದು ದಿನ ನಾರದಮಹರ್ಷಿ ಇವರ ಅರಮನೆಗೆ ಆಗಮಿಸಿದನು. ಉಚಿತೋಪಚಾರಗಳು ಸಂದು ಕುಶಲಸಂಭಾಷಣೆ

ಜರುಗುತ್ತಿದ್ದಾಗ ಗಿರಿಜೆ ತನ್ನ ಸಖಿಯರೊಡನೆ ಅಲ್ಲಿಗೆ ಬಂದಳು. ಕೂಡಲೆ ನಾರದನು ಆಕೆಗೆ ಸಾಷ್ಟಾಂಗ ಪ್ರಣಾಮಮಾಡಿ ಸ್ತೋತ್ರಮಾಡತೊಡಗಿದನು. ದೇವರ್ಷಿಯ ವರ್ತನೆಯನ್ನು ಕಂಡು ಹಿಮವಂತ ಮೇನೆಯರು ಆಶ್ಚರ್ಯಚಕಿತರಾದರು. ಭವಾನಿಯೇ ಈ ಗಿರಿಜೆ, ಈಕೆಗೆ ಈಶ್ವರನೇ ಅನುರೂಪನಾದ ವರ, ಹೇಮಕೂಟದ ಬಳಿ ಯೋಗಸಮಾಧಿಯಲ್ಲಿರುವ ಶಿವನಲ್ಲಿಗೆ ಈಕೆಯನ್ನು ಕಳುಹಿಸುವುದು ಉಚಿತವೆಂದು ನಾರದ ಆ ದಂಪತಿಗಳಿಗೆ ಬೋಧಿಸಿ ಅವರಿಂದ ಬೀಳ್ಕೊಂಡು ಹೊರಟುಹೋದನು. ಇತ್ತ ಪಾರ್ವತಿ ಬಿಡಲೊಲ್ಲದ ತಾಯಿಯಿಂದ ಬಿಡಿಸಿಕೊಂಡು ತಂದೆ ಮತ್ತು ಜಯೆ ವಿಜಯೆರೊಡಗೂಡಿ ತುಂಗಭದ್ರಾತೀರದ ಹೇಮಕೂಟವನ್ನು ಸೇರಿದಳು.

ಶಾಂತಿರಸವೆ ಘನೀಭೂತವಾದಂತಿದ್ದ ಹೇಮಕೂಟದಲ್ಲಿ ಪುಣ್ಯವೆ ಪಣ್ಣಾದಂತಿದ್ದ ತಾಪಸರು ನೆಲೆಗೊಂಡಿದ್ದರು. ಆ ಪ್ರಶಾಂತವಾತಾವರಣದಲ್ಲಿ ಪರಿಪೂರ್ಣಪರಂಜ್ಯೋತಿಸ್ವರೂಪನಾದ ಪರಶಿವನು ಯೋಗಸಮಾಧಿಯಲ್ಲಿದ್ದನು. ಅವನ ತಪಸ್ಸಿಗೆ ಭಂಗಬಂದೀತೆಂಬ ಭೀತಿಯಿಂದ ಕೋಗಿಲೆಗಳು ಗಾನಗೈಯುತ್ತಿರಲಿಲ್ಲ, ದುಂಬಿಗಳು ಝೇಂಕರಿಸುತ್ತಿರಲಿಲ್ಲ, ಗಿಳಿಗಳು ಗಳಪುತ್ತಿರಲಿಲ್ಲ, ಗಾಳಿ ಅಲುಗುತ್ತಿರಲಿಲ್ಲ. ಗಿರಿಶಿಖರಮುಖದ್ವಾರದಲ್ಲಿ ಕಾವಲು ನಿಂತಿದ್ದ ನಂದಿಯು ಪಾರ್ವತಿಯನ್ನು ಕಂಡೊಡನೆ ನಮಸ್ಕರಿಸಿದನು. 'ನಿರ್ಮಾಯ ನಿಷ್ಕಾಮಿ ನಿಷ್ಕಂಪ ನಿವಾತಜ್ಯೋತಿಸ್ವರೂಪ ನಿರುಪಮ' ನೆನಿಸಿ, 'ನಿಜತೇಜೋವಿಲೀನಮಾನಸ' ನಾಗಿ ನಿಜಸಮಾಧಿಯಲ್ಲಿ ಸಂದಿದ್ದ ಪರಮೇಶ್ವರನ ಚರಣಸನ್ನಿಧಿಯನ್ನು ಗಿರಿರಾಜನು ಸಾರಿ ಶರಣುಮಾಡಿದನು. ತನ್ನ ಕುವರಿಯನ್ನು ಕರೆದು 'ಹರನ ಪರತತ್ವಮಯ ಸೌಂದರ್ಯರೂಪವನ್ನು' ತೋರಿಸಿ ಪೊಡಮಡುವಂತೆ ಹೇಳಲು ಗಿರಿಜೆ ಭಯಭರಿತಭಕ್ತಿಯಿಂದ ಲಜ್ಜೆಯಿಂದ ಕಲ್ಪತರುವಿನ ಬೀಳಿಲು ಮಹಾನಿಧಾನಕ್ಕೆರಗುವಂತೆ ಕುಸುಮಚಾಪವು ಕಾಲ್ಗೆರಗುವಂತೆ ಎಡದ ಉಂಗುಟವನ್ನು ಹಣೆಯಿಂದ ಮುಟ್ಟಿ ಎರಗಿದಳು. "ಶಿವನೀತಂ ಮಮ ಗುರು, ಎನ್ನಾಳ್ದನ್" ಎಂದು ತಂದೆಗೆ ತಿಳಿಸಿ ಅವನನ್ನು ಬೀಳ್ಕೊಟ್ಟಳು.

ಬೈರಾಗಿಯೂ ಸುಂದರಾಕಾರನೂ ಆಗಿದ್ದ ಶಿವಶಂಕರನನ್ನು ಗಿರಿಜೆ ನಿಡುನೋಟದಿಂದ ನೋಡುತ್ತ ಅವನ 'ತಪಮಿಂತಿದು ಮದ್ವಿರಹಾತಪಂ' ಎಂಬು ಕೊರಗುವಳು. ವಿಷ್ಣು ವಿರಿಂಚಿಗಳು ಸಹ ಅರಿಯಲಾರದ ಅಭವನನ್ನು ಅರಿಯುವುದು ತನ್ನಿಂದಾಗದ ಮಾತು, ಸಾತ್ತ್ವಿಕಭಕ್ತಿಯಿಂದಲೆ ಅವನನ್ನು ಒಲಿಸಿಕೊಳ್ಳಬೇಕೆಂದು ಬಗೆಯುವಳು. ಸಖಿಯರೊಂದಿಗೆ ವನದಲ್ಲೆಲ್ಲ ಸುತ್ತಾಡಿ ವಿಧವಿಧದ ಹೂ ಪತ್ರೆ ಬೇರುಗಳನ್ನು ತಿರಿದು ತಂದು ತನ್ನ ಹೂಗೈಗಳಿಂದ ಹೂದೊಡಿಗೆಗಳನ್ನು ರಚಿಸಿ ಈಶ್ವರನ ಪಾದಗಳಿಗೆ ಸಮರ್ಪಿಸುವಳು. ಗರಳಕೊರಳನಿಗೆ ನವಕುಸುಮ ಮಾಲೆಯನ್ನು ತೊಡಿಸುವ ನೆವದಿಂದ 'ಪ್ರಿಯ' ನನ್ನು ಸೋಂಕಿ ಸೋಂಕಿ ಪುಲಕಿಸುವಳು. ಆನಂದದಿಂದ ಉಬ್ಬಿ ಕೊಬ್ಬಿ ಸುಯ್ಗಂಪಿನ ಧೂಪಾರತಿಯನ್ನು ನಿವಾಳಿಸುವಳು. ಪುಣ್ಯವನ್ನು ಸೇವಿಸುವ ಧರ್ಮದಂತೆ, ಭಕ್ತಿಯನ್ನು ಬಯಸುವ ಪುಣ್ಯದಂತೆ ಮನ್ಮಥ ಮನೋರಥ ದುರ್ಲಭನಾದ ಶಂಕರನ ಸಂಗವನ್ನು ಬಯಸುವಳು. ಶಿವನ ಮುಡಿಯಿಂದ ಅಡಿಯವರೆಗೆ ತನ್ನ ದೈನ್ಯದೃಷ್ಟಿಯನ್ನು ಹರಿಸುವಳು. ಆ ಸ್ಥಾಣುವಿನ ವೈರಾಗ್ಯಕ್ಕೆ ಅಂಜಿ ನಡುಗಿ ಸಿಡಿಮಿಡಿಗೊಳ್ಳುವಳು. ಅವನ "ರುದ್ರ ಮನೋಹರ ಮೂರ್ತಿಯನ್ನು ನೋಡಿ ನೋಡಿ ತಣಿಯದೆ ಸೊಂಕಿ ಸೊಂಕಿ ಸವೆಯದೆ ಪೊಗಳ್ದು ಪೊಗಳ್ದು ತೀರದೆ" ಅನವರತ ಶಿವಪೂಜೆಯಲ್ಲಿ ನಿರತಳಾಗಿರುವಳು.

ಅತ್ತಕಡೆ ಲೋಕಕಂಟಕನಾದ ತಾರಕಾಸುರನ ಶೌರ್ಯಪ್ರತಾಪಗಳಿಗೆ ಹೆದರಿ "ಗಂಡುಡುಗಿರ್ದ" ದೇವತೆಗಳು ಬ್ರಹ್ಮಾಮರೇಂದ್ರರೊಡನೆ ಮಂತ್ರಾಲೋಚನೆಗಾಗಿ ವಿಷ್ಣುವಿನ ಬಳಿಗೆ ಬಂದರು. ಈಶ್ವರನಿಗೆ ಮಗನಾಗಿ ಹುಟ್ಟಿದ ಏಳು ದಿನಗಳ ಅರುಮೊಗನಿಂದಲ್ಲದೆ ತಾರಕ ಇನ್ನಾರಿಂದಲೂ ಸಾಯನೆಂದೂ ಈಶ್ವರನ ತಪಸ್ಸನ್ನು ಕೆಡಿಸಬಲ್ಲ ವೀರನನ್ನು ಹುಡುಕುವುದೇ ಉಚಿತವೆಂದೂ ವಿಷ್ಣು ನುಡಿದನು. ಆ ಕಾರ್ಯ 'ಸಕಳ ಜಗಜ್ಜನವಶೀಕರಣಪಟುತರ ಕುಸುಮ ಕೋದಂಡ' ನಾದ ಮದನನಿಂದಲ್ಲದೆ ಇನ್ನಾರಿಂದಲೂ ಸಾಧ್ಯವಾಗದೆಂದು ದೇವತೆಗಳು ನಿಶ್ಚಯಿಸಿದರು.

ಬೃಹಸ್ಪತಿಯೇ ಹೋಗಿ ಕಾಮನನ್ನು ಕರೆತಂದನು. ವಿಷ್ಣುವೇ ತನ್ನ ಮಗನಿಗೆ ಮುಂದಿನ ಕಾರ್ಯವನ್ನು ಸೂಚಿಸಿದನು. ಅಖಿಳಲೋಕ ಗುರುವಿನ ಮೇಲೆ ಬಾಣ ಬಿಡುವ ಸಮರ್ಥರು ಯಾರು? ಸೂರ್ಯನ ಬಳಿಗೆ ಕತ್ತಲನ್ನು ಕಳುಹಿಸುವುದೆ? ಸಿಂಹದ ಬಳಿಗೆ ಕರಿಯನ್ನು ನೂಕುವುದೆ ಎಂದು ಮುಂತಾಗಿ ಮದನ ನುಡಿದನು. ಮುಕುಂದನು ಅಷ್ಟಕ್ಕೇ ಬಿಡಲಿಲ್ಲ. 'ಬಹೂಕ್ತಿಯಿಂದವೇನಪ್ಪುದು, ನಿನ್ನಿಂದಂ ಸಕಳಜಗಂ ಸುಖದಿಂದಿರ್ಪೊಡೆ ಹರಣದೊಂದು ಹುರುಳರಸುವರೆ' ಎಂದು ಮರು ನುಡಿದನು. ಆಗ ಕಂದರ್ಪನು, ಸಕಳ ಭುವನವೂ ನನ್ನಿಂದ ಪರಮ ಸುಖವನ್ನು ಪಡೆಯುವುದಾದರೆ 'ಎನ್ನ ಹರಣಂ ಘನವೇ, ತೆಗೆ ಇಂದೆ ನೂರು ತೀವಿತ್ತು' ಎಂದು 'ವಿಾರಿ' ನುಡಿದು ವಸಂತನೇ ಮೊದಲಾದ ಚತುರಂಗಬಲದೊಡನೆ ಶಿವಯೋಗಿಯನ್ನು ಗೆಲ್ಲಲು ಹೇಮಕೂಟಾಭಿಮುಖನಾಗಿ ಹೊರಟನು.

ಮನ್ಮಥನು ಹೊರಟ ಗಳಿಗೆಯಲ್ಲಿಯೆ ಎಲ್ಲೆಲ್ಲಿಯೂ ವಸಂತೋದಯವಾಯಿತು. ಅದಿರ್ಗಂತಿ ಮುಗುಳಿಟ್ಟಿತು, ಮಾವು ಚಿಗುರಿತು, ಮಂದಮಾರುತನು ಮೆಲ್ಲಮೆಲ್ಲನೆ ಅಡಿಯಿಟ್ಟನು. ಜಗತೀತಳವೆಲ್ಲ ಕಾಮನ ಪ್ರಭಾವಕ್ಕೆ ಸಿಕ್ಕಿತು. ಮನುಮುನಿಗಳ ಅಚಂಚಲ ಮನಸ್ಸು ಚಲಿಸಿತು. ಕಾಮಭೂಪನು ಹೇಮಕೂಟ ಪ್ರಾಂತವನ್ನು ಪ್ರವೇಶಿಸುತ್ತಿದ್ದಾಗಲೆ ನಂದೀಶ್ವರನ ಚಿತ್ತ ತುಸು ಕದಡಿತು. ಆದರೂ 'ಚೆಲ್ಲಿದ ಚಿತ್ತವನ್ನು ಮೆಲ್ಲಮೆಲ್ಲನೆ ಸಂತಯಿಸಿಕೊಂಡು ಶಿವಜ್ಞಾನದಿಂದ ಎಚ್ಚತ್ತು' 'ಹರನ ಸಮಾಧಿಗೆ ಇದು ಅನುಕೂಲತೆಯಲ್ಲ. ಇಂತಹ ವಿರೋಧ ವೃತ್ತಿಗೆ ಕಾರಣರಾರು?' ಎಂದು ಕೋಪದಿಂದ ಮದನ ಸೇನೆಯ ಕಡೆಗೆ ಕಣ್ ಸುಳಿಸಿದ ಕೂಡಲೆ ತುಂಬಿಗಳ ಮೊರೆತ ಮಾಯವಾಯಿತು; ಕೋಗಿಲೆಗಳ ಕೂಜನ ಇಲ್ಲವಾಯಿತು; ಇಂದು ಕಳೆಗುಂದಿದನು; ಮದನ ಚಿಂತಾಕ್ರಾಂತನಾದನು.

ಅಷ್ಟರಲ್ಲಿ 'ಕಾಂತಿಪ್ರದೆ, ನಿತ್ಯಾನಂದೆ, ಚಂದ್ರಾಭರಣನ ಸುಖ ಸಂಪತ್ತಿ ಕಾರುಣ್ಯದ ನೆಲೆವನೆ ಶರ್ವಾಣಿ' ಆಗಮಿಸಿದಳು. ಮದನನಿಗೆ

ಕಣ್ ಬಂದಂತಾಯಿತು, ಉಸಿರ್ ಬಂದಂತಾಯಿತು. ತನ್ನನ್ನು ಕಾಪಾಡ ಬೇಕೆಂದು ಜಗನ್ಮಾತೆಯನ್ನು ಕಾಡಿ ಬೇಡಿ ಒರಲಿದನು. ಕಾತ್ಯಾಯನಿ ಕಾಮನನ್ನು ಕರುಣೆಯಿಂದ ಕಂಡು 'ಯಾವ ಯಾವ ವಿಧದಿಂದಲಾದರು ಸರಿಯೆ ರುದ್ರನ ತಪಸ್ಸಿನ ಬೆಸುಗೆಯನ್ನು ಸಡಿಲಿಸು. ಅದೇ ಎನ್ನಿಚ್ಛೆ, ಎನ್ನ ಲಾಭ, ಎನ್ನ ಲೋಭ; ಶ್ರೀನಂದನ, ನೀನಂಜದಿರು, ನಾನಿದ್ದೇನೆ, ನಾನೆ ರಕ್ಷೆ, ನಾನೆ ಸಹಾಯ' ಎಂದು ಅಭಯವನ್ನು ನೀಡಿದಳು. ಮದನನು ಮತ್ತೆ ಹುರಿಗೊಂಡು ಪಾರ್ವತೀದೇವಿಯ ಪುಷ್ಪಕದ ಮರೆ ಯಲ್ಲಿಯೇ ನಡೆದು ನಂದೀಶ್ವರನು ಕಾವಲಿದ್ದ ಗಡಿಯನ್ನು ದಾಟಿ ಮತಂಗ ಪರ್ವತವನ್ನೇರಿ ನಿಂತನು ಗಗನದ ದೇವತೆಗಳು ಅವನನ್ನು ಮತ್ತಷ್ಟು ಹುರಿಮುಂಬಿಸಿದರು. ತನ್ನ ಸಾಮರ್ಥ್ಯವನ್ನೆಲ್ಲ ಒಂದುಗೂಡಿಸಿ ಪುಷ್ಪ ಧನ್ವನು ನಿಟಿಲಾಕ್ಷನ ಮೇಲೆ ಬಾಣವನ್ನು ಹೂಡಿದನು. ಬಿಟ್ಟ ಬಾಣ ಈಶ್ವರನನ್ನು ಮುಟ್ಟದೆ ಬಿಟ್ಟಲ್ಲಿಗೆ ಮರಳಿತು. ರತೀಶನ ಸೊಕ್ಕು ಮುಕ್ಕಾಯಿತು.

ಇತ್ತ ಗಿರಿರಾಜನಂದಿನಿಯು ಹೂ ಪತ್ರೆಗಳನ್ನು ಕೊಂಡು ವಿಲಾಸಿನಿ ಯರೊಡನೆ ಬಂದು ಶಿವನನ್ನು ಸಿಂಗರಿಸುತ್ತ, ಕಟಾಕ್ಷಗಳಲ್ಲಿ ಕಾಮುಕಳೆ ಯನ್ನು ಹೊರಸೂಸುತ್ತ ನಿಂತಿದ್ದಳು. ಇವನ್ನು ಕಂಡ ಕುಸುಮ ಕೋದಂಡನು 'ಇನ್ನಂಜೆನಂಜೆನಾಹಾ ಉನ್ನತಬಲವಾಯ್ತೆನುತ್ತೆ' ಧೈರ್ಯ ಗೊಂಡು ಐದು ಬಾಣಗಳನ್ನು ಒಂದೇ ಬಾರಿಗೆ ಈಶ್ವರನ ಮೇಲೆ ಹೂಡಿ ದನು ಹರಿವಿರಿಂಚಾದಿಗಳ ಮನದ ಬಯಕೆ, ಕಂದರ್ಪನ ಪಂಚಬಾಣಾ ನುಸಂಧಾನ, ಪಾರ್ವತಿಯ ಮನೋರಥ ಈ ಮೂರೂ ಮುಪ್ಪುರಿಗೊಂಡು ಶಿವನನ್ನು ಸಮಾಧಿಯಿಂದ ಕದಲಿಸಿದುವು. ಪುಷ್ಪಶರ ನೂರ್ಮಡಿಸಿದುವೊ ಎಂಬಂತೆ ಪುಷ್ಪಾಂಜಲಿಯನ್ನು ಕೊಟ್ಟು ಕಂಪಿಸಿ ಮೆಯ್ಯಿಕ್ಕಿದ ಗಿರಿಜಾತೆ ಯನ್ನು ಭೂತೇಶ್ವರನು ನೋಡಿ 'ಅನೇಕೆ, ಈ ಮಾನಿನಿ ಏಕೆ, ಈ ತಾಪ ಎಲ್ಲಿಯದು, ಯಾರಿಂದಾದುದು' ಎಂದು ನಸುಗೋಪದಿಂದ ಎಡಗಡೆಗೆ ಕಣ್ಣು ಹೊರಳಿಸಿದನು. ಅಲ್ಲಿಯೇ ನಿಂತಿದ್ದ ಕಾಮ ದೃಷ್ಟಿಗೆ ಬಿದ್ದುದೆ ತಡ, ಕೋಪ ಕೆರಳಿ ಕೆಂಡಗಣ್ಣಿನ ಉರಿಯಾಗಿ ಹೊಗಣೆಯನನ್ನು ಬೂದಿ

ಮಾಡಿತು. ಮುಂದೆ ನಿಂತಿದ್ದ ಗಿರಿಜೆಯನ್ನು ನೋಡದೆ ನುಡಿಯಿಸದೆ ಸೋಂಕದೆ ನಿಶ್ಚಿಂತನೂ ಸ್ವತಂತ್ರನೂ ಆದ ಅಹಿಧರನು ಅಂತರ್ಧಾನನಾದನು.

ಪತಿವಿಹೀನೆಯಾದ ರತಿ ಶೋಕಕ್ಕೀಡಾದಳು. ತನ್ನ ಪತಿಯ ಗುಣರೂಪವಿಲಾಸಗಳನ್ನು ನೆನೆನೆನೆದು ಹಲುಬಿ ಹಂಬಲಿಸಿದಳು. ದೆಸೆದೆಸೆಗೆ ಕರೆಕರೆದು ಬಾಯಾರಿ ಬಸವಳಿದು ಮೂರ್ಛಿತಳಾದಳು. ಆಗ ಕೃಪಾಕರೆಯಾದ ಗಿರಿಸುತೆ ಅವಳ ಸಮೀಪವನ್ನು ಸಾರಿ, ವೈದಡವಿ, ಬೋಳೈಸಿ, ಮನ್ಮಥನನ್ನು ಮತ್ತೆ ಅವಳಿಗೆ ದೊರಕಿಸಿಕೊಡುವುದಾಗಿ ಅಭಯವನ್ನು ನೀಡಿ ಸಂತೈಸಿದಳು.

ಅನಂತರ ಭಗ್ನಮನೋರಥಳಾದ ಪಾರ್ವತಿ ಚಿಂತೆಗೆ ಸೆರೆಯಾದಳು. ಅಷ್ಟು ದಿನ ತಾಯಿತಂದೆಯರನ್ನು ತ್ಯಜಿಸಿ ಶಿವನೇ ಗತಿ ಮತಿ ಪತಿ ಆಯು ಆತ್ಮಸತ್ತ್ವ ಎಂದು ಪೂಜಿಸುತ್ತ, ಅವನ ಕಾರುಣ್ಯಪ್ರಸಾದಕ್ಕೆ ಕೈಯೊಡ್ಡಿ ಕಾದುಕೊಂಡಿದ್ದರೆ ಅವನ ತಿರಸ್ಕಾರಕ್ಕೆ ತಾನು ಗುರಿಯಾದೆನಲ್ಲ ಎಂದು ಮುನಿದಳು. ಅವನಿದ್ದಲ್ಲಿಗೆ ತಾನು ಹೋಗಿ ಸೋತುದಾಯಿತು, ತಾನಿದ್ದಲ್ಲಿಗೆ ಆ 'ವಿಪುಳ ನಿಶ್ಚಳನಂ ಚಲದಿಂದೆ ತಂದಪೆನ್' ಎಂದು ಪ್ರತಿಜ್ಞಾರೂಢಳಾದ ಚಲದ ಲಲನೆ ಬಲ್ಪಿನ ಭಾವಕಿ ಏಕನಿಷ್ಠಾನಿಧಿ ಆ ಗಿರಿಜೆ ಉಗ್ರತಪಸ್ಸಿಗೆ ಅಣಿಯಾದಳು.

ಸಖಿಯರು ಪಾರ್ವತಿಗೆ ತಪೋಯೋಗ್ಯವಾದ ಅಲಂಕಾರಗಳನ್ನು ತೊಡಿಸಿದರು. ಹೇಮಕೂಟ ನಗಾಗ್ರದಲ್ಲಿ ಪ್ರಶಸ್ತವಾದ ನಿವೇಶನವನ್ನು ಹುಡುಕಿ ಪಂಚಾಗ್ನಿ[1]ಯ ನಡುವೆ ಉಗ್ರತಪಸ್ಸಿಗೆ ಸಿದ್ಧಳಾದಳು. ಅವಳ ತಪೋಜ್ವಾಲೆಗೆ ಅಂಜಿ ಸೂರ್ಯದೇವನು ನಿತ್ಯಪಥವನ್ನು ಬಿಟ್ಟು ಅರುಗಾದನು; ಅರಣ್ಯದ ಮೃಗತತಿ ದೂರ ಸರಿಯಿತು; ಹಕ್ಕಿಗಳು ಕುಳಿತಲ್ಲಿಂದ ಮಿಡುಕಲಿಲ್ಲ; ಗಾಳಿ ಅಲುಗಲಿಲ್ಲ. ಜೊತೆಗೆ ಬೇಸಗೆಯ ಬಿಸಿಲಬೇಗೆ! ಅರಣ್ಯ ಬೆಂದು ಕರಿಕಾಯಿತು, ಮೃಗಪಕ್ಷಿಗಳು ತಾರಿಹೋದುವು, ಸಾಗರಗಳು ಇಂಗಿದುವು, ಬೆಟ್ಟಗಳು ಉರಿದುಹೋದುವು. ನೆಳಲನ್ನು ಸಹ

---

1 ೮೭ ನೆಯ ಪುಟದಲ್ಲಿ ೧೬ ನೆಯ ಟಿಪ್ಪಣಿಯನ್ನು ನೋಡಿ.

'ಕರಿಯ ಬಿಸಿಲೆ' ನ್ನುವಷ್ಟು ಉರಿಬೇಸಗೆ! ಶಶಿಧರನನ್ನು ನೆನೆಯುತ್ತ ಭಾಳಲೋಚನನ ಭಾಮಿನಿ ಬೇಸಗೆಯನ್ನು ನೂಕಿದಳು. ಕೂಡಲೆ ಕಾರ್ ಮೊಗವಾಯಿತು. ನವಿಲು ನಲಿದುವು, ಅಂಚೆ ಸುಳಿದುವು, ಮುಗಿಲು ಕವಿದುವು, ಗುಡುಗು ಸಿಡಿಲುಗಳು ಮೊಳಗಿದುವು. ಎಡೆತಡೆಯಿಲ್ಲದೆ ಮಳೆ ಸುರಿಯಿತು. ಜಗವೆಲ್ಲ ಜಲಮಯವಾಯಿತು. ರಸೆದೆಸೆ ಗಗನಗಳು ಕಾಣದಾದುವು. ಆದರೂ ಆ ಗಂಗಾಧರಪ್ರಿಯೆ 'ಕೋಡದೆ ಕೊಂಕದೆ ಬಾಡದೆ ಬಳ್ಕದೆ ಸೆಡೆಯದೆ' ನಿಶ್ಚಲಚಿತ್ತಳಾಗಿ ಮಹಾವಟವೃಕ್ಷವ ಕೆಳಗೆ ಮಳೆಗಾಲವನ್ನು ಕಳೆದಳು. ಶರತ್ಕಾಲ ಸಾರಿ ಸಾಗಿತು. ಚಳಿಗಾಲ ಕಾಲಿಟ್ಟಿತು. ಮೃಗಪಕ್ಷಿಗಳು ಕೋಟರಗಳನ್ನು ಸೇರಿದುವು. ಒಡಲೇ ಪ್ರಾಣಕ್ಕೆ ಚಳಿಯ ಕುಪ್ಪಸವಾಯಿತು. ರವಿಶಶಿಗಳ ವ್ಯತ್ಯಾಸ ಮಾಯ ವಾಯಿತು. ಲತಾಗೇಹಗಳ ನಡುವಣ ಕಾಸಾರತಟದಲ್ಲಿ ನಿಂತು ಭಾಳ ಲೋಚನನನ್ನು ನೆನೆಯುತ್ತ ಶಶಿಧರನರಸಿ ಚಳಿಗಾಲವನ್ನು ಕಳೆದಳು.

ಕಡೆಗೆ ಪಾರ್ವತಿಯ ತಪಃಪ್ರಭಾವ ವಿರೂಪಾಕ್ಷನ ಕರಣಗಳನ್ನು ಆವರಿಸಿತು. ಅವನ ಕೆಚ್ಚು ಕರುಣೆಯಾಗಿ ಪರಿಣಮಿಸಿತು. ಗಿರಿಜೆಯ ಮನವನ್ನು ಒರೆದು ನೋಡಬೇಕೆಂಬ ಕುತೂಹಲದಿಂದ ವಟುವೇಷವನ್ನು ತಳೆದು ಅವಳ ಬಳಿಗೆ ಸಾರಿದನು. ವಸಂತ ಉದ್ಯಾನದಲ್ಲಿಗೆ, ಪ್ರಾಣಾ ನಿಳ ದೇಹದಲ್ಲಿಗೆ, ಮರಾಳ ಪೂರ್ಣಕಾಸಾರದಲ್ಲಿಗೆ ಬಂದಂತಾಯಿತು. ಆಗ ವಸಂತಋತುವಲ್ಲದಿದ್ದರೂ ಮಾವು ಪಲ್ಲವಿಸಿತು, ಅಶೋಕೆ ಅಂಕುರಿ ಸಿತು, ತರುಗುಲ್ಮಲತಾದಿಗಳು ಚಿಗಿತು ಹೂತು ನವಚೇತನವನ್ನು ಪಡೆ ದುವು; ಕೋಗಿಲೆ ಕೂಗಿತು, ತಣ್ಣೆಲರು ತೀಡಿತು. ಆಕಸ್ಮಿಕವಾದ ವಸಂತಾಗಮನಕ್ಕೆ ದೇವಿಯ ತಪಃಪ್ರಭಾವವೆ ಕಾರಣವೆಂದು ಸಖಿಯರು ಭವಾನಿಗೆ ತಿಳಿಸಿದರು.

ಬಾಲಚೂತದ ತಣ್ಣೆಳಲಿನಲ್ಲಿ ಕುಳಿತಿದ್ದ ಕಪಟವಟುವನ್ನು ಕಂಡ ಜಯೆವಿಜಯೆಯರು ಬಂದು, ಅಗ್ಗಣಿಯಿಂದ ಅವನ ಅಡಿದಾವರೆಗಳನ್ನು ತೊಳೆದು, ಎಳೆಯ ಬಾಳೆಯ ಸುಳಿಯೆಲೆಯಲ್ಲಿ 'ನಳನಳಿಸುವ ಕಂದ

ಮೂಲ, ನವಜಂಬೂಫಲ, ಆಮ್ರಫಳ, ಕದಳೀಫಲ' ಗಳನ್ನು ತಂದು ಅವನಿಗೆ ಎಡೆಮಾಡಿ ಇಂತು ನುಡಿದರು:

"ಎಲೆ ಅತಿಥಿ ಬಳಲ್ದಿರಿಂ; ಈ ಫಲದಿಂದಂ ನಿಮ್ಮ ಪಸಿವನ್ ಉಡುಗಿಸಿ"

"ಹೈ ಫಲಮಂ ಕೆಯ್ಕೊಂಡಪೆವು. ಈ ಲಲನೆ ಆದಾರ್? ತಪವಗಣ್ಯ ಆವನ ಪುಣ್ಯಂ"

"ಇವರಿರವಿನ ಚಿಂತಾರತಿ ನಿವಗೇಕೆ? ಈ ಕ್ಷುಧೆಯನೀ ಪಥಶ್ರಮಮಂ ತೀರ್ಚುವ ಬಗೆಯಂ ಬೇಗಂ ಮಾಡುವುದು."

"ಬೆಸಗೊಂಡೊಡೆ ದೋಷಮೆ? ಈ ಪೊಸಕನ್ನೆ ತಪೋನಿರೋಧ ದಿಂದೊರ್ಡೆ ಸೈರಿಸಬರ್ಪುದೆ? ತಪಮಂ ಮಾಣಿಸುವವರಿಲ್ಲಾ? ಸಹಾಯ ಸಂಪದಮಿಲ್ಲಾ?"

ಈ ಮಾತುಗಳನ್ನು ಕೇಳಿದ ಗಿರಿಜೆಗೆ ತಡೆಯಲಾಗಲಿಲ್ಲ. ಜಪ ವನ್ನು ಅಷ್ಟಕ್ಕೆ ನಿಲ್ಲಿಸಿ ಜಪಮಾಲೆಯನ್ನು ತುಸು ಓಸರಿಸಿ ಮೆಲ್ಲನೆ ಕಣ್ದೆರಳಿಸಿ ವರವಟುವನ್ನು ಕಂಡಳು. ಇಂದುವಿಗೆ ಮೋಡ ಕವಿದರೂ ಲೋಕಕ್ಕೆ ತಂಪು ಎಂತು ತಪ್ಪುವುದಿಲ್ಲವೋ ಅಂತು ಈಶ್ವರನ ಸ್ವಸ್ವರೂಪ ಮರೆಯಾಗಿದ್ದರೂ ಪಾರ್ವತಿಗೆ ಹರ್ಷೋದಯವಾಯಿತು. ಆದರೆ ಆ ಹರ್ಷ ಏಕಾಯಿತೆಂದು ಅವಳಿಗೆ ಆಶ್ಚರ್ಯ. ಅವಳ ಮಧುರನೋಟವನ್ನು ಕಂಡ ಈಶ್ವರನ ಕಪಟವೇಷ ಕರಗುವುದರಲ್ಲಿತ್ತು. ಬಹುಕಷ್ಟದಿಂದ ಆತುರವನ್ನು ಸಂಯಮಿಸಿಕೊಂಡು 'ಪ್ರಣಯ ಕಲಹಲೀಲಾಲೋಲ ಚಿತ್ತ' ನಾದ ವಿರೂಪಾಕ್ಷನು 'ಮೃದುಕಠಿನಾಕ್ಷೇಪಗರ್ಭಿತವಚೋ ವಿಳಾಸಮಂ' ನುಡಿದು ಅವಳ ತಪಸ್ಸಿಗೆ ಕಾರಣವನ್ನು ಕೇಳಿದನು. ಗಿರಿಜೆ ಇಕ್ಕಟ್ಟಿಗೊಳಗಾದಳು. ಕೇಳುವವನು 'ಅಮಳದ್ವಿಜ' ಹೆಸರು ಹೇಳಿದರೂ ಕಷ್ಟ, ಹೇಳದಿದ್ದರೂ ಕಷ್ಟ. ಕೊನೆಗೆ ಮೆಲ್ಲನೆ ಬಾಯಿ ತೆರೆದು ಗದ್ಗದಿಸಿದಳು.

"ಬಗೆವೆರ್ಚೆ ಕೇಳುತಿರ್ದಪೆ, ಪೇಳ್ದಪೆನ್ ಎಲೆಲೆ ಧೂರ್ತವಿಪ್ರತೆ ಕೇಳ್, ಶಂಭುಗೆ ಕಾರುಣ್ಯಾಬ್ಧಿಗೆ ಶೂಲಿಗೆ ಕರುಣಂ ಪುಟ್ಟುವಂನೆ ತಪದಿಂದಿರ್ಪೆಂ."

"ಅಕ್ಕಕ್ಕ ಕಾಮಹರನೊಳ್ ಮುಕ್ಕಣ್ಣನೊಳ್ ಅಖಿಳವೇದ ಶಾಸ್ತ್ರ ಕ್ರಮುಮಂ ಮಿಕ್ಕವನೊಳ್ ಪಿತೃವನದೊಳ್ ಪೊಕ್ಕವನೊಳ್ ಅದೆಂತು ಚಿತ್ತವಿಟ್ಟೆ ಲತಾಂಗಿ? ನೀನಿನಿಯಳ್, ವಿಷನಾತಂ, ಪುಲಿದೊವ ಲುಡುಗೆಯು ಹಾವಿನ ನೆಲೆದೊಡಿಗೆಯು ನೊಸಲಕಣ್ಣು ಖಟ್ವಾಂಗದ ಪಂದಲೆಗಳ ಮಾಲೆಯು ಶೂಲವ ಕಲಿಗಂಜದೆ ಮನಸನೆಂತು ಮಾಡಿದೆ ಮುಗ್ಧೇ?"

ವಿಪ್ರನ ಈ ಶಿವನಿಂದೆಯನ್ನು ಕೇಳಿ ಭವಾನಿ ಮುನಿದು ಕಿನಿಸಿ ಕಿಡಿಕಿಡಿಯಾದಳು. ತಪದ ಮಾತು ಒತ್ತಟ್ಟಿಗಿರಲಿ, ಶಿವನಿಂದೆಯನ್ನು ಕೇಳಿದ ಪಾಪಕ್ಕೆ ತಾನು ಗುರಿಯಾದೆನೆ ಎಂದು ಚಿಂತಿಸಿದಳು. ಕೋಪಿ ಸಿದರೆ 'ತಪದಕೇಡು' ನಿಜ, ಆದರೆ ಪತಿನಿಂದೆಯನ್ನು ಸೈರಿಸಿದರೆ ಮಹಾ ಪಾಪ ಎಂದು ಬಗೆದು ಭಸ್ಮದಿಂದ ಅವನನ್ನು ಹೊಡೆದಳು ಕೂಡಲೆ ವಟುವೇಷ ಸರಿಯಿತು, ನಿಜವೇಷ ಮೆರೆಯಿತು, ಸುಮವೃಷ್ಟಿ ಕರೆಯಿತು; ಅಗಸುತೆಗೆ ವಿಸ್ಮಯವಾಯಿತು. ಹರ್ಷಪುಲಕಿತೆಯಾಗಿ ಲಜ್ಜೆಯಿಂದ ತಲೆ ಬಗ್ಗಿಸಿದಳು. ಶಿವನನ್ನು ನೋಟದಿಂದಲೆ ಸೆಳೆದಳು, ಮನದಲ್ಲಿಯೆ ಅಪ್ಪಿದಳು. ಪರಮೇಶ್ವರನು ಅಪರ್ಣೆಯ ಪುಣ್ಯ ಹಸ್ತವನ್ನು ಹಿಡಿದು ತಾರಾಚಲಕ್ಕೆ ಹೊರಡುವಂತೆ ಹೇಳಿದನು. ತಂದೆಯಲ್ಲಿ ತನ್ನನ್ನು ಬೇಡಿ 'ಊರ್ಜಿತ' ವಿವಾಹವನ್ನು ಮಾಡಿಕೊಳ್ಳಬೇಕೆಂದು ಗಿರಿಸುತೆ ಬೇಡಿ ಕೊಂಡಳು. ಈಶ್ವರ ಸಮ್ಮತಿಸಿದನು. ಅಷ್ಟರಲ್ಲಿ ವ್ಯಾಕುಲಚಿತ್ತಳಾದ ರತಿ ಬಂದು ಮೆಯ್ಯಿಕ್ಕಿದಳು. ತಾನು ಹಿಂದೆ ಅವಳಿಗೆ ನೀಡಿದ ಅಭಯ ವಚನದ ಸಂಗತಿಯನ್ನು ಗಿರಿಜೆ ಶಂಕರನಿಗೆ ತಿಳಿಸಿದಳು. ಶಂಕರನು 'ಗಿರಿತನಯಾ ಮಧುರಾಸ್ಯಮಂ ನಿರೀಕ್ಷಿಸಿ ನಗುತ್ತ' ಕಾಮನು ಅನಂಗ ನಾಗಿ ರತಿಗೆ ಸುಖಸಂಪತ್ತನ್ನು ಕೊಡುತ್ತಿರಲಿ ಎಂದು ಹರಸಿ, ಗಿರಿಜೆ ಯನ್ನಗಲಿ ಕೈಲಾಸಕ್ಕೆ ಹೊರಟನು.

ಬಯಕೆ ಕೈಗೂಡಿ ಮನೆಗೆ ಬಂದ ಮಗಳನ್ನು ನೋಡಿ ತಂದೆಗೆ ಅಪರಿಮಿತವಾದ ಸಂತೋಷವಾಯಿತು; ತಪೋನಿರೋಧದಿಂದ ಬಡ ವಾಗಿದ್ದ ಮಗಳ ಮೈಯನ್ನು ಕಂಡು ತಾಯಿಗೆ ದುಃಖವಾಯಿತು. ಒಡ

ನೆಯೆ ಸುಂದರಿಯರು ಪಾರ್ವತಿಯನ್ನು ಮೊದಲಿನಂತೆ ಅಲಂಕರಿಸಿದರು.

ಒಂದು ದಿನ ಸಪ್ತರ್ಷಿಯರು ಪಿನಾಕಿಯ ಇಷ್ಟದಂತೆ ಕನ್ಯಾರ್ಥಿಗಳಾಗಿ ಗಿರಿರಾಜನ ಬಳಿಗೆ ಬಂದರು. ಗಿರಿರಾಜನು ಅವರನ್ನು ಗೌರವದಿಂದ ಉಪಚರಿಸಿ, ಬಂದ ಕಾರಣವನ್ನು ವಿಚಾರಿಸಿದನು. "ಅಭವಂ ನಿರ್ವಾಣಯಿಂ ಗಿರಿಜೆಯ ಬೇಡುವೊಡೆ ತಿಳುಪಿ ಕಳುಪಿದನೆಮ್ಮಂ" ಎಂದು ಋಷಿಗಳು ನುಡಿದರು. ಅವರ ಆಪ್ತವಚನ ಹಿಮವಂತನಿಗೆ ಕರ್ಣರಸಾಯನವಾಯಿತು. 'ಶಿವನ ಕರುಣಂ ಎನಗಿದಿರ್ವರೆ ವಿಚಾರವೇ, ಬರ್ದುಂಕಿದೆಂ ಬರ್ದುಂಕಿದೆಂ, ಎನ್ನ ಭಾಗ್ಯದ ಬೆಳೆ ತಳಿರ್ತುದು' ಎಂದು ಹಿಗ್ಗಿ, 'ಕೊಟ್ಟೆಂ ಕೊಟ್ಟೆಂ ಎರಡಿಲ್ಲ' ಎಂದು ಸತ್ಯವಚನವನ್ನು ಸಂತೋಷದಿಂದ ನುಡಿದು, ಅವರನ್ನು ಕಳುಹಿಸಿಕೊಟ್ಟು ವಿವಾಹಮಂಟಪ ರಚನೆ ಮೊದಲುಗೊಂಡು ಸಕಲಸಿದ್ಧತೆಗಳನ್ನು ಅಣಿಗೊಳಿಸಿದನು. ಯಕ್ಷರಾಕ್ಷಸರು, ಗರುಡಗಂಧರ್ವರು, ಮನುಮುನಿಸುರರು, ಪರ್ವತರಾಜನ ಬಂಧು ಬಳಗದವರು, ಹರಿವಿರಿಂಚಾದಿ ದೇವತೆಗಳು ಎಲ್ಲರೂ ಬಂದು ನೆರೆದರು. ಸುವಾಸಿನಿಯರು ಗಿರಿರಾಜಕನ್ಯೆಗೆ ಸಮುಚಿತವಾದ ಸಿಂಗರವನ್ನು ಕೈಕೊಳಿಸಿದರು. ಪರಮೇಶ್ವರನು ಉಗ್ರರೂಪನ್ನು ತೊರೆದು ಸೌಮ್ಯ ಸುಂದರಾಕಾರವನ್ನು ತಳೆದು, ಮದುವಣಿಗತನವನ್ನು ನಟಿಸುತ್ತ ಪ್ರಮಥಗಣಗಳೊಡಗೂಡಿ ಬಂದನು. ಸುಮುಹೂರ್ತದಲ್ಲಿ ಗಿರಿರಾಜನಂದಿನಿ ಮತ್ತು ಗಿರಿಶರ ಮಹಾವಿವಾಹ ನೆರವೇರಿತು.

**ಕಥೆಯ ಮೂಲ ಮತ್ತು ಬೆಳವಣಿಗೆ:** ಗಿರಿಜಾಕಲ್ಯಾಣದ ಕಥೆ ಸಂಸ್ಕೃತಸಾಹಿತ್ಯದಲ್ಲಿ ಮೊದಲು ನಮ್ಮ ಕಣ್ಣಿಗೆ ಬೀಳುವುದು[1]

---

1 ಪಾರ್ವತೀಪರಮೇಶ್ವರರು ಸತಿಪತಿಗಳು ಮತ್ತು ಜಗತ್ತಿನ ಮಾತಾಪಿತೃಗಳು ಎಂಬ ಕಲ್ಪನೆ ಬಹಳ ಹಿಂದಿನ ಕಾಲದ್ದು ಎಂದು ತೋರುತ್ತದೆ. ವೇದಗಳ ಕಾಲದಲ್ಲಿ ದೇವರು ತಂದೆ ಎಂಬ ಭಾವನೆ ಇತ್ತು. ತಾಯಿಯಿಲ್ಲದೆ ತಂದೆಯ ಕಲ್ಪನೆ ಹೇಗೆ ಸಾಧ್ಯ? ಅನಾದಿಯಾದ ಆ ವಿಶ್ವಶಕ್ತಿಗೆ ಹೆಂಡತಿ ಎಲ್ಲಿಂದ ಬರಬೇಕು? ಸೃಷ್ಟಿಗಿಂತ ಹಿಂದೆ ಅವನೊಬ್ಬನೇ ಇದ್ದವನು. ಆದುದರಿಂದ ಅವನೇ ಎರಡಾಗಿ ಒಡೆದು ಒಂದು ಗಂಡು ಇನ್ನೊಂದು ಹೆಣ್ಣಾಗಿ ಸೃಷ್ಟಿಕಾರ್ಯ

ನಡೆಯಬೇಕು. ಬೃಹದಾರಣ್ಯಕೋಪನಿಷತ್ತಿನ ಈ ಮಂತ್ರದಲ್ಲಿಯೂ ಅದೇ ಅರ್ಥ ಸ್ಪಷ್ಟವಾಗಿ ಕಾಣುತ್ತದೆ:

ಸ ವೈ ನೈವ ರೇಮೇ, ತಸ್ಮಾದೇಕಾಕೀ ನ ರಮತೇ; ಸ ದ್ವಿತೀಯ ಮೈಚ್ಛತ್ ಸ ಹೈತಾವಾನಾಸ ಯಥಾ ಸ್ತ್ರೀ ಪುಮಾಂಸೌ ಸಂಪರಿಷ್ವಕ್ತೌ; ಸ ಇಮ-ಮೇವಾತ್ಮಾನಂ ದ್ವೇಧಾ ಪಾತಯತ್, ತತಃ ಪತಿಶ್ಚ ಪತ್ನೀ ಚಾಭವತಾಮ್; ತಸ್ಮಾದಿದಮರ್ಧಬೃಗಲಮಿವ ಸ್ವ ಇತಿ ಹ ಸ್ಮಾಹ ಯಾಜ್ಞವಲ್ಕ್ಯಃ, ತ-ಸ್ಮಾದಯಮಾಕಾಶಃ ಸ್ತ್ರಿಯಾ ಪೂರ್ಯತ ಏವ; ತಾಂ ಸಮಭವತ್, ತತೋ ಮನುಷ್ಯಾ ಅಜಾಯಂತ (೧–೪–೩).

(ಅವನು [ಪುರುಷ] ಒಬ್ಬೊಂಟಿಗನಾದುದರಿಂದ ಭೋಗಕ್ಕೆ ಅವಕಾಶವೇ ಇಲ್ಲ. ಹೆಣ್ಣು ಗಂಡು ಎರಡೂ ಅವನಲ್ಲಿ ಒಂದಾಗಿದ್ದುವು. ಆ ಒಂದು ಎರಡಾಗಿ ಒಡೆದು ಪತಿಪತ್ನಿಯರಾದರು. ಅವರ ಭೋಗದಿಂದ ಸೃಷ್ಟಿಯಾಯಿತು.) ಕಾಳಿದಾಸನು ತನ್ನ ರಘುವಂಶಕಾವ್ಯದ ನಾಂದೀಪದ್ಯದಲ್ಲಿ ಶಿವಶಕ್ತಿಯರ ಸ್ವರೂಪವನ್ನು ಅರ್ಥವತ್ತಾಗಿ ನಿರೂಪಿಸಿದ್ದಾನೆ:

> ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ
> ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ

ಈ 'ಮಾತಾಪಿತೃ' ಭಾವನೆ ವೇದಗಳ ಕಾಲಕ್ಕಿಂತಲೂ ಹಿಂದಿನದು ಎಂದು ಬಹುಜನಾಭಿಪ್ರಾಯವಿದೆ. ಸಿಂಧೂನದಿಯ ಬಯಲಿನಲ್ಲಿ ಆರ್ಯರಿಗಿಂತ ಮುಂಚೆಯೇ ಮೆಡಿಟರೇನಿಯನ್ ಕಡೆಯಿಂದ ಬಂದ ಜನಾಂಗ (ದ್ರಾವಿಡರು) ವೊಂದು ವಾಸಿಸುತ್ತಿತ್ತು. ಅವರು ನಾಗರಿಕತೆಯಲ್ಲಿ ಆರ್ಯರಿಗಿಂತ ಮುಂದುವರಿದಿದ್ದರಲ್ಲದೆ ಪ್ರಪಂಚದ ಪುರಾತನ ನಾಗರಿಕ ಜನಾಂಗಗಳಲ್ಲೊಂದಾಗಿದ್ದರು. ಅವರು ಶೈವೋಪಾಸಕರು. ಅಷ್ಟೇ ಅಲ್ಲ: ಹೆಣ್ಣುದೇವತೆಯನ್ನು ವಿಶೇಷವಾಗಿ ಪೂಜಿಸುತ್ತಿದ್ದರು. ಆ ಹೆಣ್ಣು ಗಂಡು ದೇವರುಗಳಲ್ಲಿ ಅವರು ಸೃಷ್ಟಿಯ ಮೂಲಶಕ್ತಿಗಳನ್ನು ಕಂಡರು. ಹೀಗೆಂದು ಶ್ರೀ ಎಸ್. ಕೆ. ಚಟರ್ಜಿಯವರು ಹೇಳುತ್ತಾರೆ. [But the Dravidians had a conception of the forces of life and of the universe in the forms of great Mother Goddess and her male counterpart a Father God, and this conception which was more profound, more mystic, more all-embracing and more deeply philosophical as well as more poetic than the simple Aryan idea of a material

ಕಾಳಿದಾಸನಲ್ಲಿ[1]ಯೇ ಎಂದು ಹೇಳಬಹುದು. ಪದ್ಮಪುರಾಣ, ಲಿಂಗಮಹಾಪುರಾಣ, ಸ್ಕಾಂದಪುರಾಣ, ಸೌರಪುರಾಣ, ಶಿವಪುರಾಣಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಈ ಕತೆ ದೊರೆಯುತ್ತದೆ. ಆದರೆ ಪುರಾಣಗಳ ಕಾಲ ಅನಿಶ್ಚಿತ. ಪುರಾಣಗಳೆಲ್ಲ ಸಾಮಾನ್ಯವಾಗಿ ಕಾಳಿದಾಸನಿಗಿಂತ ಈಚೆಯವು ಎಂದು ಹೇಳುವ ಪಂಥವೂ ಉಂಟು. ಆ ಕಗ್ಗಂಟಾದ ಸಮಸ್ಯೆಯ ಸಮಾಲೋಚನೆ ಇಲ್ಲಿ ಅನಗತ್ಯ. ಹರಿಹರನ ಕಾವ್ಯದಲ್ಲಿ ಕುಮಾರಸಂಭವ,

---

sky Father and an equally material Earth Mother, the Dravidians appear to have brought to India from their original home-land in the islands of the Aegean and the tracts of mainland along the Agean sea—Greece and Asia Minor. Mā or Kubele and Atthis, or Hepit and Teshup, the great Asianic Mother Goddess and Father God, the former having as her symbol or vehicle the lion, the latter the bull, form undoubtedly one of the bases on which the Siva-Uma cult of Hindu India grew up—The Vedic Age : Page 158]

ಒಟ್ಟಿನಲ್ಲಿ ಗಿರಿಜಾಕಲ್ಯಾಣದ ಕತೆ ಕಾಳಿದಾಸನಿಗಿಂತ ಮೊದಲೇ ಜನತೆಯ ಬಾಯಿಯಲ್ಲಿ ಬೆಳೆದು ಅನೇಕ ರೂಪಾಂತರಗಳನ್ನು ಹೊಂದಿತ್ತೆನ್ನಲು ಅಡ್ಡಿಯಿಲ್ಲ.

1 ಇದಲ್ಲದೆ ಸಂಸ್ಕೃತದಲ್ಲಿ ಉದ್ಭಟ ಬರೆದಿರುವ ಕುಮಾರಸಂಭವ ಸಿಕ್ಕಿಲ್ಲ. ಅವನು ಕಾಳಿದಾಸನಿಗಿಂತ ಈಚೆಯವನು. ಪಾರ್ವತೀಪರಿಣಯವೆಂಬ ಒಂದು ನಾಟಕ ಬಾಣನ ಹೆಸರಿನಲ್ಲಿದೆ. ವಸ್ತುತಃ ಅದು ಹದಿನೈದನೆಯ ಶತಮಾನದಲ್ಲಿದ್ದ ವಾಮನಭಟ್ಟಬಾಣನದು. ಅದು ಉತ್ತಮವಾದ ಕೃತಿಯೂ ಅಲ್ಲ. ಇದಲ್ಲದೆ ಚಾಲುಕ್ಯದೊರೆ ಸೋಮದೇವ (೧೧೨೬–೧೧೩೮) ನ ಆಸ್ಥಾನಪಂಡಿತನಾದ ವಿದ್ಯಾಮಾಧವನೆಂಬುವನು ಪಾರ್ವತೀ ರುಕ್ಮಿಣೀಯವೆಂಬ ಶ್ಲೇಷಕಾವ್ಯವನ್ನು ಬರೆದಿದ್ದಾನೆ.

ಕನ್ನಡದಲ್ಲಿ ಮೊಟ್ಟಮೊದಲಿಗೆ ಗಿರಿಜಾಕಲ್ಯಾಣದ ಕತೆ ಸಮಗ್ರವಾಗಿ ದೊರೆಯುವುದು ಹರಿಹರನಲ್ಲಿ ಮಾತ್ರ. ಅವನಿಗಿಂತ ಹಿಂದೆ ಈ ಕತೆ ಬಹುಶಃ ಜನಪದ ಗೀತೆಯಲ್ಲಿ ಬೆಳೆದುಕೊಂಡು ಬಂದಿರಬಹುದೆಂದು ಕಾಣುತ್ತದೆ. ಮದುವೆ ಮೊದ

ಶಿವಪುರಾಣ[1] ಮತ್ತು ಲಿಂಗಪುರಾಣಗಳ ಪ್ರಭಾವ ಮುದ್ರೆ ಸುಸ್ಪಷ್ಟವಾಗಿ ಗೋಚರವಾಗುತ್ತದೆಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ಸಾಕು.

ಹಿಮವಂತನ ಸತಿ ಮೇನೆಯ ತಪಸ್ಸಿಗೆ ಮೆಚ್ಚಿದ ಆದಿಶಕ್ತಿ ಅವಳಿಗೆ ಮಗಳಾಗಿ ಜನಿಸಿ, ತಪಶ್ಶಕ್ತಿಯಿಂದ ತಪೋನಿರತನಾದ ಈಶ್ವರನನ್ನು ಒಲಿಸಿಕೊಂಡು ಮದುವೆಯಾದ ಕತೆಯೇ ಗಿರಿಜಾಕಲ್ಯಾಣದ ವಸ್ತು. ಕತೆ ಮಹಿಮಾನ್ವಿತವಾದುದಾದರೂ ಪ್ರಮಾಣದಲ್ಲಿ ಚಿಕ್ಕದು. ಕೇವಲ ಹತ್ತು ಹನ್ನೆರಡು ವರ್ಷಗಳಲ್ಲಿ ನಡೆದ ಕತೆ. ಮಹಾಕಾವ್ಯ[2]ವನ್ನು ಬರೆಯ

---

ಲಾದ ಒಸಗೆಯ ಸಮಯಗಳಲ್ಲಿ ಬಹುಶಃ ಈ ಹಾಡುಗಳನ್ನು ಹಾಡುತ್ತಿದ್ದಿರಬೇಕು. ಆ ರೂಢಿ ಅಲ್ಲಲ್ಲಿ ಇನ್ನೂ ಅಪರೂಪವಾಗಿ ಉಳಿದಿದೆ. (ಶ್ರೀ ಎಲ್. ಗುಂಡಪ್ಪನವರು ಸಂಪಾದಿಸಿರುವ 'ನಾಡ ಪದಗಳು' ಎಂಬ ಸಂಗ್ರಹದಲ್ಲಿ ಗಿರಿಜಾಕಲ್ಯಾಣ ಸಂಬಂಧವಾದ ಹಾಡುಗಳನ್ನು ನೋಡಿ) ಕುಮಾರಸಂಭವದ ಭಾಗವಿರಬಹುದಾದ ಗಿರಿರಾಜನ ಆಸ್ಥಾನ, ಪಾರ್ವತಿಯ ಬಾಲ್ಯ, ರತೀಮನ್ಮಥರ ರೂಪಲಾವಣ್ಯ, ಗಿರಿಜಾಕಲ್ಯಾಣ ಮೊದಲಾದವುಗಳಿಗೆ ಸಂಬಂಧಪಟ್ಟ ಪದ್ಯಗಳು ಸೂಕ್ತಿಸುಧಾರ್ಣವದಲ್ಲಿ ಎಡೆಯೆಡೆಯಲ್ಲಿ ಗೋಚರವಾಗುತ್ತವೆಂದೂ, ಇವು ಹರಿಹರನ ಗಿರಿಜಾಕಲ್ಯಾಣದ ಭಾಗಗಳಲ್ಲವೆಂದೂ ಸೂಕ್ತಿಸುಧಾರ್ಣವದ ಮುನ್ನುಡಿಕಾರರು ತಿಳಿಸುತ್ತಾರೆ. ಈ ಪದ್ಯಗಳು ಇರುವ ಗ್ರಂಥ ಯಾವುದೋ ಇನ್ನೂ ಸಿಕ್ಕಿಲ್ಲ. ಲಕ್ಕಣ್ಣದಂಡೇಶನ (೧೪೩೦) ಶಿವತತ್ವಚಿಂತಾಮಣಿಯಲ್ಲಿಯೂ, ವಿರೂಪಾಕ್ಷಪಂಡಿತನ (೧೫೮೪) ಚೆನ್ನಬಸವಪುರಾಣದಲ್ಲಿಯೂ ಬರುವ ಗಿರಿಜಾಕಲ್ಯಾಣದ ಕತೆಗೆ ಹರಿಹರನ ಗಿರಿಜಾಕಲ್ಯಾಣವೆ ಆಧಾರ.

1 ಶಿವ ಮತ್ತು ಸ್ಕಾಂದಪುರಾಣಗಳ ಕಥಾಸಾರವನ್ನು ಎರಡನೆಯ ಪರಿಶಿಷ್ಟದಲ್ಲಿ ಕೊಟ್ಟಿದೆ.

2 ಮಹಾಕಾವ್ಯದ ಸಾಂಪ್ರದಾಯಿಕ ಲಕ್ಷಣಗಳಿವು: ಎಂಟಕ್ಕೆ ಕಡಮೆಯಿಲ್ಲದೆ ಸಂಧಿಗಳಿರಬೇಕು. ಒಂದೊಂದು ಸಂಧಿಯಲ್ಲಿಯೂ ಮೂವತ್ತಕ್ಕೆ ಕಡಮೆಯಿಲ್ಲದೆ ಇನ್ನೂರಕ್ಕೆ ಮೀರಿರದೆ ಪದ್ಯಗಳಿರಬೇಕು. ಒಬ್ಬ ನಾಯಕನ ಕತೆ ಅಥವಾ ದೊರೆಯ ವಂಶದ ಕತೆ ವಸ್ತುವಾಗಿರಬೇಕು. ನಾಯಕ ಒಬ್ಬನೇ ಇದ್ದರೆ, ಅವನು ದೇವಾಂಶಪುರುಷನಾಗಿರಬೇಕು ಅಥವಾ ಉತ್ತಮ ವಂಶದವನಾಗಿರಬೇಕು; ಧೀರೋದಾತ್ತಗುಣಗಳನ್ನು ಹೊಂದಿರಬೇಕು. ಪ್ರಧಾನರಸ ಶೃಂಗಾರ, ವೀರ ಅಥವಾ ಶಾಂತವಾಗಿರಬೇಕು. ಪುರುಷಾರ್ಥಸಾಧನೆಯೇ ಕಾವ್ಯೋದ್ದೇಶವಾಗಿಕ

ಬೇಕೆಂಬ ಗೀಳು ಹರಿಹರನಿಗೆ. ವರ್ಣನೆಗಳ ಮೇಲೆ ವರ್ಣನೆಗಳನ್ನು[1] ಅಡಕಿ ಈ ಕಿರುಗತೆಯನ್ನು ಹಿಗ್ಗಲಿಸಿದ್ದಾನೆ. ಇತರ ಕೃತಿಗಳಲ್ಲಿ ಅದ್ವಿತೀಯ ಕಲೆಗಾರನೆನಿಸಿಕೊಂಡ ಹರಿಹರ ಇಲ್ಲಿ ಸಾಂಪ್ರದಾಯಿಕ ಲಕ್ಷಣಗಳ ಶೃಂಖಲೆಯಲ್ಲಿ ಕಟ್ಟುಗೊಂಡು ಮುಗ್ಗರಿಸುತ್ತಾನೆ. ಈಶ್ವರಸಂದರ್ಶನಕ್ಕಾಗಿ ಪಾರ್ವತಿಗೆ ಕಾತರ, ಕವಿಗೆ ಕಾತರ, ವಾಚಕರಿಗೆ ಕಾತರ. ಪಾರ್ವತಿಯ ಸಂಕಲ್ಪಸಿದ್ಧಿಯೇ ಕವಿಯ ಸಿದ್ಧಿ, ವಾಚಕರ ಸಿದ್ಧಿ. ಆದುದರಿಂದ ಪಾರ್ವತಿ ತಿಂಗಳುಗಟ್ಟಲೆ ಬನದ ಹೂವುಗಳನ್ನೆಲ್ಲ ತಿರಿದು ತಂದು ಪೂಜೆ ನಡೆಸಲಿ, ವರ್ಷಪರ್ಯಂತರ ಚಳಿಮಳೆ ಬಿಸಿಲೆನ್ನದೆ ತಪಗೈಯಲಿ, ಎಲ್ಲರೂ ಕಾದು ನೋಡಬಹುದು, ಅವಳೊಡನೆ ತಪಗೈಯಬಹುದು. ಆದರೆ ಅಂತ್ಯಗುರಿಯನ್ನು ಒಕ್ಕಡೆಗೆ ಒತ್ತರಿಸಿ ಹೈಮಾಚಲ ಪ್ರಾಂತದಲ್ಲಿ[2] ಅಲೆದಾಡುವುದಾಗಲೀ, ಬೇಡರೊಡನೆ ಬೇಟೆಯಾಡುವುದಾಗಲೀ, ಉದ್ಯಾನವನಗಳಲ್ಲಿ ವಿಹರಿಸುವುದಾಗಲೀ, ಜಲಕೇಳಿಯಲ್ಲಿ ಆಸಕ್ತಿ ವಹಿಸುವುದಾಗಲೀ, ಸೂಳೆಗೇರಿಯಲ್ಲಿ ಸುತ್ತಾಡುವುದಾಗಲೀ, ರಣರಂಗದಲ್ಲಿ ತೊಳಲಾಡುವುದಾಗಲೀ ಬೇಡವಾದ ಬೇಸರದ ಹವ್ಯಾಸಗಳು. ಮೃಗಯಾ ವಿಹಾರ ಜಲಕೇಳಿಗಳು ಯಾರಿಗೆ ಬೇಡ? ಬೇಕು. ಬೇಡವೆನ್ನುವವನು ಅರಸಿಕ. ಆದರೆ ತುಂಗಭದ್ರಾತೀರದ ತಪೋಭೂಮಿಯ ಪ್ರಶಾಂತ

---

ಬೇಕು. ಪಟ್ಟಣ, ಸಮುದ್ರ, ಪರ್ವತ, ಋತು, ಚಂದ್ರೋದಯ, ಉದ್ಯಾನ, ಜಲಕ್ರೀಡೆ, ಮಧುಪಾನ, ಸಂಭೋಗ—ವಿಪ್ರಲಂಭ ಶೃಂಗಾರ, ವಿವಾಹ, ಪುತ್ರೋತ್ಪತ್ತಿ, ಮಂತ್ರಾಲೋಚನೆ, ದ್ಯೂತ, ಪ್ರಯಾಣ, ಯುದ್ಧ ನಾಯಕನ ಜಯಪ್ರಾಪ್ತಿ ಈ ಹದಿನೆಂಟು ವರ್ಣನೆಗಳಿಂದ ಕೂಡಿರಬೇಕು, ಇತ್ಯಾದಿ, ಇತ್ಯಾದಿ

1 ಅವು ಕತೆಯ ಓಟಕ್ಕೆ ಅಡ್ಡಿಯಾಗುತ್ತವೆಂಬುದೇ ಹೊರತು ಚೆನ್ನಾಗಿಲ್ಲವೆಂಬುದು ಈ ಹೇಳಿಕೆಯ ಉದ್ದೇಶವಲ್ಲ. ಹರಿಹರನ ಕೆಲವು ವರ್ಣನೆಗಳಂತು—ಬೇಟೆಯ ವರ್ಣನೆ, ಉದ್ಯಾನವನದ ವರ್ಣನೆ ಮೊದಲಾದುವು—ಪ್ರಥಮಶ್ರೇಣಿಗೆ ಏರತಕ್ಕಂಥವು. ಅವುಗಳಲ್ಲಿ ಕೆಲವನ್ನು ಮಾತ್ರ ಆರಿಸಿ ಮೂರನೆಯ ಪರಿಶಿಷ್ಟದಲ್ಲಿ ಕೊಟ್ಟಿದೆ.

2 ಈ ವರ್ಣನೆಗಳನ್ನು ಸಂಗ್ರಹದಲ್ಲಿ ಕೊಟ್ಟಿಲ್ಲ. ಮೂಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅಭಿಪ್ರಾಯವನ್ನು ಇಲ್ಲಿ ಸೂಚಿಸಿದೆ.

ವಾತಾವರಣದಲ್ಲಿ ನೆಲೆಗೊಳ್ಳಬೇಕಾದ ಮನಸ್ಸು ಗೊತ್ತುಗುರಿಯಿಲ್ಲದೆ ಅಲೆದಾಡುವುದು ಸರಿಯಲ್ಲ.

ಕುಮಾರಸಂಭವ ಮತ್ತು ಶಿವಪುರಾಣಗಳ ಆಧಾರದ ಮೇಲೆ ಹರಿಹರ ತನ್ನ ಕೃತಿಯನ್ನು ನಿರ್ಮಿಸಿದ್ದರೂ ಇದು ಅವುಗಳ ಪ್ರತಿಬಿಂಬವಲ್ಲ, ಕುರುಡುನಕಲಲ್ಲ. ಗಿರಿಜಾಕಲ್ಯಾಣವನ್ನು ಬರೆಯುವುದರಲ್ಲಿ ಇವನ ದೃಷ್ಟಿಯೇ ಬೇರೆ. ಪಾರ್ವತಿಯ ಸಂಕಲ್ಪ, ಸಾಧನೆ ಮತ್ತು ಸಿದ್ಧಿಯನ್ನು ನಿರೂಪಿಸಿ, ಅವಳ ಮಹಿಮೋನ್ನತಿಯ ಗೀತೆಯನ್ನು ಹಾಡುವುದೇ ಕವಿಯ ಮುಖ್ಯೋದ್ದೇಶ. ಅವನ ದೃಷ್ಟಿಧ್ಯೇಯಗಳಿಗನುಗುಣವಾಗಿ ಹೊಸ ಹೊಸ ಸನ್ನಿವೇಶ ಸಂದರ್ಭಗಳು ಜೋಡಣೆಗೊಂಡು ಕೃತಿ ಹೊಚ್ಚಹೊಸದಾಗುತ್ತದೆ. ಪಾರ್ವತಿಯ ಜನನ, ಶೈಶವಲೀಲೆ, ನಾರದನ ಆಗಮನ, ಹೇಮಕೂಟದಲ್ಲಿ ತಪಸ್ಸುಮಾಡುತ್ತಿದ್ದ ಶಿವನ ಬಳಿಗೆ ಪಾರ್ವತಿ ಬರುವಿಕೆ, ಅವಳ ನಿತ್ಯಶಿವಾರ್ಚನೆ, ಮನ್ಮಥನಿಗೆ ಅವಳು ನೀಡುವ ಧೈರ್ಯ, ಕಾಮದಹನಾನಂತರ ಅವಳು ರತಿಗೆ ಕೊಡುವ ಅಭಯ, ಶಿವನು ತನ್ನನ್ನು ಮಾತಾಡಿಸದೆ ಹಾಗೆಯೇ ಅಂತರ್ಧಾನನಾದುದಕ್ಕೆ ಮುಳಿದು ಅವಳು ತೊಡುವ ಸಂಕಲ್ಪ, ಮುನಿಕುಲವನ್ನೇ ವಿಸ್ಮಯಗೊಳಿಸಿ ಅವಳು ಎಸಗುವ ತಪಸ್ಸು, ವಟುವೇಷಧಾರಿಯಾಗಿ ಬಂದ ಶಿವನೊಡನೆ ಮಾತುಕತೆ, ಶಿವನನ್ನು ನಿಂದಿಸಿದ ಕಪಟವಟುವಿನ ವೇಷವನ್ನು ವಿಭೂತಿಯೆರಚಿನಿಂದ ಪರಿಹರಿಸುವುದು, ಪಾರ್ವತೀಪರಮೇಶ್ವರರ ವಿವಾಹ— ಈ ಒಂದೊಂದು ಸಂದರ್ಭದಲ್ಲಿಯೂ ಕವಿ ತನ್ನ ವೈಶಿಷ್ಟ್ಯವನ್ನು ವ್ಯಕ್ತಪಡಿಸಿದ್ದಾನೆ. ಸ್ವಲ್ಪ ಅತಿಯೆಂದು ಕಾಣಬಹುದಾದ, ಆದರೆ ಪ್ರಧಾನ ಕಥೆಗೆ ಪೋಷಕವಾಗಿ ಬರುವ ಬೃಹಸ್ಪತಿ[1]ಯ ದೌತ್ಯ ಮತ್ತು ಮನ್ಮಥ

---

1 ಕುಮಾರಸಂಭವ, ಶಿವಪುರಾಣ, ಪದ್ಮಪುರಾಣ ಮತ್ತು ಸೌರಪುರಾಣಗಳಲ್ಲಿ ಬೃಹಸ್ಪತಿಯ ದೌತ್ಯದ ವಿಷಯ ಬರುವುದಿಲ್ಲ. ಲಿಂಗಪುರಾಣದಲ್ಲಿ ಅವನ ವಿಷಯ ಈ ರೀತಿ ಬರುತ್ತದೆ: ತಾರಕಾಸುರನ ವಿಪತ್ತಿನಿಂದ ಪಾರಾಗುವ ಉಪಾಯವನ್ನು ತಿಳಿಸುವಂತೆ ಇಂದ್ರ ದೇವತೆಗಳ ಸಮ್ಮುಖದಲ್ಲಿ ಬೃಹಸ್ಪತಿಯನ್ನು ಬೇಡಿಕೊಳ್ಳುವನು. ಬೃಹಸ್ಪತಿ ಅವರನ್ನು ಬ್ರಹ್ಮನ ಬಳಿಗೆ ಕರೆದುಕೊಂಡು ಹೋಗುವನು. ಬ್ರಹ್ಮನ ಸಲಹೆಯ ಮೇರೆಗೆ ಬೃಹಸ್ಪತಿ ಮನ್ಮಥನನ್ನು ನೆನೆದು ಬರಿಸಿ, ಅವನನ್ನು

ಪ್ರಸಂಗಗಳನ್ನು ಸಹ ಸಂಪೂರ್ಣವಾಗಿ ಮಾರ್ಪಡಿಸಿಕೊಂಡಿದ್ದಾನೆ. ಕಥನ ಕಲೆಯ ದೃಷ್ಟಿಯಿಂದ ಅತಿಯೆನ್ನಬಹುದಾದ ಕೆಲವು ವರ್ಣನೆಗಳನ್ನೂ, ಈ ಒಂದೆರಡು ಸಂದರ್ಭಗಳನ್ನೂ ಬಿಟ್ಟರೆ ಹರಿಹರ ಕವಿಯ ಸ್ವಾಭಾವಿಕವಾದ ವ್ಯಕ್ತಿತ್ವ ಮತ್ತು ಅವನ ಮೂಲಸ್ವರೂಪ ಅವನ ಕಾವ್ಯದಲ್ಲಿ ಸುಪ್ರಕಟಗೊಳ್ಳುತ್ತವೆ. ಉಳಿದ ಸಂದರ್ಭಗಳು ಸಮಯೋಚಿತವಾಗಿ ಸುಸಂಗತವಾಗಿ ಸಹಜವಾಗಿ ಹೃದಯಂಗಮವಾಗಿ ಕತೆಯ ಕಟ್ಟಡಕ್ಕೆ ಪೂರಕವಾಗಿ ಬಂದು ಅವನ ಕಥನಕಲೆಯ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುತ್ತವೆ.

**ಪಾತ್ರಪರಿಚಯ :** ಸನ್ನಿವೇಶಸಂದರ್ಭಗಳ ನಿರೂಪಣೆಯಲ್ಲಿ ಗಿರಿಜಾಕಲ್ಯಾಣ ಹೇಗೆ ಇತರ ಕಾವ್ಯಪುರಾಣಗಳಿಂದ ಭಿನ್ನವಾಗಿದೆಯೋ ಹಾಗೆಯೇ ಪಾತ್ರರಚನಾದೃಷ್ಟಿಯಿಂದಲೂ ಅದು ಅವುಗಳಿಂದ ಭಿನ್ನವಾಗಿದೆ. ಹರಿಹರನ ದೃಷ್ಟಿಯಲ್ಲಿ ಗಿರಿಜೆಯೇ ಪ್ರಧಾನ ಕಥಾನಾಯಿಕೆ. ಆದುದರಿಂದಲೆ ಕಾವ್ಯಾರಂಭದಲ್ಲಿ 'ತನ್ನ ವಿವಾಹವರ್ಣನಾಸಂಗತಿಯೆಂದು ಮತ್ಕೃತಿಗೆ ಪಾರ್ವತಿ ಮಾಳ್ಕೆ ಮಹೋತ್ಸವಂಗಳಂ,' 'ಮರಲ್ದಪ್ಪುಗೆ ಕೆಯ್‌ಕೊಂಡೀ ಕಾವ್ಯಮನಗಜೆಯ ಗಂಡನಲಂಪಿಂದೆ,' 'ಕಾವ್ಯಂ ......ಗಿರಿಜಾಧಿನಾಥನುರುತರ ಕರ್ಣಶ್ರಾವ್ಯಂ' ಎಂದು ಮತ್ತೆಮತ್ತೆ ಒತ್ತಿ ಹೇಳುತ್ತಾನೆ. ಗಿರಿಜೆಯೆ ಕಥೆಯ ಪ್ರಮುಖ ಚಾಲಕಶಕ್ತಿ, ಕ್ರಿಯಾಶಕ್ತಿ. ಅವಳ ಜನನದಲ್ಲಿ, ಅವಳ ತಪಸ್ಸಿನಲ್ಲಿ, ಅವಳ ವಿವಾಹದಲ್ಲಿ ಅಖಿಳ ಲೋಕದ ಒಸಗೆ ಹುದುಗಿದೆ; ಬ್ರಹ್ಮ ವಿಷ್ಣು ಇಂದ್ರಾದಿದೇವತೆಗಳ ಸುಖ ಶಾಂತಿ ನೆಲಸಿದೆ; ಈಶ್ವರನ ತಪಸ್ಸು ಕೊನೆಮುಟ್ಟುತ್ತದೆ. ಅವಳ ಜನನದಿಂದ ಇಂದು ಕಳೆಯೇರುತ್ತಾನೆ, ಇಂದುಧರನ ವಾಮಾಂಗ ಪುಲಕಿತವಾಗುತ್ತದೆ, ಜಗತ್ತಿನ ಸಚರಾಚರವಸ್ತುಗಳಲ್ಲಿ ಹರ್ಷೋದ್ಗಮವಾಗು

---

ಮುಂದಿನ ಕಾರ್ಯಸಾಧನೆಗಾಗಿ ನಿಯಮಿಸುವನು. ಬಹುಶಃ ಹರಿಹರ ಈ ಕತೆಯ ಅವಲಂಬನದಿಂದ ಬೃಹಸ್ಪತಿಯ ಪ್ರಸಂಗವನ್ನು ಸೃಷ್ಟಿಸಿಕೊಂಡಿರಬೇಕೆಂದು ಊಹಿಸಬಹುದಾಗಿದೆ. ಜೊತೆಗೆ ಹದಿನೆಂಟು ವರ್ಣನೆಗಳಲ್ಲಿ ದೌತ್ಯವಿಷಯವೂ ಒಂದೆಂಬ ದೃಷ್ಟಿಯಿಂದ ಈ ಪ್ರಕರಣವನ್ನು ಅವನು ಸ್ವಲ್ಪ ಲಂಬಿಸಿರಬಹುದು.

ತ್ತದೆ. ಇಂದ್ರಾಣಿ ಅನಸೂಯಾದಿ ದೇವಸ್ತ್ರೀ ಋಷಿಪತ್ನಿಯರು ಅವಳನ್ನು ತೊಟ್ಟಿಲಲ್ಲಿಟ್ಟು ತೂಗಿ ಜೋಗುಳ ಹಾಡುತ್ತಾರೆ.

ಹರಿಹರ ಪಾರ್ವತಿಯ ವ್ಯಕ್ತಿತ್ವವನ್ನು ಚಿತ್ರಿಸುವ ರೀತಿ ಅನ್ಯಾದೃಶವಾದುದು. ಅವನ ಇಡೀ ಜೀವನದ ಶ್ರದ್ಧಾಭಕ್ತಿ ಸಾಧನಾಸಿದ್ಧಿಗಳೆಲ್ಲ ಆ ಒಂದು ವ್ಯಕ್ತಿಗಾಗಿ ಮೀಸಲು. ಕತೆಯ ಪ್ರತಿಯೊಂದು ಮಜಲಿನಲ್ಲಿಯೂ ಅವನು ಪಾರ್ವತಿಯನ್ನೂ ಅವಳು ಜಗನ್ಮಾತೆಯೆಂಬುದನ್ನೂ ಮರೆಯುವುದಿಲ್ಲ. ಅವನ ದೃಷ್ಟಿಯಲ್ಲಿ ಅವಳು ಮಾನವಿಯೂ ಅಲ್ಲ, ಪವಾಡವ್ಯಕ್ತಿಯೂ ಅಲ್ಲ, ಆದಿಶಕ್ತಿಯೆ ಮೈತಳೆದು ಬಂದವಳು. ಆ ಆದಿಶಕ್ತಿಯನ್ನು ಗರ್ಭದಲ್ಲಿ ಧರಿಸುವ ಸಾಮರ್ಥ್ಯ ಮತ್ತು ಪುಣ್ಯ ಮೇನೆಯಂಥ ತಪಸ್ವಿನಿಗಲ್ಲದೆ[1] ಮತ್ತಾರಿಗೆ ಸಾಧ್ಯ? ಹುಟ್ಟುವಾಗಲೆ ಅವಳಿಗೆ ಶಿವನ ಚಿಂತೆ; 'ಶಶಿರವಿಶಿಖಿಲೋಚನ' ಶಿವಲಿಂಗವನ್ನು ನೋಡುವ ತನಕ ಅವಳು ಕಣ್ತೆರೆಯುವುದಿಲ್ಲ. 'ಶಿವಜ್ಞಾನದ ದೇಹದಂತೆ, ನಿರುಪಾಧಿಕ ಜ್ಯೋತಿಯಂತೆ, ಪರಮಾತ್ಮನ ಪರಿಣಾಮದಂತೆ' ಶೋಭಿಸುತ್ತಿದ್ದ ಆ ಗಿರಿಜಾತೆಯ ಬಾಲಲೀಲೆಗಳು ಶಿವಲೀಲೆಯಾಗುತ್ತವೆ.[2] ಹರಪೂಜೆಯೇ ಅವಳ ಆಟಪಾಟ, ಹರನಿಲಯವೇ ಅವಳ ಕೇಳೀನಿಲಯ. ಚೆಲುವಿನ ತಾಣಗಳಲ್ಲೆಲ್ಲ ಸೌಂದರ್ಯನಿಧಿ ಈಶ್ವರನನ್ನು ಆರಾಧಿಸಿ ಮೈಮರೆಯುವಳು.

'ದಾಕ್ಷಾಯಿಣಿ ಕರುಣಿಸಿ' ಮಗಳಾಗಿ ಬಂದಳೆಂಬುದನ್ನು ಮರೆತು ತಾಯಿತಂದೆಯರು ಪಾರ್ವತಿಯ ವಿಲಕ್ಷಣವಾದ ಆಟಪಾಟಗಳನ್ನು ನೋಡಿ ಚಕಿತರಾಗುವರು. ಅವಳ ಯೌವನದೊದವನ್ನು ನೋಡಿದ ಅವರಿಗೆ ಗಂಡು ಹುಡುಕುವ ತವಕ, ಕಾರುಣ್ಯನಿಧಿಯೂ ಜಗನ್ಮಾತೆಯೂ ಆದ ಪಾರ್ವತಿಗೆ ಅವರಲ್ಲಿ ಅರೆಕೊರೆಯಿಲ್ಲದ ಮರುಕ. ಈಶ್ವರನ ಕಾರುಣ್ಯ

1 ಕುಮಾರಸಂಭವ, ಶಿವಪುರಾಣಗಳಲ್ಲಿ ಮೇನೆಯ ತಪಸ್ಸಿನ ವರ್ಣನೆ ಇಷ್ಟು ವಿಸ್ತಾರವಾಗಿ ಧ್ವನಿಪೂರ್ಣವಾಗಿ ಬಂದಿಲ್ಲ.

2 ಪೂರ್ವೋಕ್ತ ಕಾವ್ಯಪುರಾಣಗಳಲ್ಲಿ ಪಾರ್ವತಿಯ ಬಾಲಲೀಲೆ ಕೇವಲ ಲೌಕಿಕವಾಗಿದೆ.

ದಂತೆ ಆಗಮಿಸಿದ ದಿವ್ಯಜ್ಞಾನಿ ನಾರದ ಪಾರ್ವತಿಯನ್ನು ಕಂಡುದೆ ತಡ 'ಹರಿಸದಿಂ ಭೀತಿಯಿಂ ಸಾಷ್ಟಾಂಗಪ್ರಣಾಮಮಂ ಬೆರಸು'[1] ಸ್ತೋತ್ರ ಮಾಡುತ್ತಾನೆ; ಹಿಮವಂತಮೇನೆಯರನ್ನು ಎಚ್ಚರಿಸಿ ಅವರಿಗೆ ಪಾರ್ವತಿಯ ಭವಿಷ್ಯವನ್ನು ತಿಳಿಸಿ ಹೊರಡುತ್ತಾನೆ.

ಅನಂತರ ಸಖಿಯರೊಡಗೂಡಿ ತಂದೆಯ ಕೈಹಿಡಿದುಕೊಂಡು ಬಂದ ಅನಂತಗುಣಾಭರಣೆ ಅಪರ್ಣೆಗೆ ಈಶ್ವರನ ತಪೋನಿವೇಶನದಲ್ಲಿ ಕಾವಲು ನಿಂತಿದ್ದ ನಂದೀಶ್ವರ ಅನನ್ಯಭಕ್ತಿಯಿಂದ ಶರಣುಮಾಡುವನು. 'ಶಿವನೀತಂ ನಿಜವಲ್ಲಭಂ ಎನ್ನಾಳ್ದನ್' ಎಂದು 'ಕಲ್ಪತರುವಿನ ಬೀಳಿಲು ಮಹಾನಿಧಾನಕ್ಕೆರಗುವಂತೆ ವಿಲಾಸದಿಂದ ಲಲಾಟದಿಂ ಮುಟ್ಟಿ' ಪರಮೇಶ್ವರನನ್ನು ನಮಸ್ಕರಿಸುತ್ತಾಳೆ. ತಂದೆಯನ್ನು ಕಳುಹಿಸಿಕೊಟ್ಟು, ಮನ್ಮಥ ಮನೋರಥದುರ್ಲಭವಲ್ಲಭನಾದ ಶಿವನ ಸಂಗವನ್ನು ಬಯಸಿ ಆರ್ತದಿಂದ ಪೂಜೆಮಾಡುವಳು. ಬಹುಕಾಲ ಸಂದರೂ ಅಭೀಷ್ಟ ಈಡೇರುವುದಿಲ್ಲ. ಶಿವನ ತಪಸ್ಸನ್ನು ಭಂಗಗೊಳಿಸಲು ಯತ್ನಿಸಿ ಹತಾಶನಾದ ಮನ್ಮಥನ ಆರ್ತನಾದವನ್ನು ಅವಳು ಕೇಳಿದುದೆ ತಡ "ಶ್ರೀನಂದನ ನೀನಂಜದಿರಾ ನಿರ್ದಪೆನಾನೆ ರಕ್ಷೆಯಾನೆ ಸಹಾಯಂ" ಎಂದು ಧೈರ್ಯವಿತ್ತು ಮುಂದಿನ ಕಾರ್ಯಕ್ಕೆ ಸಜ್ಜಾಗುವಂತೆ ಅವನನ್ನು ಪ್ರಚೋದಿಸುತ್ತಾಳೆ.

ಪಾರ್ವತಿ ಮನ್ಮಥನನ್ನು ಹುರಿದುಂಬಿಸಿದಳು; ತತ್ಪರಿಣಾಮವಾಗಿ ರತಿ ವಿಧವೆಯಾದಳು, ನಿಜ. ಆದರೆ ಅವಳು (ಪಾರ್ವತಿ) ಜಗನ್ಮಾತೆ ಯಲ್ಲವೆ? ರತಿಯನ್ನು ಕಾರುಣ್ಯದಿಂದ ಉಪಚರಿಸಿ ಅಭಯವಚನಗಳಿಂದ ಸಂತೈಸುವಳು. ಈಶ್ವರ ತನ್ನನ್ನು 'ಈಕ್ಷಿಸದೆ ನುಡಿಯಿಸದೆ ಸೋಂಕದೆ' ಹೋದುದಕ್ಕಾಗಿ ಅವಳು ಅಂಜುವುದಿಲ್ಲ, ಗೋಳ್ಗರೆಯುವುದಿಲ್ಲ. 'ಆನಿ ದರ್ಲ್ಲಿಗೆ ಉಗ್ರನನೀಶನಂ ವಿಪುಳನಿಶ್ಚಳನಂ ಚಲದಿಂದೆ ತಂದಪೆಂ'[2] ಎಂದು

1 ಬೇರೆ ಕಡೆ ನಾರದ ಪಾರ್ವತಿಗೆ ನಮಸ್ಕರಿಸುವುದಿಲ್ಲ.

2 ಕುಮಾರಸಂಭವದ ಪಾರ್ವತಿ ಮದನಹರನ ಉಗ್ರಸ್ವರೂಪಕ್ಕೆ ಅಂಜಿ ಮನೆಯ ಕಡೆಗೆ ಹೋಗುತ್ತಾಳೆ. ಶಿವಪುರಾಣದ ಪಾರ್ವತಿಯಾದರೊ ವಿರಹ ವೇದನೆಯಿಂದ ಕೊರಗುತ್ತಾಳೆ, ಮೂರ್ಛೆ ಹೋಗುತ್ತಾಳೆ. ರತಿಯ ಚಿಂತೆಯೇ ಅವರಿಗಿಲ್ಲ.

ಆ ಚಲದ ಲಲನೆ ಬಲ್ಪಿನ ಭಾವಕಿ ಸರ್ವತಂತ್ರಸ್ವತಂತ್ರೆ 'ಉಗತಪೋಭರ ನಿವೇಶನಾಭಿಮುಖಿಯಾಗಿ' ಹೊರಡುವಳು. ಪಾರ್ವತಿಯೊಡನೆ ಹರೀಶ್ವರನೂ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ತನ್ನ ತಪಸ್ಸಾಧನೆಯಿಂದ ಲಭಿಸಿದ ಶಕ್ತಿಸಮುಸ್ತವನ್ನೂ ಪಾರ್ವತಿಯ ತಪೋವರ್ಣನೆಗೆ ನಿವೇದಿಸುತ್ತಾನೆ. ಗಿರಿಜಾಕಲ್ಯಾಣಮೇರುವಿನ ಶಿಖರ ಈ ಭಾಗ. ಪಾರ್ವತಿಯ ತಪೋಜ್ವಾಲೆಗೆ ಇಡೀ ವಿಶ್ವವೆ ಬೆದರಿ ಕಂಪಿಸುವುದು; ರಜತಗಿರಿಯಲ್ಲಿದ್ದ ಈಶ್ವರನ ಚಿತ್ತವೂ ಚಲಿಸುವುದು. ಆ ಏಕನಿಷ್ಠಾನಿಧಿ ಮಹಾದೇವಿಯ ಮನಸ್ಸನ್ನು ಒರೆಹಚ್ಚಿ ಮೆಚ್ಚಬೇಕೆಂಬ ಕುತೂಹಲ ಅವನಿಗೆ. ವಟುವೇಷದಿಂದ ತಪೋಭೂಮಿಗೆ ಬರುತ್ತಾನೆ. ಜಯೆವಿಜಯೆಯರು ಕೊಟ್ಟ ತನಿಹಣ್ಣುಗಳನ್ನು ಒಲ್ಲದೆ ಗಿರಿಜೆಯನ್ನು ಮಾತಾಡಿಸುತ್ತಾನೆ; ದಾಕ್ಷಾಯಣಿಯ ಮುಂದೆಯೆ ಶಿವನಿಂದೆಯನ್ನು ಮಾಡುತ್ತಾನೆ. ಆ ಉಗ್ರೆ ಮರುಮಾತಾಡುವುದಿಲ್ಲ; ವಿಭೂತಿಯಿಂದ ಅವನನ್ನು ಹೊಡೆಯುತ್ತಾಳೆ. ಕೂಡಲೆ ಪುಸಿವೇಷದ ತೆರೆ ಸರಿದು ನಿಜವೇಷ ಗೋಚರಿಸುವುದು; ಪಾರ್ವತಿ ಲಜ್ಜಾನ್ವಿತೆಯಾಗಿ ತಲೆಬಾಗುವಳು.

ಹರಿಹರನ ಪಾರ್ವತಿಯನ್ನು ಎರಡು ದೃಷ್ಟಿಯಿಂದ ನೋಡಬಹುದು: ಒಂದು ಪಾರಮಾರ್ಥಿಕ, ಮತ್ತೊಂದು ಲೌಕಿಕ. "ಗಿರಿಜಾಕಲ್ಯಾಣವು ಜಗತ್ತಿನ ಕಲ್ಯಾಣವು. ಪಾರ್ವತಿ ಜಗಕ್ಕೆ ಜನನಿ, ದೇವಿ, ಆದರ್ಶ ಪತ್ನಿ, ಗೌರಿ, ನಮ್ಮ ನಾರೀಜನಕ್ಕೆ ಉಪಾಸ್ಯದೇವತೆ."[1] ಅಷ್ಟೇ ಅಲ್ಲ; ಹರಿಹರ ಶರಣಸತಿ ಲಿಂಗಪತಿ ಭಾವದಿಂದ ತಾನೇ ಪಾರ್ವತಿಯಾಗಿ ಭೀಷಣತಪವನ್ನು ಕೈಗೊಂಡು ಶಿವಸಾಯುಜ್ಯವನ್ನು ಸಾಧಿಸಿದನೆಂದಾದರೂ ಊಹಿಸಬಹುದು.

**ಈಶ್ವರ :** ಶಿವಪುರಾಣ ಕುಮಾರಸಂಭವಗಳಲ್ಲಿ ವರ್ಣಿತವಾಗಿರುವ ಮಹಾಯೋಗಿಯೆ ಹರಿಹರನ ಈಶ್ವರ. ವಿಶ್ವವಿಭುವೂ ಆದ್ಯಂತರಹಿತನೂ, ಭಿನ್ನಾಭಿನ್ನನೂ, ಜ್ಞಾನಮಯನೂ, ಸರ್ವಾಂತರ್ಯಾಮಿಯೂ ಆದ ಈಶ್ವರ ಯಾರ ಕಲ್ಪನೆಗೂ ನಿಲುಕುವ ವಸ್ತುವಲ್ಲ. ಅವನು ಅನಿರ್ವಚನೀಯನು,

1 ಹರಿಹರದೇವ—ಪುಟ ೧೨೭.

ಅಣೋರಣೀಯನು. ಕರ್ತಾರನೂ ಅವನೆ, ಭರ್ತಾರನೂ ಅವನೆ, ಹರ್ತಾರನೂ ಅವನೆ. ಅವನು ವಜ್ರದಂತೆ ಕಠೋರನು, ಕುಸುಮದಂತೆ ಕೋಮಲನು. ನಿಯತಿನಿಯಮವನ್ನು ಮೀರಿ ಸ್ವೇಚ್ಛಾಚಾರಿಗಳಾಗಿ ವರ್ತಿಸುವವರಿಗೆ ಅವನು ಭೀಕರಸ್ವರೂಪನು; ಸಾತ್ವಿಕಭಕ್ತಿಯಿಂದ ಪೂಜಿಸುವವರಿಗೆ ಕಾರುಣ್ಯಸಿಂಧು. ಕಾಮ ಎಲ್ಲೆಮೀರಿ ವರ್ತಿಸಿದುದರಿಂದಲೆ ದಗ್ಧನಾಗುತ್ತಾನೆ; ಸೌಂದರ್ಯಗರ್ವದಿಂದ ಮೆರೆದುದರಿಂದಲೆ ಗಿರಿಜೆ ನಿರಾಶಳಾಗುತ್ತಾಳೆ. ತಪೋಜ್ವಾಲೆಯಲ್ಲಿ ಕಾಮವಿಕಾರದ ಕಾಳಿಕೆ ದಗ್ಧವಾಗಿ ಶುದ್ಧ ಸಾತ್ತ್ವಿಕಪ್ರೇಮ ಕಳಕಳಿಸಿದಾಗ ಪಾರ್ವತಿ ಶಿವನ ಕೃಪೆಗೆ ಯೋಗ್ಯಳಾಗುತ್ತಾಳೆ.

ಉಳಿದ ಪೋಷಕಪಾತ್ರಗಳಲ್ಲಿ ಮುಖ್ಯರಾದವರು ಗಿರಿರಾಜ ಮೇನೆಯರು, ಮನ್ಮಥ ಮತ್ತು ರತಿ. ಗಿರಿರಾಜ ಮೇನೆಯರು ಆದರ್ಶ ದಂಪತಿಗಳು, ಉದಾತ್ತಶೀಲರು, ಸಾತ್ತ್ವಿಕಗುಣವುಳ್ಳವರು, ತಪಸ್ವಿಗಳು, ಮೇಲಾಗಿ ಆದರ್ಶರಾದ ತಂದೆತಾಯಿಯರು. ತಮ್ಮ ವಂಶದ ಕುಡಿಯನ್ನು ಬೆಳೆಸುವ ಗಂಡುಮಕ್ಕಳಿದ್ದರೂ ಮಗಳಲ್ಲಿಯೇ ಅವರಿಗೆ ವಿಶೇಷವಾದ ಅಕ್ಕರೆ. ಆ ಅಕ್ಕರೆಯ ಉರುಬಿನಲ್ಲಿ ತಮ್ಮ 'ಮಗಳು' ದಾಕ್ಷಾಯಣಿಯೆಂಬುದನ್ನು ಮರೆಯುತ್ತಾರೆ. ಮಗಳನ್ನು ಬೆಳೆಸುವ, ಬೆಳೆದ ಮಗಳನ್ನು ನೋಡಿ ಕಾತರಿಸುವ, ಶಿವನ ಸನ್ನಿಧಿಗೆ ಅವಳನ್ನು ಕಳುಹಿಸುವ, ಅಳಿಯನೊಂದಿಗೆ ಮಗಳನ್ನು ಬೀಳ್ಕೊಡುವ ಸನ್ನಿವೇಶಗಳಲ್ಲಿ ವ್ಯಕ್ತವಾಗುವ ಅವರ ನಡತೆ ಅನುಸರಣೀಯವಾದುದು. ಮನ್ಮಥ ಚಪಲಚಿತ್ತನಾದರೂ, ಗರ್ವಿಷ್ಠನಾದರೂ ಜಗತ್ತಿನ ಕ್ಷೇಮಕ್ಕಾಗಿ ತನ್ನ ಪ್ರಾಣವನ್ನೇ ಒತ್ತೆಯಿಡಲು ಸಿದ್ಧನಾಗಿರುವ ಶೂರಯೋಧ. ತನ್ನ ಶೌರ್ಯ ಶಿವನ ಮುಂದೆ ನಿಲ್ಲದೆಂದು ತಿಳಿದೂ ತಿಳಿದೂ ಬಾಣಪ್ರಯೋಗ ಮಾಡಿ, ಕಡೆಗೆ ಈಶ್ವರನ ಕೋಪಕ್ಕೆ ತುತ್ತಾಗುವ ಆ ಎಳೆಯನನ್ನು ನೋಡಿ ಸಹೃದಯರಲ್ಲಿ ಅನುಕಂಪೆ ಮೂಡದಿರದು. ಪಾರ್ವತಿಗೆ ತದ್ವಿರುದ್ಧ ವ್ಯಕ್ತಿ ರತಿ. ಅವಳು ಸೌಂದರ್ಯನಿಧಿಯಾದರೂ ಅಬಲೆ. ಸುಖಲೋಲುಪಳೆ ಹೊರತು ಕಷ್ಟಸಹಿಷ್ಣೆಯಲ್ಲ. ಸಂಕಟವೊದಗಿದಾಗ ಮರಣವೇ ಶರಣೆನ್ನುವ ಸಾಮಾನ್ಯಸ್ತ್ರೀಯಳು.

**ಶೈಲಿ :** ಹರಿಹರನ ಜೀವನಕಥೆಯಿಂದ ಆ ಮಹಿಮಾನ್ವಿತ ವ್ಯಕ್ತಿತ್ವದ ಎತ್ತರಬಿತ್ತರಬೀಸುಗಳು ಬಹುಮಟ್ಟಿಗೆ ವೇದ್ಯವಾಗುತ್ತವೆ. ಅವೆಲ್ಲ ಅವನ ಕಾವ್ಯದ ತಿಳಿಗೊಳದಲ್ಲಿ ಸ್ವಚ್ಛವಾಗಿ ಪ್ರತಿಬಿಂಬಿತವಾಗಿವೆ. 'ಕವಿಯೇ ಶೈಲಿ' ಎನ್ನುವ ತತ್ತ್ವ ಇವನ ವಿಷಯದಲ್ಲಿ ಸಂಪೂರ್ಣವಾಗಿ ಅನ್ವಯವಾಗುತ್ತದೆ. 'ಕುಲ ಬಲ ಚಲ ಚಾಳಿ ಸ್ಥಿತಿ ಗತಿ ವ್ಯಾಸಂಗ ವ್ಯವಹಾರ ಮೊದಲಾದ ಪ್ರೇರಣೆಗಳಿಂದ ಪರಿಪಕ್ವವಾದ ಕವಿಯ ಸಮಸ್ತ ಆಧ್ಯಾತ್ಮಿಕ ಜೀವನವನ್ನು ಅವನ ಕಾವ್ಯಗಳು ಪ್ರತ್ಯಕ್ಷಗೊಳಿಸುತ್ತವೆ. 'ಕಪ್ಪಡದ ಶರೀರಿಗಳ್ ತೃಣದ ಹಾಹೆಗಳ್ ಮಣ್ಣಬೊಂಬೆಗಳ್' ಆದ ರಾಜಮಹಾರಾಜರ ಕೃಪಾಪ್ರಸಾದಕ್ಕಾಗಿ ಅವನು ಕೈಯೊಡ್ಡಲಿಲ್ಲ. ನಿತ್ಯಮುಕ್ತರಾದ ಭಕ್ತಾಗ್ರಣಿಗಳ ಜೀವನಸಂಗೀತವನ್ನು ಹಾಡಿ ತಣಿದು ತನ್ನನ್ನು ತಾನು ಉದ್ಧರಿಸಿಕೊಳ್ಳುವುದರಲ್ಲಿ, ವಿನೀತರಾಗಿ ತನ್ನ ಸನ್ನಿಧಿಗೆ ಬಂದ ಪತಿತರನ್ನು ಶಿವಭಕ್ತಿಸುಧೆಯ ಪಾನದಿಂದ ತಣಿಸಿ ಸಚೇತನಗೊಳಿಸುವುದರಲ್ಲಿ ಅವನು ಸದಾ ನಿರತನೇ ಹೊರತು ಅವರಿವರನ್ನು[1] ಹೊಗಳಿ ಹೊಗಳಿ ಅಧೋಗತಿಗಿಳಿಯಲಾರನು. ತನ್ನ ಶಿಷ್ಯಪರಂಪರೆಯಲ್ಲಿ ಯಾರಾದರೂ ಸರಿಯೆ-ಕಡೆಗೆ ಸೋದರಳಿಯನಾಗಲಿ-ಅಂಥವರನ್ನು ಹೊಗಳಿದರೆ ನಿರ್ದಾಕ್ಷಿಣ್ಯವಾಗಿ ಅವರ ಹಲ್ಲುಗಳನ್ನುದುರಿಸಿಯಾನು. ಬಾಳಿನಲ್ಲೊದಗಿದ ವಿಪತ್ಪರಂಪರೆಗಳನ್ನು ಎದೆಗಾರಿಕೆಯಿಂದ ಎದುರಿಸಿ, ಅರಸಾಗಲಿ ಹಣವಂತನಾಗಲಿ-ಮತ್ತೊಬ್ಬನ ಕೀಳಿನಲ್ಲಿರಲಾರದೆ ಪಾಪವಿನಾಶಿಯಾದ

---

1 ನರರಂ ಸೇವಿಸುತಯ್ಯ ಜೀಯೆನುತುಮಿರ್ಪೇನೆಂದೊಡಂ ದೈನ್ಯಮು-
ಬ್ಬರಿಸುತ್ತುಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ-
ರ್ಪಿರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂದಂದು ಶಂ-
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ.
ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆಯಕ್ಕಟಾ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ಮೇಣ್
ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಂಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ.

—ಪಂಪಾಶತಕದಿಂದ

ತುಂಗಭದ್ರಾನದಿಯ ತೀರದ ಪಂಪಾವಿರೂಪಾಕ್ಷನ ಸಾನ್ನಿಧ್ಯವನ್ನು ಸೇರಿ ಧ್ಯಾನಯೋಗ ನಿಧಿಧ್ಯಾಸನ ಸಮಾಧಿಗಳಿಂದ ತನ್ನ ಚಿತ್ತವನ್ನು ಒಂದು ನಿಲುಗಡೆಗೆ ತಂದುಕೊಂಡು ಈಶ್ವರಸಾಕ್ಷಾತ್ಕಾರವನ್ನು ಪಡೆದ ಭಕ್ತಾಗ್ರಣಿ ಹರಿಹರದೇವ. ಅವನ ಬಾಳಿನಲ್ಲಿ ಎದ್ದು ಕಾಣುವ ಆತ್ಮವಿಶ್ವಾಸ, ನಿಷ್ಕಾಪಟ್ಯ ಮತ್ತು ಸ್ವಾತಂತ್ರ್ಯಮನೋಧರ್ಮ, ಆ ಬಾಳಿನ ಸಾರ್ಥಕತೆಗಾಗಿ ಕೈಗೊಂಡ ಆಧ್ಯಾತ್ಮಿಕ ಸಾಧನೆ, ಆ ಸಾಧನೆಗೆ ನೆರವಾದ ಭಕ್ತಿಯ ಉತ್ಸಾಹ ಮತ್ತು ನಿರ್ಭಯತೆ—ಇವು ಅವನ ಕೃತಿಗಳಲ್ಲಿ ಎದ್ದು ಕಾಣುತ್ತವೆ.

ಹರಿಹರನು ಮೊಟ್ಟಮೊದಲು ಶಿವಭಕ್ತ. ಅವನಿಗೆ 'ಮಾತೆ ಶಿವಂ, ಪಿತಂ ಶಿವನ್, ಅನಂತಬಲಂ ಶಿವನ್, ಊರ್ಜಿತಂ ಶಿವಂ, ನೀತಿ ಶಿವಂ, ಸ್ಥಿರಾಯು ಶಿವಂ, ಒಳ್ಪು ಶಿವಂ, ಸುಕೃತಂ ಶಿವಂ, ಘನಖ್ಯಾತಿ ಶಿವಂ, ಧವಂ ಶಿವಂ, ಅಪಾರಸುಖಂ ಶಿವಂ, ಸಂಪ್ರೀತಿ ಶಿವಂ.' ಸ್ವಾಮಿಯನ್ನು ದರ್ಶಿಸಿದ ಭಕ್ತನು ಕಣ್ಣು ಹೊರಳಿಸಿದೆಡೆಯಲ್ಲೆಲ್ಲ ಹಂಪೆಯಾಳ್ದನೆ ಗೋಚರಿಸುತ್ತಾನೆ, ಕಿವಿ ತಿರುಗಿಸಿದೆಡೆಯಲ್ಲೆಲ್ಲ ಶಿವಸಂಕೀರ್ತನೆಯೆ ಕೇಳಿಬರುತ್ತದೆ. ಶಿವನಾಮಸ್ಮರಣೆ ಶಿವಗೋತ್ರಸಂಕೀರ್ತನೆಗಳನ್ನುಳಿದುದೆಲ್ಲ ಅವನ ಪಾಲಿಗೆ ಹೊಲ್ಲ, ಅವನ ಜಾಯಮಾನಕ್ಕೆ ಅಪಥ್ಯ. ಶಿವ[1]ನನ್ನು ಬಿಟ್ಟು ಬೇರೆಡೆಗೆ ಮನ ತಿರುಗಿದರೆ ಅವನ ಉತ್ಕಟಭಕ್ತಿಗೆ ಕುಂದಕ. ಆದುದರಿಂದಲೆ 'ಸೀಳ್ದೊಡಂ ಪೋಳ್ದೊಡಂ ಬಿಡೆನಭವಾ' ಎಂದು ಶಪಥಗೈಯುತ್ತಾನೆ. ಹರಿವಿರಿಂಚಿಗಳು ಶಿವನ ಆಜ್ಞಾಧಾರಕರೆ ಹೊರತು ಅವನಿಗೆ ಸರಿಸಮಾನರಲ್ಲವೆಂಬುದೇ ಅವನ ಭಾವನೆ. ದ್ವೈತವೋ ಅದ್ವೈತವೋ, ಹರಿಯೋ ಹರನೋ, ಸಾಕಾರವೋ ನಿರಾಕಾರವೋ—ಇವೇ ಮೊದಲಾದ ಕೇವಲ ಪಂಡಿತಪ್ರಿಯವಾದ ಸಂದೇಹಜನ್ಯವೂ ವಿನಾಶಕಾರಿಯೂ ಆದ ಶುಷ್ಕ

---

1 ಇವನಂ ನೋಡಿದ ಕಣ್ಗೆ ಮತ್ತೆ ಕೆಲವುಂ ರೂಪೇ ವಿರೂಪಾಕ್ಷನಂ-
ಬವನಂ ಮುಟ್ಟಿದ ಕೈಗೆ ಮತ್ತೆ ಕೆಲವುಂ ಮೆಯ್ಯೇ ಪೆಸರ್ಗೇಳ್ದ ಮ-
ಚ್ಛ್ರವಣಕ್ಕಕ್ಕಟ ನೋಡೆ ಮತ್ತೆ ಕೆಲವುಂ ನಾಮಂಗಳೇ ಸ್ತೋತ್ರಮಂ
ಸವಿವಾ ನಾಲಗೆಗೊರ್ಮೆ ಮತ್ತೆ ಕೆಲವುಂ ಮಾಣ್ ಮಾಣು ಶಬ್ದಂಗಳೇ
—ಪಂಪಾಶತಕದಿಂದ

ತರ್ಕವ್ಯರ್ಥಾಲಾಪಗಳ ಗರ್ತಾವರ್ತಗಳಲ್ಲಿ ಸಿಕ್ಕಿ ಸಿಕ್ಕಿ ಬಾಯ್ ಬಾಯ್ ಬಿಡುವುದಕ್ಕಿಂತ ಏಕದೇವತಾಪಾರಮ್ಯವನ್ನು ಒಪ್ಪಿ, ನಂಬಿ, ಸಾಧಿಸಿ ಕೃತಾರ್ಥನಾಗುವುದು ಮೇಲೆಂಬುದೇ ಅವನ ಸ್ಪಷ್ಟಾಶಯ. ಚಿತ್ತೈಕಾಗ್ರತೆ ಉತ್ತಮ ಭಕ್ತನ ಸಲ್ಲಕ್ಷಣ. ಅಂತಹ ಚಿತ್ತೈಕಾಗ್ರತೆಗೆ ಏಕದೇವತಾಪಾರಮ್ಯದಲ್ಲಿ ವಿಶ್ವಾಸ ಅತ್ಯಗತ್ಯವಾದುದರಿಂದ ಅನ್ಯದೇವತೆಯನ್ನು ನಿರ್ಲಕ್ಷಿಸುವ ಭಕ್ತನ 'ವೀರತ್ವ' ಖಂಡನೀಯವಲ್ಲ. ಅಂದಿನ ಮತೀಯ ಹೋರಾಟದ ಪ್ರಕ್ಷುಬ್ಧವಾತಾವರಣದಲ್ಲಿ ಅನ್ಯಮತೀಯರ ಬಾಯ್‌ಬತ್ತಳಿಕೆಯಿಂದ ತೂರಿ ಹಾರಿ ಬರುತ್ತಿದ್ದ ವಾಗ್ಬಾಣಗಳನ್ನು ಖಂಡಿಸುವುದಕ್ಕಾಗಿ ಹರಿಹರ ಆಗಾಗ್ಗೆ ಒಂದೆರಡು ಚುಚ್ಚುನುಡಿ ಅಣಕನುಡಿಗಳ ಪ್ರತ್ಯಸ್ತ್ರಗಳನ್ನು ಎಸೆದಿದ್ದರೆ ಅದು ಅಕ್ಷಮ್ಯವಾದ ಅಪರಾಧವಾಗಲಾರದು. ಆ ಉಗ್ರಭಕ್ತನು ಆಡುವುದೆಲ್ಲ ಬಿಚ್ಚುನುಡಿ. ಮುಚ್ಚುನುಡಿಗೂ ಅವನಿಗೂ ಎಣ್ಣೆ ಸೀಗೆಕಾಯಿ ಇದ್ದಂತೆ.

ಉದರಪೋಷಣೆಗಾಗಿ ಪರರ ವಂಚನೆಗಾಗಿ ವೇಷತೊಟ್ಟ ಬೂಟಾಟಿಕೆಯ ಭಕ್ತನಲ್ಲ ಅವನ. ಭಕ್ತಿಯ ಸುಖವನ್ನು ಬಿಟ್ಟರೆ ಅವನಿಗೆ ಬೇರೆ ಸುಖವಿಲ್ಲ, ಬೇರೆ ಗತಿಯಿಲ್ಲ, ಬೇರೆ ಮತಿಯಿಲ್ಲ. ಅವನ ಭಕ್ತಿ ಎಷ್ಟು ಚೊಕ್ಕವಾದುದು, ಅಕಳಂಕವಾದುದು, ಉತ್ಸಾಹಪೂರ್ಣವಾದುದು ಎಂಬುದನ್ನು ಅವನ ಎಲ್ಲ ಕೃತಿಗಳಲ್ಲಿಯೂ ಕಾಣಬಹುದು. ಅವನ ಅನುದಿನದ ಕೃತ್ಯಗಳು ಅವನ ಕೃತಿರೂಪದಲ್ಲಿ ಮೈವೆತ್ತಿವೆ. ಕೃತಿಗಳನ್ನು ಹಾಡುವುದು, ಶಿವನನ್ನು ಓಲೈಸುವುದು—ಇವೆರಡೇ ಅವನ ದಿನಚರಿ.

ಅಂತು ಹರಿಹರ ಗಿರಿಜಾಕಲ್ಯಾಣವನ್ನು ರಚಿಸುವ ಹೊತ್ತಿಗೆ ಅವನ ಬಾಳು ಕಷ್ಟ ಸಂಕಟಗಳ ಮೂಸೆಯಲ್ಲಿ ಬೆಂದು ಕಳಕಳಿಸುತ್ತಿದೆ; ಹೃದಯ ಅನೇಕ ಅನುಭವಗಳ ಅಮೃತಸೇಚನೆಯಿಂದ ಹೊರವಾಗಿ ಹೊಮ್ಮಿ ತ್ಯಾಗದ ಎಳಬಿಸಿಲಿನಲ್ಲಿ ಮಾಗಿದೆ; ಸಂಸಾರದಲ್ಲಿ ವಿರಕ್ತಿ ಮೂಡಿ ಪಂಪಾನಾಥನ ಸಾನ್ನಿಧ್ಯವನ್ನು ಸೇರಿ ಅನೇಕ ರಗಳೆಗಳನ್ನು ಹಾಡಿ ಆತ್ಮಸಾಧನೆಯಲ್ಲಿ ಬಹುದೂರ ಮುಂದುವರಿದಿದೆ. ಶಿವಗಣಗಳನ್ನು ಸ್ತುತಿಸಿಯಾಯಿತು, ಶಿವನನ್ನು ಸ್ತುತಿಸಬೇಕಾಗಿದೆ. ಆ ಕಾರ್ಯಕ್ಕೆ ತಕ್ಕ ಯೋಗ್ಯತೆಯೂ

ಲಭಿಸಿದೆ. ರಗಳೆಯ ಕವಿಯೆಂಬ ಅಣಕಕ್ಕೆ ಗುರಿಯಾಗಿಯೋ ಏನೋ (ಅಥವಾ ಶಿವನ ಕಥೆಯನ್ನು ನಿರೂಪಿಸಲು 'ವಸ್ತುಕ' ರೀತಿಯೆ ಸರಿಯೆಂದು ತೋಚಿರಬಹುದು) ರಗಳೆಯ ಹೊಸ ಜಾಡನ್ನು ಬಿಟ್ಟು ಹಳೆಯ ಚಂಪೂಪದ್ಧತಿಯಲ್ಲಿ ಈ ಗ್ರಂಥವನ್ನು ರಚಿಸುತ್ತಾನೆ.

ಈ ವಿವರಣೆಯ ಹಿನ್ನೆಲೆಯಲ್ಲಿ ಗಿರಿಜಾಕಲ್ಯಾಣದ ಶೈಲಿಯನ್ನು ವಿವೇಚಿಸಬೇಕಾಗುತ್ತದೆ. ವಸ್ತುಸೃಷ್ಟಿ, ಕಥನಕೌಶಲ, ಸನ್ನಿವೇಶ ಸಂದರ್ಭಗಳ ಜೋಡಣೆ, ಪಾತ್ರಪರಿಪೋಷಣೆ, ಭಾವರಸನಿರೂಪಣೆ, ಇವುಗಳ ಅಖಂಡ ಪ್ರಕಾಶನವೇ ಶೈಲಿ; ಇವುಗಳ ಪರಸ್ಪರೌಚಿತ್ಯ ಪೋಷಣೆಯೇ ಉತ್ತಮ ಶೈಲಿ ಹರಿಹರನೇ ಪೀಠಿಕೆಯಲ್ಲಿ ತನ್ನ ಕಾವ್ಯದ ಗುಣಗಳನ್ನು ಕುರಿತು ಹೇಳುವ ಕೆಲವು ಮಾತುಗಳು[1] ವಿಶ್ವಾಸಾರ್ಹವಾದುವು. ವಿಶೇಷವಾದ ಅರ್ಥ, ಅರ್ಥವನ್ನು ಸುಸ್ಪಷ್ಟಪಡಿಸುವ ಪದ, ಪದಕ್ಕನುಗುಣವಾದ ಬಂಧ, ಬಂಧಾನುಸಾರಿಯಾದ ರೀತಿ, ರೀತಿಯನ್ನು ಹೊಂದುವ ಅಲಂಕಾರ, ಭಾವಕ್ಕನುಗುಣವಾದ ರಸ—ಇವುಗಳಿಂದ ಕೂಡಿರುವ ತನ್ನ ಕಾವ್ಯ 'ಅಖಿಳಸೇವ್ಯಂ ನವ್ಯಂ' ಎಂದು ಹೇಳಿಕೊಳ್ಳುತ್ತಾನೆ. ತನ್ನ 'ಕಾವ್ಯರಸದೊಳ್ ಮಯೂರನ ರೇಖೆ ಕಾಳಿದಾಸನ ರಸವೃತ್ತಿ ಬಾಣನ ಮೃದೂಕ್ತಿ ಉದ್ಭಟಯ್ಯನ ಗಭೀರತೆ ಭೋಜರಾಜನ ಜಸ' ನೆಲಸಿರಲೆಂದು ಆಶಿಸುತ್ತಾನೆ. 'ಹೋಮರನೂ ತೂಕಡಿಸುತ್ತಾನೆ' ಎಂಬ ಗಾದೆಗನುಸಾರವಾಗಿ ಈ ಶಿವಯೋಗಿ ಕವಿ ಅಲ್ಲಲ್ಲಿ ಎಡಹುವುದುಂಟು ಗಿರಿಜಾಕಲ್ಯಾಣದಲ್ಲಿ ಬರುವ ಬೃಹಸ್ಪತಿನಾರದರ ಪಾತ್ರ, ನಾರಾಯಣ ಮನ್ಮಥರ ಸಂಭಾಷಣೆ, ಇಂಥ ಸಂದರ್ಭಗಳಲ್ಲಿ ಅವನು ಮುಗ್ಗರಿಸಿರುವುದು ದಿಟ. ಅತಿ ವಿಸ್ತಾರ ಮತ್ತು ಪುನರುಕ್ತಿಯ ದೌರ್ಬಲ್ಯ-ಇದು ಅವನ ದೌರ್ಬಲ್ಯವೊ, ದೌರ್ಬಲ್ಯವೆಂದು ಹೇಳುವ ನಮ್ಮ ದೌರ್ಬ

---

1 ಅತುಳತರಾರ್ಥಮರ್ಥದನುವೃತ್ತಿ ಪದಂ ಪದದಿಚ್ಛೆ ಬಂಧಮೂ-
ರ್ಜಿತಪದಬಂಧಸಂಧಿ ನವರೀತಿ ಸುರೀತಿ ಗುಣಂ ಸದೃಕ್ಕಲಂ-
ಕೃತಿ ಸದಲಂಕೃತಿ ಪ್ರತಿಮಮೊಪ್ಪುವ ಭಾವಮನೂನಭಾವದು-
ನ್ನತರಸಮೆಂದು ಸತ್ಕವಿಗಳಾಲಿಸೆ ಪೇಳ್ದಪೆನೀ ಪ್ರಬಂಧಮಂ.

ಲ್ಯವೊ—ಅವನ ಜನ್ಮರಾಶಿಯ ಫಲವೆಂದು ಕಾಣುತ್ತದೆ. ಶಿವನ ಮತ್ತು ಶಿವಗಣದ ಸಂಕೀರ್ತನೆಯ ನೆಪವೊದಗಿದರೆ ಸಾಕು ಭಕ್ತಿಯ ಹುಚ್ಚು ಹೊಳೆಯಲ್ಲಿ ತೇಲಿ ತೇಲಿ ಮುಳುಗಿ ಏಳುತ್ತಾನೆ; ಬಾಹ್ಯಪ್ರಪಂಚವನ್ನೂ ತನ್ನನ್ನೂ ಸಂಪೂರ್ಣವಾಗಿ ಮರೆಯುತ್ತಾನೆ. ಇಂಥದೇ ಜಾಯಮಾನದ ಮತ್ತೊಬ್ಬ ಕನ್ನಡಕವಿಕುಲಗುರು ಕುಮಾರವ್ಯಾಸನೂ ಹೀಗೆಯೆ—ಕೃಷ್ಣ ಬಂದನೆಂದರೆ ಕುಣಿದದ್ದೂ ಕುಣಿದದ್ದೆ, ಹಾಡಿದ್ದೂ ಹಾಡಿದ್ದೆ; ಮನೆಯ ಸೂರನ್ನು ಮುರಿದದ್ದೂ ಮುರಿದದ್ದೆ; ಕೃಷ್ಣ ಕುಡಿದ ಗುಟುಕು ಹಾಲು ಬೀದಿಯಲ್ಲೆಲ್ಲ ಹರಿದದ್ದೂ ಹರಿದದ್ದೆ. ಅಂತಹ ವೇಳೆಯಲ್ಲಿ ಅವರಿಗೆ ಔಚಿತ್ಯಾನೌಚಿತ್ಯದ ಮಾತು ಕೇಳಿಸದು; ಅದು ಅಸಂಗತವೂ ಅಹುದು. ರೀತಿ ಗುಣ ಅಲಂಕಾರ, ರಸ, ಧ್ವನಿ, ಕಾವ್ಯದ ಎಲ್ಲ ಲಕ್ಷಣಗಳೂ ಭಕ್ತಿಗಾಗಿ ಸಮರ್ಪಿತ. ಮಾತು ಹೇರಳ, ಮಾತು ಕಟ್ಟಿದಾಗ ಕೇವಲ ಉದ್ಗಾರಗಳು—ಓಹೋ ಓಹೋ ಅ್ಹ ಅ್ಹ ಇತ್ಯಾದಿ ಶಬ್ದಮಾಧುರ್ಯದ ಸಂಗೀತ, ನಾದಲೀಲೆ. ವಾಚಕರಿಗಾಗಿ ಕಟ್ಟಿದ ಹಾಡುಗಳಲ್ಲ ಅವು; ಈಶ್ವರನನ್ನು ಕುರಿತು ಮೂಡಿದ ಹಾಡುಗಳು. ಭಕ್ತಿಯುಳ್ಳವರು ಅವರಂತೆಯೆ ಕೈಚಪ್ಪಾಳೆ ಬಡಿದು, ಕುಣಿದು ಪುಟಹಾರಿ ನೆಗೆದು ಹಾಡಿ ತಣಿಯಬಹುದು; ಇಲ್ಲದವರು ಸದ್ದಿಲ್ಲದೆ ಮುಂದೆ ತೆರಳಬಹುದು. ಇಂತಹ ಸಂದರ್ಭಗಳನ್ನು ಬಿಟ್ಟರೆ ಕವಿ ಮೇಲೆ ಹೇಳಿಕೊಂಡಿರುವ ಲಕ್ಷಣಗಳು ಅವನ ಕೃತಿಗಳಿಗೆಲ್ಲ ಒಪ್ಪುತ್ತವೆಂದು ಧಾರಾಳವಾಗಿ ಹೇಳಬಹುದು.

ಅಪ್ಪ ಹಾಕಿದ ಆಲದಮರವೆಂದು ನೇತುಹಾಕಿಕೊಳ್ಳದೆ, ಅವರಿವರ ದೋಷಾರೋಪಣೆ ದೂಷಣೆಗಳಿಗೆ ಪಕ್ಕಾಗಬಹುದೆಂದೂ ಹೆದರದೆ, ತಾನು ಕಂಡ ಕಾಣ್ಕೆಯೆ ಸತ್ಯವೆಂದು ನಂಬಿ, ಆತ್ಮಶಕ್ತಿಯಲ್ಲಿ ಅಪಾರ ವಿಶ್ವಾಸವಿಟ್ಟು, ಸವೆದು ಕೊರಕಲು ಬಿದ್ದಿದ್ದ ಹಳ್ಳದ ಜಾಡನ್ನು ಬಿಟ್ಟು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿ ನೂತನ ಸ್ವತಂತ್ರ ಮಾರ್ಗವನ್ನು ಸ್ಥಾಪಿಸಿದ ಕೀರ್ತಿ ಹರಿಹರನದು. ವಿರೂಪಾಕ್ಷನ ವರಮಹಿಮೆಯಿಂದ ಕೃತಾರ್ಥನಾದ ಭಕ್ತವರೇಣ್ಯನಿಂದ ಮಾತ್ರ ಅಂತಹ ಭೂಮಕಾರ್ಯ ಸಾಧ್ಯವೇ ಹೊರತು ಅಲ್ಪಕವಿ, ಕುಕವಿಗಳಿಂದ ಸಾಧ್ಯವಿಲ್ಲ.

ಶುಷ್ಕವೈಯಾಕರಣಿಕರು[1] ನಿರ್ಮಿಸಿದ ಚಿನ್ನದ ಸಂಕೋಲೆಯನ್ನು ಪುಡಿ ಪುಡಿಮಾಡಿದ 'ಶಕ್ತಿಕವಿ' ಅವನು. ಆದರೆ ಲಕ್ಷಣಶಾಸ್ತ್ರವನ್ನು ಓದಲಾರದ, ಪದಗಳನ್ನು ಕಂಠಪಾಠಮಾಡಲಾರದ ಅಶಕ್ತಕವಿಯಲ್ಲ.[2] ತನ್ನ ಹಿಂದಿನ ಸಂಸ್ಕೃತ ಕನ್ನಡ ಕವಿಪಿತಾಮಹರ ಕಾವ್ಯಗಳನ್ನು, ಲಕ್ಷಣಕಾರರ ಗ್ರಂಥಗಳನ್ನು ಓದಿ, ಮೆಲುಕುಹಾಕಿ, ಜೀರ್ಣಿಸಿಕೊಂಡು, ಸಂಪ್ರದಾಯ ಮಾರ್ಗದ ಆಧಾರದ ಮೇಲೆ ನೂತನ ಪಂಥವನ್ನು ನಿರ್ಮಿಸಲು ಹೊರಟಿದ್ದಾನೆ. ನೀರಸರ ಮಾತರಿಯದವರ ಕಾವ್ಯ ಎಂಥದೆಂಬುದು ಅವನಿಗೆ ಗೊತ್ತು.[3] ಕನ್ನಡ ನುಡಿಯ ಬೆಡಗು ಬಿನ್ನಾಣ ವೈಚಿತ್ರ್ಯ ವೈಲಕ್ಷಣ್ಯಗಳನ್ನು ಚೆನ್ನಾಗಿ ಅರಿತಿದ್ದ ಕೆಲವು ಕವಿಗಳಲ್ಲಿ ಅವನೂ ಒಬ್ಬನು. ಸಂಸ್ಕೃತದ ವಿಷಯದಲ್ಲಿ ಆಂಡಯ್ಯನ ಛಲವಿಲ್ಲ ಅವನಿಗೆ. ಸಂಸ್ಕೃತವನ್ನು ಚೆನ್ನಾಗಿ ಅಧ್ಯಯನಮಾಡಿ ಪಾಂಡಿತ್ಯವನ್ನು ಸಂಪಾದಿಸಿದ್ದ ಅವನು ಆ ಭಾಷೆಯ ಒನಪು ಒಯ್ಯಾರ ಮತ್ತು ಮೋಹಕ ನಾದಗಳನ್ನು ಅರಿತಿದ್ದಾನೆ. ಆದುದರಿಂದ 'ಮುತ್ತುಂ ಪವಳಂಗೋದಂತಿರೆ' ಸಂಸ್ಕೃತಪದಗಳನ್ನು ಬಳಸುತ್ತಾನೆ; ಅರ್ಥಭಾವರಸಾಭಿವ್ಯಕ್ತಿಗೆ ಅನುಕೂಲವಾಗುವಂತೆ ಪದ

---

1 ನೋಡುವೊಡೊಂದಕ್ಕರಮುದು
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ
ಕೂಡೆ ಕವಿತತಿ ವಿಚಾರಿಸ
ಬೇಡದಱಿಂ ಱಳಕುಳಕ್ಷಳಂಗಳನಿದಱೊಳ್

2 ಕ್ಷುದ್ರಂಗೆ ಸಕಲಸುಜನೋ
ಪದ್ರವರೂಪಂಗೆ ಪರರ ಕಾವ್ಯಾರ್ಥಮುಮಂ
ಛಿದ್ರಿಸುವಂಗತಿ ಶಬ್ದದ-
ರಿದ್ರಂಗಕ್ಕುಮೆ ನವೀನಕಾವ್ಯಾರಂಭಂ

3 ಓದಿದೊಡೆ ಕಲ್ಲಮಾಲೆಯ
ನಾದಂ ಕರ್ಬೊನ್ನ ಕಡಲೆ ವಾದಿಸೆ ರಸಮಂ
ಸೋದಿಸೆಯುರ್ಕಿನ ಪುಡಿಯೆನಿ-
ಪಾ ದುಷ್ಕವಿತೆಗಳಲೆಣಿಸಲೇಕೀ ಕೃತಿಯೊಳ್

ಗಳನ್ನು ಜೋಡಿಸುತ್ತಾನೆ. ಒಮ್ಮೊಮ್ಮೆ ಅಪರೂಪವಾಗಿ ಅಚ್ಚ ಸಂಸ್ಕೃತದ ವೃತ್ತಗಳನ್ನೇ ಹೆಣೆಯುತ್ತಾನೆ:

ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಷ್ಮವಕ್ತ್ರಂ ಘನಂ-
ಕ್ರೂರಂ ವಜ್ರಸಮಾನ ರೋಮನಿಚಯಂ ಸಂಪೂರ್ಣಕಾಯಂ ಸ್ಥಿರಂ
ಶೂರಂ ರೌದ್ರಗಭೀರ ಚಿತ್ತನತಿಮಾನಿ ಸ್ವಲ್ಪ ಪುಚ್ಛಾನ್ವಿತಂ
ಘೋರಾರಣ್ಯಚರಂ ವಿರಾಜಿಸಿದುದುದ್ಯದ್ಭೀಕರಂ ಸೂಕರಂ.

ಕಾಡುಹಂದಿಯ ವರ್ಣನೆಯ ಪದ್ಯವಿದು. ಔಷಧಿಗೂ ಕನ್ನಡಪದ ಸಿಗುವಂತಿಲ್ಲ. ಆದರೆ ಅದು ಕೇಳುಗರ ಮನಸ್ಸಿಗೆ, ಅವರು ಕಾಡುಹಂದಿಯನ್ನು ನೋಡಿರಲಿ ನೋಡದಿರಲಿ, ಅದರ ಚಿತ್ರವನ್ನು ತಂದುಕೊಡುವು ದಿಲ್ಲವೆ! ಶಾರ್ದೂಲವೃತ್ತದ ಆ ಗುರುಲಘುವಿನ್ಯಾಸ, ಮೇಲಿಂದ ಮೇಲೆ ಬರುವ 'ರ' ವರ್ಣದ ಕಠೋರತಾಡನ, ಇವು ಹಂದಿಯ ಗಭೀರತೆ ರೌದ್ರತೆಗಳನ್ನು ವ್ಯಕ್ತಪಡಿಸುವುದಿಲ್ಲವೆ? ಕನ್ನಡ ಸಂಸ್ಕೃತಪದಗಳ ಉಚಿತವಾದ ಬೆರಕೆಯಿಂದ ವೀರರಸದ ಬುಗ್ಗೆ ಚಿಮ್ಮುವಂತೆ ಹರಿಹರ ಪದ್ಯಗಳನ್ನು ರಚಿಸಬಲ್ಲನು.[1] ಆದರೆ ಯಾವ ರಸಾಭಿವ್ಯಕ್ತಿಗೆ ಯಾವ ಪದವಿರಬೇಕು, ಅವುಗಳ ಜೋಡಣೆ ಹೇಗಿರಬೇಕು, ಛಂದಸ್ಸು ಯಾವುದಿರಬೇಕು ಎಂಬುವನ್ನು ಉತ್ತಮಸಂಸ್ಕೃತಿಯ ಕವಿಗೆ ಯಾರೂ ಕಲಿಸಬೇಕಾಗಿಲ್ಲ. ಪ್ರತಿಭೆಯೇ ಪ್ರೇರಕಶಕ್ತಿ. ಆದರ ಮುಂದೆ ಲಕ್ಷಣಗಿಕ್ಷಣಶಾಸ್ತ್ರಗಳು ಬರಿಯ ಕಂತೆ.

ಕನ್ನಡವೆಂದರೆ ಹರಿಹರನಿಗೆ ಪ್ರಾಣ, ಅದು ಅವನುಸಿರು. ಅವನ ನುಡಿಯ ಬೆಡಗನ್ನು ರಗಳೆ ಮತ್ತು ಕಂದಗಳಲ್ಲಿ ಕಾಣಬೇಕು. ಅಪ್ರಯಾಸವಾಗಿ, ಅಪ್ರಯತ್ನವಾಗಿ ಹೊರಹೊಮ್ಮುವ ಯಮಕಾದಿ ಶಬ್ದಾಲಂಕಾರ

---

1 ಧರಣಿಯನೊಕ್ಕಲಿಕ್ಕಿ ದಿಗಧೀಶರ ಗಂಟಲನೊತ್ತಿ ಮೆಟ್ಟಿ ಭೀ-
ಕರ ಫಣಿಲೋಕಮಂ ಹಿಳಿದು ನಾಕಮನೋಡಿಸಿ ನಿಂದ ವೀರರಂ
ಭುದದೊಳೆ ತತ್ತಬಿಂದಬಿದು ತಳ್ಗಿಸುತಪ್ರತಿಮಪ್ರತಾಪಭಂ-
ಸುರ ಭುವನತ್ರಯಂ ನೆಗಳ್ದನಕ್ರಮಜಿತಾರಿ ತಾರಕಂ

ಗಳು, ಆ ಅಲಂಕಾರಗಳಿಂದ ಧ್ವನಿತವಾಗುವ ರಸ—ಇವು ಅವನ ನುಡಿಗಟ್ಟಿನ ವೈಶಿಷ್ಟ್ಯ.

ಕೆಲದೊಳ್ ಪುಳಿಂದಿಯಿರೆ ಪೆ-
ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ
ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮಱೆದು ತಣಿದು ಬೇಡಂ ಬೇಡಂ

ಪ್ರತಿಭೆಯ ವಿದ್ಯುಚ್ಛಕ್ತಿಯನ್ನು ಮಾಟಿದರೆ ಸಾಕು, ಭಾವನಾಪೂರ್ಣವಾದ ಪದಗಳು ದಂಡೆದಂಡೆಯಾಗಿ ಕಂದ[1]ಗಳನ್ನು ಹೆಣೆದುಕೊಂಡು ಹೊರಹೊಮ್ಮುತ್ತವೆ. ಕವಿ ತನ್ನ ಕಂದಗಳ ವಿಷಯದಲ್ಲಿ ಹೇಳಿಕೊಳ್ಳುವ ಮಾತು ನಿಜ.

ಸ್ವಭಾವೋಕ್ತಿಗಿಂತ ವಕ್ರೋಕ್ತಿಯೆ ಬಹು ಜನರಿಗೆ ಬಹು ಪ್ರಿಯ. ಆದರೆ ಅನೇಕ ವೇಳೆ ಅಲಂಕಾರರಹಿತವಾದ ಸ್ವಭಾವೋಕ್ತಿಗಳೇ ಹೆಚ್ಚು ಹೃದಯಂಗಮವಾಗಿ ಪ್ರಕಾಶಿಸುತ್ತವೆ. ಕುರೂಪಿಗಳಿಗೆ ಕಡ್ಡಿಪೈಲ್ವಾನರಿಗೆ, ಜಳ್ಳುಗರಿಗೆ ಹೊರಗಣ ವೇಷಭೂಷಣಗಳ ಆಡಂಬರ ಆವಶ್ಯಕ. ಆತ್ಮಶಕ್ತಿಯುಳ್ಳವರಿಗೆ ಅವರ ನಿರಾಭರಣತ್ವವೆ ಆಭರಣವಾಗುತ್ತದೆ. ಹರಿಹರನ ಒಲವು ಹೆಚ್ಚಾಗಿ ಬಿಚ್ಚುನುಡಿ ಸ್ವಭಾವೋಕ್ತಿಗಳ ಕಡೆಗಿದ್ದರೂ ಹಲವು ಕಡೆಗಳಲ್ಲಿ ವಕ್ರೋಕ್ತಿಗಳನ್ನು ಬಳಸುತ್ತಾನೆ. 'ಶಬರಿಯಿಲ್ಲದೊಂದಡಿಯನಿಡಂ': ಕಾಂತೆಯಿಲ್ಲದೆ ಬೇಡ ಒಂದಡಿಯನ್ನೂ ಮುಂದಿಡುವುದಿಲ್ಲವಂತೆ; ಹತ್ತಿರದಲ್ಲಿ ಉತ್ಸಾಹಕಾರಿಣಿಯೂ ಶಕ್ತಿದಾಯಿನಿಯೂ ಆದ ಸತಿಯಿಲ್ಲದಿದ್ದರೆ ಅವನಿಗೆ ಬೇಟೆ ಸಿಗುವುದಿಲ್ಲವಂತೆ. 'ಕೆಲದೊಳ್ ಪುಳಿಂದಿಯಿರೆ ಪೆರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ': ಇದಕ್ಕಿಂತಲೂ

---

1 ಕಂದಂಗಳಮೃತಲತಿಕಾ
ಕಂದಂಗಳನೂನ ವಾಕ್ಯಫಲವಿಲಸನ್ಮಾ-
ಕಂದಂಗಳ್ ತನಿರಸದು-
ಕ್ಕಂದಂಗಳ್ ಸೊಗಯಿಸಿರ್ಪುವೀ ಸತ್ಕೃತಿಯೊಳ್

ಉತ್ತಮವಾಗಿ ಅನಶ್ಲೀಲವಾಗಿ ಯಾವ ಕವಿಪುಂಗವ ತಾನೆ ಶೃಂಗಾರವನ್ನು ಚಿತ್ರಿಸಬಲ್ಲನು! ಹೀಗೆಯೆ ಸ್ವಭಾವೋಕ್ತಿಯ ಮೂಲಕವೂ ಶೃಂಗಾರವನ್ನು ನಿರೂಪಿಸಬಲ್ಲನೆಂಬುದಕ್ಕೆ ಅನೇಕ ಉದಾಹರಣೆ[1] ಗಳನ್ನು ಕೊಡಬಹುದು.

ಚರಾಚರ ವಸ್ತುಗಳಲ್ಲಿ ಕ್ಷಣೇ ಕ್ಷಣೇ ನಡೆಯುವ ವ್ಯಾಪಾರಗಳನ್ನು ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ನಾಟುವಂತೆ, ನೆನೆದೊಡೆ ಮರುಕೊಳಿಸುವಂತೆ ಚಿತ್ರಿಸುವುದು ಹಿರಿಯಕವಿಯಿಂದ ಮಾತ್ರ ಸಾಧ್ಯ. ಪ್ರತಿಯೊಂದು ವಸ್ತುವನ್ನು ಮಿತ್ರದೃಷ್ಟಿಯಿಂದ ಸೂಕ್ಷ್ಮವಾಗಿ ನೋಡಬಲ್ಲ ಕವಿಗೆ ಮಾತ್ರ ಆ ಗುಟ್ಟು ರಟ್ಟು. ಹರಿಹರ ಈ ಚಿತ್ರಣಕಾರ್ಯದಲ್ಲಂತು ತನ್ನ ಕೈಚಳಕವನ್ನು ಚೆನ್ನಾಗಿ ವ್ಯಕ್ತಪಡಿಸಿದ್ದಾನೆ:

ಬಿಗಿಯಪ್ಪಿ ಮೊಗಮನಿಟ್ಟಾ
ಲಿಗಳವು ನಸುಮುಚ್ಚಿ ಪಕ್ಷಯುಗಮೆಳಲೆ ರಸಂ-
ದೆಗೆವ ದನಿ ನಿಮಿರೆ ನಾಲಗೆ
ಚಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ

ಗಿಳಿ ಹಣ್ಣನ್ನು ಸವಿಯುವ ಚಿತ್ರವನ್ನು ಎಷ್ಟು ಸಹಜವಾಗಿ, ಎಷ್ಟು ಧ್ವನಿಪೂರ್ಣವಾಗಿ ಚಿತ್ರಿಸುತ್ತಾನೆ! ಪ್ರಾಚೀನ ಕನ್ನಡ ಕವಿಗಳಲ್ಲಿ ಹರಿಹರನಂತೆ ಹೂ[2]ಗಳನ್ನು ಆತ್ಮೀಯತೆಯಿಂದ ನೋಡುವವರು, ನೋಡಿ ಬಣ್ಣಿಸುವವರು ಯಾರೂ ಇಲ್ಲ. ಎಷ್ಟು ಬಗೆಯ ಹೂಗಳನ್ನು ಅವನು

---

1 ತಳಿರ್ಗಳ ಸೀರೆಯುಟ್ಟು ಗುರುಗಂಜಿಯ ಹಾರಮನಾಂತು ಮುಂದೆ ಶೀ-
ತಳ ಶಶಿಕಾಂತದಿಂ ಸಮೆದೊರಲ್ಗಳೊಳಂ ಬಿದಿರಕ್ಕಿಯಿಕ್ಕಿ ನಿ-
ಚ್ಚಳಮನ ಸುವ್ವಿ ಕಾಡೊಡೆಯ ಸುವ್ವಿ ಮನೋಹರ ಸುವ್ವಿ ಸುವ್ವಿಯಂ-
ಪಳವಡೆ ರಾಗದಿಂ ತಳಿಸಿದರ್ ವನದಲ್ಲಿ ಪುಳಿಂದ ಕಾಂತೆಯರ್

2 ಸಾಮಾನ್ಯರಿಗೆ ಕೇವಲ ಪುಷ್ಪಗಳ ಪಟ್ಟಿಯಂತೆ ಕಾಣುವ ಅವನ ಪುಷ್ಪದ ರಗಳೆ ಅತ್ಯುತ್ತಮವಾದೊಂದು ಭಾವಗೀತೆಯೆಂದೇ ಹೇಳಬಹುದು. ವಾಗ್ರೂಪವನ್ನು ತಳೆದ ನೈಜಭಾವ ಭಾವಗೀತೆಯಲ್ಲವೇನು?

ನೋಡಿದ್ದಾನೆ? ಮೊಗ್ಗು ಒತ್ತರಿಸಿದಾಗಿನಿಂದ ಅರಳುವ ತನಕ ಅದು ತಾಳುವ ಬಣ್ಣ ಹೊಮ್ಮುವ ಗಾತ್ರ ಎಲ್ಲವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿರ ಬೇಕು. ಪಾರ್ವತಿ ಹೇಮಕೂಟದಲ್ಲೆಲ್ಲ ಅಡ್ಡಾಡಿ ಹೂಗಳನ್ನು ತಿರಿದು ಶಿವನನ್ನು ಪೂಜಿಸುವ ಸನ್ನಿವೇಶದ ಸೊಬಗನ್ನು ಓದಿಯೇ ಅನುಭವಿಸ ಬೇಕು. ಚಳಿ ಮಳೆ ಬೇಸಗೆ ಕಾಲಗಳ ವರ್ಣನೆಯಲ್ಲಿ ಇಂಥವೇ ಹಲ ವಾರು ಚಿತ್ರಗಳನ್ನು ನಾವು ನೋಡಬಹುದು. ಒಮ್ಮೊಮ್ಮೆ ಕವಿಸಮಯದ ಮೂಲಕ ಚಿತ್ರ[1]ಗಳನ್ನು ಚಿತ್ರಿಸಲು ಕವಿ ಹವಣಿಸುತ್ತಾನೆ. ಪ್ರತಿಭಾವಂತ ನಾದ ಕವಿಯ ದಿವ್ಯಹಸ್ತದಲ್ಲಿ ಕವಿಸಮಯ ಕಾಮಧೇನುವಾಗುತ್ತದೆ, ಕಾಮನ ಬಿಲ್ಲಾಗುತ್ತದೆ; ಕ್ಷುದ್ರಕವಿಯ ಸೊತ್ತುಗೈಯಲ್ಲಿ ಬರಡಾಕಳಾಗು ತ್ತದೆ, ಹರಳುಕಡ್ಡಿಯಾಗುತ್ತದೆ.

ಹರಿಹರ ಗಿರಿಜಾಕಲ್ಯಾಣದ ವಿಷಯದಲ್ಲಿ 'ಕಾವ್ಯಂ ತಾನಿದು ನವರಸಸೇವ್ಯಂ' ಎಂದು ಹೇಳಿಕೊಳ್ಳುತ್ತಾನೆ. ಈ ಮಾತು ಸಂಪೂರ್ಣ ನಿಜವಲ್ಲ. ಶೃಂಗಾರ, ವೀರ, ಕ್ರೋಧಾದಿರಸಗಳು ಕ್ವಚಿತ್ತಾಗಿ ಮತ್ತು ಇತರ ಪ್ರಧಾನರಸಗಳಿಗೆ ಪೋಷಕವಾಗಿ ಅಲ್ಪಸ್ವಲ್ಪ ಪ್ರಮಾಣದಲ್ಲಿ ಬರು ತ್ತವೆ ಅಷ್ಟೆ. ಆ ಭಕ್ತಕವಿಯ ಒಲವರವೆಲ್ಲ ಶಾಂತಕರುಣೆಗಳ ಕಡೆಗೆಂಬುದು ಕಾವ್ಯದ ಉದ್ದಕ್ಕೂ ವ್ಯಕ್ತವಾಗುತ್ತದೆ.

ಕಾವ್ಯಮೀಮಾಂಸೆಯಲ್ಲಿ 'ಕಲೆಗಾಗಿ ಕಲೆ' ಎಂಬ ತತ್ತ್ವ ಬಹಳ ಹಿಂದಿನ ಕಾಲದಿಂದ ವಿಮರ್ಶಕರ ಜಿಜ್ಞಾಸೆಯ ವಿಷಯವಾಗಿದೆಯಷ್ಟೆ. ಆದರೆ ಕೆಲವು ಕನ್ನಡ ಕವಿಗಳ ವಿಷಯದಲ್ಲಂತು, ಅದರಲ್ಲಿಯೂ ಹರಿಹರನ ವಿಷಯದಲ್ಲಿ ಈ ತತ್ತ್ವ ಸಂಪೂರ್ಣವಾಗಿ ಒಪ್ಪುವುದಿಲ್ಲ. ಹರಿಹರನ ಜೀವನದಿಂದ ಈ ವಿಷಯ ಸ್ಪಷ್ಟವಾಗಿ ಧ್ವನಿತವಾಗುತ್ತದೆ. ಅವನು ಮೊದಲನೆಯದಾಗಿ ಅನುಭಾವಿ. ಈಶ್ವರ ಸಾಕ್ಷಾತ್ಕಾರಕ್ಕಾಗಿ ಅವನು ಕೈಗೊಂಡ ಸಾಧನೆಯ ಫಲವೇ ಅವನ ಕೃತಿಗಳು. ಆ ಕೃತಿಗಳಲ್ಲಿ ಆ

---

1 ಉಗುರಿಂದಂಟೆ ಬೆಟಿಂಟೆಯುಂಜನಮದಕ್ಕುಂ ಚೌಕಮಂ ಕೀಱುತುಂ
ತೆಗೆದಾಜ್ಞಾದಿಸೆ ಕೇಳ ನೀಳಪಟಮಕ್ಕುಂ ಬಟ್ಟತಂ ಮಾಡಿ ಸು-
ತ್ತುಗಳೆತ್ತಲ್ಕಸಿತಾತಪತ್ರಮೆನಲಕ್ಕುಂ ತಾನಿದೆಂಬಂತಿರೇ
ಜಗದೊಳ್ ಕಣ್ಗೆ ವಿಚಿತ್ರಮಾಗೆ ನೆರೆ ದಟ್ಟಯ್ಸುತ್ತನಿತ್ತಂ ತಮಂ.

ಸಾಧಕಶ್ರೇಷ್ಠನ ಆಧ್ಯಾತ್ಮಿಕಸಾಧನೆ ಮತ್ತು ಸಿದ್ಧಿಗಳನ್ನು ಸುಲಭವಾಗಿ ಗುರುತಿಸಬಹುದು. ಹರಿಹರನ ದೃಷ್ಟಿಯಲ್ಲಿ ಜೀವನದ ಗುರಿ ಎಂತೊ ಅಂತೆಯೆ ಕಾವ್ಯದ ಗುರಿಯೂ ಈಶ್ವರಸಾಕ್ಷಾತ್ಕಾರವೆಂಬುದು ಅವನ ಕೃತಿಗಳ ನಾಡಿನಾಡಿಗಳಲ್ಲಿ ಮಿಡಿಯುತ್ತಿದೆ.

**ಹರಿಹರನ ಪ್ರಭಾವಮುದ್ರೆ :** ಕನ್ನಡ ಸಾಹಿತ್ಯದಲ್ಲಿ ಹರಿಹರನ ಸ್ಥಾನ ಬಹು ಹಿರಿದಾದುದು. ಅವನ ವೈಶಿಷ್ಟ್ಯ ಒಂದಲ್ಲ ಹಲವಾರು ಬಗೆಗಳಲ್ಲಿ ಸುಸ್ಪಷ್ಟವಾಗಿ ಗೋಚರವಾಗುತ್ತದೆ. ಅವನು ಆರಿಸಿಕೊಂಡಿರುವ ಕಾವ್ಯವಸ್ತು, ಆ ವಸ್ತುವನ್ನು ಬಳಸಿಕೊಳ್ಳುವ ಸಂವಿಧಾನ ಕೌಶಲ, ಜೊತೆಗೆ ಅವನು ನಿರ್ಮಿಸುವ ಕಾವ್ಯದ ಹೊರಮೈ, ಇವುಗಳನ್ನು ನೋಡಿದರೆ ಅವನನ್ನು ಪುರಾತನನೆನ್ನುವುದಕ್ಕಿಂತ ಆಧುನಿಕನೆನ್ನುವ ಭ್ರಾಂತಿ ವಿಮರ್ಶಕರಲ್ಲಿ ಮೂಡದಿರದು. ಹಿಂದಿನ ಕವಿಗಳು ಪುರಾಣೇತಿಹಾಸ ಪ್ರಸಿದ್ಧವಾಗಿದ್ದ ವಸ್ತುವನ್ನು ತೆಗೆದುಕೊಂಡು (ತಮ್ಮ ಆಶ್ರಯದಾತರಾದ ರಾಜರ ಕತೆಯನ್ನು ಅವರ ಚೌಕಟ್ಟಿನಲ್ಲಿ ಅಳವಡಿಸಿಕೊಂಡು) ಕಾವ್ಯ ರಚನೆ ಮಾಡುತ್ತಿದ್ದರು. ಹರಿಹರ ಈ ಪದ್ಧತಿಯನ್ನು ಬಿಟ್ಟು ತನ್ನ ಸುತ್ತಮುತ್ತಣ ಜೀವಂತ ವ್ಯಕ್ತಿಗಳ ಕತೆಯನ್ನು ಬರೆದನು. ಜೇಡರು, ಅಗಸರು, ಕುಂಬಾರರು, ಅಸ್ಪೃಶ್ಯರು, ಒಕ್ಕಲಿಗರೇ ಮೊದಲಾದ ನಾನಾ ಕಾಯಕಗಳನ್ನುಳ್ಳ, ಆ ಕಾಯಕಗಳ ಮೂಲಕ ಶಿವೈಕ್ಯವನ್ನು ಸಾಧಿಸಿದ ಸಾಮಾನ್ಯ ವ್ಯಕ್ತಿಗಳ ಕತೆಗಳಿಗೆ ಕಾವ್ಯವಸ್ತುವಿನ ಯೋಗ್ಯತೆಯನ್ನು ಮೊಟ್ಟಮೊದಲು ಕರುಣಿಸಿದವನು ಹರಿಹರದೇವ. ಗದ್ಯಕಲೆ ಎಂತೊ ಕಥನ ಕಲೆಯೂ ಅಂತೆಯೆ ಹರಿಹರನ ಕಯ್ಯಲ್ಲಿ ಪರಿಪಕ್ವವಾಯಿತೆಂದು ಧೈರ್ಯವಾಗಿ ಹೇಳಬಹುದು. ಭಾವತೀಕ್ಷ್ಣತೆ, ಏಕಮುಖತೆ, ನಿರರ್ಗಳತೆ, ಅಂತ್ಯ ಪರಿಣಾಮ ಇವೇ ಮೊದಲಾದ ಆಧುನಿಕ ಕಥನಕಲೆಯ ಲಕ್ಷಣಗಳನ್ನು ಆತನ ಎಲ್ಲ ಕೃತಿಗಳಲ್ಲಿಯೂ (ಗಿರಿಜಾಕಲ್ಯಾಣವನ್ನು ಬಿಟ್ಟರೆ) ಕಾಣಬಹುದು.

ಹರಿಹರನಷ್ಟು ಪ್ರಭಾವಶಾಲಿಗಳಾದ ಕವಿಗಳು ಕನ್ನಡ ಸಾಹಿತ್ಯದಲ್ಲಿ ಅತಿ ವಿರಳ. ಅವನ ವ್ಯಕ್ತಿತ್ವದ ಪ್ರಭಾವ ಮುದ್ರೆಯನ್ನು ಅಂದಿನಿಂದ

ಇಂದಿನವರೆಗೂ ಕನ್ನಡ ಕವಿಗಳಲ್ಲಿ ಕಾಣಬಹುದು. ವೀರಶೈವ ಕವಿಗಳಂತು ಅವನನ್ನು ನೆನೆದು ಅವನ ಹರಕೆಯನ್ನು ಪಡೆಯದೆ, ಅವನ ಅಡಿಗಳಿಗೆ ಮುಡಿ ತಾಕಿಸದೆ ಭಕ್ತಿಕುಸುಮಾಂಜಲಿಯನ್ನು ಅರ್ಪಿಸದೆ ಕಾವ್ಯರಚನೆಗೆ ತೊಡಗುವುದಿಲ್ಲ. ರಾಘವಾಂಕನಿಂದ ಮೊದಲುಗೊಂಡು ಷಡಕ್ಷರಿಯ ತನಕ ಪ್ರತಿಯೊಬ್ಬನೂ ಅವನ ಮೇಲ್ಪಂಕ್ತಿಯನ್ನು ಅನುಸರಿಸಿ, ಅವನಿಂದ ಮತ್ತು ಅವನ ಕಾವ್ಯಗಳಿಂದ ಸ್ಫೂರ್ತಿಯನ್ನು ಪಡೆದು ಶ್ರೇಷ್ಠ ಕವಿಗಳಾಗಿ ಮೆರೆದು ಕೃತಕೃತ್ಯರಾಗಿದ್ದಾರೆ. ಪ್ರತಿಯೊಬ್ಬನೂ ಅವನನ್ನೂ, ಅವನ ಕಾವ್ಯಗಳನ್ನೂ ಕುರಿತು ಹಲವು ರೀತಿಯಲ್ಲಿ ಪ್ರಶಂಸಿಸಿ ಗೌರವಿಸಿದ್ದಾರೆ. ಇಲ್ಲಿ ಉದಾಹರಣೆಗಾಗಿ ಕೆಲವು ಕವಿಗಳ ಸೂಕ್ತಿಗಳನ್ನು ಮಾತ್ರ ಉದ್ಧರಿಸಿದೆ:

೧) ಕರ್ಣಾಟಕಾವ್ಯಲಕ್ಷಣದೀಕ್ಷಾಚಾರ್ಯ ಶಿವಯೋಗಚಕ್ರೇಶ್ವರ
ಮರ್ತ್ಯಲೋಕದ ಮಹಾದೇವನೆನಿಪ ಹಂಪೆಯ ಹರಿಹರ
— ರಾಘವಾಂಕ (ಸು. ೧೩೦೦) ಹರಿಶ್ಚಂದ್ರಕಾವ್ಯ.

೨) ಹರಿಹರ ಕವೀಶನಂ ಗುರುಭಕ್ತಿಕೋಶನಂ
— ಗುಬ್ಬಿಯ ಮಲ್ಲಣಾರ್ಯ (೧೫೩೦) ಭಾವಚಿಂತಾರತ್ನ.

೩) ಸರಸ ಮೃದುಮಧುರೋಪಮೆಗಳಂ
ಕುರಿಸೆ ವಸ್ತುಕ ವರ್ಣಕಂಗಳ
ನೆರಪಿ ಹರನಂ ಹರಗಣಂಗಳನ್ನೆದೆ ಕೀರ್ತಿಸಿದ
ಧರೆಗುಭಯ ಕವಿಶರಭಭೇರುಂ
ಡರಸುಕವಿ ಹರಿ ಬುಧವರನ ತ
ದ್ವರಸುತನ ರಾಘವನ ಕೃಪೆಯಿಂ ರಚಿಸುವೆಂ ಕೃತಿಯ
— ಭೀಮಕವಿ (೧೩೬೯) ಬಸವಪುರಾಣ.

೪) ಚದುರಿಂಪು ಸೊಂಪಲಂಕೃತಿ ಚಮತ್ಕೃತಿ ರೀತಿ
ಮೃದುಮಧುರಸರಸೋಪಮಾದ್ಯಖಿಲ ಲಕ್ಷಣಾ

ಭ್ಯುದಿತ ವಸ್ತುಕ ವರ್ಣಕಂಗಳಿಂ ಶಿವನಂ ಶಿವೈಕ್ಯರಂ ನುತಿಸುತಿರ್ದ
ಶಿವಕವೀಂದ್ರುಂ.....................

—ಪದ್ಮಣಾಂಕ (೧೩೮೫) ಪದ್ಮರಾಜಪುರಾಣ.

೫) ಕಂಪಮರ್ದ ಚಂದನದ ಪಂಕದೊಳ್ ಪರಿಮಳಂ
ಪೆಂಪುವಡೆದಂತೆ ರಸಭರಿತ ಪ್ರಬಂಧದೊಳ್
ಸೊಂಪುದೋಱುವ ಶಬ್ದಸಂದರ್ಭವೊಪ್ಪುತಿರೆ ಪೊಸತಪ್ಪ
ಯುಕ್ತಿಯಿಂದಂ
ಇಂಪಾಗಿ ಶಿವಗಣಪ್ರಕರಮಂ ಕೊಂಡಾಡಿ
ಪಂಪೆಯೊಳು ಪಂಪಾವಿರೂಪಾಕ್ಷನೊಳಗವಿದ
ಪಂಪೆಯ ಹರೀಶ್ವರ,.....................

—ನೀಲಕಂಠಾಚಾರ್ಯ (೧೪೮೫) ಆರಾಧ್ಯ ಚಾರಿತ್ರ.

೬) ಕನ್ನಡ ಜಾಣಂ ಹಂಪೆಯ ಹರೀಶ್ವರನ ಬಗೆ

—ವೀರಭದ್ರರಾಜ (೧೫೩೦) ವೀರಭದ್ರವಿಜಯ.

೭) ಹರವಿರೂಪಾಕ್ಷನನು ನಾಮುವ
ಬರೆದು ಬಲ್ಲಾಳಂಗೆ ಲೆಕ್ಕವ
ನೊರೆದು ಭಾನುವ ನಿಲಿಸಿ ಧರೆಯನು ಸುಡುವ ಪಾವಕನ
ಒಱಸಿ ಪೌರಾತನ ಚರಿತ್ರವ
ನಱುಹಿ ಜನ ಕಾಣ್ಬಂತೆ ಲಿಂಗವ
ಬೆರಸಿದಗೆ ಹಂಪೆಯ ಹರೀಶ್ವರದೇವಗೆಱಗುವೆನು

—ರಾಮಚಂದ್ರಗುರುಶಿಷ್ಯ (೧೫೫೦) ಆದಿತ್ಯಪುರಾಣ.

೮) ಚಿತ್ತಾಂತಂ ಹಂಪೆಯ ಹರಿದೇವಂ

—ಯಳಂದೂರ ಹರೀಶ್ವರ (೧೬೦೬) ಶ್ರೀ ಪ್ರಭುದೇವರ ಪುರಾಣ.

೯) ಮೃದುಮಧುರ ಪದವಿಲಾಸಾ-
ಸ್ಪದರಸವಿಸರಪ್ರಕಾಶ ಕರ್ಣಾಟಕವಿ

ತ್ವದೊಳೊರ್ವನೆ ಪೆಸರ್ವಡೆದ-
ಗ್ಗದ ಹರಿಹರನುದಿತ ಮಾರ್ಗದಿಂದಿದನೊರೆವೆಂ
—ಷಡಕ್ಷರದೇವ (೧೬೫೦) ವೃಷಭೇಂದ್ರವಿಜಯ.

**ಕೊನೆಯ ನುಡಿ :** ಈ ಸಂಗ್ರಹವನ್ನು ಶ್ರೀ ಶಿ. ಚ. ನಂದಿಮಠರವರು ಸಂಪಾದಿಸಿರುವ ಗಿರಿಜಾಕಲ್ಯಾಣ, ದಿ॥ ಶ್ರೀ ರಾಮಾನುಜಯ್ಯಂಗಾರ್ಯರ ಗಿರಿಜಾಕಲ್ಯಾಣ ಮತ್ತು ಇನ್ನು ಕೆಲವು ಹಸ್ತಪ್ರತಿಗಳ ನೆರವಿನಿಂದ ಸಿದ್ಧಗೊಳಿಸಿದೆ. ಅನೇಕ ಕಡೆ ಹಸ್ತಪ್ರತಿಗಳ ಪಾಠವನ್ನೆ ಅಂಗೀಕರಿಸಲಾಗಿದೆ. ವಾಚಕರ ಅನುಕೂಲಕ್ಕಾಗಿ ಒಂದೆರಡುಕಡೆ ಪಾಠವನ್ನು ತಿದ್ದುವ, ಕೆಲವು ಕಡೆ ಪದ ಪದ್ಯಗಳನ್ನು ಸ್ಥಾನಪಲ್ಲಟಮಾಡುವ ಸ್ವಾತಂತ್ರ್ಯವನ್ನು ವಹಿಸಿಕೊಂಡಿದೆ. ಉತ್ತಮ ಸಂಗ್ರಹ ಉತ್ತಮ ವಿಮರ್ಶೆಯೂ ಅಹುದು, ಉತ್ತಮ ಕಲೆಯೂ ಅಹುದು ಎಂಬ ತತ್ತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಕೃತಿಯನ್ನು ಸಿದ್ಧಪಡಿಸಿದೆ. ಇದು ರಸಜ್ಞರಿಗೆ ಮನೋಜ್ಞವಾದರೆ ಸಂಪಾದಕರ ಶ್ರಮ ಸಾರ್ಥಕವಾಗುತ್ತದೆ.

ಈ ಸಂಗ್ರಹವನ್ನು ಸಿದ್ಧಪಡಿಸುವಾಗ ಅನೇಕ ಅಮೂಲ್ಯ ಸಲಹೆ ಸೂಚನೆಗಳನ್ನಿತ್ತು, ಮುಗಿಸಿದ ಮೇಲೆ ಆದ್ಯಂತ ಓದಿಸಿ ಓರೆಕೋರೆಗಳನ್ನು ತಿದ್ದಿ ಒಪ್ಪಮಾಡಿಕೊಟ್ಟು, ಹರಿಹರದೇವನ ದರ್ಶನವನ್ನು ನಮಗೆ ಪರಿಚಯಿಸಿಕೊಟ್ಟ ನಮ್ಮ ವಿದ್ಯಾಗುರುಗಳೂ ಪೂಜ್ಯರೂ ಆದ ಪ್ರೊ॥ ಕೆ. ವಿ. ಪುಟ್ಟಪ್ಪನವರಿಗೆ ನಾವು ಚಿರಋಣಿಗಳು. ಈ ಸಂಗ್ರಹ ವಾಚಕರ ಮೆಚ್ಚುಗೆಗೆ ಪಾತ್ರವಾದರೆ, ಆ ಗೌರವ ಶ್ರೀ ಪುಟ್ಟಪ್ಪನವರಿಗೇ ಸಲ್ಲಬೇಕು.

ಈ ಕೃತಿಯ ಪ್ರಕಟನೆಗೆ ನೆರವಿತ್ತ ಶ್ರೀ ಗೌರೀಶಂಕರ ಬುಕ್ ಡಿಪೋ ಮಾಲೀಕರಿಗೂ, ಸಕಾಲದಲ್ಲಿ ಅಚ್ಚುಮಾಡಿಕೊಟ್ಟ ಚೇತನ ಮುದ್ರಾಲಯದವರಿಗೂ ವಂದನೆಗಳು.

ಕೊಂಡಾಡುಗೆ ಕಲ್ತೋದುಗೆ
ಮುಂಡಾಡುಗೆ ಮುದ್ದಿಸುಗೆ ಮರಲ್ದಪ್ಪುಗೆ ಕೆಯ್-
ಕೊಂಡೀ ಕಾವ್ಯಮನಗಜೆಯ
ಗಂಡನಲಂಪಿಂದೆ ಹಂಪೆಯ ವಿರೂಪಾಕ್ಷಂ

## ಗ್ರಂಥ ಋಣ


1. ಹರಿಹರದೇವ  ಕರ್ಣಾಟಕ ಸಂಘ, ರಾಜಾರಾಮ ಕಾಲೇಜ್, ಕೊಲ್ಹಾಪುರ
2. ಹಂಪೆಯ ಹರಿಹರ  ಶ್ರೀ ಡಿ. ಎಲ್. ನರಸಿಂಹಾಚಾರ್
3. ನಂಬಿಯಣ್ಣನ ರಗಳೆ  ಶ್ರೀ ತೀ. ನಂ. ಶ್ರೀಕಂಠಯ್ಯ (ಸಂಪಾದಕರು)
4. ಪದ್ಮರಾಜಪುರಾಣ  ಪದ್ಮಣಾಂಕ (ಪ್ರಥಮ ಮುದ್ರಣ)
5. ರಾಘವಾಂಕಚಾರಿತ್ರ  ಚಿಕ್ಕನಂಜೇಶ (ಹಸ್ತಪ್ರತಿ)
6. ಗುರುರಾಜಚಾರಿತ್ರ  ಪ್ರೊ. ಭೂಸನೂರ ಮಠ (ಸಂಪಾದಕರು)
7. ರಕ್ಷಾಶತಕ, ಪಂಪಾಶತಕ ಶ್ರೀ ಶಿ. ಶಿ. ಬಸವನಾಳ
8. ಸಿದ್ಧರಾಮಚಾರಿತ್ರ  ಶ್ರೀ ಟಿ. ಎಸ್. ವಿ. ಮತ್ತು ಶ್ರೀ ಡಿ.ಎಲ್.ಎನ್. (ಸಂಪಾದಕರು)
9. ಹರಿಶ್ಚಂದ್ರಕಾವ್ಯ (ಮೂಲ)  ಕಾವ್ಯಮಂಜರಿಮಾಲೆ
10. ಛಂದೋಽಂಬುಧಿ  ರೆ॥ ಕಿಟ್ಟೆಲ್ (ಸಂಪಾದಕರು)
11. ಕವಿಚರಿತೆ (ಮೂರು ಭಾಗಗಳು)  ಡಿ॥ ಶ್ರೀ ರಾ. ನರಸಿಂಹಾಚಾರ್ಯ
12. ಕೆಲವು ಕನ್ನಡ ಕವಿಗಳ ಕಾಲವಿಚಾರ  ಡಾ॥ ಅ. ವೆಂಕಟಸುಬ್ಬಯ್ಯ
13. ಹಾಸನ ಜಿಲ್ಲೆಯ ಶಾಸನಗಳು (ಪುರವಣಿ ಸಹಿತ)
14. ಶಿವದೇವವಿಜಯ  ಶ್ರೀ ಎಂ. ಜಿ. ನಂಜುಂಡಾರಾಧ್ಯ (ಸಂಪಾದಕರು)
15. ಪ್ರಬುದ್ಧಕರ್ಣಾಟಕ, ಪರಿಷತ್ಪತ್ರಿಕೆ, ಶರಣಸಾಹಿತ್ಯ ಸಂಚಿಕೆಗಳು
16. ಕುಮಾರಸಂಭವ (ಮೂಲ ಮತ್ತು ಭಾಷಾಂತರ)
17. ಶಿವ, ಸ್ಕಾಂದ, ಲಿಂಗ, ಪದ್ಮ ಇತ್ಯಾದಿ ಪುರಾಣಗಳು
18. History of classical Sanskrit Literature  Sri M. Krishnamachariar
19. Vedic Age—Dr. R. C. Majumdar (Editor)
20. Indo-Aryan Mythology—Sri Narayan Aiyangar

ಇತ್ಯಾದಿ, ಇತ್ಯಾದಿ, ಇತ್ಯಾದಿ.

# ಒಳಪಿಡಿ


| | ವಿಷಯ | ಪುಟ |
|---|---|---|
| | ಪೀಠಿಕೆ .... | iii |
| | ಗ್ರಂಥಋಣ .... | LiV |
| | ಒಪ್ಪೋಲೆ .... | LVi |
| ಗಿರಿಜಾಕಲ್ಯಾಣ ಮಹಾಪ್ರಬಂಧಂ (ಸಂಗ್ರಹ)— | | |
| | ನಾಂದಿ .... | ೧ |
| ೧. | ಹೈಮವತೀ ಶೈಶವಲೀಲೆ .... | ೩ |
| ೨. | ಗಿರಿಜಾವಧೂ ನಿತ್ಯಶಿವಾರ್ಚನೆ .... | ೧೫ |
| ೩. | ಅನಿರ್ದರ್ಲ್ಲಿಗೆ ಸಮಂತು ತನ್ನನೆ ತರ್ಪೆಂ .... | ೩೧ |
| ೪. | ತಪವಗಣ್ಯಪಾವನಪುಣ್ಯಂ! .... | ೪೭ |
| ೫. | ಮನೋಜಹರ ದಂಪತಿಗಳ್ .... | [illegible] |
| | ಮಂಗಳಂ | ೭೭ |
| | ಪರಿಶಿಷ್ಟ: | |
| ೧. | ಟಿಪ್ಪಣಿಗಳು .... | ೭೯ |
| ೨. | (ಅ) ಶಿವಪುರಾಣದ ಪಾರ್ವತೀಖಂಡದ ಕಥಾಸಾರ .... | ೯೧ |
| | (ಆ) ಸ್ಕಾಂದಪುರಾಣದ ಕೌಮಾರಿಕಾಖಂಡದ ಕಥಾಸಾರ | ೧೦೨ |
| ೩. | ಬಿಡಿಮುತ್ತುಗಳು .... | ೧೦೫ |

## ಒಪ್ಪೋಲೆ

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೧೨ | ೧೮ | ನವರಾಜಿ | ವನರಾಜಿ |
| ೨೨ | ೧೨ | ಭಿನ್ನಾಭಿನ್ನಜ್ಞಾನ | ಭಿನ್ನಾಭಿನ್ನಂ ಜ್ಞಾನ |
| ೬೬ | ೧ | ಹಿಮಾಚಲಮಂ | ಹೇಮಕೂಟಾಚಲಮಂ |

೨ ನೆಯ ಸಂಧಿಯ ೩೬ ನೆಯ ಪದ್ಯವು ಅದರ ಮೇಲ್ಭಾಗದಲ್ಲಿ ಬರುವ ಗದ್ಯಕ್ಕಿಂತ ಮೊದಲೇ ಬರಬೇಕು.

ಪೀಠಿಕೆಯ ಒಂದೆರಡು ಪದ್ಯಗಳಲ್ಲಿ ಶಕಟರೇಫ ಬಿಟ್ಟುಹೋಗಿದೆ.

# ಗಿರಿಜಾಕಲ್ಯಾಣ ಮಹಾಪ್ರಬಂಧಂ

## ನಾಂದಿ

ಶ್ರೀಮಚ್ಛೈಲೇಂದ್ರ ಪುತ್ರೀ ಗುರುತರಹೃದಯಕ್ಷೀರವಾರಾಶಿಚಂದ್ರಂ,
ವ್ಯೋಮಾರ್ಕೇಂದುಕ್ಷಮಾತ್ಮಾನಲಜಲಪವಮಾನಾಷ್ಟಮೂರ್ತಿಪ್ರಸಿದ್ಧಂ,
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕ ಮಾಣಿಕ್ಯಮೌಳಿ
ಸ್ತೋಮಾಂಘ್ರಿಜ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂ ೧

ಮಂಗಳಮೂರ್ತಿ ಮಾನಿನಿ ಮಹೋಜ್ವಳೆ ಮಾನ್ಯೆ ಮಹಾಮಹೇಶನ-
ರ್ಧಾಂಗಿ ಮಹೋವಿರಾಜಿತೆ ಮಹಾಶಿವಶಕ್ತಿ ಮಹಾಪತಿವ್ರತೋ-
ತ್ತುಂಗೆ ಮಹಾತ್ರಿಲೋಚನೆ ಮಹಾನಿಧಿ ತನ್ನ ವಿವಾಹವರ್ಣನಾ
ಸಂಗತಿಯೆಂದು ಮತ್ಕೃತಿಗೆ ಪಾರ್ವತಿ ಮಾಳ್ಕೆ ಮಹೋತ್ಸವಂಗಳಂ ೨

ಎನ್ನೀ ಕಾವ್ಯಕ್ಕೆ ನಿರ್ವಿಘ್ನದಿನತುಳ ನವೀನಾರ್ಥವಾಕ್ಯಪ್ರಸನ್ನೋ
ತ್ಪನ್ನಾಲಂಕಾರಮಂ ಮಾಡುಗೆ ವಿಪುಳಕಪೋಳಸ್ಥಳಾಂತಸ್ಥಳೀ ಸಂ
ಭಿನ್ನೋದ್ಯದ್ದಾನ ಧಾರಾಪ್ರಬಳ ಪರಿಮಳಾಸಕ್ತ ಭೃಂಗಾವಳೀ ಸಂ-
ಪನ್ನಪ್ರೋದ್ಭೂತ ಝುಂಕಾರಿತರವ ಮುದಿತಾನಂದ ವೇಶಂ ಗಣೇಶಂ ೩

ಶಿವನ ಮನೋಹರಂ ಶಿವನ ಪುಣ್ಯಫಲಂ ಶಿವನಾಪ್ತಸಂಕುಳಂ
ಶಿವನ ವಿಲೋಚನಂ ಶಿವನ ಗೋತ್ರಕುಲಂ ಶಿವನೂರ್ಜಿತೋಜ್ವಲಂ
ಶಿವನ ಸುಖಂ ಸದಾಶಿವನ ಸರ್ವಮುಖಂ ಶಿವಭಕ್ತರೆನ್ನ ಕಾ-
ವ್ಯವನತಿ ಸಮ್ಮುದಂಬೆರಸಿ ಪೊರ್ದುಗೆ ತಿರ್ದುಗೆ ತಾಳ್ದಿದಳ್ಕಱಿಂ ೪

ಗಿರಿಜಾ ಕಲ್ಯಾಣಮಿಂತೀನುತಕೃತಿಯ ಪೆಸರ್, ಭಾಪುರೇ ಕಾವ್ಯನಾಥಂ
ಗಿರಿಜಾನಾಥಂ, ಕಥಾಸಂಗತಿ ವರಗಿರಿಜೋದ್ವಾಹ, ಈ ಕಾವ್ಯಮಂ ವಿ-
ಸ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ,
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ೫

# ೧. ಹೈಮವತೀ ಶೈಶವಲೀಲೆ

ಆ ಹಿಮಶೈಲದುತ್ತರವಿಭಾಗದೊಳೊಪ್ಪುವುದಾತ್ತನಂದನ
ವ್ಯೂಹ ತಟಾಕ ವೀಥಿ [1]ಕಳಮಾವಳಿ [2]ಕೈರವರಾಜಿಯಬ್ಜಸಂ-
ದೋಹ ವಿಶಾಲ ರಾಜನಗರೀ ವ್ರಜ ಚಾರುನದೀ ನದಾಳಿಯು-
ತ್ಸಾಹ ಸಮಗ್ರದಿಂದೆ ಗಿರಿರಾಜನ ದೇಶಮಿಳಾವಿಭೂಷಣಂ ೧

ಕಲ್ಲೆಲ್ಲಂ ಪರುಷಂ, ತರು-
ವೆಲ್ಲಂ ಕಲ್ಪತರು [3]ಗುಲ್ಮಮೆಲ್ಲೌಷಧಿ, ಗೋ-
ವೆಲ್ಲಂ [4]ಸುರಭಿಕುಲಂ, ಮಡು
ವೆಲ್ಲಂ ಸಿದ್ಧರಸಮೆನಿಕುಮಂತಾ ನಾಡೊಳ್ ೨

ನಾನಾ[5]ದೇವಾಯತನಾ
ನೂನವಿಭೋಗಾದಿ ಸಂಪದಪ್ರದಮೆನಿಸ-
ಪ್ಪಾರ್ ನಾಡಿಂಗೆ ಶಿರೋಮಣಿ
ತಾನೆನಿಕುಂ ಪೆಸರೊಳೋಷಧಿಪ್ರಸ್ಥಪುರಂ ೩

ಪಳಿಕಿನ ಕೋಂಟೆ[6]ಬಟ್ಟದೆನೆ [7]ಬೇವಿನ ದಂಡೆ ನಭಕ್ಕೆ ಮೀಱುವ
ಟ್ಟಳೆ ನಿಮಿರ್ದೇಱಿ ಪಾರುವ ಪತಾಕೆ ವಿರಾಜಿಪ [8]ಗೊಂಟು ಗೊಂಟನೊಳ್
ಬಳಸಿದ [9]ಕೊತ್ತಳಂ ಸೊಗಯಿ [10]ಪಾಳ್ವರಿ [11]ಡೆಂಕಣಿ [12]ಸಾರಮಾಱಿಯ
ಗ್ಗಳಿಸುವ ಗೋಪುರಂ ಪುಲಿಮೊಗಂ ಮೆಱೆಗುಂ ಪುರದೊಳ್ ನಿರಂತರಂ ೪

---

1 ಬತ್ತದ ಬೆಳಸು 2 ನೈದಿಲೆಯ ಹರಹು 3 ಗಿಡ, ಪೊದೆ 4 ಕಾಮಧೇನು 5 ದೇವಮಂದಿರ 6 ಕೋಟೆಗೋಡೆಯ ಮುಗಿವು, ಕೋಟೆಯ ತಲೆ 7 ಕಾವಲು ಕಟ್ಟೆ 8 ಮೂಲೆ 9 ಹೂಡೆಯ 10 ಅಗಳು ಸುತ್ತಿದ ಗೋಡೆ 11 ಧ್ವಜಸ್ತಂಭ (?), ಒಂದು ಯುದ್ಧೋಪಕರಣ 12 ಸಾರ ಅಂದರೆ ಅಟ್ಟಳೆಗಳನ್ನು ಧ್ವಂಸಮಾಡುವ ಆಯುಧ ವಿಶೇಷ (?)

ಸಿರಿ ತಂದಿಕ್ಕಿದಶೋಕೆ, ವಾಗ್ವನಿತೆಯಿಟ್ಟಾಮ್ರಂ, ಶಚೀದೇವಿಯಿ-
ಟ್ಟರನೇಱಿಲ್, ಮಿಗೆ ರಂಭೆಯಿಟ್ಟ ಕದಳೀಷಂಡಂ, ಸುರಸ್ತ್ರೀಯರಿ-
ಟ್ಟರವಿಂದಾಕರಮೂರ್ವಶೀವಧು ಸರಾಗಂ ತಂದ ಪೂಗದ್ರುಮಂ,
ತರದಿಂದಂ ರತಿಯಿಟ್ಟ ದಾಡಿಮಕುಲಂ, ಸಾರ್ವರ್ತುಕೋದ್ಯಾನದೊಳ್ ೫

ಶ್ರೀಪರಮೇಶ್ವರಾಂಘ್ರಿ ಸರಸೀಜಮಧುವ್ರತನುದ್ಧತೇಜನು
ರ್ವೀಪತಿ, ಸರ್ವದಿಗ್ಭರಿತ ಕೀರ್ತಿಯುತಂ, ನತಭೂಭುಜಂ, ಜಗ-
ದ್ದೀಪಕನತ್ಯುದಾರನತಿಧೀರನತಿಸ್ತುತಿಪಾತ್ರಗೋತ್ರನಂ-
ತಾ ಪುರನಾಥನೊಪ್ಪುವನುದಾತ್ತಗುಣಂ ಗಿರಿರಾಜನುರ್ವಿಯೊಳ್ ೬

ಆತನ ಪುಣ್ಯವಲ್ಲಭೆ ವಿರಾಜಿತೆ ಪೂಜ್ಯೆ ಪರಾಪರೈಕ ವಿ-
ಖ್ಯಾತೆ ಪತಿವ್ರತಾಗುಣವಿಭೂಷಣೆ ಸಲ್ಲಲಿತಾಂಗಿ ಸತ್ಯಶೈ-
ವಾತುರೆ ಶಾಂತೆ ಶಾಶ್ವತೆ ಶುಭಾಚರಣಾನ್ವಿತೆ ಮಾನ್ಯೆ ಸದ್ಗುಣ-
ವ್ರಾತೆ ವಿಳಾಸವಿಭ್ರಮಕಳಾನಿಧಿ ಮೇನೆಯೆನಿಪ್ಪಳುರ್ವಿಯೊಳ್ ೭

ಇಂತು ಪಿತೃಗಳ ಮನದೊಳ್ ಪುಟ್ಟಿದ ಸಕಲಗುಣಾಲಂಕೃತೆಯಪ್ಪ ಮೇನಾದೇವಿ ನಿಜವಲ್ಲಭೆಯಾಗೆ ಪರ್ವಿದ ಹರ್ಷಕ್ಕಿಂಬುಗೊಟ್ಟು ನಲಿನಲಿದು ಕೆಲವುದಿನಂ ಅತಿಸುಖದೊಳಿರ್ದು ಮೈನಾಕನೆಂಬ ಕುಮಾರನಂ ಪಡೆದು ವಿಮಳಮನದಿಂದಿರ್ವರುಂ ಸಮಸುಖದೊಳಿರ್ಪಲ್ಲಿ,

ಭರದಿಂ ಬಹುಸಂತಾನಾ-
ತುರೆ ಸಾಧು ಸುಶೀಲೆ ಲೀಲೆ ಮಿಕ್ಕಾದರದಿಂ
ಗಿರಿರಾಜಂಗೆ ವಿರಾಜಿಪ
ವರಜೀವ ಸಮಾನೆ ಮೇನೆ ನಯದಿಂ ನುಡಿದಳ್ ೮

ಮೊಲೆಯುಣಾ[1] ತಳ್ಕಱಿಂ ನಗುವ, ನಿಂದಿರುತಪ್ಪುವ, [2] ಪೊಂಗಿ ಹಿಗ್ಗುತುಂ
ಮಲೆವ ಮರಳ್ವ, ಕಣ್ಗಳನಲರ್ಚುವ ಮುಚ್ಚುವ, ನೋಡುತಾಡುತುಂ
ನಲಿನಲಿದುರ್ಬುತಂತೊಲೆಯುತಿಂತೊಲೆ[3] ವಳ್ತಿಯ ಮುದ್ದಿನೊಪ್ಪದೊಳ್
ನೆಲಸಿದ ಪುತ್ರಿಯಂ ಬಯಸುತಿರ್ದಪುದೆನ್ನ ಮನಂ ಮನಃಪ್ರಿಯಾ ೯

1 ಪ್ರೀತಿ 2 ಉಬ್ಬಿ 3 ಪ್ರೀತಿ

ಉಗ್ರತಪದಿಂದೆಯತುಳ ಸ-
ಮಗ್ರೆಯನ್ ಅಭವಂಗೆ ವಧುವೆನಿಪ್ಪಳನಾ[1]ನ
ವ್ಯಗ್ರದೆ ಪಡೆವೆಂ, ಕುಧರ
ಪ್ರಾಗ್ರನೆ, ಕಳಿಪೆಂದು ಮೇನೆ ನುಡಿವವಸರದೊಳ್, ೧೦

ಗಿರಿರಾಜಂ ಒಡಂಬಟ್ಟಾದರದಿಂದಂ

ಕಳಿಪೆ, ನಡೆತಂದು ರಮ್ಯ
ಸ್ಥಳದೊಳ್ ನಿಂದೇಕಪಾದದಿಂದಂ ಮೇನಾ-
ಲಳನೆ ಮಹಾದೇವಿಯ ನಿ
ರ್ಮಳರೂಪಂ ಹೃದಯ ಕಮಲದೊಳ್ ತಳೆದಿರ್ದಳ್ ೧೧

ಮುಗಿದುವು ನಯನಸರೋಜಂ,
ಮಿಗೆಯಲರ್ದುದು ಚಿತ್ತಕೈರವಂ, ಮಿಕ್ಕೇಱು-
ತ್ತು ಗಭೀರತಪೋವಾರಿಧಿ
ಬಗೆಯೊಳಗಾಧ್ಯಾನಚಂದ್ರನುದಯಿಸುವಾಗಳ್ ೧೨

ಇಂತು ತಪೋಬೀಜಂ ಚಿತ್ತಭೂಮಿಯೊಳ್ ಬೇರೂಱು, ಅಹಂಕಾರದೊಳಂಕುರಿಸಿ, ಬುದ್ಧಿಯೊಳ್ ಪಲ್ಲವಿಸಿ, ಮನದೊಳ್ ನಿಮಿರ್ದು, ನಿಷ್ಠೆಯೊಳ್ ಕುಡಿವರಿದು ಪರಿದು ಪರ್ವಿ ಪುರಹರನರಸಿಯ ಮೆಲ್ಲಡಿಗಳ್ಗೆ ನಿಲ್ಲದೆ ಧೀಂಕಿಡೆ, ಭವಾನಿ ಭೋಂಕನಱಿದು, ವರಪುತ್ರೀ ಸ್ಥಿರಭಾವಕಾಮ್ಯವಿಲಸತ್ ಸನ್ಮಾನ್ಯೆಯಪ್ಪ ಮೇನೆಯ ತಪಕ್ಕೆ ಮಿಗೆ ಮೆಚ್ಚಿ ಕರುಣಿಸಿ, ಹರನಂ ಬೀಳ್ಕೊಂಡು, ತಂದೆ ಮಾಡುವ ಯಾಗಮಂ ನೋಳ್ಪನೆವದಿಂ ಕೈಲಾಸಮಂ ಪೊಱಮಟ್ಟು ದಕ್ಷನ ಪುರಕ್ಕಭಿಮುಖಿಯಾಗಿ,

ತ್ರಿಣಯನವಿರಹಿತಯಾಗ-
[2]ಕ್ಕಣೆಯರದಿಂ ಪೋಗಿ ಮುಂದೆ ನಿಲೆ, ದಕ್ಷಂ ನಿ-
ರ್ಗುಣನಂ ನಿಂದಿಸೆ, ದಾಕ್ಷಾ-
ಯಣಿ ಕೇಳದೆ ವಿಮಳಯೋಗದಿಂ ನಡೆತಂದಳ್ ೧೩

1 ಸ್ಥಿರಚಿತ್ತತೆಯಿಂದ 2 ಸಂಭ್ರಮ, ಒಪ್ಪ

ಸುರತರುವಿಂ ಬೀಜಂ, ದಿ-
ವ್ಯರತ್ನದಿಂ ಕಾಂತಿ, ಪೂರ್ಣಶಶಿಯಿಂ ಕಿರಣಂ,
ವರಸುಧೆಯಿಂ ಮಧುರತೆ, ಬಂ-
ಧುರ ಕುಸುಮದೆ ಕಂಪು ಬರ್ಪ ತೆಱದಿಂ ಬಂದಳ್ ೧೪

ಉತ್ಕಟತಪೋನಿಷ್ಠೆಗೆ
ಸತ್ಕರುಣಮನಾಂತು ನಿನ್ನ ಬಸಿಱೊಳ್ ಬರ್ಪೆಂ
ಸತ್ಕುಲಜೆ, ಎನುತೆ ಮೇನೆಯ
ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿರ್ದಳ್ ೧೫

ಇರೆ ಮೇನೆಯಱಿದು ಹರ್ಷದ
ಶರನಿಧಿಯೊಳ್ ಪೊಕ್ಕು, ಲೀಲೆ ಮಿಕ್ಕೋಲಾಡು-
ತ್ತರಲುತ್ತೀಸಾಡುತ್ತುಂ,
[1]ಪೊರೆಯೇಱುತೆ ಜಪದ ವಿಪುಳ ತಪಮಂ ಬಿಟ್ಟಳ್ ೧೬

ಬಂದಗರಾಜ ರಾಜಗೃಹಮಂ ಪುಗುತುಂ ಪರಮಪ್ರದೀಪೆ ಸಾ-
ನಂದೆ ಸರೋಜನೇತ್ರೆ ವರವಕ್ತ್ರೆ ಮನೋಹರೆ ಮಾನ್ಯೆ ಮೇನೆ ಸಾ-
ರ್ತಂದು ನಿಜೇಶನಂ ಪ್ರಿಯದೊಳಪ್ಪಿ ಮನೋರಥಸಿದ್ಧಿಯಾದುದಂ
ನಿಂದುಸಿರ್ದಂತರಂಗ ಬಹಿರಂಗ ಸುಖಾನ್ವಿತೆಯಾಗುತೊಪ್ಪಿದಳ್ ೧೭

ಇಂತು ತನ್ನ ಬಸಿಱೊಳ್ ಭವಾನಿ ಬರ್ಪ ವರಮಂ ಪಡೆದು ನಾನಾಸುಖದೊಳೊಪ್ಪಿರ್ದು, ಗಿರಿರಾಜನುಂ ತಾನುಂ ಸಮಾನ ರಾಗ ಭೋಗಭರಿತ ಪರಮಸುಖದಿಂ ಸಂತುಷ್ಟಪುಷ್ಟಹೃದಯರಾಗಿರಲ್, ಆ ಸಮಯದೊಳ್

[2]ಪದೆಪಿಂ ಮೇನೆಯ ಹೃತ್ಕಮ-
ಲದ ಬೆಳಗಿಳಿತಂದು ಮಿಕ್ಕ ಶಕ್ತಿಸುಖದ ಸಂ-
ಗದೊಳೊಂದಿ ಬಳೆಯುತಿರ್ದುದು
ಸದಮಳರೂಪಿಂ ಭವಾನಿಯುಜ್ಜ್ವಳ ತೇಜಂ ೧೮

1 ಉಬ್ಬು 2 ಸಂತೋಷ, ಸಂಭ್ರಮ

(ಇಂತು) ಉಜ್ವಳಿಸುವ ಬೀಜದೊಳ್ ಪೊಳೆವ ಪುಣ್ಯಸುಧಾಲತೆಯಂತೆ ತನ್ನ ಶೈವಸುಖೋದರದಲ್ಲಿ ತೀವಿದ ಗರ್ಭದಿಂ ಭಾವಭರಿತ ಪರಮಹರ್ಷಂ ನೆಲೆಗೊಂಡು ಮೇನಾದೇವಿಯಿರೆ,

ಆದುದು ನವಮಾಸಂ, ಪು-
ಣ್ಯೋದರದೊಳ್ ಪಕ್ವಸಮಯಮಲರ್ದುದು, ಸುಪಥಂ
ವೇದಿಸಿದುದು, ಸುಮುಹೂರ್ತಂ
ಕಾದಿರ್ದವು ಭರದೊಳೆಮಗೆ ತಮಗೆನುತಾಗಳ್ ೧೯

ಅಲರ್ದ ಸರೋಜದಿಂದವೊಗೆತರ್ಪ ಲಸತ್ಕಳಹಂಸಿಯಂತೆ, ನಿ-
ರ್ಮಲತರ ಮೇರುವಿಂದೆ [1]ಪೊಱಪೊಣ್ಮುವ ತನ್ಮಣಿಮಾಲೆಯಂತೆ, ನಿ-
ಶ್ಚಲಪುರುಹೂತ ದಿಙ್ಮುಖದಿನೇಳ್ತರುತಿರ್ಪ ಮೃಗಾಂಕ ಬಿಂಬದಂ-
[2]ತಳವಡೆ, ಗೌರಿ ಗರ್ಭದೊಳಗಿಂ ಬರುತೊಪ್ಪಿದಳಂದು ಮೇನೆಯಾ ೨೦

ಇಳೆಯೊಳ್ ಪಾರ್ವತಿಯುದಯಿಸೆ
ಕಳೆಯೇಱಿದನಿಂದು, [3]ಜೊನ್ನಮಲರ್ದುದು, ಕಾಮಂ
ತಳೆದಂ ನಿಜಭುಜಬಲಮಂ,
ಪುಲಕಿತಮಾಯ್ತಿಂದುಧರನ ವರ ವಾಮಾಂಗಂ ೨೧

ಶಿವಲಿಂಗೇಕ್ಷಣ ಲೋಲುಪೆ
ಶಿವಪ್ರಸಾದಾತ್ತಚಿತ್ತೆ ಶಿವಭಕ್ತೆ ಶಿವೋ-
ತ್ಸವೆ ಶಿವಪುಣ್ಯಾಂಬೋನಿಧಿ
ಶಿವನಂ ನೆಱೆ ನಚ್ಚಿಮಚ್ಚಿ ಕಣ್ಮುಚ್ಚಿರ್ದಳ್ ೨೨

ಇಂತಿರೆ ಪರಮಶಿವಜ್ಞಾನಿ ಗುರುಶೈವಾಚಾರ್ಯರ್ ಶಿವಲಿಂಗಮಂ ತೋಱಿ

ಎನೆ, ಗಿರಿರಾಜಂ ದೇವಾ
ರ್ಚನಾ ನಿಕೇತನಕೆ ಬಂದು ಶಶಿ ರವಿ ಶಿಖಿಲೋ-
ಚನ ಶಿವಲಿಂಗಮನುತ್ಸವ-
ಜನಿತಮನಂ ತಂದು ಮುಂದೆ ನಿಂದೊಲವಿಂದಂ ೨೩

---

1 ಹೊರಹೊಮ್ಮು 2 ಸೊಗಯಿಸು 3 ಬೆಳದಿಂಗಳು

ತೋಱಲೊಡಂ ಕಣ್ದೆಱೆದಳ್,
ಪೇಱಿದಳೆರಡುಂ ಕರಂಗಳಂ [1]ನೊಸಲೊಳ್, ಸೊಂ-
ಪೇಱಿದಳಭವನೊಳಗೆ ಬೇ-
ರೂಱಿದಳಂಕುರಿಸಿ ಪಲ್ಲವಿಸಿ ಫಲವಾದಳ್ ೨೪

[2]ಗುಡಿಗಟ್ಟಿತು ನೆಱೆ ಪುರದೊಳ್,
ಮಡುಗಟ್ಟಿತ್ತಚಲನಾಥ ಸಂತೋಷರಸಂ,
ಕುಡಿಯಿಟ್ಟುದು ಧೀಂಕಿಟ್ಟುದು
[3]ಗಡಿಗೆಟ್ಟುದು ಪುಣ್ಯಕೀರ್ತಿಲತೆ ಧಾರಿಣಿಯೊಳ್ ೨೫

ಎಂಬ ಯಶಸ್ಸಿಂಗೆ ತಾವೆ ಭಾಜನರಾಗಿ ಗಿರಿರಾಜನಂ ಮೇನಾದೇವಿಯುಂ ಪರಿಜನಮುಂ ಪುರಜನಮುಂ ಧರಾವಳಯಮುಂ ಪರಮಸುಖದಿಂದಿರ್ಪಲ್ಲಿ,

ತೊಲಗದ ಪುಣ್ಯವಾರಿಧಿಗಗಣ್ಯಮರೀಚಿಗೆ ಲೀಲೆಯಿಂದೆ ಬಂ-
ದಿಳೆಯೊಳೆ ಪುಟ್ಟಿದಪ್ರತಿಮೆಗಾನತಲೋಕೆಗೆ ಶರ್ವನಾಮೆಗು-
ಜ್ಜ್ವಳಿಪ ನಿಜಕ್ಕೆ ನಾಮಕರಣಂ ಗಿರಿಜಾತೆಯೆನಿಪ್ಪುದಾಗೆ ತೊ-
ಟ್ಟಿಲೊಳಿಡುತಿರ್ದರೊಪ್ಪುವ ಸುವಾಸಿನಿಯರ್ ಮನದುತ್ಸವಂಗಳಿಂ ೨೬

ದಿಟದಿಂ ಜಗಕ್ಕೆ ತನ್ನುಂ-
ಗುಟಮೆ ತಾಯ್ದೊಟ್ಟಿಲಾದ ಗಿರಿಸುತೆಯನತಿ-
ಸ್ಫುಟ ಮಣಿಗಣಪ್ರಭಾ ಸಂ-
ಪುಟಮೆನಿಸುವ ರನ್ನ ದೊಟ್ಟಿಲೊಳಗಿರಿಸುತ್ತುಂ, ೨೭

ಜೋ ಜೋ ಸಕಳತತ್ತ್ವಮಯೆ, ಜೋ-
ಜೋ ಸತ್ತ್ವಾದಿಗುಣರಹಿತೆ, ಜೋ ನಿರ್ಮಳೆ, ಜೋ-
ಜೋ ಸದ್ಗುಣೆ, ಜೋ ಶಾಶ್ವತೆ,
ಜೋ ಸಂಪದೆ, ಜೋ ವಿಶಾಲೆ, ಜೋ ಶಿವೆ ಜೋ ಜೋ, ೨೮

---

1 ಹಣೆ 2 ಬಾವುಟ, ಸಂಭ್ರಮದಿಂದ ನಲಿದಾಡು 3 ಎಲ್ಲೆ ಮೀರು.

ಎನುತ್ತೆ ತೂಗುವ ಜೋಗುಳದ ರಾಗದೊಳಂ, ಮೊಲೆಯೂಡುವ ಮೇನೆಯ ಮಗ್ಗುಲೊಳಂ, ಎತ್ತುವನಸೂಯೆಯ ಹಸ್ತದೊಳಂ, ಅಪ್ಪುವರುಂಧತಿಯುರದೊಳಂ, ಸೋಂಕುವ ಕಮಳೆಯ ಸಂಪದದೊಳಂ, ಮುದ್ದಾಡಿಸುವ ಸರಸ್ವತಿಯ ಮಧುರವಾಣಿಯೊಳಂ, ಪರಸುವ ಸಪ್ತಮಾತೃಕೆಯರ ಪರಕೆಯೊಳಂ, ಮಿಕ್ಕು ನಲಿವಚಲಪತಿಯಳ್ಕಱೊಳಂ, ಪುಣ್ಯದ ಜೀವದಂತೆ, ಶಿವಜ್ಞಾನದ ದೇಹದಂತೆ, ಸಾರೂಪ್ಯದ ಸುಧೆಯಂತೆ, ಸಾಮೀಪ್ಯದ ಸೀಮೆಯಂತೆ, ಸಾಯುಜ್ಯದ ನಿಲವಿನಂತೆ, ಶಿವನ ಸುಖದಂತೆ, ನಿರುಪಾಧಿಕಜ್ಯೋತಿಯಂತೆ, ಪರಮಾತ್ಮನ ಪರಿಣಾಮದಂತೆ ಸಕಲ ಜಗನ್ಮಾತೆಯಪ್ಪ ಗಿರಿಜಾತೆ ಶೈಶವಲೀಲೆಯನೊಳಕೊಂಡು ತೊಳತೊಳಗಿ ಬೆಳಬೆಳಗಿ ನಳನಳಿಸಿ ಬಳೆಯುತ್ತಿರ್ದಳ್. ಅಂತುಮಲ್ಲದೆಯುಂ,

ಸರಸಿಜ [1]ಕುಟ್ಮಳ ಮಲರ್ವಂ-
ತಿರೆ, ಕರುಣಾನಿಳಯ ಮೃದು [2]ಕವಾಟಂಡೆಗೆವಂ-
ತಿರೆ, ನಗೆಮೊಗಮಂ ಸವಿವಂ-
ತಿರೆ, ಗಿರಿಸುತೆ ಕಲ್ತಳಮರ್ದಿ [3]ನಗೆಯಂ ನಗೆಯಂ ೨೯

ಬೇರ್ಪಡದೆ ಕೂಡೆ ತಾನೆಯ-[4]
ಡರ್ಪಖಿಳಕ್ಕೆಂಬ ನೈಜಮಂ ಮಱಯಿಸುತಂ
[5]ದಾರ್ಪಿಂ ಭಿತ್ತಿಗಳ್ಗಂ ನೆ-
ಮ್ಮಿರ್ಪಳ್ ನಿಂದಗಜೆ ಬಾಲ್ಯಮಂ ನಟಿಯಿಸುತುಂ ೩೦

ಅಡಿಗಳ ಕೋಮಲತೆಗೆ ಧರೆ
ಬಿಡಲಾಱದೆ ಪೊಡಮಡುತ್ತೆ ಬಿಡದಿರೆ ನಯದಿಂ
ಬಿಡಿಸಿಕೊಳುತ್ತುಂ ಮೆಲ್ಲನೆ
ನಡೆದಪಳೆನೆ ಮೆಱೆದುವಗಜೆಯೊಳ್ ದಟ್ಟಡಿಗಳ್ ೩೧

---

1 ಮೊಗ್ಗು 2 ಬಾಗಿಲು 3 ಮೊಳಕೆ 4 ಆಶ್ರಯ 5 ಸಾಮರ್ಥ್ಯ

ಒಡನೆಯು ಸತಿಯರ್ ನೆಲನು
ಗ್ಗಡಿಸೆ, ಧರಾಕಾಂತೆ ಮೆಲ್ಲಡಿಗೆ ಮೃದುವಾಗು-
ತ್ತೆಡೆಗುಡುತುಂ ಪುಳಕಿಸುತಿರೆ,
ನಡೆಗಲ್ತಳ್ ಗಿರಿಜೆ ಪರಮನರಮನೆಯತ್ತಲ್ ೩೨

[1]ರಸನೆಯ ಸುಧೆಯಂ ಮಿಗೆ ಸವಿ-
ದು ಸವಿದು ಮಗ್ನತೆಯನೆಯ್ದಿ ಮಧುರಾಕ್ಷರ ಮು-
ಬ್ಬಸದಿಂ ಪೊರಳುತ್ತುರುಳು-
ತ್ತೊ[2]ಸರ್ದಪುದೆನೆ ಗಿರಿಜೆಯೊಳ್ ತೊದಳ್ನುಡಿಯೊಸೆಗುಂ ೩೩

[3]ಉಣ್ಮಿ ಶಶಿಧರನ ಬಗೆ ಮ್ಮಿಗೆ
ಪೊಣ್ಮುವ ಪುಳಕಂಗಳಿಂದೆಯಂತಃಸ್ಥಲದೊಳೊ
[4]ಲ್ದಾಣ್ಮನನೀಕ್ಷಿಪ ತೆಱದಿಂ
ಕಣ್ಮುಚ್ಚುವಳಬಳೆ ವಿಮಳ ಕಮಳಾಕೃತಿಯಿಂ ೩೪

ಗಿರಿಸುತೆ ಹರನಂಘ್ರಿಯನಂ-
ತರಂಗದೊಳ್ ಮುಚ್ಚಿ ಪೊಱಗೆ ನೋಳ್ಪೆಸೆಯೊಳಾ
ಚರಣಾರುಣೋದಯಕೆ ತಾ-
ವರೆಯಲರ್ದವೊಲಂದು ಮುಂದೆ ಕಣ್ದೆಱ್ದಿರ್ದಳ್ ೩೫

ನೋಡಭವವಲ್ಲಭೆಯ ಕಿವಿ-
ಗೂಡಿದೆವತಿಸಫಲವಾದೆವೆನುತುಂ ಕುಣಿವಂ-
ತಾಡುವ ಗಿರಿಜೆಯ ಮೊಗದೊಡ-
ನಾಡುವ ಹೊನ್ನೋಲೆವಿಡಿದು ಮಾಗಾಯೆಸೆಗುಂ ೩೬

ಪುರಮಥನನ ವರಕೀರ್ತ್ಯಂ
ಕುರಮಿಾ ಗಿರಿಸುತೆಯ ವದನದೊಳ್ ಮೊಳೆತುದು ಸಾ-
ದರದಿಂ ತಾನೆಂಬಂತಿರೆ
ಕರಮೆಸೆದುದು ವಿಮಳಮೌಕ್ತಿಕಂ ನಾಸಿಕದೊಳ್ ೩೭

1 ನಾಲಗೆ 2 ಜಿನುಗು 3 ಹೊರಹೊಮ್ಮು 4 ನಲ್ಲ

ಬಿಡೆವಿನ್ನೀ ಗಿರಿಜೆಯ ಮೆ-
ಲ್ಲಡಿಗಳನೆಂದಖಿಳ ವೇದ[1]ಮುಲಿವಂತೆ ವಲಂ
ನಡೆವೆಡೆಯೊ[2]ಳಗುರ್ಬಿಂ ಬೊ-
ಬ್ಬಿಡುವಂದುಗೆ ಗೆಜ್ಜೆ ಸಜ್ಜನೆಗೆ ಸೊಗಯಿಸುಗುಂ ೩೮

(ಇಂತು) ಸಕಲ ಸೌಂದರ್ಯಮಂ ಬೀಱುವ ಬಾಲದುಡಿಗೆವೆರಸು ಲೀಲೆಮಿಕ್ಕು ನಲವಿಂ ಪರಿಪರಿದು ಪೋಗಿ ಹರನ ನಿಳಯದೊಳ್ ನೆಲಸಿ,

ನಲಿವಳ್ ನಗುವಳ್ ರಾಗಿಪ-
ಳುಲಿವಳ್ ಮುದ್ದಿಸುವಳಳುವಳಪ್ಪುವಳಂತಿಂ-
ತೊಲೆವಳ್ ನಿಲ್ವಳ್ ಮೇನೆಯ
ಮೊಲೆಯಂ ಮಱೆದಭವನಾಟದೊಳ್ ಸಂದಿರ್ದಳ್ ೩೯

ಇಂತಾರುಮಂ ಬಗೆಯದೆ [3]ನೆರವಂ [4]ಪಾರದೆ ಪೋಗಿ ಪರಮ ಪ್ರೀತಿಯಿಂ ಹರನಾಲಯದೊಳ್ ಗಿರಿಜಾತೆಯಿರ್ದುದಂ ಗಿರಿರಾಜಂ ಕಂಡು ಸಕಲ ಬ್ರಹ್ಮಾಂಡಮಂ ರಕ್ಷಿಸುವ ರುದ್ರಾಣಿಗೆ ನಿಯಾಮಿಸಿಕೊಟ್ಟ ಷೋಡಶಸಹಸ್ರವಿಳಾಸಿನಿಯರ್ವೆರಸು ನಡೆತಂದು ಅಪೂರ್ವಸರ್ವವಿದ್ಯೆಗಳ ನಭ್ಯಾಸಂ ಮಾಡದೊಡಂ ಮುನ್ನಿನಂತೆ ಸಹಜಮಾಗಿ ನೆಲಸಿನಿಲೆ ವಿಹಿತ ನವೀನಕ್ರೀಡೆ ಬಾಲ್ಯಮಂ ಸವಿದಪುದೆನೆ ಸಲ್ಲೀಲೆಯಿಂ ಶೈಲಾತ್ಮಜೆ ಕೇಳೀವನಂಗಳಂ ಪುಗುತಂದು,

ಎಲ್ಲಿ ಸರೋಜಮೆಲ್ಲಿ ವಿಮಳೋತ್ಪಲಮೆಲ್ಲಿ ಲತಾವಿತಾನದೊ-
ಳ್ಪೆಲ್ಲಿ ವನಂಗಳೆಲ್ಲಿ ಕೃತಕಾಚಳಮೆಲ್ಲಿ ವಿಶಾಲಮಪ್ಪ ತ-
ಣ್ಪೆಲ್ಲಿ ತಟಾಕಮೆಲ್ಲಿ ಪುಳಿನಸ್ಥಳಮೆಲ್ಲಿ ನದೀನದಾಳಿ ತಾ-
ನಲ್ಲಿ ಭವಾನಿ ಭಕ್ತಿಮಿಗೆ ಭಾವಿಸಿ ಭರ್ಗನನೊಲ್ದು ಪೂಜಿಪಳ್. ೪೦

---

1 ಸಾರು 2 ಉರುಬಿನಿಂದ 3 ಸಹಾಯ 4 ಪರೀಕ್ಷಿಸು

ಕಣ್ಮಾ[1]ಲರಿಂದಶ್ರುಜಲಂ
ಪೊಣ್ಮುತ್ತಿರೆ, ತನುವಿನಲ್ಲಿ ಪುಳಕಂ ಸಾಲ್ಗೊಂ-
ಡುಣ್ಮುತ್ತಿರೆ, ಗಿರಿಪತಿಸುತೆ
ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್ ೪೧

ತರಣಿಯ ಮಧುಕರ ನಿಕರದ
ಮರುತನ ಕಾಲ್ದುಳಿಯಿವೆಂದು ಪೂವಂ ಬಿಟ್ಟಾ
ಗಿರಿಸುತೆ ಮನಃಕುಸುಮದಿಂ
ಪರಮನನೇಕಾಂತಭೂಮಿಯೊಳ್ ಪೂಜಿಸುವಳ್ ೪೨

ಇಂತು ಬಾಲಲೀಲೆ ಶಿವಲೀಲೆಯಾಗಿ ಕೆಲನಱಿಯದೆ ಬಲನಱಿಯದೆ ಪಸಿವಱಿಯದೆ ತೃಷೆಯಱಿಯದೆ ದೆಸೆಯಱಿಯದೆ ಇರುಳ್ಪಗಲಱಿಯದೆ ಪರಿಜನಮಂ ಪರೀಕ್ಷಿಸದೆ ಶಿವನಂ ಮರುಳ್ಗೊಂಡು ಭವಾನಿಯಿರೆ ಕಂಡು ಕೌತುಕಂಗೊಂಡು ಸಹಚರಿಯರ್ ತಮತಮಗಂಜಿ ಭಾರತಿಗೋರನ್ನಳಪ್ಪ ನಾರಿಯೊರ್ವಳಂ ಗಿರಿರಾಜನಲ್ಲಿಗೆ ಭರದಿಂ ಕಳುಪಿದೊಡೆ ಆ ತರುಣಿ ಭೀತಿಯಿಂ ಪರಿತಂದರಮನೆಯಂ ಪೊಕ್ಕು ಓಲಗದೊಳ್ ನಿಂದು ನಗಾಧಿಪಂಗೆ ನಯಂ ಮಿಗೆ ಭಯಭಕ್ತಿಯಿಂ ಮೆಯ್ಯಿಕ್ಕಿ ಕೆಯ್ಮುಗಿದು ನಿಂದು,

ದೇವಕುಮಾರಿ ಬಾಲೆ ಸುಕುಮಾರಿ ಸಮರ್ಥೆ ಅತಿಸ್ವತಂತ್ರೆ ನಾ-
ನಾವಿಧ ಶೈಲರಾಜಿ ನವರಾಜಿ ಸರೋವರ ರಾಜಿ ಸಲ್ಲತಾಂ-
ತಾವಳಿ [2]ಸೈಕತಾವಳಿ ಲತಾವಳಿಯೆಂಬವಱಲ್ಲಿ ಸಂತತಂ
ದೇವರ ದೇವನಂ ಶಿವನನರ್ಚಿಸುತಿರ್ದಪಳೊಲ್ಲದೇನುಮಂ ೪೩

ಕಲ್ಲೆನ್ನಳ್, ಮುಳ್ಳೆನ್ನಳ್,
ಮೆಲ್ಲಿತ್ತಿದು [3]ಬೆಟ್ಟಿತೆನ್ನಳತಿಭಕ್ತಿಯೊಳಂ
ತೆಲ್ಲಿ ಸುಖಸ್ಥಳಮುಂಟಾ-
ದಲ್ಲಿ ವಿರೂಪಾಕ್ಷ ಪೂಜೆಗೀಡಾಗಿರ್ಪಳ್ ೪೪

---

1 ಹೂವು. 2 ಮರಳು 3 ಕಠಿಣ

ಬರೆದರೊ [1]ಬೈತರೊ [2]ಪೊಲ್ದರೊ
ಪೊರೆದರೊ [3]ಬೆಚ್ಚರೊ ಮರಳ್ಚಿ [4]ಕರುವಿಟ್ಟರೊ[5] ಕಂ
ಡರಿಸಿದರೊ ಕಡೆದರೋ ಎನೆ
ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ ೪೫

ಬೇಡೆಂದೊಡೆ ಮಾಣಳ್, ನಲಿ
ದಾಡುವಳಪ್ಪುವಮರ್ಚುವಳ್ ಪುಳಕಿಪ್ಪಳ್,
ಮಾಡುವ ಲಿಂಗಾರ್ಚನೆಯೊಳ್
ನೋಡಳ್ ನುಡಿಯಳ್, ಭವಾನಿಯೇನೆಂದಱಿಯಳ್ ೪೬

ಎಂದು ಬಿನ್ನವಿಸೆ ಕೇಳ್ದು ಗಿರಿರಾಜಂ ನಿಜಾತ್ಮಜಾವಲೋಕನ ಹರ್ಷವದನಂ ಭದ್ರಾಸನದಿಂ ಭೋಂಕನೆಳ್ದು ಪೊಜಮಡುತ್ತೆ ನಡೆತಂದು ನುಣ್ಮಣಲ ಶಿವಲಿಂಗಮಂ ಅಗಣಿತಪ್ರೇಮದಿಂ ಸೊಗಸುಮಿಕ್ಕುಮಿಗೆ ಪೂಜಿಸುತಿರ್ದ ಮಗಳಂ ಕಂಡು,

ಬಿಡದೇಳ್ವ ಪುಳಕತತಿಯೊಡ-
ನೊಡನಾನಂದಾಶ್ರು[6]ಪೊಗೆಯೆ, [7]ಬಗೆವೆರ್ಚುತ್ತಿ-
ರ್ಮಡಿ ಮೂವಡಿ ನಾಲ್ವಡಿ ಯ-
ಯ್ವಡಿ ಸಂತಸದಿಂದೆ ತಂದೆ ಮಗಳಂ ಕರೆದಂ ೪೭

ಬಾರೆನ್ನಾಯುವೆ ಬಾರ ಪುಣ್ಯತತಿಯೇ ಬಾರೆನ್ನ ಸೌಂದರ್ಯವೇ
ಬಾರೆನ್ನಾದಿಯೆ ಬಾರ ಶೈವನಿಧಿಯೇ ಬಾರೆನ್ನಯ ಪ್ರಾಣವೇ
ಬಾರೆನ್ನೊಲ್ಮೆಯೆ ಬಾರ ತತ್ವಸುಖಮೇ ಬಾರೆನ್ನ ಮಾತಾಮಹೇ
ಬಾರೆನ್ನಾಳ್ದಳೆನುತ್ತುಮೊಲ್ದು ಕರೆದಂ ಶರ್ವಾಣಿಯಂ ಶೈಳಪಂ ೪೮

---

1 ನಿಲಿಸು, ಸ್ಥಾಪಿಸು 2 ಕೀಲಿಸು 3 ಬೆಸೆ 4 ಎರಕ ಹೊಯ್ 5 ಕೊರೆ
6 ಸೂಸು 7 ಹಿಗ್ಗು

ಇಂತು ಕರೆದ ನಿಜಜನಕಜನಿತ ಸ್ನೇಹರಸಾರ್ದ್ರ ಮಧುರಾಕ್ಷರ ಸಮ್ಮಿಳಿತ ಸಾತ್ವಿಕರಸಮಂ ಕೇಳ್ದು, ಪುತ್ರೀಭಾವಮಂ ನಟಿಸಲೆಂದು, ಶಿವಲಿಂಗಮಂ ಬೀಳ್ಕೊಂಡು, ತಿರುಗಿ ನೋಡಿ, ಬಂದು ಪಿತನನಪ್ಪಿದಾಗಳ್ ಗಿರಿರಾಜಂ ಮೂರ್ಧ್ನಾಘ್ರಾಣಂ ಬೆರಸು ಅಗಲದಪ್ಪಿದಂ.

ಸುತ್ತಿದ ಪರಮಸ್ನೇಹದೆ
ಮತ್ತಂ ಮತ್ತಪ್ಪಿ ಪುಳಕಿಸುತ್ತುಂ ಪುಟವೇ
ಱುತ್ತುಂ ಪೊಣ್ಮುತ್ತುಂ ನಲಿ
ಯುತ್ತೆ ಗಜಾರೂಢನಾಗುತುಂ ಗಿರಿರಾಜಂ

ತನೂಜೆ ಸಹಿತ ಪುರಕ್ಕೆ (ಬಂದು) ಸಿಂಹವಿಷ್ಟರಸ್ಥಿತನಾ (ಗಿರಲ್) ಮೇನೆ ನಡೆತಂದು ಭವಾನಿಯಂ ನಿರೀಕ್ಷಿಸುತುಂ

ಏನೆನ್ನಾಯುವೆ ಎನ್ನಪಾರಸುಖವೇ ಏನೆನ್ನ ಪುಣ್ಯಾಬ್ಧಿಯೇ
ಏನೆನ್ನುತ್ಸವಮೇ ವಿಳಾಸನಿಧಿಯೇ ಏನೆನ್ನ ಸೌಂದರ್ಯಮೇ
ನಾನಾಪರ್ವತದೊಳ್ ವನಪ್ರಕರದೊಳ್ ಸಂಪೂರ್ಣಕಾಸಾರದೊಳ್
ನೀನೇಕಿಂತಿರಲೇಕೆ ತಾಯೆ ಎನುತುಂ ಬಂದಪ್ಪಿಕೊಂಡಪ್ಪಿದಳ್ ೫೦

# ೨. ಗಿರಿಜಾವಧೂ ನಿತ್ಯಶಿವಾರ್ಚನೆ

ಶಿವಶಿವ ನಳನಳಿಸುವ ಶೈ-
ಶವದೊಳ್ ಬಳೆಯುತ್ತುಮಿರ್ಪ ಗಿರಿಜೆಗೆ ರೂಪೋ-
ತ್ಸವದೊಡನೆ ಮೆಱೆವ ದಶವ-
ರ್ಷವದಾಯ್ತು[1] ಲಗ್ಗಣೆಗೆ [2] ಕೂರ್ಪು ಕೂಡುವ ತೆಱದಿಂ. ೧

ಇಂತಾಗೆ ಮೇನೆಯುಂ ತತ್ಕಾಂತನುಂ ತನುಜೆಯಂ ಮನದಿಂ ತೂಪಿಱಿಯುತ್ತೆ ತಮ್ಮೊಳಿಂತೆಂದರ್ :

[3] ಅನವದ್ಯಂ ಚರಿತಂ, ಮು
ನ್ನಿನ ಪರಿ ತಾನಲ್ಲ, ಬಾಲ್ಯಮೀಪೋದುದೆ, ಯೌ
ವನಮೀಸಾರ್ದುದೆ, ಬಣ್ಣಿಸು-
ವನ ಜಾಣ್ಮೆಗತರ್ಕ್ಯಮತುಳಮನುಪಮಮಧಿಕಂ. ೨

ಎಂದಿಂತು ಮಗಳ ವಯಸ್ಸಂಧಿಯಂ ವಯಃಪರಿಣತರಪ್ಪ ಮಾತಾಪಿತೃಗಳ್ ಬಣ್ಣಿಸುತಿರ್ಪಿನಂ ಅನುಕ್ರಮದಿಂ ಪಲಕೆಲವು ದಿನಕ್ಕೆ ಪಾರ್ವತಿಯಂ ನವಯೌವನಂ ಸಾರ್ವಲ್ಲಿ,

ಮನದಾಸೆ ವದನದೊಳ್, ಲೋ-
ಚನದೊಳ್ ನುಡಿ, ನಗೆ ಕಪೋಳದೊಳ್, ಕೋಪಂ ಪು-
ರ್ಬಿನೊಳಱಿವು ಬುದ್ಧಿಯೊಳ್, ಭಾ-
ವನೆ ಚಿತ್ರದೊಳಮರ್ದುವಂಬಿಕೆಗೆ ಯೌವನದೊಳ್ ೩

---

1 ಹೂಡಾಣ  2 ಹರಿತ  3 ನಿಷ್ಕಳಂಕ

ಈ ರೂಪಿಂಗೀ ಯೌವನ-
ಕೀ ರಮಣೀಯಾಂಗವತಿಗೆ ಮಿಗೆ ಸೌಂದರ್ಯ-
ಕ್ಕೀ ರಾಜಿಪ ಗಿರಿಜೆಯ ವಿ-
ಸ್ತಾರಕ್ಕಂ ವರನನಿಂದುಧರನೇ ಬಲ್ಲಂ ೪

ಎಂದಿಂತು ನುಡಿಯುತ್ತೆ ಶರ್ವಾಣಿಯ ರೂಪಾತಿಶಯಕ್ಕೆ ಬೆಱಗಾಗಿ ಮೇನೆಯ ತಪಕ್ಕೆ ದಾಕ್ಷಾಯಣಿ ಕರುಣಿಸಿ ಬಂದಳೆಂಬುದನತ್ಯಾಶ್ಚರ್ಯದಿಂ ಮಱೆದು,

ತಿಳಿಯದೆ ಮೇನಾಸತಿಯುಮ
ಚಳಪತಿಯುಂ ಚಿಂತಿಸುತ್ತುಮಿರೆಯಿರೆ, ತೋಱಿ-
ತ್ತಳವಲ್ಲದೆ ನಳನಳಿಸುತೆ
ತಳತಳಿಸುತೆ ಪೊಳೆದು ಬಳೆವ ಬೆಳಗಾಗಸದೊಳ್ ೫

ಆ ಬೆಳಗಿನೊಳಗೆ

ಅಮೃತಮಯೂಖ ಮಂಡಲದಿನೇೞ್ತರುತಿರ್ಪ ಶಶಾಂಕಮೂರ್ತಿಯೋ,
ಅಮರನದೀಪ್ರವಾಹದೊಳಗಿಂದೊಗೆತರ್ಪ ವಿಶಾಲಪುಣ್ಯಮೋ,
ಪ್ರಮುದಿತಶೈವಕೀರ್ತಿ ಬರುತಿರ್ದಪುದೋ, ಎನೆ ಬಂದನಳ್ಕಱಿಂ
ವಿಮಳವಿಶಾರದಂ ಘನಶರದ್ಘನ ಸನ್ನಿಭನೊಲ್ದು ನಾರದಂ ೬

ಬರೆ ಗಿರಿಪತಿಯುಂ ಸತಿಯುಂ
ವರ ಮುನಿಗತಿವಿನತರಾಗಿ, ಭದ್ರಾಸನದೊಳ್
ಭರದಿಂ ಕುಳ್ಳಿರಿಸುತ್ತುಂ,
ಚರಣಂದೊಳೆಯುತ್ತೆ ತೀರ್ಥಜಳಮಂ [1]ತಳೆದರ್ ೭

ಗುರುಮೂರ್ತಿ ಶೈವನಿಧಿ ಶಂ-
ಕರಮೂರ್ತಿ ಕೃಪಾಪರೈಕ ವರಶಾಂತಿಸುಧಾ
ಕರಮೂರ್ತಿ ದೇವ ನಿಮ್ಮಯ
ಬರವಿಂದೆ ಕೃತಾರ್ಥರಾದೆವೆಂದಿಂತೆಂದರ್ ೮

1 ಧರಿಸು, ಚಿಮುಕಿಸು

ಬರವೆಂತಾದುದು ನಾಕಲೋಕಸುಖಮುಂ ಬಿಟ್ಟೀ ಧರಾಮಂಡಲ-
ಕ್ಕಿರದಿಂದೆಮ್ಮಯ ಪುಣ್ಯವೆಮ್ಮ ಜನನಂ ಸಾಫಲ್ಯವೆಮ್ಮಿಂದೆ ವಿ-
ಸ್ತರ ಸೌಖ್ಯಾಕರರಾರೆನುತ್ತೆ ನಲವಿಂ ಬಿನ್ನಯ್ಸುತಿರ್ಪನ್ನೆಗಂ
ಬರುತಿರ್ದಳ್ ಗಿರಿಜಾತೆ ಷೋಡಶ ಸಹಸ್ರ ಸ್ತ್ರೀ ಪರಿಸ್ಪಂದದೊಳ್ ೯

ಇದು ವಿದ್ಯುನ್ಮಾಲೆಯೋ, ಚಂದ್ರಮನ ಕಮನಪೀಯೂಷದೀಪ್ತಿ
ಸ್ವರೂಪೋ,
ಮದನಾಸ್ತ್ರವ್ರಾತಮೋ, ನೂತನವನಲತಿಕಾನೀಕಮೋ, ನಾಕಲೋಕಾ-
ಸ್ಪದ ನಾರೀಕ್ಷೀರವಾರಾಶಿಯೋ, ಸುರುಚಿರಸೌಂದರ್ಯಸಂಘಾತಮೋ, ನೋ-
ಡಿದು ತಾನೆಂಬಂತೆ ತೀವಿರ್ದಬಲೆಯರೊಳಗಿರ್ದಂಬಿಕಾಕಾಂತೆ ಬಂದಳ್
೧೦

ಕಂಡಷ್ಟಾಂಗ ಪ್ರಣಾಮಂ ಬೆರಸು, ಹರಿಸದಿಂ ನಾರದಂ ಭೀತಿಯಂ ಕೆಯ್-
ಕೊಂಡಿಷ್ಟಾರ್ಥಪ್ರದೈಕಪ್ರಭೆಗೆ ವಿಭವದಿಂದಂ ನವಾಶ್ಚರ್ಯಪೂರ್ವಂ
ಕಂಡೇಳ್ವಾನಂದ ರೋಮಾಂಚದ ಪೊದಕೆಗಳಂ ತಾಳ್ದು ನಿಂದಿರ್ದು
ತಾಯೇ
ಚಂಡಾಂಶುವ್ರಾತ ತೇಜೋನಿಧಿ ಶರಣೆನುತುಂ ಸ್ತೋತ್ರಮಂ
ಮಾಡುತಿರ್ದಂ ೧೧

ಇಂತಾರ್ತದಿಂ ಸ್ತೋತ್ರಂಗೆಯ್ಯೆ ಕೇಳ್ದು, ಕೌತುಕಂದಾಳ್ದು, ಗಿರಿರಾಜನುಂ ಮೇನೆಯುಮಿರ್ದು, ಎಲೆಲೆ ಮುನೀಂದ್ರಾ, ನಿಮ್ಮಡಿಗಳ[1] ನೊಚ್ಚತಂಗೊಂಡುಚ್ಚಾಸನದೊಳಿರಿಸಿ ಪಾದೋದಕಮನಾದರದಿಂ ಕೊಂಡು ಅತಿ ಹರ್ಷದಿಂ ಕೃತಾರ್ಥರಾದೆವಲ್ಲದೆ ಎಮ್ಮ ಮಗಳ್ಗೆ ನಿಮ್ಮಡಿಗಳ್ ವಂದನೆಗೆಯ್ವುದತ್ಯಾಶ್ಚರ್ಯವೆಂದು ಅಜ್ಞಾನದಿಂ ನುಡಿಯೆ, ದಿವ್ಯಜ್ಞಾನಿ ನಾರದಂ ನಸುನಗುತ್ತುಮಿಂತೆಂದಂ :

---

1 ಹಿಗ್ಗಿನಿಂದ ಜೋಡಿಸು

ಸೆವದಿಂದಂ ನಿಮ್ಮ ಪುಣ್ಯೋದರದೊಳೊಗೆದೊಡೀ ಬಾಲೆಯಂ ಪುತ್ರಿಯೆಂಬೊಂದವಿಚಾರಂ ಬೇಡ, ನೀವೇ ಜನನಿಜನಕರಲ್ಲಲ್ಲವಂತಿರ್ಕೆ, ತಾಯೇ, ನವರತ್ನಕ್ಕಬ್ಧಿ, ಚಿಂತಾಮಣಿಗೆ [1]ವೊರಡಿ, ಮುತ್ತಿಂಗೆ [2]ಸಿಂಪಿಂದುವಿಂಗಂ ರವಿಗಂ ಪೂರ್ವಾಶೆ, ಲಿಂಗಕ್ಕವನಿ, ಸುಧೆಗೆ ದುಗ್ಧಾಬ್ಧಿ, ಪದ್ಮಕ್ಕೆ ಪಂಕಂ ೧೨

ದಕ್ಷನ ಶಿವನಿಂದೆಗೆ ಕಮ-
ಲಾಕ್ಷಿ ಮಹಾದೇವಿ ಸೆಡೆಮ ನಿಜಯೋಗದೊಳಿಂ-
ತಕ್ಷಯನಿಧಿ ಮೇನೆಗೆ ಕರು-
ಣೇಕ್ಷಣೆಯಾಗುತ್ತೆ ಬಂದುದಂ ಭಾವಿಸಿರೇ ೧೩

ಅದು ಕಾರಣದಿಂ ಮುನ್ನಮೆ
ಮೊದಲಿಂ ಹರನರಸಿ ಗಿರಿಶನರ್ಧಾಂಗಿ ವರ-
ಪ್ರದೆ ವರನೀಶ್ವರನೀಕೆಗೆ,
ಮುದದಿಂ ಶಿವನಲ್ಲಿಗಿರದೆ ಕಳಿಪುವುಮುಚಿತಂ ೧೪

ಗಿರಿಸುತೆ ಬಳಿವನ್ನೆವರಂ
ಹರನಿರ್ವಪನೊಲ್ದು ಹೇಮಕೂಟಸ್ಥಳದೊಳ್
ಪರಿಪೂರ್ಣಪರಂಜ್ಯೋತಿ
ಸ್ವರೂಪ ನಿಜಯೋಗ ಭೋಗರಾಗೋನ್ನತಿಯಿಂ ೧೫

ನಿನಗಱಪಲ್ ಬಂದೆಂ ಶ-
ರ್ವನ ವಧು ಶರ್ವಾಣಿಯೆಂದು, ನಗಜೆಯ ನಗರಾ-
ಜನೆ ಕೇಳ್ ಭರದಿಂ ಕೈಲಾ-
ಸನಗಕ್ಕಾಂ ಪೋಪೆನೆಂದು ನಾರದನೆಂದಂ ೧೬

---

1 ಚಿಕ್ಕ ಗುಡ್ಡ  2 ಚಿಪ್ಪು

ಎನೆ ಕೇಳ್ದು ಶೈಳರಾಜಂ
ವಿನಯಂ ಬೆರಸಗಜೆಗಂದು ಕೆಯ್ಮುಗಿಯುತ್ತುಂ,
ಮನದೊಳ್ ಬೆಱಗಾಗುತ್ತುಂ,
ಘನಶೈವಾಂಬುನಿಧಿಗೆ ನಾರದಂಗಿಂತೆಂದಂ ೧೭

ನೀವೆಂದಂತೆ ಭವಾನಿಯಂ ಮಱೆದು ಪುತ್ರೀಭಾವಮಂ ತಾಳ್ದಿವಿ-
ನ್ನೀವೇಳ್ವಿಂ, ಮರುಳಾಗುತಿರ್ದೆಮಗೆ ನಿಮ್ಮಾ ಬೋಧೆಯಿಂ ಜ್ಞಾನಸ-
ದ್ಭಾವಂ ಪುಟ್ಟಿದುದಿಂಪಿನಿಂ ಪರಸುತುಂ ಪಂಪಾವಿರೂಪಾಕ್ಷ ನಿ-
ರ್ವಾಸಕ್ತಿರದುಯ್ದು ತೋಱಿದಪೆನೀ ಶರ್ವಾಣಿಯಂ ಜಾಣೆಯಂ ೧೮

ಎಂದು ನಾರದಮುನಿಯಂ ನಾಕಲೋಕಕ್ಕೆ ಕಳಿಪಿ, ಆ ದಿವ್ಯಜ್ಞಾನಿ ಪೇಳ್ದ ಅತಿಹಿತ ವಚನಮಂ ಚಿಂತಿಸುತ್ತ, ಶಿವಸುಖಲತೆಯಂ ನಿಜ ಸುತೆಯಂ ಕರೆದೊಡೆ, ಮಹಾದೇವಿ ತಂದೆಯ ಮುಂದೆ ಬಂದು ನಿಂದಿರ್ದಾಗಳ್,

ಪದೆಪಿಂದಂ ಬಂದು ಮೇನಾಸತಿ ನಿಜಸುತೆಯಂ ನೋಡಿ ಮುಂಡಾಡಿ, ದೇವೀ,
ಸದಳಂಕಾರೈಕಪಾತ್ರೀ ಪುಲಿ ಕರಡಿ ಮಹಾಸರ್ಪ[1]ನಮ್ಮಾವು ಸಿಂಹಂ
ಮದವನ್ಮಾತಂಗನುಗ್ರುಗ್ರಹವಿಡಿದ ಬಿದಿರ್ಬೆತ್ತವುಂಟಲ್ಲಿ, ತಾಯೇ,
[2]ಪದುಳಂ ಪೋಗಪ್ಪ ಪೋಗೆಂದತಿಭಯರಸದಿಂ ಬುದ್ಧಿವೇಳುತ್ತುಮಿರ್ದಳ್ ೧೯

ಎಂದಿಂತು ಪೇಳೆ ಕೇಳ್ದು ಮನದೊಳ್ ನಸುನಗುತ್ತುಂ ಮಾತೆಯ ಮಾತಿಗೊಡಂಬಟ್ಟು, ವಿನಮಿತೆಯಾದ ಪಾರ್ವತಿಯಂ ಪರ್ವತರಾಜಂ ಪುಷ್ಪಕದೊಳ್ ಬಿಜಯಂಗೆಯ್ಸಿ ತಾನುಂ ಕುಳ್ಳಿರ್ದು, ಪಿಂದಣ ವಿಮಾನಂಗಳೊಳ್ ಜಯೆವಿಜಯೆಯೆನಿಪ್ಪಿರ್ವರಂ ಬರಲ್ವೇಳ್ದು, ಗಗನಕ್ಕೆ ನೆಗೆದು ಮೀಱಿ ಪಾಱಿ ತ್ರ್ಯಕ್ಷನಂ ನೆನೆದು ದಕ್ಷಿಣಾಭಿಮುಖನಾಗಿ ನಡೆತರ್ಪಾಗಳ್

1 ಹಾಡುಹಸು 2 ಕ್ಷೇಮ, ಜತನ

ಪಲವುಂ ದೇಶಂಗಳಂ ಭಾಸುರ ನಗರಿಗಳಂ ತತ್ತಟಾಕಂಗಳಂ ನಿಶ್ಚಲಕೇದಾರಂಗಳಂ ಪರ್ವತವಿತತಿಗಳಂ ವಿಂಧ್ಯಸಂದೋಹಮಂ ನಿರ್ಮಲ[1]ಕಾಸಾರಂಗಳಂ ತಾವರೆಗಳನಳಿಯಂ ಹಂಸಮಾಲಾ ವಿಳಾಸೋಜ್ಜ್ವಲಮಂ ನೋಡುತ್ತೆ ತೋಱುತ್ತಗಜೆಗೆ ನಗನಾಥಂ ಬರುತ್ತಿರ್ದನಾಗಳ್ ೨೦

ತರಳತರಂಗಮುದ್ರೆಯನನೇಕಮುನೀಂದ್ರಮನಸ್ಸುಭದ್ರೆಯಂ,
ಪರಮಸುಧಾರಸಾರ್ದ್ರೆಯನಪಾರಗಭೀರಸಮುದ್ರೆಯಂ, ಪರಾ
ಪರಸುಖನಿದ್ರೆಯಂ ದುರಿತಮಾಲೆಗುಪದ್ರೆಯನತ್ಯನೂನ ವಿ
ಸ್ತರಸುಕೃತಾರ್ಥೆಯಂ ನೆಱೆ ನಿರೀಕ್ಷಿಸು, ಪಾರ್ವತಿ, ತುಂಗಭದ್ರೆಯಂ ೨೧

ಎಂದು ಪೇಳುತ್ತುಂ ತೋಱುತ್ತುಂ ಬರೆವರೆ ಮುಂತನಂತಗುಲ್ಮಲತಾವೃಕ್ಷ ಗುಹಾಗಹ್ವರಂಗಳೊಳ್ ಶಿವಧ್ಯಾನ ನಾನಾತಪೋಭರಭರಿತಮಾದ ಮನುಮುನಿಸ್ತೋಮದಿಂ ಹೇಮಕೂಟಾಚಳ ಪ್ರಾಂತಮಿರ್ದುದು.

ಅಲ್ಲಿ,

ಗಣ್ಯಾತೀತರ್ ಶಿವಲಾ
ವಣ್ಯದೆ ಸರ್ವಾಂಗ ಭಸಿತದಿಂ ನರೆಯಿಂ ಕಾ
ರುಣ್ಯಾದಿನತಿಧವಲಿಮದಿಂ
ಪುಣ್ಯಂ ಪಣ್ಣಾದ ತೆಱದೆ ತಾಪಸರಿರ್ಪರ್ ೨೨

ಕರೆಯವು ಕೋಕಿಲೆ, ಮಧುಪಂ
ಮೊರೆಯವು ಗಿಳಿ [2]ಗಳಪವನಿಲನಲ್ಲಾಡಂ ಪೆ
ರ್ಮರನಂ ಗಿಡುವಂ ಲತೆಯಂ
ಗುರುಶರ್ವ ಸಮಾಧಿಭೀತಿಯಿಂದಾ ನಗದೊಳ್ ೨೩

ಅಂತವರನೀಕ್ಷಿಸುತ್ತುಂ ಬರೆವರೆ ಮುಂದೆ

---

1 ಕೊಳ 2 ನುಡಿ, ಹರಟು

ಭಾನುಪ್ರದ್ಯೋತಕಾಯಂ ನುತಸುಕೃತನಿಕಾಯಂ ವಿಮಾಯಂ, ಮಹೇಶ
ಧ್ಯಾನಾರೂಢಂ ಸಗಾಢಂ ಸವಮಳಗುಣಚೂಡಂ ಶಿವಜ್ಞಾನಲೀಢಂ
ಶ್ರೀನಂದೀಶಂ ಸುವೇಶಂ ಸುರುಚಿರಸುಖಸಾಕಾರಸಾರಂ ಸುಧೀರಂ
ಸಾನಂದಂ ಕಾದುನಿಂದಂ ಗಿರಿಶಿಖರಮುಖದ್ವಾರಮಂ ಭಕ್ತಿಯಿಂದಂ ೨೪

ಅಂತಿರ್ದ ನಂದಿನಾಥಂ
ಮುಂತಿವಿರ್ದ್ವಂದಗಜೆಗೆಜಿಗಿ [1]ಹೆರಸಾರ್ದೊಲವಿಂ
ದಂ ತಾಯೆ ದೇವಿ ಶಾಂತೆ ಅ
ನಂತಗುಣಾಭರಣೆ ಕರುಣೆ ಶರಣೆನುತಿರ್ದಂ ೨೫

ತೊಳಗುವ ಶಾರದ [2]ನೀರದ
ದೊಳಗಿಂ ಮಿಂಚಿಳಿವ ತೆಜದೆ ಗಿರಿಸುತೆ ಶಶಿಮಂ
ಡಳದಧಿದೇವತೆ ಧರಣೀ
ತಳಕ್ಕೆ ಬರ್ಪಂತೆ ಪುಷ್ಪಕದಿನಿಳಿತಂದಳ್ ೨೬

ಒಡನಿಳಿದಂ ಗಿರಿರಾಜಂ ;
ತಡವಿಲ್ಲದೆ ಭೋಂಕನಿಳಿದು ಜಯೆವಿಜಯೆಗಳಾ
ಗಡೆ ನವರತ್ನದ [3]ಪಾವುಗೆ
ಯಿಡೆ ಮೆಟ್ಟಿವಳಗಜೆ, ಮುಟ್ಟಿದಳ್ ಶಿವನೊಲವಂ ೨೭

ಗಿರಿರಾಜಂ ಕೈಗುಡೆ, [4]ನೇ
ವುರವ ಕಳಧ್ವಾನವೊಗೆದು ನಗನುಂ ಜಗಮುಂ
ಪರಿವೇಷ್ಟಿಸೆ, ಬರುತಿರ್ದಳ್
ಪರಮೇಶ್ವರಿ ಚಂದ್ರಧರನನೀಕ್ಷಿಪ ಭರದಿಂ ೨೮

ಅಂತು ಬರೆವರೆ,

ಇದು ವಿದ್ಯುತ್ ಪ್ರಭಾಪ್ರಸರಮೋ, ಸಂಪೂರ್ಣಚಂದ್ರಾಂಶು ಸಂ
ಪದಮೋ, ಶಾಶ್ವತಸೂರ್ಯಕೋಟಿರುಚಿರ ಪ್ರದ್ಯೋತಮೋ, ಮಾಣಿ ಸ್ಫೋ

1 ಹಿಂದಕ್ಕೆ ಸರಿ 2 ಮುಗಿಲು 3 ಪಾದುಕೆ 4 ಕಾಲಂದುಗೆ

ಣ್ಮಿದ ಸರ್ವೇಶ ನಿಜಪ್ರಕಾಶನಿಧಿಯೋ, ಪೇಳೆಂಬಿನಂ ತೋಱುತಿ
ರ್ದುದು ದಿಕ್ಸಂಕುಳ ನಿರ್ಮಳೀಕೃತ ವಿರೂಪಾಕ್ಷ ಪ್ರಭಾಮಂಡಲಂ ೨೯

ಆ ಪ್ರಭಾಮಂಡಲದೊಳಗೆ

ವಿಳಸತ್ಪದ್ಮಾಸನಂ ಭಾಸುರಭಸಿತವಪುರ್ವಲ್ಕಲಂ, ಧ್ಯಾನಮುದ್ರಾಂ
ಗುಳಿ, ರುದ್ರಾಕ್ಷಾಕ್ಷಮಾಲಾರುಚಿನಳಿನಗುಣವ್ರಾತ ಯಜ್ಞೋಪವೀತಂ,
ಲಳಿತಾಸ್ಯಂ, ಸ್ನಿಗ್ಧಗಂಡಂ, ಮುಕುಳಿತನಯನಂ, ಚಿತ್ರನಿಷ್ಕಂಪನಂ, ಪಿಂ
ಗಳವರ್ಣೋದ್ಯಜ್ಜಟಾಮಂಡಲಮೆಸೆಯೆ ತಪೋವೇಷದಿಂದೀಶನಿರ್ದಂ. ೩೦

ಮನವೆಂತುಂ ಬುದ್ಧಿಯೊಳ್, ಬುದ್ಧಿಯ ನಿಲವದಹಂಕಾರದೊಳ್ ತಾ
ನಹಂಕಾ-
ರ ನಿಜಂ ಚಿತ್ತಾಂತದೊಳ್, ಚಿತ್ತದನೆಲೆ ವಿಲಸತ್ಪ್ರಾಣದೊಳ್,
ಪ್ರಾಣಮುಂ ಜೀ-
ವನೊ[1]ಳಾದಂ ಕೂಡೆ ಜೀವಂ ಪರಮನೆನಿಸಿ ನಿರ್ಮಾಯ
ನಿಷ್ಕಾಮಿನಿಷ್ಕಂ-
ಪ ನಿವಾತಜ್ಯೋತಿರೂಪಂ ನಿರುಪಮನೆನಿಸಿರ್ದಂ ವಿರೂಪಾಕ್ಷಲಿಂಗಂ ೩೧

ಭಿನ್ನಾಭಿನ್ನಜ್ಞಾನಮ
ಯಂ, ನಿಜತೇಜೋ ವಿಲೀನಮಾನಸನಚಲಂ,
ತನ್ನಂ ತಾನೇ ಜಾನಿಪ
[2]ಬಿನ್ನಣದೊಳಗಿರ್ದನಭವನದ್ವಯರೂಪಂ ೩೨

ಮಾತಿನ[3]ವೇಧೆಯ ಬೋಧೆಯ
ಭೂತಾದಿಯ ಪಂಚವಿಂಶತಿಗಳಂ ಮೀಱಿ
ಜ್ಞಾತೃಜ್ಞಾನಜ್ಞೇಯ
ವ್ರಾತಮನಳಿದುಳಿದು ತಾನೆ ತಾನಾಗಿರ್ದಂ ೩೩

---

1 ಚೆನ್ನಾಗಿ, ಹೆಚ್ಚಾಗಿ 2 ವಿಶೇಷವಾದ ಜ್ಞಾನ 3 ಮಾತುಗಳ ಎಲ್ಲೆ ಕಟ್ಟು

ಪೊಱಗಂ ಬಳಸದ ಮಾಯೆಗೆ
[1]ತೆಱಹಂಗುಡದಚ್ಚಬಚ್ಚಬಱಿಯಱುವಿನ ಸ್ಫೈ-
ವೆಱಗಿನ ಮಱಹಿನ ಕುಱುಹಿನ
ಕಱ್ಗೊರಲಂ ನಿಜಸಮಾಧಿಯೊಳ್ ಸಂದಿರ್ದಂ ೩೪

ಇರೆ ಕಾಣುತೆ ಗಿರಿರಾಜಂ
ಪರಮಸುಖಂಬಡೆದು ಪಿಡಿದು ಮೆಲ್ಲಡಿಯಂ ಸಾ-
ದರದಿಂ ಹರ್ಷಂ ಮೂಡು
ತ್ತಿರೆ ಪುಳಕದ ಮೆಯ್ಯೊಳೊಲ್ದು [2]ಮೆಯ್ಯಿಕ್ಕಿರ್ದಂ ೩೫

ಅಂತು ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ಹರನ ಪರತತ್ತ್ವಮಯ ಸೌಂದರ್ಯರೂಪಮುಂ ನಿಷ್ಕಂಪನಿವಾತಜ್ಯೋತಿರೂಪಮುಂ ಗಿರಿಜೆಗೆ ತೋಱುತ್ತುಂ ಪೊಡೆಮಡು ಪೊಡೆಮಡೆನೆ, ಪಾರ್ವತೀದೇವಿಗೆ ಕೌತುಕರಸದೊಳಾನಂದಂ ಪುಟ್ಟೆ, ಭಯರಸದೊಳ್ ಭಕ್ತಿಯುಣ್ಮೆ, ಸ್ನೇಹರಸದೊಳ್ ತಾತ್ಪರ್ಯಂ ಪೊಣ್ಮೆ, ಶೃಂಗಾರರಸದೊಳ್ ಲಜ್ಜೆವೆರಸಿ, ಕಲ್ಪತರುವಿನ ಬೀಳಲ್ ಮಹಾನಿಧಾನಕ್ಕೆಱಗುವಂತೆ, ಕುಸುಮಚಾಪಂ ಕಾಲ್ಗೆಱಗುವಂತೆ ವಿಲಾಸದಿಂದೆಡಮುಂಗುಟಮುಂ ಲಲಾಟದಿಂ ಮುಟ್ಟೆ ಪೊಡೆಮಟ್ಟು ನಿಂದು,

ಸದಮಳಮಿದೆ, ಪರತತ್ತ್ವದ
[3]ನಿದಾನಮಿದೆ, ಆವ್ಯರಱಿದು ಕುಱುಪಿಟ್ಟಾನಂ
ದದ ಮೊದಲಿದೆ, ಪರಮಾರ್ಥದ
ತುದಿಯಿದೆ, ಗಿರಿಜಾತೆ ನೋಡು, ನೆನೆ ಹೊಗಳೆಂದಂ ೩೬

ಆನಿರ್ವಂತಿರದೇಕೆ ಬೇಡ ತಪವೆಂದೆಂಬಂತಹಂಕಾರದಿಂ,
ನೀನೇ ಸದ್ಗತಿ ದೇವದೇವ ದಯೆಗೆಯ್ಯೆಂಬಂತೆ [4]ಕಾರ್ಪಣ್ಯದಿಂ,
ಸಾನಂದಾತ್ಮಕನೆನ್ನನೇಕಱಿವನೆಂದೆಂಬಂತೆ ನಿರ್ವೇದದಿಂ,
ನಾನಾಭೋಗದೊಳೆಂದು ಕೂಡಿವಪೆನೆಂಬಂತಾಸೆಯಿಂ ನೋಡಿದಳ್ ೩೭

1 ಅವಕಾಶ. 2 ನಮಸ್ಕರಿಸು 3 ಮೂಲ 4 ದೈನ್ಯ

ಶಿವನೀತಂ ನಿಜವಲ್ಲಭಂ, ಮನುಗುರು ಪ್ರಖ್ಯಾತನತ್ಯೂರ್ಜಿತಂ,
ಭವನೆನ್ನಾಳ್ದನೆನಿಪ್ಪುದಂ ತಿಳಿದೆನಾಂ, ನೀಂ ಪೋಗು; ನಿತ್ಯಾರ್ಚನೋ
ತ್ಸವದಿಂ ಸಂತಸದಿಂ ಸದಾತುರತೆಯಿಂ ಸಾನಂದದಿಂದಿರ್ಪೆನೆಂ-
ದು ವಿಳಾಸಾಬ್ಧಿ ಭವಾನಿ ನೋಡಿ ನುಡಿದಳ್ ಭೂಭೃತ್ಕುಲಾಧೀಶನೊಳ್ ೩೮

ನುಡಿಯೆ ಗಿರಿರಾಜನೊಲವಿಂ
ಮೃಡಾಣಿಯಂ ನೋಡಿ, ಮಗಳೆ ಮಾತೆ, ಕರಂ ನ-
ಟ್ಟಡವಿ ಗುಹೆಗಹ್ವರಂ ಮಡು
ಗಿಡುವಿವಱೊಳ್ ಪದುಳಮಿರ್ಪ್ಪಿಸೆನುತುಂ ನುಡಿದಂ ೩೯

ಪತ್ತುಡಿಯಿಟ್ಟತಿಮೋಹಂ
ಚಿತ್ತಮನ[1]ಳ್ಪಿಱಿಯೆ, ತಿರುಗಿ ಬಂದು, ಗಿರಿಜೆ ಲೋ-
ಕೋತ್ತಮೆ ಪೋದಪೆನೆನುತುಂ
ಮುತ್ತಂ ಮತ್ತಪ್ಪಿ ಪರಸಿ ಗಿರಿಪತಿ ಪೋದಂ ೪೦

ಅಂತು ಪೋಗೆ ಚಿಂತಿಸಿ ನೋಡಿ ಮುಂದಿರ್ದ ತಪೋಮಯನಂ ವೈರಾಗ್ಯಯುಕ್ತನಂ ಭಸಿತಕಾಯನಂ ಸೌಂದರ್ಯರೂಪನಂ ಜ್ಞಾನಪ್ರದೀಪನಂ ನಿಜಸುಖನಿವಾಸನಂ ಸ್ವಯಂಪ್ರಕಾಶನಂ ಕಂಡು, ಶೃಂಗಾರರಸಕ್ಕೆ ಮನಂದಂದು, ವೈರಾಗ್ಯರಸಕ್ಕೆ ಮೆಯ್ದೆಗೆದು ಸಹಚರಿಯರಪ್ಪ ಜಯೆ ವಿಜಯೆಗಳ್ಗೆ ನಗತನೂಜೆ ನಿರ್ವೇದದಿಂದಿಂತೆಂದಳ್:

ತಪಮಿಂತಿದು ಮದ್ವಿರಹಾ-
ತಪಮತ್ಯಧಿಕಂ ತುಡುಂಕಬಾರದಪಾರಂ;
ತಪನನತೇಜಕ್ಕಂ [2]ವಿ-
ತ್ರಪನಱವಿಂಗಂ ವಿಶೇಷ ಚೋದ್ಯಮಭೇದ್ಯಂ ೪೧

ನಿಗಮಂಗಳ್ ವಿಷ್ಣುವಿರಿಂ-
ಚಿಗಳಱಯದ ಶಿವನನಱವೊಡೆ[3]ನ್ನಳವೇ; ತಾಂ

1 ವ್ಯಾಪಿಸು, ಒತ್ತು 2 ಜ್ಞಾನತಪಸ್ವಿ 3 ಸಾಧ್ಯ, ಸಾಮರ್ಥ್ಯ

ಬಗೆವೊಡೆ ಸಾತ್ತ್ವಿಕ ಶಿವಭ-
ಕ್ತಿಗಲ್ಲದಭವಂ ಸಮಂತು ಸಿಲ್ಕಂ ನಿಲ್ಕಂ ೪೨

ಅದು ಕಾರಣದಿಂ ಭಕ್ತಿ
ಪ್ರದನ ವಿರೂಪಾಕ್ಷನಂಘ್ರಿಗಳನರ್ಚಿಸುವೆಂ ;
ಸದಮಳ ಶಿವಸುಖ ಮುಖಸಂ ೪೩
ಪದದೊಳ್ ಬಳಿಕಿರ್ಪೆನಪ್ಪಿ ಶರ್ವನ ತನುವಂ

ಎಂದಬಲೆಯರೊಳ್ ನುಡಿಯು-
ತ್ತುಂ ದಟ್ಟಡಿಯಿಟ್ಟು, ಭಕ್ತಿ ತನ್ಮಯೆ ಮನಮಂ
ಬಂದಡರೆ, ಭರಂ ಮಿಗೆ ಮುದ-
ದಿಂದಂ [1]ಪುಷ್ಪೋಪಚಯಕೆ ಗಿರಿಸುತೆ ಬಂದಳ್ ೪೪

ಎಸೆವ ರಜೋಗುಣಲಸಿತ
ಪ್ರಸನ್ನಮುಖರಾಗಯುಕ್ತೆ ಶಿವಪದಪೂಜಾ-
ವ್ಯಸನೆ ಶಶಿವದನೆ [2]ತಿಱಿದಳ್
ಪೊಸ ಹರಿಸಮನಾಂತು ಶಾಂತೆ ಸೇವಂತಿಗೆಯಂ ೪೫

ಮಲ್ಲಿಗೆ ಶರ್ವನ ಜಡೆಮುಡಿ-
ಯಲ್ಲಿಗೆ ಕೊಂಡೊಯ್ಯಲೆಂದು ಸಮ್ಮದದಿಂ ನಿ-
ಮ್ಮಲ್ಲಿಗೆ ಬಂದೆನೆನುತ್ತುಂ
ಮಲ್ಲಿಗೆ [3]ಯಲರ್ದೊಂಗಲಂ ಮಹೇಶ್ವರಿ ಕೊಯ್ದಳ್ ೪೬

ನಲವಿಂದಂ ಮುಡಿವಾಳದ
ನೆಲೆಗೆಯ್ತುಂದಗತನೂಜೆ ಬೇರಂ ಬಲ್ಲ-
ರ್ಗಲೆದೋಱಲೇಕೆ ನೀನೆನು-
ತೊಲವಿಂ ಪರಿಮಳದ ಬೇರ್ಗಳಂ ಬರೆತೆಗೆದಳ್ ೪೭

---

1 ಹೂತಿರಿಯಲು, ಪುಷ್ಪಸಂಗ್ರಹಣ  2 ಹೂ ಎತ್ತು  3 ಹೂಗೊಂಚಲು

ಇಂತಿಂತನಂತಕಾಂತಲ-
ತಾಂತಂಗಳನಾಯ್ದು ಕೊಯ್ದು, ಸಂತಸದಿಂದಂ
ಮುಂತೆ ನವಾಂಕುರ ಕಿಸಲಯ-
ದಿಂ ತೀವಿದ ಬಾಲಚೂತದೆಡೆಗೆಯ್ತಂದಳ್ ೪೮

ಒಡನೆ ಜಯೆ ವಿಜಯೆಗಳ್ ಮೆಲ್ಲಡಿಯಿಡುತುಂ ಬಂದು ಬಾಲ ಸಹಕಾರ ತಳದೊಳ್ ಹರಿತ ಭೂಮಿಕೆಯೊಳ್ ಸುರುಚಿರ ಮರೀಚಿಕೆಗಳ್ ಅಂಕುರಿಸಿತೆಂಬಂತೆ ನಳನಳಿಸಿ ಬೆಳೆದ ಪೊಸ[1]ಪಸಲೆಯ ಮೇಲೆ ಕದಳೀ ದಳಂಗಳಂ, ಕಮಲಪತ್ರಂಗಳಂ, ನುಣ್ಪೆಳಗಂ ಕಱಿವ ಪೊಂಬಾಳೆಯ ಪತ್ರಂಗಳನಿಂಬಿನಿಂ ಪಾಸುತ್ತುಂ, ಕುಸುಮಕುಲಮನೆಸೆಯೆ ಸುರಿದು, ಭಾಸುರದುಕೂಲದಿಂ [2]ಬಾಸಣಿಸಿ, ಶತಪತ್ರಸೂತ್ರಕುಲಮಂ ಕೆಲದೊಳಿರಿಸಿ, ಗಿರಿತನೂಜೆಗೆ ಮೆಯ್ಯಿಕ್ಕಿ ಕಯ್ಯಮುಗಿದು, 'ಇತ್ತ ಬಿಜಯಂಗೆಯ್ವುದು' ಎಂದು ಬಿನ್ನವಿಸಿ ಕೆಯ್ಗುಡೆ ಮೃದುಪದನ್ಯಾಸದಿಂ ನಡೆತಂದು ಇಕ್ಕಿದ ಮೂಂದಳಿರ ಪೊಸಹಸೆಯ ಮೇಲೆ ಕಮನೀಯದಿಂ ಕುಳ್ಳಿರ್ದಾಗಳ್,

ಪರಿಮಳದಧಿದೇವತೆಯೋ,
ವರಕುಮುದದ ಕೂಡೆ ಬಂದ ಶಶಿಕಳೆಯೋ, ವಾ
ರಿರುಹದ ನಡುವೆಯ್ತಂದಿಂ,
ದಿರೆಯೋ, ಎನೆ ದೇವಿ ಪೂವ[3]ನೋವುತ್ತಿರ್ದಳ್ ೪೯

ಅಂತೋವುತ್ತುಮಿರ್ದು,

ಮುಟ್ಟಿದೊಡಾಗಳೆ ಕಂದುವ,
ನೆಟ್ಟನೆ ನೋಡಿದೊಡೆ [4]ಕ್ಷೋಡಿ ಬಾಡುವ, ನೆನೆಯಲ್
ತೊಟ್ಟನೆ ಕೊರಗುವ, ಪೂವಂ
ಕಟ್ಟುವ ಪರಿಯೆಂತೆನುತ್ತೆ ಚಿಂತಿಸುತಿರ್ದಳ್ ೫೦

---

1 ಹಸುರು ಹುಲ್ಲು 2 ಹೊದಿಸು 3 ಮೆಚ್ಚುಗೆ ಮತ್ತು ಪ್ರೀತಿಯಿಂದ ಸ್ಪರ್ಶಿಸು 4 ಸುಕ್ಕಾಗು, ಕುಗ್ಗು.

ಅಂತು ಚಿಂತಿಸಿ ನೋಡಿ ಭಕ್ತಿಯೊಳ್ ಕೂಡಿ ಪೂಜಿಸಲ್ವೇಡಿ ಪೂವಂ ಪೂ ಸೋಂಕೆ ಕೊರಗದೆಂಬಂತೆ ತನ್ನ ಕರಕಮಲಮಂ ನೀಡಿ,

ಅತಿ ಸುಕುಮಾರಿ ಸುಖಾಕರೆ
ನುತಗುಣಗಣಯುಕ್ತೆ ಶಾಂತೆ ಸಾತ್ತ್ವಿಕರೂಪಾ-
ನ್ವಿತೆ ಸರ್ವಕಳಾನಿಧಿ ಪಾ-
ರ್ವತಿ ಸತಿ ಶತಪತ್ರಸೂತ್ರಮಂ ತೆಗೆಯುತ್ತುಂ, ೫೧

ವದನಕ್ಕಂ ಕುಸುಮಕ್ಕಂ
ಪದೆದೆಱಗುವ ಮಧುಕರಂಗಳಂ [1]ಸೋವುತ್ತುಂ,
ಮೃದುತರ ಸರಳಾಂಗುಲಿಯಿಂ
ಸದಮಲೆಯಿರವಂತಿಯರಲ ನೊಲವಿಂ ಪಿಡಿದಳ್ ೫೨

ಪಿಡಿದೆತ್ತಿ ನಳಿನ[2]ಗುಣದೊಳ್
[3]ತೊಡರ್ಚುತುಂ ಮೆಲ್ಲಮೆಲ್ಲನಿರವಂತಿಯ ಪೂ-
ದೊಡಿಗೆಗಳಂ ವಿರಚಿಸಿದಳ್
ಮೃಡಾಣಿ ಮೃಡನವಯವಕ್ಕೆ ಸಡಗರದಿಂದಂ ೫೩

ಇಂತು ಪುಷ್ಪಾವಳಿಯಿಂ ಪಲವುಂ ತೆಱದ ಬಂಧಮಂ ಸಮೆದು ಬಳಲ್ದು, ಸ್ವೇದಭರಿತಗಂಡಸ್ಥಳಿಯುಂ, ಶಿಥಿಳೀಕೃತಕರತಳೆಯುಂ ಆಗಿರ್ದ ಪಾರ್ವತಿಯಂ ಕಂಡು ಸಹಚರಿಯರ್ ಬಂದು ಪಿನಾಕಿಯ ಮನೋರಥಮಂ ಪುಣ್ಯಫಲದಿಂ [4]ಪಸದನಂಗೊಳ್ವಂತೆ, ಕುಸುಮ ಬಾಣವಂ ಪೊಸಗಂಪಿಂ ಕೂರ್ಪಿಡುವಂತೆ, ಸೌಂದರ್ಯಮಂ ಮೋಹದಿಂದೊಲ್ವಂತೆ, ಸೌಕುಮಾರ್ಯನಿಧಿಯಪ್ಪ ಶರ್ವಾಣಿಗೆ ಶೃಂಗಾರಂಗೆಯ್ದು ಅನುರಾಗದಿಂ ಕೆಯ್ಗೊಟ್ಟ ಕೆಳದಿಯರ ಕೆಯ್ಯೊಳ್ ಮೆಯ್ಯಂ ಮಲಂಗಿಸಿ ಮೆಲ್ಲಮೆಲ್ಲ ನಡೆಯಿಡುವಾಗಳ್, ಶಿವನ ಮನೋರಥಂ ಪೂರ್ತಿಗೊಂಡಂತೆ ಹರನ

1 ಆಟ್ಟು  2 ನೂಲು  3 ಪೋಣಿಸು  4 ಅಲಂಕರಿಸು.

ಮೆಚ್ಚು[1]ಹರೆಯುಂಬಡೆದಂತೆ, ಶಂಕರನ ಬಿಂಕಂ ಬಿನ್ನಣಮಾದಂತೆ, ಚಂದ್ರಕಳೆ ಕಣ್ದೆಱೆದಂತೆ, ನೆಱೆಮೆಱೆದು ನಡೆತಂದು ನಗತನೂಜೆ ಚಂದ್ರಧರನ ಮುಂದೆ ನಿಂದು,

ಇರುಳುಂ ಪಗಲುಂ ಕಾಮಂ
ತರದಿಂ ತೆಗೆದೆಚ್ಚ ಕುಸುಮಬಾಣಮಿದೆಂದಾ
ಗಿರಿಶಂಗೆ ತೋರ್ಪ ತೆಱದಿಂ
ನೆರೆಪಿವಳಭವಾಂಘ್ರಿಗಳ್ಗೆ ಪುಷ್ಪಾಂಜಲಿಯಂ ೫೪

ಸಂದಣಿಸುವ ನವನವಪುಳ
ಕಂ ದಟ್ಟಯ್ಸುತ್ತೆ ನೆಗೆಯೆ ಶಶಿಮೌಳಿಗೆ ಪೂ-
ರ್ಣೇಂದುಮುಖಿ [2]ಪೊಡೆಮಡುತ್ತಾ-
ನಂದಾಶ್ರುಗಳಿಂದೆ ಚರಣತಳಮಂ ತೊಳೆದಳ್ ೫೫

ತವತವಗೆ ಮುಂಚುವಿಂದ್ರಿಯ-
ನಿವಹಮ[3]ನೋವುತ್ತೆ ಗಿರಿಜೆ ಹರಕಂದರದೊಳ್
ನವಕುಸುಮಮಾಲೆಯಂ ಸಾ-
ರ್ಚುವ ನೆವದಿಂ ಸೋಂಕಿ ಸೋಂಕಿ ಪುಳಕಿಸುತಿರ್ದಳ್ ೫೬

ಭರದಿಂದಂ ನವಕುಸುಮಾ-
ಭರಣಂಗಳನಭವನಂಗದೊಳ್ ಸಿಂಗರಿಸು-
ತ್ತಿರಳುತ್ತುಮುರ್ಬುತೆ ಕೊರ್ಬುತೆ
ಗಿರಿಸುತೆ [4]ನಱುಸುಯ್ಯ ಧೂಪಮಂ ಪದೆದಿತ್ತಳ್ ೫೭

ಇಂತು ಸಾತ್ತ್ವಿಕಭಾವೋನ್ಮತ್ತೆ ಪಾರ್ವತಿ ಪಲವುಂ ಭೋಗಂಗಳಂ ರಾಗದಿಂ ರಾಜಮೌಳಿಗೊಲ್ದು ಪೂಜೆಯ ನೆವದಿಂ ನಿವೇದಿಸಿ, ಪುಣ್ಯಮಂ ಸೇವಿಪ ಧರ್ಮದಂತೆ, ಭಕ್ತಿಯಂ ಬಯಸುವ ಪುಣ್ಯದಂತೆ ಶಿವಜ್ಞಾನ

---

1 ಹರಡು, ವೃದ್ಧಿಸು (ಹರೆ–ಕೊಂಬೆ : ಕೊಂಬೆಯನ್ನು ಪಡೆದಂತೆ)
2 ನಮಸ್ಕರಿಸು 3 ನಿಗ್ರಹಿಸು 4 ಕಂಪುಳ್ಳ ಉಸಿರು

ಮ[1]ನೆಳಸುವ ಭಕ್ತಿಯಂತೆ, ಶಿವಸಂಗಮಂ ಬಯಸಿ ಮನ್ಮಥಮನೋರಥ ದುರ್ಲಭವಲ್ಲಭನಂ ನೋಡುವಾಗಳ್,

ಪೊಸಜೆಡೆಯೊಳ್ ತೊಡಂಕಿ, ನೊಸಲೊಳ್ [2]ನಡೆಪಾಡಿ, ಕಪೋಲಭಾಗ
ದೊಳ್
ಪಸರಿಸಿ, ಲೋಚನಂಗಳೊಳಮರ್ಚಿ, ತದಾಸ್ಯದೊಳೊಂದಿ, ಕಂಠದೊಳ್
[3]ಮಿಸುಗಿ, ಭುಜಾಗ್ರದೊಳ್ ತೊಳಗಿ, ವಕ್ಷದೊ[4]ಳಾಳ್ದು ಕರಂಗಳೊಳ್ ವಿರಾ
ಜಿಸಿ, ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್. ೫೮

ಇಂತು ಶರ್ವನ ಸರ್ವಾಂಗದೊಳ್ ನೋಟಂ ಮುಸುಂಕಿ ನೋಡಿ,

ಬೆಮರ್ವಳ್, ಬೆರ್ಚುವಳುಬ್ಬುವ-
ಳಮರ್ವಳ್, ಪೆಱಸಾರ್ವಳಂಜಿ ನಿಲ್ವಳ್; ಸೋಂಕಲ್
ನಿಮಿರ್ವಳ್, ನೆನೆವಳ್, ಮುನಿವಳ್,
ಸಮಸಲ್ವಳ್, ಗಿರಿಜೆ ಸೆಡೆದು ಸುಯ್ವಳ್, [5]ಕಾಯ್ವಳ್ ೫೯

ಚಾರುತರ ಕಾಂತಿಮಯ ಸುಕು-
ಮಾರಾವಯವಂಗಳಂ ನಿರೀಕ್ಷಿಸಿ ನಲಿವಳ್;
ತಾರಾಚಳನಾಥನ ಘನ-
ವೈರಾಗ್ಯಕ್ಕಂಜಿ ನಡುಗಿ [6]ಸಿಡಿಮಿಡಿಗೊಳ್ವಳ್ ೬೦

ಇಂತು ರುದ್ರನ ಮನೋಹರಮೂರ್ತಿಯಂ ನೋಡಿ ನೋಡಿ ತಣಿಯದೆ, ಸೋಂಕಿ ಸೋಂಕಿ ಸವೆಯದೆ, ಪೊಗಳ್ದು ಪೊಗಳ್ದು ತೀಱದೆ, ನೆನೆದು ನೆನೆದು ನೆಱೆಯದೆ, ನಡೆತಂದು ಪಾರ್ವತೀದೇವಿ ಪೊಚ್ಚ ಪೊಸ ಪೂಗಳನಚ್ಚರಿ ಮಿಗೆ ತಂದುತಂದಂದಂದಿಗೆ ಚಂದ್ರಧರನಂ ಕಳಾನಿಧಿಯಂ ವಿಳಾಸದಿಂ[7] ದಾರ್ತದಿಂ [8]ಹತ್ತೆ ಸಾರ್ದು ಮತ್ತೆ ಮತ್ತೆ ಮಾಣದೆ,

---

1 ಆಶಿಸು, ಬಯಸು 2 ಹರಿದಾಡು 3 ಚಲಿಸು, ಮಿಂಚು 4 ಮುಳುಗು 5 ಮುನಿ 6 ಚಡಪಡಿಸು, ಕಾತರಿಸು 7 ಆಶೆ, ದೈನ್ಯ 8 ಹತ್ತಿರ.

ಹರನಂ ಶಿವನಂ ಮೃಗಧರ-
ಧರನಂ ಸುಸ್ನೇಹಮಡರೆ ನವನವಕುಸುಮೋ-
ತ್ಕರದಿಂದೆ ನಚ್ಚಿಮಚ್ಚಿಯೆ
ಗಿರಿಜಾವಧುವರ್ಚಿಸುತ್ತುಮಿರ್ಪಿನಮತ್ತಲ್ ೬೧

## ೩. ಆನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ

ಸಕಳೋರಗ ಸುರನರಮು-
ಸ್ತಕಶೂಲನ, ನಮಿತಲೋಕಪಾಲನ, ತೀವ್ರ-
ಪ್ರಕಟಯಶೋಲೋಲನ, ತಾ-
ರಕಾಸುರನ [1]ಕೊರ್ವು ಪರ್ವಿತುರ್ವೀತಳಮಂ ೧

ಧರಣಿಯ[2]ನೊಕ್ಕಲಿಕ್ಕಿ, ದಿಗಧೀಶರ ಗಂಟಲನೊತ್ತಿ ಮೆಟ್ಟಿ, ಭೀ-
ಕರಫಣಿಲೋಕಮಂ [3]ಹಿಳಿದು, ನಾಕಮನೋಡಿಸಿ, ನಿಂದ ವೀರರಂ
ಧುರದೊಳೆ [4]ತತ್ತಱಿಂದಱಿದು, [5]ತಗ್ಗಿಸುತಪ್ರತಿಮಪ್ರತಾಪಭಂ-
ಗುರಭುವನತ್ರಯಂ ನೆಗಳ್ದನಕ್ರಮಕಾರಿ ಜಿತಾರಿ ತಾರಕಂ ೨

ಇತ್ತಲನಂತರಂ ತ್ರಿದಶರೋಡಿ ಸುರಾದ್ರಿಹರಾದ್ರಿಯೊಳ್ ಭಯಂ-
ಬೆತ್ತು ಮಹಾಗುಹಾವಳಿಗಳಂ, ಘನಗಹ್ವರ ಘೋರವೀಥಿಯಂ,
ಸುತ್ತಿದರಣ್ಯದಂಧತಮಮಂ, ತವಕಂ ಮಿಗೆ ಸಾರ್ದು ಪೊಕ್ಕು, ಶೌ-
ರ್ಯೋತ್ತರರಿರ್ದರಪ್ರತಿಮತಾರಕಸಂಗರರಂಗಭಂಗಿತರ್ ೩

ಇಂತು [6]ಗೋಳುಂಡೆಗೊಳುತುಂ [7]ಗಂಡುಡುಗಿರ್ದ ದೇವರ್ಕಳನ್ ಅಲ್ಲಲ್ಲಿ ಕರೆದು ಮೆಲ್ಲಮೆಲ್ಲನೆ ನೆರೆಪಿ ಹಿರಣ್ಯಗರ್ಭನುಂ ಜಿಷ್ಣುವುಂ ವಿಷ್ಣುವಿರ್ದ ತಾಣಕ್ಕೆ ಬಂದು ಕಂಡು ಕುಳ್ಳಿರ್ದು ಆಳೋಚನಂಗೆಯ್ವಲ್ಲಿ, ಮುನ್ನಿನಂತಲ್ಲದೆ ಇನ್ನೊರ್ಮೆ ಸಂಗರಮಂ [8]ಸಮಕಟ್ಟಲ್ವೇಳ್ಕುಂ, ಆನಿರ್ದಪೆಂ, ನೀವಿರ್ದಪಿರ್, ಆಜನಿರ್ದಪನ್, ಅಂಜಲೇತರ್ಕೆಂದು ಶಕ್ರಂ ಮಿಕ್ಕು ನುಡಿಯೆ,

1 ಸೊಕ್ಕು, ಗರ್ವ 2 ವಿನಾಶಗೊಳಿಸು 3 ಹಿಂಡಿ 4 ನುಚ್ಚುನುರಿಮಾಡು 5 ತಗ್ಗಿಸು 6 ಸಂಕಟದಿಂದ ಪರಿತಪಿಸುತ್ತ 7 ಪರಾಕ್ರಮ, ಪೌರುಷ 8 ಅಣಿಗೊಳಿಸು.

ನೆನೆದು ವಿಚಾರಿಸಿ ನಿಶ್ಚಯ-
ಮನನತುಳೋಪಾಯಕೋವಿದಂ ಸ್ಥಿತಿಕರ್ತಂ
ವನಜಾಕ್ಷಂ ಘನನಿರ್ಮಲ-
ನನಾಗತಜ್ಞಾನಿ ಶಕ್ರನೊಡನಿಂತೆಂದಂ: ೪

ಅಯ್ದುಂ ಮುಖದಭವಂಗೀ-
ರಯ್ದುಂ ಭುಜದೀಶ್ವರಂಗೆ ಷಣ್ಮುಖನುದಯಂ-
ಗೆಯ್ದೀಳನೆಯ ದಿನಂ ಬಂ-
ದೆಯ್ದಿದೊಡತ್ಯುಗ್ರತಾರಕಾಸುರನಳಿವಂ ೫

ಎಂದಬ್ಜಜನಿತ್ತಾದೇ-
ಶಂ ದಿಟಮದುಕಾರಣಂ ಕಪರ್ದಿಯ ತಪಮಂ
ಛಂದಂಗೆಡಿಸುವ ವೀರನ-
ನಿಂದೆ ವಿಚಾರಿಸಲೆವೇಳ್ಪುದಿಂತಿದೆ ಕಜ್ಜಂ ೬

ಕಾಳೆಗದ ಮಾತನಾಡದಿ-
[1]ರಾಳಾಪಂಗೊಳ್ಳನಸುರನತಿಬಳನದಱಿಂ
[2]ಸೂಳಿಯ ತಪಮಂ ಚಲಿಯಿಸು
ವಾಳಾಪಂಗೆಯ್ವುದುಚಿತಕಾರ್ಯಂ ಕಾರ್ಯಂ ೭

ಎಂದು ವಿಚಾರಿಸಿ ನೋಡಿ ಸಕಳ ಜಗಜ್ಜನವಶೀಕರಣ ಪಟುತರ ಕುಸುಮಕೋದಂಡಟಂಕಾರಪ್ರತಾಪಮುಖಂ ಮಕರಪತಾಕನ್ ಎಂದು ನಿಶ್ಚಯಿಸಿ, ಪಂಚೇಷುವಿಂದಲ್ಲದೆ ಪಂಚಮುಖನ ತಪಂ ಸಂಚಲಿಸದೆಂಬ [3]ಸಂಚಮಂ ಅಱಿದು ಕಾಮನಂ ಕರೆಯಿಸಲ್ವೇಡಿ ಸರಸಿಜಾಕ್ಷಂ ಪುರಂದರನ ಮುಖಮಂ [4]ತೀಡಾಗದೆ ನೋಡಿದಾ ಪ್ರಸ್ತಾವದೊಳ್ - ಪುರುಹೂತಂ ಮಂತ್ರಿವಾಚಸ್ಪತಿಯಂ ಕರೆದು ಈಗಳೆ ಕಾಮನಂ ಅತಿಭರದಿಂದೊಡಗೊಂಡು ಬರ್ಪುದೆಂದು ಬೆಸಸುತ್ತುಂ ಇರೆ, ಸುರುಗುರು ನಡೆತಂದು ರತೀ

1 ವ್ಯಥೆಗೊಳ್ಳನು 2 ಶೂಲಿ, ಈಶ್ವರ 3 ರಹಸ್ಯ, ಸಂದರ್ಭ 4 ತೀಡದೇ ಆಗದೆ: ತೀಡು-ವಿಶೇಷವಾಗಿ

ಶ್ವರನ ರಾಜಧಾನಿಯನ್ ಒಳಪೊಕ್ಕು, ಅರಮನೆಯ ಮುಂದೆ ಪುಷ್ಪಕಮ ನಿಳಿದು, ಒಪ್ಪುವ ದರ್ಪಭೂಷಣಮೆನಿಸಿದ ದರ್ಪಕಾಸ್ಥಾನಮಂ ಪುಗು ತರ್ಪಲ್ಲಿ, ತಳಿರ ಗದ್ದುಗೆಯೊಳ್ ಕೆಳಗೆ ಕುಳ್ಳಿರ್ಪ ವಸಂತರಾಜನಿಂ, ಬೆಳ್ದಿಂ ಗಳ ಹಸೆಯೊಳ್ ಬಳಸಿ ಕುಳ್ಳಿರ್ಪ ಕಳಾಮಾಳೆಯಿಂ, ಕೆಲದೊಳ್ ನಿಲಿಸಿರ್ದ ಇಕ್ಷುಚಾಪದಿಂ, ಸರಸೀರುಹದೆಸಳ [1]ತುಱುಂಗಲ ಸಿಂಹಾಸನ ದೊಳ್ ಸುರತರುವಂ ಮುಲಂಗಿ ಮೂಱುಂ ಜಗಮಂ ಮಿಾಱಿ ಗೆಲಲೆಂದು ಸಂಗಡಿಸಿ ಶೃಂಗಾರರಸಂ ಅಂಗಂಬಡೆದಂತೆ ಸುಕುಮಾರತೆ ಸಾಕಾರಂ ಗೊಂಡಂತೆ ಇರ್ದ ಕಂದರ್ಪರಾಜನಂ ಕಂಡು, ಕಾಣ್ಕೆಯಿತ್ತು ಕುಳ್ಳಿರ್ದ ವಾಚಸ್ಪತಿಯ ಮುಖಮಂ ಮಕರಧ್ವಜಂ ನೋಡೆ,

ಅತುಳತರಗುಪ್ತಕಾರ್ಯ-
ಸ್ಥಿತಿಯಾಳೋಚನೆಗಳುಂಟು, ನೀಂ ಚೆಚ್ಚರಮ-
ಪ್ರತಿಮಂ ಕಾಮನನೊಡಗೊಂ-
ಡು ತರ್ಪುದೆನೆ, ಬಂದೆನಿದೆ ಪದಂ, ನಡೆ ಮದನಾ ೮

ಎನುತುಂ ಗುರು ನುಡಿಯೆ, ಸುಖಾ-
ಸನದಿಂದಿದಿರೆಳ್ದು, ಶಶಿವಸಂತಾದಿಗಳಂ
ಬನದೊಳ್ ಪಿಂತಿರಿಸುತೆ, ಭೋc-
ಕನೆ ರತಿವೆರಸೇಱಿ ದರ್ಪಕಂ ಪುಷ್ಪಕಮಂ ೯

ತಾನುಂ ವಾಚಸ್ಪತಿಯುಂ
ನಾನಾವಿಧಕಾರ್ಯಗತಿಗಳಂ ನುಡಿಯುತ್ತುಂ,
ಸಾನಂದಂ ಹರಿಯಜರಾ-
ಸ್ಥಾನ ನಿಕೇತನದ ಮುಂದೆ ಬಂದಿಳಿತಂದರ್ ೧೦

ಬಂದೊಳಪೊಕ್ಕು ಮುದದೆ ಕುಳ್ಳಿರೆ, ಕಾಮನನೀಕ್ಷಿಸುತ್ತೆ ಗೋವಿಂದನ್ ಅನಿಂದಿತಂ ನುಡಿದನ್ ಆತ್ಮಗತಾರ್ಥವಿಚಾರಸಾರಮಂ :

---

1 ಸಮೂಹ.

ಅರಿಂದಂ ಸಾಯಂ, ತ್ರಿಪು-
ರಾರಿಗೆ ಪುಟ್ಟಿದ ಕುಮಾರನಿಂದಲ್ಲದವಂ
ತೀರಂ ತಾರಕನಂತದು
ಕಾರಣದಿಂ ಮಾಳ್ಪ ಕಜ್ಜಮುಂಟೇ ಪದದೊಳ್ ೧೧

ಹರನತ್ಯಧಿಕತಪೋವಿ-
ಸ್ತರಮನನಾಗಿರ್ದಪಂ, ಮದನ, ತತ್ತ್ರಸಮುಂ
ಕೊರಗಿಸಿ ವರಗಿರಿಸುತೆಯೊಳ್
ನೆರೆಪಲ್ಲಿಗೆ ನೀನೆ ಬಲ್ಲೆ, ನೀನೆ ಸಮರ್ಥಂ ೧೨

ತಪಮುಂ ಕೆಡಿವುದು ; ಮಾಡುವ
ಜಪದಕ್ಷರದೊಳಗೆ ನಿನ್ನ ನನೆಯಂಬಂ ಕೀ-
ಲಿಪುದಾ ಗಿರಿಜಾವಧು ಸೌ-
ಖ್ಯಪದಾವರಣಾತ್ಮನೆನಿಸುವುದು ಶಶಿಧರನಂ ೧೩

ಎನೆ, ಮದನಂ ನುಡಿದಂ :

ಶ್ರುತಿಗಳ್ ಕಾಣದ, ಮನುಗಳ
ಮತಿಯೆಯ್ದದ, ಮುನಿಗಳಱಿವು ನಿಲ್ಕದ, ಶಾಸ್ತ್ರ-
ಪ್ರತತಿ ನೆಱೆಯಱಿಯದಪ್ರತಿ
ಹತರೂಪನನೆಂತು ಕಾಣ್ಬೆನೆಂತಾ[1] ನೆಸುವೆಂ ೧೪

ಇಸುವೆನ್ನೀ ಮನಮಂ ಪ್ರೇ-
ರಿಸುವೀತನನಖಿಳಲೋಕಗುರುವಂ, ಭರದಿಂ
ದಸಮಾಕ್ಷನನಿರದಾದಿರ್ಸು
ವಸಮಾಸ್ತ್ರರ್, ಜಲಧಿವಸನ ವಸುಧೆಯೊಳುಂಟೇ ೧೫

ಹರಿಯಲ್ಲಿಗೆ ತಮಮಂ, ಕೇ-
ಸರಿಯಲ್ಲಿಗೆ ಕರಿಯನಭ್ರುಶಿಖಿಯಲ್ಲಿಗೆ ಕೇ-

1 ಬಾಣ ಬಿಡು, ಹೊಡೆ.

ಳುರಗನನಟ್ಟುವ ತೆಱದಿಂ
ಹರನಲ್ಲಿಗೆ, ತಂದೆ, ಕಳಿಪುವರೆ ನೀವೆನ್ನಂ ೧೬

ಎಂದೊಡೆ, ಮುಕುಂದನೆಂದಂ,
ಕಂದರ್ಪ, ಬಹೂಕ್ತಿಯಿಂದಮೇನಪ್ಪುದು, ನಿ-
ನ್ನಿಂದಂ ಸಕಳಜಗಂ ಸುಖ-
ದಿಂದಿರ್ಪೊಡೆ ಹರಣದೊಂದು [1]ಹುರುಳಱಿಸುವರೇ ೧೭

ಎನೆ, ಕಂದರ್ಪಂ ಸಕಳ ಭು-
ವನಮೆನ್ನಿಂ ಪರಮಸುಖದೊಳಿರ್ಪುದು ಗಡಮಾ-
ನೆನಿತಱವನೆನ್ನ ಹರಣಂ
ಘನವೇ, ತೆಗೆ, ಇಂದೆ ನೂಱು [2]ತೀವಿತ್ತೆಂದಂ ೧೮

ಎಂದು ಮಾಱು ನುಡಿಯುತ್ತೊಡಂಬಟ್ಟು, ಬೀಳ್ಕೊಂಡು ನಡೆತಂದು, ವಸಂತಾದಿ ಚತುರಂಗಬಲಮುಂ ಬರಲ್ವೇಳೆಂದು ಕಳಿಪುವ ಸಮಯವೆ ವಸಂತಸಮಯಮಾಗೆ,

ಮುಗುಳೊತ್ತಿತ್ತುದಿರ್ಗೆಂತಿ; ಅಂಕುರಿಸಿತಾಮ್ರಂ; ಬಂದು ಮಂದಾನಿಳಂ
ಪುಗುತೊಂದೊಂದಡಿಯಿಟ್ಟ[3]ನನ್ಯಭೃತನಂತೋರೊರ್ಮೆಕೂಗಿತ್ತು; ಮ-
ಲ್ಲಗೆ ಬಿಲ್ಲಂ [4]ಗೊಲೆಗೆತ್ತಿ ಹೂಡಿದನಮೋಘಾಸ್ತ್ರಂಗಳಂ ದರ್ಪಕಂ;
ದಿಗಿಲೆಂದಿತ್ತು ವಿಯೋಗಿವೃಂದಹೃದಯಂ ವಾಸಂತಿಕಾಮಾಸದೊಳ್ ೧೯

ಕಳಿದುದು ಮಾಗಿ; ಕೂಗಿದುದು ಕೋಗಿಲೆ; ಪಲ್ಲವಿಸಿತ್ತು ಮಾಮರಂ;
ತಳವೆಳಗಾಯ್ತು ಪಾಂಥಜನಮೊಲ್ದವರೊಳ್ ನವಭೋಗದುಜ್ಜುಗಂ
ಮೊಳೆತುವು; ಕಾಮ[5]ನೇಸು ಗುಱಿಗಂಡುದು; ತಂಡದೆ ನಿಂದ ನಂದನಂ
ತಳೆದುವು ಕೂಡೆ ಕೆಂಪಿನ ಪಸುರ್ಪಿನ ಕರ್ಪಿನ ಬೆಳ್ಪಿನಂದಮಂ. ೨೦

---

1 ಸತ್ತ್ವ, ಪ್ರಯೋಜನ 2 ತುಂಬು 3 ಕೋಗಿಲೆ 4 ಬಿಲ್ಲಿನ ತುದಿ 5 ಹೊಡೆತ, ಬಾಣಪ್ರಯೋಗ.

ಇಂತು ವಸುಮತಿಯು ಪೆಂಪಿನ ಸಂಪದಮಂ ಸೊಂಪೇಱಿಸುತುಂ, ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವೆರ್ಚಿಸುತ್ತುಂ, ನದೀಜಳಮುಂ ನಿರ್ಮಳಮುಂ ಮಾಡಿ ಮೃಗಪಕ್ಷಿಕುಳಮುಂ ಮಿಗೆ ತುಷ್ಟಿವಡಿಸುತ್ತುಂ, ವಸಂತ[ ನೈತರಲ್ ],

[1]ಗಣಿವನುದೇವುದಿಕ್ಷುಧನುವುಂ ಕುಸುಮಾಸ್ತ್ರಮುಮೆನ್ನ ಕೆಯ್ಗೆ ಸಂ-
ದಣಿಸೆ; ಬಳಿಕ್ಕಮೆತ್ತಣ ತಪೋಮಯರೆತ್ತಣ ಶಾಂತಿಭೂಷರೆ-
ತ್ತಣ ಜಿತಕಾಮರೆತ್ತಣ ದಿಗಂಬರರೆತ್ತಣ ಕರ್ಮನಿಷ್ಠರೆ-
ತ್ತಣ ಬುಧರೆತ್ತಣಾತ್ಮವಿದರೆತ್ತಣ ನಿಸ್ಪೃಹರೆತ್ತಣುತ್ತಮರ್ ೨೧

ಪರಿಮಳಮನೆಣ್ದೆಸೆಗೆ [2]ಬಿ-
ತ್ತರಿಸುವ ನನೆಗಣೆಗಳಿಂದೆ ಗಿರಿಪತಿತನಯಾ-
ವಿರಹಾತಪಮೊಗೆಯಲ್ ಶಂ-
ಕರನ ತಪಶ್ಛತ್ರದಂಡಮಂ ಖಂಡಿಸುವೆಂ. ೨೨

ಎಂದಿಂತು ನಿಜಭುಜಪ್ರತಾಪಾಲಂಕೃತವೀರಾಳಾಪಮಂ ಶಂಬರಸೂದನಂ ನುಡಿಯುತ್ತುಂ ಹೇಮಕೂಟಾಭಿಮುಖನಾಗಿ ನಡೆತರ್ಪಾಗಳ್,

ಮುನಿಗಳ ಧೈರ್ಯಭೂಮಿ [3]ರಜಮುಪ್ಪಿನೆಗಂ, ಮನುಚೇತನಾದ್ರಿ ಭೋಂ-
ಕನೆ ಪುಡಿಯುಪ್ಪಿನಂ, ಯತಿಚರಿತ್ರ ತರಂಗಿಣಿ ಪಂಕಮುಪ್ಪಿನಂ,
ಘನವಿಮಳವ್ರತೀಂದ್ರರ ತಪೋವಿಪಿನಂ ಬಯಲಪ್ಪಿನಂ, ರತೀ-
ಶನ ಚತುರಂಗಸೇನೆ ನಡೆವತ್ತು ಧರಿತ್ರಿಗೆ ಚಿತ್ರಮುಪ್ಪಿನಂ ೨೩

ಇಂತು ಸಕಳಭುವನಮಂ ಭಂಗಿಸುವ ಕಾಮಭೂಪಂ ಸೋಮಧರನಿರ್ಪ ಹೇಮಕೂಟ ಪ್ರಾಂತಮಂ (ಪ್ರವೇಶಿಸಲ್), ಮುಂದಣ [4]ಕಾಪಿನ ನಂದೀಶ್ವರನಂ ಮೋಹನ ಬಲದ ಸುಧಾರಸಮಯ ಸುನಾದಮಂ ಭೋಂಕನೆ ಕೇಳ್ದು, ಅಂತಂತೆ ಕಂಪಿಸಿ, ಕರಣಂ ಕಲಂಕಿ, ಕಿಂಚಿತ್

---

1 ಯಾವುದು ಅಸಾಧ್ಯ, ಏನ್ ಲೆಕ್ಕ 2 ಪಸಂಸು, ಹರಡು 3 ಹುಡಿ
4 ಕಾವಲು.

ಸಂಚಲಮನನಾಗಿ, ಚಲ್ಲಿದ ಚಿತ್ತಮಂ ಮೆಲ್ಲಮೆಲ್ಲನೆ ಸಂತಯ್ಸಿಕೊಂಡು,
ಶಿವಜ್ಞಾನದಿಂದೆಳ್ಚತ್ತು, ಕಣ್ದೆಱೆದು ಮುಂದಿರ್ದ ಬಲಮಂ ಕಂಡು,

ಹರನ ಸಮಾಧಿಗಿಂತಿದನುಕೂಲತೆಯಲ್ಲ; ವಿರೋಧವೃತ್ತಿಯಂ
ನೆರಪುವರಾರಿದಾರ ಬಲ, ಆರ ಮಹೋನ್ನತಿ, ಆರ ಲೋಕಭೀ-
ಕರರವ, ಆರ ಸಂಭ್ರಮ, ಇದಾರ ಮರುಳ್ತನಮೆಂದು ನಂದಿಕೇ-
ಶ್ವರನತಿಕೋಪದಿಂ ಮದನ ಸೇನೆಯನೀಕ್ಷಿಸಿದಾಕ್ಷಣಾರ್ಧದೊಳ್, ೨೪

ಅಳಿ[1]ಮಲ್ಲಳಿಗೊಂಡುವು; ಕೋ-
ಕಿಳನಿಕರಂ ವ್ಯಾಕುಳಂಗಳಾದುವು; ಚಂದ್ರಂ
ಕಳೆಗುಂದಿ ಕಂದಿದಂ; ಕೋ-
ಮಳೆಯರ್ ವಿಹ್ವಳವಿಧಾನಮಾನಸರಾದರ್ ೨೫

ನುಡಿದಂ ಮದನಂ ತನ್ನೊಳ್,
ಬೆಡಂಗಿದೇನೀಗಣೇಶನೀತೆಱನಿನ್ನಾ
ವ್ಯಡನಂ ನಡೆದೆಸುವೊಡೆ ಸಂ-
ಗಡವಾರಾರಳವದಾರಶಕ್ಯಮಶಕ್ಯಂ ೨೬

ಇಂತು ಕಂತುರಾಜಂ ಚಿಂತಿಸುತಿರ್ಪಿನಂ,

ಬರುತಿರ್ದಳ್ ಮುಂದೆ ಕಾಂತಿಪ್ರದೆ ಸದಮಳೆ ಸತ್ಪುಷ್ಪಕಾರೂಢೆ ಸತ್ಯಾ-
ಕರೆ ನಿತ್ಯಾನಂದೆ ಚಂದ್ರಾಭರಣನ ಸುಖಸಂಪತ್ತಿ ರುದ್ರಾರ್ಚನಾವಿ
ಸ್ತರೆ ವಿಶ್ವಾರಾಧ್ಯೆ ಕಾರುಣ್ಯದ ನೆಲೆವನೆ ಶರ್ವಾಣಿ ಗೀರ್ವಾಣಮೌಳೀ-
ವರರತ್ನವ್ರಾತಸಂಘಟ್ಟಿತಪದೆ ನಗಸಂಭೂತೆ ಸಂಪ್ರೀತಿಯಿಂದಂ ೨೭

ಬರೆ, ಕಣ್ ಬಂದಂತುಸಿರ್ ಬಂದವೊಲತಿಮುದಮಂ ತಾಳ್ದಿ
ಬಾಳ್ದಿರ್ದ, ಶೋಭಾ-
ಕರನಷ್ಟಾಂಗಪ್ರಣಾಮಂಬೆರಸು, ಗಿರಿಜೆ ಗೌರೀ ಜಗನ್ಮಾತೆ ಸರ್ವೇ-

1 ತಲ್ಲಣಗೊಳ್ವು.

ಶ್ವರಿ ದಿವ್ಯಜ್ಞಾನಿ ನಾನಾಗಮವಿದೆ ಸದಲಂಕಾರೆ ಸಾರಾಂಗಿ ವಿಶ್ವೋ-
ದರೆ, ಎನ್ನಂ ರಕ್ಷಿಸೆಂದೀಕ್ಷಿಸಿ ಮಿಗೆ ಪೊಗಳ್ದಂ ಬಾಷ್ಪದೃಕ್ ಪುಷ್ಪಚಾಪಂ

ತಾಯೇ ತವರೇ, ಕೇಳಿ-
ನ್ನಾಯುವೆ, ಎನ್ನಸುವೆ ಕಾವುದೆಂ[1]ದೊಱಲುತ್ತುಂ
[2]ಬಾಯಳಿವ ಮದನನಂ ಕಾ-
ತ್ಯಾಯನಿ ದಯೆಯಿಂದೆ ನೋಡಿ ನಯದಿಂ ನುಡಿದಳ್ ೨೯

ಅಱಿದೆಂ ನಿನ್ನಯೆ ಬರವಂ,
[3]ಕಱಿಗೊರಲನ ತೀವ್ರತಪಮ[4]ನೆಳ್ಚಟ್ಟುವುದೀ
ತೆಱದಿಂದೆನ್ನಿಷ್ಟಮದೆ-
[5]ನ್ನೆಱಕೆ, ಅದೆನ್ನಿಚ್ಛೆ, ಎನ್ನ ಲಾಭಂ ಲೋಭಂ ೩೦

ನಾನಾವಿಧದಿಂ ರುದ್ರನ-
ನೂನತಪೋಭರದ ಬೆಸುಗೆಯಂ ಬಿಡಿಸೊಲವಿಂ,
ಶ್ರೀನಂದನ, ನೀನಂಜದಿ-
ರಾನಿರ್ದಪೆನಾನೆ ರಕ್ಷೆಯಾನೆ ಸಹಾಯಂ. ೩೧

ಎಂದಗಜೆ ಬೆಸಸೆ, ಕಾಮಂ
ಪಿಂದಣ ಪರಿಭವಮನುಡುಗಿ, ತಳೆದತಿಮುದಮಂ
ಸಂದಣಿಸುತೊಡನೊಡನೆ ನಡೆ
ತಂದಂ ಪುಷ್ಪಕದ ನೆಳಲ ಕರ್ಪಿನ ಮಱಿಯೊಳ್ ೩೨

[6]ಮುಗಿದ ಮನಂ, ಮುಗಿದ ಕರಂ,
ಮುಗಿದಕ್ಷಿಗಳಲರ್ವ ಪುಳಕಮಲರ್ವಾನಂದಾ-
ಶ್ರುಗಳಲರ್ವ ಭಕ್ತಿ ತನ್ನೊಳ್
ಸೊಗಯಿಸೆ ನಂದೀಶನಿರ್ದನುತ್ತಮಭಕ್ತಂ ೩೩

---

1 ಗೋಳ್ಗರೆ 2 ಬಾಯ್ಬಿಡು 3 ನೀಲಕಂಠ, ಈಶ್ವರ 4 ಎಬ್ಬಿಸು, ಓಡಿಸು 5 ಪ್ರಿಯವಾದದ್ದು 6 ಮುಚ್ಚು, ಜೋಡಿಸು.

ಅಂತಿರ್ದ ನಂದೀಶನಂ, ಚಂದ್ರಾನನೆ ಕೃಪೆಯಿಂದಂ ನೋಡುತ್ತುಂ ಶಿವಾರ್ಚನಾತತ್ಪರೆ ಪುಷ್ಪೋಪಚಯಕ್ಕೆ ಬಿಜಯಂಗೆಯ್ದಳ್; ಇತ್ತಲ್ ಪುಷ್ಪಚಾಪಂ ನಂದೀಶನ ಕಾಪಿನ ಸೀಮೆಯಂ ಕಳೆದು,

ಬಂದು ಮತಂಗಪರ್ವತಮನೇಱಿ, ಮಹೇಶನ ವಾಮಭಾಗದೊಳ್
ನಿಂದು, ವಿರಾಜಿಸಿರ್ಪ ರತಿಯಂ ಕೆಲದೊಳ್ ನಿಲವೇಳ್ದು, ಶೌರ್ಯವೀ-
ರ್ಯಂ ದೆಳವೇಱೆ ಮಿಱಿ, ನಭದೊಳ್ ಸುರಸಂತತಿ ನೋಡಿ ಭಾಪುಭಾ-
ಪೆಂದೆನೆ, ಮುಂದೆ ಪುಷ್ಪಶರನೀಕ್ಷಿಸಿದಂ ನಿಟಿಲಾಕ್ಷಲಕ್ಷ್ಯಮಂ. ೩೪

ಪಸರಿಸಿ ಪರ್ಬಿದ ನೀಡಡಿ,
ಕುಸಿದಂಗಂ, ನೀಳ್ದ[1]ದಂಡೆ, ನೆಗೆದ ಭುಜಾಗ್ರಂ,
ಕುಸುಮಶರಾಕುಂಚಿತ ಕರ-
ಮೆಸೆದಿರ್ದುವು ದೃಷ್ಟಿಮುಷ್ಟಿ ಶರಸಂಧಾನಂ ೩೫

ಹರಿಯುಜರರಿದರಿದೆನೆ, ಅಂ
ಬರತಳದೊಳ್ ಕಲಹಲಂಪಟಂ ನಾರದನಾ
ರ್ದಿರೆ, ಕಾಮಂ ಸಾಯಲ್ ಬ-
ಲ್ಲರದೇವಂ ತೊಟ್ಟನೊಂದು ಸರಲಂ ಬಿಟ್ಟಂ ೩೬

ಇಸೆ, ಬಂದು ವಶೀಕರಣಂ
[2]ಸಸಿಯಂ ಸೂಡಿದನ ಕಮಲವಿಮಲಜ್ಞಾನಾ-
ವಸಥ ಪರಂಜ್ಯೋತಿಯ[3] ಕಾ-
ಳಸೆಯಂ ಕಾಣದೆ ಮರಳ್ದು ಬರೆ, ಬೆಱಗಾದಂ ೩೭

ತೆಱಹುಗುಡನಚಳನನ್ಯಮ
ನಱಿಯಂ, ನಿರುಪಮ ಸಮಾಧಿಯುಕ್ತನಭೇದ್ಯಂ,
ಕುಱುಹಿಲ್ಲೆನುತುಂ, ಬಿಲ್ಲುಂ
ಬೆಱಗಾಗಿರ್ದಂ ರತೀಶನಸ್ತ್ರವಿಳಾಸಂ ೩೮

---

1 ಯುದ್ಧದಲ್ಲಿಡುವ ಹೆಜ್ಜೆಯ ಭೇದ 2 ಚಂದ್ರಧರ 3 ಕೀಲಣ, ಮೇಳ

ಜಲದೊಳಗಣ ಜಲಜದವೋಲ್,
ತಿಲದೊಳಗಣ ತೈಲದಂತೆ, ಕಾಷ್ಠದ ನಡುವು-
ಜ್ಜ್ವಲಿಸುವ ಶಿಖಿಯಂತೊಪ್ಪುವ-
ಚಲಶಿವನಂ ಕಾಮನೆಸುಗೆ ಕೆಯ್ಕೊಂಡಪುದೇ ೩೯

ಇತ್ತಲ್,

ನಡೆತಂದಳ್ ಶಿವಪೂಜೆಗೆಂದಗಜೆ ಪುಷ್ಪವ್ರಾತಮಂ ಕೊಂಡು, ಸಂ-
ಗಡದೊಳ್ ಬರ಼್ ವಿಲಾಸಿನೀನಿಕರದಿಂ, ಸೌರಭಲೋಲುಪ್ತಿಯಿಂ
ಗಡಣಂಗೊಂಡ ಶಿಳೀಮುಖಪ್ರಕರದಿಂ, ಸುಯ್ಗಂಪಿನೊಳ್ ಸಾರ್ದು ಮುಂ-
ಗುಡಿಯೊಳ್ ತೀಡುವ ದಕ್ಷಿಣಾನಿಲನಿನೊಪ್ಪಂಬೆತ್ತ ವಿಸ್ತಾರದೊಳ್ ೪೦

ಬಂದು, ನವೀನಪುಷ್ಪಕುಲಮಂಡನಮಂ ಜಡೆಯೊಳ್ ಭುಜಂಗಳೊಳ್
ಸಂದ ಕರಂಗಳೊಳ್ ಶಿವನ ತೋಳೊಳುರಃಸ್ಥಳದೊಳ್ ಪದಂಗಳೊಳ್
ನಿಂದು, ವಿಳಾಸದಿಂದಗಜೆ ಸಿಂಗರಿಸುತ್ತೆ, ಕಟಾಕ್ಷಕಾಂತಿಯೊಳ್
ಸಂದಣಿಗೊಳ್ವ ಕಾಮಕಳೆಯಂದೊಗೆಯುತ್ತಿರೆ ನಾಡೆ ನೋಡಿದಳ್ ೪೧

ಅಂತು ನೋಟದೊಳ್ ಕೋಟ್ಯನುಕೋಟಿಕುಸುಮಾಯುಧರ್ ಪುಟ್ಟುತ್ತಿರೆ ಪುಷ್ಪಾಂಜಲಿಯಂ ಪಿಡಿದು ತನ್ನ ಸರಸದೃಷ್ಟಿಗಳಿಂ ಹರನಂ ನೋಡುತುಂ ತಪೋಭರಮಂ ಬಿಡಿಸಲಿರ್ದ ಮೃಡಾನಿಯಂ ಕುಸುಮ ಕೋದಂಡಂ ಕಂಡು,

ಇನ್ನಂಜೆನಂಜೆನಾಹಾ
ಉನ್ನತ ಬಲವಾಯ್ತೆನುತ್ತೆ ವಿಭ್ರಮಬಳಸಂ-
ಪನ್ನಂ ಕಾಮಂ ತೆಗೆದಂ
ತನ್ನಗ್ಗದುದಂಚಪಂಚಬಾಣಮನಾಗಳ್ ೪೨

ನಳನಳಿಸುವಿಕ್ಷುಚಾಪದೊ-
ಳಳವಡೆ ನಡೆನೋಡಿ ಹೂಡುತೈದಂಬಂ, ಸಂ-
ಚಳಿಸವ ಶಂಕರನ ಮನಂ
ಚಳಿಯಿಪುದಂ ಸಾರ್ದುಸಾರ್ದು ತೆಗೆ ನೆಟ್ಟಿದಿರ್ದಂ ೪೩

ತೆಗೆದಾಕರ್ಣಾಂಬರಂ ಶಂಬರರಿಪು ನೆಶೆ ಹೂಡಿರ್ದ ಪುಷ್ಪಾಸ್ತ್ರದೊಂದು-
ಜ್ಜುಗಮಾಕಾಶಸ್ಥನಾಕೌಕರೊಳೊದವಿದನೂನಾರ್ತಿ, ಕೂರ್ತೆಯ್ದೆ ನಿಂದಿ-
ರ್ಪಗಜಾಚಿತ್ತಾಭಿಲಾಷಾವಿತತಿ ನೆರೆದು, ಭೂತೇಶ ಚಿತ್ತಾಂತದೊಳ್ ಪ್ರೋ-
ಕ್ಕು ಗಭೀರೋದ್ಯತ್ ತಪೋಬೀಜಮುನತಿಭರದಿಂದೊತ್ತಿ ಮುತ್ತಿತ್ತು
ಸುತ್ತಂ ೪೪

ಇಂತು ಸಕಲ ಜಗದ್ಧಿತಾರ್ಥಮಪ್ಪ ಹರಿವಿರಿಂಚಿಗಳ ಮನದ ಬಯಕೆಯುಂ, ಕಂದರ್ಪನ ಪಂಚಬಾಣಾನುಸಂಧಾನಮುಂ, ಪಾರ್ವತಿಯ ಮನೋರಥಮುಂ [1]ಮುಪ್ಪುರಿಗೊಂಡು, ಶಿವನ ನಿಷ್ಪ್ರಯಾತ್ಮಕ ನಿರುಪಾಧಿಕ ನಿರಾವರಣ ಸ್ವಾನುಭವಸಂವೇದ್ಯ ಸ್ವಯಂಪ್ರಕಾಶಮಂ ಸುತ್ತಿ ಮುತ್ತಿ ಪತ್ತಿ ಚಿಗಿಲ್ತು ಬಿಡದಿರೆ, ನಿರ್ವಿಕಾರಸ್ವರೂಪನಪ್ಪ ಪರಮಂಗೆ ಸ್ವಪ್ನೋಪಮಾಹಂ ಮಮತೆ ತಲೆಯೇಱೆ ಜೀವನಾಗಿ, ಜೀವನಿಂ ಪ್ರಾಣಾನಿಲಂ, ಪ್ರಾಣಾನಿಲನಿಂ ಚಿತ್ತಂ, ಚಿತ್ತದಿಂದಹಂಕಾರಂ, ಅಹಂಕಾರದಿಂ ಬುದ್ಧಿ, ಬುದ್ಧಿಯಿಂ ಮನಂ ಜನಿಯಿಸಿತ್ತು; ಅಂತರಂಗ ಬಹಿರಂಗ ಭಾವಮಂ ನೆನೆಯೆ, ನೆನೆವಲ್ಲಿಂ ಮುನ್ನಂ ಮದನನ ಪಂಚಬಾಣಂ ಪರಿತಂದು ನೆರೆದಡಸಿ ಬೆರಸಿ ಕವಿದು ಮನಮನಿಂಬುಗೊಂಡು ಸಹಸ್ರಮುಖದಿಂ ಸಂಚಳಮನೀಯೆ ನಿಲಲ್ಬಾರದೆ, ತಪೋಭರದ ಬೆಸುಗೆ ಬಿಡುವಂತೆ ಮೆಯ್ಮ ಸಂಪುಟಂ ಬಿರ್ಚಲೊಡಂ; ನೋಡಿ ನೋಡಿ ನೋಡಲ್ [2]ಅಣ್ಮದೆ, ಪುಷ್ಪಶರಮಂ ನೂರ್ಮಡಿಸಿದಂತೆ ಪುಷ್ಪಾಂಜಲಿಯಂ ಕೊಟ್ಟಂತಂತೆ ಕಂಪಿಸಿ ಮುಂತೆ ಮೆಯ್ಯಿಕ್ಕಿರ್ದ ಗಿರಿಜಾತೆಯಂ ಭೂತೇಶ್ವರಂ ಕಂಡು, ಆನೇಕೆ ಈ ಮಾನಿನಿ ಏಕೆ, ಈ ತಪಮೆಲ್ಲಿಯದು, ಎತ್ತಣಿಂ ಬಂದುದು, ಆರಿಂದಾದುದು, ಎಂದು ಕಾಮನಿರ್ಪ ವಾಮಭಾಗಮಂ ನಿಟಿಲಾಕ್ಷಂ ನಸುಗೋಪದಿಂ ನೋಡಿದಾಗಳ್,

ನೋಡದ ಮುನ್ನಂ ಕೋಪಂ
ನಾಡೆಯುಮೊತ್ತರಿಸಿ ನೀಳ್ದ ನಿಟಿಲೇಕ್ಷಣದೊಳ್

---

1 ಮೂರು+ಹುರಿ: ಹುರಿಗೂಡಿ 2 ಶಕ್ತಳಾಗದೆ

ಕೂಡೆ ಬಳಿಬಳಿದು ಸುಳಿಸುಳಿ
[1]ದೀಡಿಱಿದೊಳಗೊಳಗೆ ಘುಳುಘುಳಿಸಿ ಕುದಿದಾಗಳ್ ೪೫

ಗಗನದೆ ಹರಿಸುರಪತಿಗಳ್
ಜಗದ್ಧಿತಾರ್ಥಂ, ಮಹೇಶ, ಕರುಣಿಪುದೆಂಬ-
ನ್ನೆಗಮಿತ್ತಲ್ ಘಱಿಘಱಿ ಭುಗಿ
ಭುಗಿಲೆನೆ, ನೆರೆ ಕಾಮನುರಿದು ಕರಿಮುಱಿವೋದಂ ೪೬

ತೊಟ್ಟನೆ ಭಾಳಾನಲನಿರ-
ದೊಟ್ಟಯಿಸಿಯೆ ಕುಸುಮಶರನನುರುಪಿದ ಪದದೊಳ್,
ಪುಟ್ಟಿತುಮಂ ಪೋದುದುಮಂ
ಸುಟ್ಟುದುಮಂ ಕಾಣಬಾರದಾಯ್ತಾ ಕ್ಷಣದೊಳ್ ೪೭

ಇಂತು ಅತಿಸ್ವತಂತ್ರಂ ಶತಪತ್ರನೇತ್ರಪೂಜಿತಪಾದಂ ಹೇಮಕೂಟಾಗ್ರದ ಮತಂಗಪರ್ವತದೊಳ್ ಮದನನಂ ಸುಟ್ಟುರುಪಿ,

ಮುಂತಿರ್ದೊಪ್ಪುವ ಗಿರಿಜಾ-
ಕಾಂತೆಯನೀಕ್ಷಿಸದೆ, ನುಡಿಯಿಸದೆ, ಸೋಂಕದೆ, ನಿ-
ಶ್ಚಿಂತಂ ಸ್ವತಂತ್ರನಹಿಧರ
ನಂತರ್ಧಾನಕ್ಕೆ ಸಂದನಲ್ಲಿಂ ಬಳಿಯಿಂ ೪೮

ಶಿವನಧಿಕಾಕ್ಷಕ್ರೋಧೋ-
ದ್ಭವಶಿಖಿಯಿಂ ಮದನನುರಿಯೆ, ರತಿಗತಿಶೋಕಂ
ಕವಿದಳ್ಕಿದಳಿಂದುಗುಪ-
ಪ್ಲವಮಾಗೆ ಚಕೋರಿ ಕರಗಿ ಕೊರಗುವ ತೆಱದಿಂ. ೪೯

ಇಂತು ಮನಂ ಅಳ್ಕಿ, ತನು ಬಳ್ಕಿ, ಕೋಡಿ ಕರಣಂ ಬಾಡಿ, ಮತಿ ಕೆಟ್ಟು, ರತೀದೇವಿಗತಿದುಃಖಂ ಪುಟ್ಟಿ ನಿಲಲಾಱದೆ ಕೊರಗುತುಂ ಪರಿದು ಬಂದು,

1 ತುಂಬು, ರಭಸದಿಂದ ಮುಂದುವರಿ.

ಬೆಂದ [1]ನುಲಿಯಂತೆ ಮದನಂ
ನಿಂದಿರೆ, [2]ಅಳಲೇಱಿ ನುಡಿಯಲಱಿಯದೆ ನಿಲೆ, ಶೋ-
ಕಂ ದಳವೇಱುತೆ ಮಿಾಱುತೆ
ಸಂದಣಿಸುತ್ತಳಿಸಿತಸ್ತುರತಿಯಂ ರತಿಯಂ ೫೦

ಭಾವಿಸಿ ಭವನಂ ಕುಸುಮಾ-
ಸ್ತ್ರಾವಳಿಯಿಂದೆಚ್ಚು ಗೆಲ್ವೆಯೆಂದಿರ್ದನಿದಿಂ-
ತೋವೊ ನಿಟಿಲಾಗ್ನಿಯಿಂದಂ
ಬೇವುದನಾನೆತ್ತ ಬಲ್ಲೆ [3]ನಲರ್ವಿಲ್ಲರಸಾ ೫೧

ಎಳೆಯನೆ ಸುಕುಮಾರನೆ ಸದ-
ಮಳನೆ ಸುಖಪ್ರದನೆ ಸೊಬಗೆ ಸುರತರುವೇ ತತ್-
ಫಳಮೆ ಸುಧಾರಸಮೇ ನಿ-
ನ್ನಳವಱಿಯದೆ [4]ನೊಸಲ ಕಣ್ಣ ಮುಸುಕಂ ತೆಱೆದಯ್ ೫೨

ಎಂದುಂ ಮುಳಿದೊಡೆ ತಿಳಿವಂ
ಮುಂದಿಟ್ಟಲ್ಲದೆ ಮದೀಶ ಮುಳಿಸಿಲ್ಲಿಲ್ಲೀ
ಯಂದಂ ಪೊಸತಿಂದಿನ ಮುಳಿ-
ಸೆಂದಿನ ಮುಳಿಸಿನವೊಲಲ್ತು, ಮದನನೃಪಾಲಾ ೫೩

ಪನ್ನಗಭೂಷನ ವಿಷಸಂ-
ಪನ್ನನ ನಿಷ್ಠುರಗುಣಂಗಳುರಿಪುವುದುಚಿತಂ
ನಿನ್ನಂ; ನಿನ್ನೀ ಸದ್ಗುಣ-
ಮೆನ್ನಂ ನೆರೆದುರಿಪಲೇಕೆ, ಮನ್ಮಥರಾಜಾ ೫೪

ಎಂದು ಕುಸುಮಕೋದಂಡನ ಸುಧಾಮಯ ಸದ್ಗುಣಂಗಳನ್ ಎಣಿಸಿ ಎಣಿಸಿ ಪಲುಂಬಿ ಪಂಬಲಿಸಿ [5]ಪಳಯಿಸಿ ಮತ್ತೆ ಮತ್ತೆ ಮಾಣದೆ,

---

1 ಹಗ್ಗ 2 ದುಃಖ 3 ಮನ್ಮಥ 4 ಹಣೆ 5 ಪ್ರಲಾಪಿಸಿ.

ವನದೇವತೆಯರಿರಾ, ನಂ-
ದನದೇವತೆಯರಿರ, ದೆಸೆಯ ದೇವತೆಯರಿರಾ,
ಘನಪಾಪಂ ಪುದಿದಿರ್ದೀ
ವನಿತೆಯನೊಳಕೊಳ್ಳಿರೇ, ಅನಾಥೆಯನೆನ್ನಂ ೫೫

ಎಂದಿಂತು ದೆಸೆದೆಸೆಗೆ ಕರೆಕರೆದು ಬಾಯಾಱು, [1]ಬಲ್ಪಳಿದು ನಿಂದಿರಲಾಱದೆ ಕಾಲ್ ಕುಪ್ಪಳಿಸಿ, ಭೋಂಕನೆ ಕುಳ್ಳಿರ್ದು, ವಶಮಲ್ಲದ ದುಃಖದಿಂ ಬಿಸುಸುಯ್ಯುತ್ತುಂ, ಬಸಿಱಂ ಪೊಸೆದು, ಭೂತಳದೊಳ್ ಬಿಳ್ದು, ಕೆಚ್ಚುಗಟ್ಟಿದಳಲಿಂ ಮೂರ್ಛೆವೋಗಿ, ಕೊರಲೊಳ್ ಹರಣಮಂ, ಕಣ್ಣೊಳ್ ಕಾರ್ಪಣ್ಯಮಂ, ಮನದೊಳ್ ಪರವಶತೆಯಂ ಪಿಡಿದು, ದುಃಖಂ ರೂಪುಗೊಂಡಂತೆ ಮಱ[2]ದೊಱಗಿರ್ದಾಗಳ್,

ಗಿರಿಸುತೆ ಬಂದು ಕಂಡು ಬೆಱಗಾಗಿ, ಕೃಪಾಕರಚಿತ್ತೆ ಹತ್ತೆ ಸಾ-
ರ್ದು, ರತಿಯ ಮೆಯ್ಯುಮಂ ಮೊಗಮುಮಂ ತಡವುತ್ತಿರೆ, ಸೋಂಕಿನಿಂದೆ ಚೇ-
ತರಿಸುತೆ ಕಣ್ಗಳಂ ತೆಱೆದು ಪಾರ್ವತಿಯಂ ನಡೆ ನೋಡುತುಂ, ದಯಾ-
ಪರೆ ಭುವನೈಕಮಾತೆ ಪದೆದೀಕ್ಷಿಪುದೆನ್ನಯ ದುಃಖ[3]ದೊಪ್ಪಮಂ ೫೬

ಎಂದಳಲ್ದು ನುಡಿದು ನಿಲಲಾಱದೆ,

ಗಿರಿಜೆಯ ಪದಯುಗದೊಳ್ ರತಿ
[3]ಪೊರಳ್ದು, [4]ಪುಯ್ಯಲ್ಚಿ, ಪೆರ್ಚಿದಳಲಿನ್ಮಿಡಿಸು-
ತ್ತಿರೆ, [5]ಪಳಯಿಸುತುಂ, ದುಃಖಾ
ತುರೆ ಶೋಕಂಗೆಯ್ದು ಸುಯ್ದು ಪೊಯ್ದಳಲುತ್ತುಂ, ೫೭

ಕರುಣಿಸು ತಾಯೇ ತವರೇ,
ಪರಿರಕ್ಷಿಸು, ದಯೆಯೊಳೀಕ್ಷಿಸುಡುಗಿಸು ನೋವಂ,

---

1 ಶಕ್ತಿಗುಂದು 2 ರೀತಿ (ತೀವ್ರತೆ) 3 ಹೊರಳಿ, ಉರುಳಾಡಿ 4 ಹುಯ್ಯಲಿಟ್ಟು 5 ಪ್ರಲಾಪಿಸು, ಗೋಳಾಡು.

ಪರಿಹರಿಸು ದುಃಖಮಂ, ವರ-
ಗಿರಿರಾಜತನೂಜೆ, ಕಾದುಕೊಳ್ಳೆನ್ನಸುವಂ ೫೮

ಎಂದಳಲ್ವ ರತಿಯಂ ಕಂಡು ಮನಂಗೊಂಡು,

ಬೇ[1]ಡುಡುಗು ಶೋಕರಸಮಂ
ನೀಡಾಗದೆ ನಿನ್ನ ವಲ್ಲಭನನೀಶ್ವರನಂ
ಬೇಡುವೆನಾವರ್ಥದೊಳಂ
ಮಾಡುವೆನೆಲೆ ಪರಮಹರ್ಷಮಂ ನಿನಗೆ ರತೀ ೫೯

ಎಂದಗಜೆ ಬೆಸಸೆ, ಶೋಕಮ-
ನಂದುಡುಗುತಡಂಗಿಸುತ್ತುಮಳಲಂ, ಮನದೊಳ್
ಸಂದಣಿಪ ದುಃಖಮಂ ಮಱ-
ದೊಂದಿದಳಾ ರತಿ ಭವಾನಿಯುಜ್ಜ್ವಳವಚಮಂ ೬೦

ಇಂತು ರತಿಗಭಯಮಂ ಕೊ-
ಟ್ಟಂತಕಹರನಿರದೆ ಪೋದ ಪರಿಯಂ ಭರದಿಂ
ಚಿಂತಿಸಿ, ಜಯೆವಿಜಯೆಗಳೊಡ-
ನಿಂತೆಂದಳ್ ಗಿರಿಜೆ ಮನದ ಮುನಿಸಿಂದಾಗಳ್ : ೬೧

ಆನಿಂತಿಂತರ್ಚಿಸುತ್ತುಂ ಗತಿ ಮತಿ ಪತಿ ಎನ್ನಾಯು ಎನ್ನಾತ್ಮತತ್ತ್ವಂ ತಾನೆಂದುತ್ಸಾಹದಿಂದಿರ್ದ ಚಳಪತಿಯ ಮೇನಾಖ್ಯೆಯೊಂದಳ್ಕಱಿಂ ಬಿ-ಟ್ಟಾನಂದಂಗೂಡಿ ಕಾರುಣ್ಯಮನನವರತಂ ಪಾರುತಿರ್ಪಲ್ಲಿ, ಪೇಳಿಂ ತೇನೆಂದುಂ ನೋಡದುಗ್ರಂ ರಜತಗಿರಿಗೆ ಪೋದಂ ನಿಕೃಷ್ಟಾತ್ಮನಾದಂ ೬೨

ಅಂತುಮಲ್ಲದೆ ಉಗ್ರತಪೋಭರಾಕೃತಿಯನ್ ಅಂತು, ವಿಪುಳ ನಿಶ್ಚಳನಂ ಛಲದಿಂದೆ ತಂದಪೆನ್ ಎಂದು ಸಖೀಜನರೊಡನೆ ತನ್ನ

---

1 ತಡೆ, ನಿಲ್ಲಿಸು.

ಸಾಮರ್ಥ್ಯದ ಒಂದುನ್ನತಿಯಂ ನುಡಿಯುತ್ತುಂ ಮೃಡಾಣಿ ಮಹಾಮಾಯೆ ಸರ್ವಬ್ರಹ್ಮಾಂಡಾಭರಣೆ ಮಹಾದೇವನ ಮನೋರಥಂ ಚಲದಲಲನೆ ಬಲ್ಪಿನ ಭಾವಕಿ ಏಕನಿಷ್ಠಾನಿಧಿ ಉಗ್ರತಪೋಭರನಿವೇಶನಾಭಿಮುಖಿಯಾಗಿ

ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮವೈರಿ ನುಡಿಯಿಸದಂತ-
ರ್ಧಾನಕ್ಕೆ ಸಂದನದಱಿಂ-
ದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ ೬೩

## ೪. ತಪವಗಣ್ಯಪಾವನಪುಣ್ಯಂ!

ಬಂದು ತಪೋನಿವೇಶನಮನೀಕ್ಷಿಸಿ, ಬರ್ಪ [1]ನಿದಾಘಕಾಲದೊಳ್
ಸಂದ [2]ನಗಾಗ್ರದಲ್ಲಿ ನಿಲವೇಳ್ಕುಮೆನುತ್ತಮೆ ನಿಂದು ಮೇನಕಾ-
ನಂದನೆ ತದ್ವಿಳಾಸಿನಿಯುರಾನನಮಂ ನಡೆನೋಡೆ, ಕಾಣುತುಂ
ಸೌಂದರಿಯರ್ ಜಟಾರಚನೆಯಂ ತರದಿಂ ಭರದಿಂ[3]ದೊಡರ್ಚಿದರ್ ೧

ವರಭಸಿತೋದ್ಧೂಳನಮಂ
ಗಿರಿಜೆಗೆ ಸುರಸತಿಯರೊಲ್ದು ಮಾಳ್ಪೆಡೆಯೊಳ್ ಕ-
ರ್ಪೂರದ [4]ರಜದಿಂದೆ ಪುಷ್ಪೋ-
ತ್ಕರಮಾಲೆಯನೊಸೆದು [5]ಪೂರೆವ ತೆಱನಾಯ್ತಾಗಳ್ ೨

ಸಂದಣಿಸುವ ಜಡೆ ಬೆನ್ನಂ
[6]ಮುಂದಯಿಸಿ ಮುಸುಂಕು ತಿಳಿಯೆ, ನೀಲಾಂಬುದಮಂ
ಪಿಂದಿಕ್ಕಿ ಮುಂದೆ ಬೆಳಗುತೆ
ನಿಂದೆಳಮಿಂಚಿನವೊಲಗಜೆ ನೆಱೆಮೆಱೆದಿರ್ದಳ್ ೩

ಅಳವಡೆ ಮುನ್ನಂ ಪತ್ತಿದ
ಕಳಂಕಮದು [7]ಪೊರ್ದದಂತೆ ನಭದಿಂದಿಳಿತಂ-
ದಿಳೆಯೊಳ್ ಶಂಭುಗೆ ಮಿಗೆ ಶಶಿ-
ಕಳೆ ತಪಮಿರ್ಪಂತೆ ಗಿರಿಜೆ ತಪದೊಳ್ ನಿಂದಳ್ ೪

ಭಗ್ನಮನಮಲ್ಲದಚಲಿತೆ
ಲಗ್ನವ್ರತೆಯಾಗಿ ಶಂಕರಪ್ರೇಮಮನೋ-

---

1 ಬೇಸಗೆ 2 ಬೆಟ್ಟದ ತುದಿ 3 ಮಾಡತೊಡಗು 4 ಧೂಳಿ 5 ಹಚ್ಚು, ಲೇಪಿಸು 6 ದಟ್ಟವಾಗಿ ಹರಡು 7 ಹೊಂದು, ಸೇರು.

ನ್ಮಗ್ನಾಂಗಿ, ಧೈರ್ಯನಿಧಿ, ಪಂ-
ಚಾಗ್ನಿಯ ನಡುವಗಜೆ ವಿಪುಳತಪದೊಳ್ ನಿಂದಳ್ ೫

[1]ಅಸುರದ ಗಿರಿಜೆಯಗ್ರವಿ-
ಭಾಸುರತಪಕಂಜಿ ನಭದ ತಪನಂ ನಡೆಯು-
ತ್ತಾ [2]ಸರಿಸಮಂ ಕರಂ ಬಿ-
[3]ಜ್ಜ್ಯೋಸರಿಸಿಯೆ ನಡೆವನೆಂದೊಡೇವಣ್ಣಿಪೆನೋ ೬

ಮೃಗತತಿ ಸುಳಿಯವು, ಮಿಗೆ ಪ-
ಕ್ಷಿಗಳೆಳ್ದೆಱಗವು, ಸಮೀರಣಂ ಸಂಚಲಿಸಂ,
ಗಗನದ ಖೇಚರರಾ [4]ಬ-
ಟ್ಟೆಗೆ ಸಾರರ್, ನಗಜೆಯತುಳತಪದಾತಪದೊಳ್ ೭

ದೆಸೆಯಂ [5]ಕಾಹೇಱಿಸುತ್ತುಂ, ತೃಣಕುಲಲತೆಯಂ ಸೀದು ಕರ್ಪೇಱಿಸುತ್ತುಂ,
[6]ರಸೆಯಂ ಸಂತಾಪಿಸುತ್ತುಂ, ಜಳಭರಿತ ತಟಾಕಂಗಳಂ [7]ಶೋಷಿಸುತ್ತುಂ,
ಸಸಿಯಂ ವೃಕ್ಷಾಳಿಯಂ ಸುಟ್ಟುರಿಪುತೆ ಮೃಗಮಂ ಬೇಯಿಸುತ್ತದ್ರಿಯಂ ದ-
ಳ್ಳಿಸಿ ಸೀಳುತ್ತುಂ, ವಿಶಾಳಂ [8]ದವಶಿಖಿಯವೊಲೆಳ್ದತ್ತಮೋಘಂ ನಿದಾಘಂ ೮

ಪೊಸಬೇಸಗೆಯೊಳ್ ಮೃಗತತಿ-
ಯಸುವೆರಸಿರವೇಳ್ಕುಮೆಂದು ಕರುಣಿಸಿ [9]ಮಿತ್ರಂ
ಬಿಸಿಲಂ [10]ಹಿಳಿದೊಡೆ [11]ಬೆನ್ನೀ-
ರೊಸರ್ವಂತಿರ್ದುದು ಮರೀಚಿಕಾಜಲಮತ್ತಂ ೯

---

1 ಅತಿಶಯ, ಶಕ್ತಿಯುತ 2 ಪಕ್ಕ, ಮಗ್ಗುಲು 3 ಪಕ್ಕಕ್ಕೆ ಸರಿ 4 ದಾರಿ
5 ಕಾವು 6 ಭೂಮಿ 7 ಒಣಗಿಸು, ಬತ್ತಿಸು 8 ಕಾಡುಕಿಚ್ಚು 9 ಸೂರ್ಯ
10 ಹಿಂಡು 11 ಸುಡುನೀರು.

ತರದಿಂದಂ ತೆರೆ ಮಸಗುವ
ಮರೀಚಿಕಾಜಲಮನಿಳೆಯ ಜಲಮೆಂದು ಕರಂ
ಹರಿಣಂಗಳ್ ಪರಿತಂದಾ-
ತುರಿಸುತ್ತುಂ ಬಿಸಿಲ ಬಯಲ [1]ನೀಂಟಿ ಬಳಲ್ಗುಂ ೧೦

ಘರಿಘರಿಲೆಂದು ಸೀದುವು ವಿಹಂಗಕುಲಂ; ಕೆರೆಬಾವಿ [2]ಬೆಂಚೆಗಳ್
[3]ಪುರಿದರಳಿಲ್ದುವೀ ಮನುಜರಾತಪತಾಪದೊಳಳ್ಕಿ ಬಳ್ಕಿದರ್;
ಕರಿಮುರಿವೋಯ್ತರಣ್ಯಮುಱಿ ಬೆಂದು ಮೃಗಾವಳಿ [4]ಪೊಂದಿದತ್ತು; ನಿಂ-
ದುರಿದುವು ಬೆಟ್ಟಮಿಂಗಿದುವು ವಾರಿಧಿ; ಕಾಯ್ದುದು ಭೂರಿಭೂತಳಂ ೧೧

ಮರದಡಿಯೊಳ್ ಕಾನನದೊಳ್
ಗಿರಿತಟದೊಳ್ ಬಟ್ಟಬಯಲೊಳಂಬರತಳದೊಳ್
ಕರಿಯ ಬಿಸಿಲುರಿಯ ಬಿಸಿಲ-
ಚ್ಚರಿಯ ಬಿಸಿಲ್, ಪಿರಿಯ ಬಿಸಿಲಖಂಡಿತದ ಬಿಸಿಲ್ ೧೨

ನಡೆಯಲ್ಕೊಂದಡಿಯಿಟ್ಟು, ಕಾಯ್ದ ನೆಲನಂ ಕಾಲ್ ಮುಟ್ಟೆ ಚುಯ್ ಎಂದು ಚೆಂ-
ಪೊಡೆ ಮತ್ತೊಂದಡಿಯೆತ್ತಲಾಱದಳಲಿಂ ಕಣ್ಮುಚ್ಚಿ, ಹಸ್ತಾಗ್ರಮಂ
ಕಡೆವಾಯೊಳ್ ಸೆಱೆಯಿಟ್ಟು, ನೆತ್ತಿ ಬಿರಿದೆತ್ತಲ್ ಮುತ್ತುಗಳ್ ಸುತ್ತಲುಂ
ಸಿಡಿಯುತ್ತಿರ್ಪಿನಮಿರ್ದುದೊಂದತಿಮದೇಭಂ ಭೀಷ್ಮದೊಳ್ ಗ್ರೀಷ್ಮ-
ದೊಳ್ ೧೩

ಜಲಜಸಖನನಿಲಸಖನೆಂ-
ದಿಳೆಯೊಳ್ ರಸವೆಸರನಾನದಿರ್ದೊಡೆ ಸೂರ್ಯಾ-
ನಳರೋವೊ ಸಂತಮಿರ್ಪರೆ
ಘಳಿಲನೆ ನಿಂದುರಿದು ಹೋಗರೇ ಬೇಸಗೆಯೊಳ್ ೧೪

---

1 ಕುಡಿದು 2 ಹಳ್ಳ 3 ಸುಟ್ಟು ಅರಳಾಗು 4 ಸಾಯು.

ದಶಭುಜನ ಮನೋವಲ್ಲಭೆ
ದಿಶಾವಳೀಭರಿತಕೀರ್ತಿಯುತೆ ಘೋರತಪೋ-
ವಶೆ ನೆಱೆ ಗಂಗಾಧರನಂ
ಶಶಿಧರನಂ ನೆನೆದು ಕಳೆದಳಾ ಬೇಸಗೆಯಂ ೧೫

ಆ ಸಮಯದೊಳ್ ಸಕಳಕಳಾಕೋವಿದೆಯರಪ್ಪ ಜಯವಿಜಯೆಗಳ್ ಮೆಯ್ಯಿಕ್ಕಿ ಕೆಯ್ಯಂ ಮುಗಿದು,

ಮದವುಡುಗಿತ್ತು ಬೇಸಗೆ ಕರಂ; ನಸುದೋಱಿದುವಲ್ಲಿಗಲ್ಲಿಗಂ-
ಬುದನಿಕರಂ; [1]ಸುರುಳ್ದುದು ಬಿಸಿಲ್; ನೆಗೆದತ್ತು ತಟಲ್ಲತಾಂಕುರಂ;
ಬೆದಱಿದುವಂಚೆ; ಆಡಲಡಿಯಿಟ್ಟುವು [2]ಸೋಗೆಗಳೆಯ್ದೆ [3]ಪಲ್ಲವಂ
ಪುದಿದ ಕದಂಬದೊಳ್ ಮುಗಿಲ[4]ನೆಳ್ಬಿಸಲಿರ್ದುದು ಪಶ್ಚಿಮಾನಿಳಂ ೧೬

[5]ಕಡವಿನ [6]ಸೊವಡಿಂದೊಂದೆರ-
ಡಡಿಯಿಡುತಿರ್ದಪುದು ಗಾಳಿ; ನಲಿದು ನವಿಲ್ಗಳ್
ನಡೆನಟಣೆಗೊಳುತ್ತಿರ್ದಪು-
ವೆಡೆಯಱಿಸುತ್ತಿರ್ಪುವಂಚೆ; ಸುಳಿದುವು ಮುಗಿಲ್ಗಳ್ ೧೭

ಪೋದುದು ಬೇಸಗೆ; [7]ಕಾರ್ ಮೊಗ-
ವಾದುದು; ತರುತಳದ ನೆಳಲ ತಣ್ಪಿನೊಳಿರ್ದ-
ತ್ಯಾದರದಿಂ ಮಾಳ್ಪುದು ಪು-
ಣ್ಯೋದಯ ನಿಷ್ಕಪಟವಿಪುಳತಪಮಂ ಗಿರಿಜೇ ೧೮

ಎನೆ ಕೇಳ್ದು ಗಿರಿಸುತೆ ನಡೆತಂದು ಘನವಟವಿಟಪಿಚ್ಛಾಯೆಯೊಳ್ ಘೋರತಪದೊಳ್ ನಿಂದಳ್.

---

1 ಕುಂದು, ಕುಗ್ಗು 2 ನವಿಲು 3 ಚಿಗುರು 4 ಎಬ್ಬಿಸು 5 ಕದಂಬವೃಕ್ಷ 6 ನರುಗಂಪು 7 ಮಳೆಗಾಲ.

ನಲಿದುದು ಸೋಗೆ; ನುಣ್ಪನೆಡೆಗೊಂಡುದು ಚಾದಗೆವಕ್ಕಿ; ಮಿಕ್ಕ ಪ್ಪೂ-
ತಲದರ್ದುದು ಸೊಂಪಿನಿಂ ಕಡವು; ತಣ್ಪನೆ ಹೇಱುದುವೆಯ್ದೆ ಬೆಟ್ಟು; ಬಂ-
ದಲೆದುದು ಪಶ್ಚಿಮಾನಿಳ[1]ನಮರ್ಚಿತು ಕೇತಕಿ ಪೂದೊಡಂಬೆಯುಂ;
ಬಿಲದೊಳಿ ಪೊಕ್ಕುವಂಚೆ; ಮುಗಿಲೊಡ್ಡಣೆಯೊಡ್ಡಿತು ಕಾರಕೊರ್ವಿ-
ನೊಳ್ ೧೯

ಹರಿಸಂ ಮಿಗೆ ನವಿಲಾಡು-
ತ್ತಿರೆ, ಚಾದಗೆಯುರ್ಬಿ ನಲಿಯೆ, ನಾಲ್ಕುಂದೆಸೆಯುಂ
ಕರಿಯಂತಿರೆ ಗಿರಿಯಂತಿರೆ
ಧರೆಯಂತಿರೆ ನೆಗೆದುದಭ್ರಕುಲಮುಂಬರದೊಳ್ ೨೦

ತವೆ ಬಳೆದು ಪರ್ಬುತಾಕಾ-
ಶವನೇಱುದ ಮುಗಿಲ ನೀರ ಸೆಱೆಯಂ ಮಿಗೆ [2]ದು-
ಶ್ಚ್ಯವನಂ ಬಿಡಿಸುವ ಘನಶ-
ಸ್ತ್ರವಣಂ ಹೊಳೆವಂತೆ ಮಿಂಚು ಮಿಂಚಿತ್ತಾಗಳ್ ೨೧

ಆ ಮಿಂಚಿನ ಮೊಳಗಿನೊಳು-
ದ್ದಾಮಾಂಬುದನಿಕರದಿಂದೆ ರಸೆ ದೆಸೆ ಗಗನಂ
ತಾಮಱಿಯಲ್ ಬಾರದವೋ-
ಲೇಮಾತೋ ಕಱೆದುದಿಳೆಯ ಹರ್ಷಂ ವರ್ಷಂ ೨೨

ಗಗನದಿನೆಱಗಿದ ಮಳೆ ನೀ-
ನಗಲದೆ ಸಲಪೆಂದು ವರ್ಷನರಪಂಗಿಳೆಯಂ
ಮುಗಿಲಗಲದ ಹಸ್ತದಿನಾ
ಗಗನಾಂಗನೆ ಧಾರೆಯೆಱೆದ ತೆಱನಾಯ್ತಾಗಳ್ ೨೩

ಘನಸಮಯ ನೃಪಾಲಕನೊಳ್
ಘನಪಾಣಿಗ್ರಹಣಮಾದ ಭೂವನಿತೆಗೆ ಮು-

---

1 ತೊಡು 2 ಇಂದ್ರ.

ತ್ರಿನ [1]ಸೇಸೆಗಳಂ ಗಗನಾಂ-
ಗನೆ ಸೂಸಿದಳೆನಿಸೆ ಬಿಳ್ದು[2]ವಾಲಿವರಲ್ಗಳ್ ೨೪

ಧಾರೆಗಳವನಿಯನೊಳಪೊ-
ಕ್ಕೋರಂ[3]ತುಚ್ಛಳಿಸಿ ಮಾಱುತಿರೆ ನಭದಿಂ ಘೋರ್-
ಘೋರೆಂದಿರುಳುಂ ಪಗಲುಂ
ಜೀರೆನುತುಂ [4]ತೆಱಪುಗುಡದೆ ಕಱೆದುವು ಮಳೆಗಳ್ ೨೫

ಒತ್ತರಿಸುತ್ತಂಬರಮಂ,
ಮುತ್ತುತ್ತುಂ ದಿಗ್ವಿತಾನಮಂ, ಧರೆಯೊಳ್ ತೀ-
ವುತ್ತುಂ ಕತ್ತಲಿಸುತ್ತುಂ
ಸುತ್ತುಂ ಜಿನುಗಿದುವು ಸೋನೆ ಇರುಳುಂ ಪಗಲುಂ ೨೬

ಗಗನಂ ಕೆಟ್ಟುದು; ಚಂದ್ರಸೂರ್ಯರಳಿದರ್; ದಿಕ್ಚಕ್ರಮಿಲ್ಲಾಯ್ತು; ಬ-
ಟ್ಟೆಗಳಸ್ಪಷ್ಟಮುವಾದುವಾತ್ತ ಜಲದೊಳ್ ಪೂಳ್ದತ್ತು ಧಾತ್ರೀತಳಂ;
ಖಗಸಂಚಾರತೆ ಶೂನ್ಯಮಾದುದು; ನಿರುದ್ಯೋಗಕ್ಕೆ ಪಕ್ಕಾದುದೀ
ಜಗಮೆಂಬಿನಮೆಯ್ದೆ ಕಟ್ಟಿ ಕಱೆದ[5]ತ್ತಾಸಾರಮಾ ಲೋಕದೊಳ್ ೨೭

ಸುರಿದುದು ಮಳೆ; ತಣೆಯಿತ್ತಿಳೆ;
ನೆರೆದುದು ಬೆಳೆ; ಕಾನನಂಗಳೊಳ್ ನೆಱೆ [6]ವಿಸಟಂ-
ಬರಿದುವು ಹೊಳೆ; [7]ನಾಂದುವು ಶಿಳೆ;
ಧರಣಿಗೆ ಮೆಳೆ ಪಿಡಿದ [8]ತಳೆಗಳಾದುವು ಮಳೆಯೊಳ್ ೨೮

ಮಳೆ ಮಾಣ್ದೊಡೆ ಹನಿ ಮಾಣದ
ದಳಫಳಯುತವಿಟಪಭರಿತ ವಿಟಪಿಯ ತ-
ಣ್ಣೆಳಲಲ್ಲಿಂ [9]ತಳರದೆ ಕೋ-
ಮಳೆ ಮಳೆಯೊಳಗಗಜೆ ನಲಿದು ಸಲೆ ನಿಂದಿರ್ದಳ್ ೨೯

---

1 ಅಕ್ಷತೆ 2 ಆಲಿಕಲ್ಲು 3 ಮೇಲೆ ಹಾರು 4 ಅವಕಾಶ, ಬಿಡುವು 5 ಜಡಿ ಮಳೆ 6 ದಡಮಾರು, ಚೆಲ್ಲಾಪಿಲ್ಲಿಯಾಗಿ ಹರಿ 7 ನೆನೆ, ಒದ್ದೆ 8 ಕೊಡೆ 9 ಚಲಿಸು.

ಇಂತು ನೆಗೆದ ಮುಗಿಲ್ಗಳ ಭೀಕರಾಕಾರಕ್ಕಂ, ಮಿಂಚುಗಳ ಸಂಚಳತೆಗಂ, ಮೊಳಗಿನ ಮಹಾಧ್ವನಿಗಂ ಸಿಡಿಲ ಸಡಗರಕ್ಕಂ, ಬಲ್ಸರಿಗಳ ಸಂಭ್ರಮಕ್ಕಂ, ಬಿಱುವಳೆಯ ಬಲ್ಸೊಯಿಲ್ಗಂ, ಪೆರ್ಮಳೆಯ ಧಾರೆಗಂ, ಆಲಿಕಲ್ಲ ಕರ್ಕಶಕ್ಕಂ, [1] ಇಂದ್ರಗೋಪದ ಸಂದಣಿಗಂ, ಶೀಕರದ ಶೀತಕ್ಕಂ, ತುಂತುಱ ತಿಂತಿಣಿಗಂ, ಸೋನೆಗಳ ಜಿನುಂಗಿಗಂ, ಬಿಱುಗಾಳಿಯ ಗಾಸಿಗಂ, [2] ಕಾಲ್ಪೊನಲ ಕಡುಪಿಂಗಂ, ಪೆರ್ಮೋಡದ ಕತ್ತಲೆಗಂ, [3] ಮಾರುಳ ಭಯಾನಕಕ್ಕಂ, ಕ್ರೂರಮೃಗದ ರೌದ್ರಕ್ಕಂ, ಉಗ್ರಸರ್ಪಂಗಳದ್ಭುತಕ್ಕಂ, ಅರಣ್ಯದಾಭೀಳತೆಗಂ, [4] ಕೋಡದೆ ಕೊಂಕದೆ ಬಾಡದೆ ಬಳ್ಕದೆ [5] ಸೆಡೆಯದೆ [6] ಸೇಡುಗೊಳ್ಳದೆ ಬೆಚ್ಚದೆ ಬೆದಱದೆ ಬಲಂಗೆಡದೆ ಮನಂಗುಂದದೆ ಕೆಲನಂ ಸಾರದೆ ಸಹಾಯಮಂ ಪಾರದೆ ಮಹಾವಟವೃಕ್ಷದ ಕೆಳಗೆ ವಿಪುಳತಪದಿಂದಪರ್ಣೆಯೊಪ್ಪುತ್ತುಮಿರೆಯಿರೆ,

ಜನವನುರಾಗವೇಱೆ ಪೊಱಮಟ್ಟು ಕೃಷಿವ್ಯವಸಾಯವೃಂದಮಂ
ಮನದೊಲವಿಂದೆ ಮಾಡುತಿದೆ; [7] ಕೋಟರದಿಂ ನೆಗೆತಂದು ಪಕ್ಷಿಗಳ್
ಕೊನೆದಳಿರ್ಗೊಂಬಿನೊಳ್ ಬಿಸಿಲನಾಂತಿವೆ; ಹಂಸಕುಲಂ ಬಿಲಂಗಳಿಂ
[8] ದನುಮಿಸೆ ಕೂಡೆ ಪೊಣ್ಮುತಿವೆ; ಪಾರ್ವತಿ, ನೋಡ ಶರದ್ವಿಳಾಸಮಂ ೨೦

ರವಿಕಿರಣಂ ನೀರೋಡು-
ತ್ತಿವೆ ತಣ್ಪಂ ಬೀರುತಿವೆ; ರಥಾಂಗಕುಲಂಗಳ್
ತವೆ ತಣ್ಬಿಸಿಲೊಳ್ ನಿಂದಿ
ರ್ದಿವೆ; ಮೇಘಂ ಹಿಂಡಿ ಹರಹಿದಂತಿವೆ ನಭದೊಳ್ ೨೧

ಪರೆದುವು ಪಯೋಧರಂಗಳ್;
ಬರುತಿವೆ ಕಳಹಂಸಮಾಲೆ; ಬಿಸಿಲೊಳ್ ವಿಹಗಂ
ನೆರೆದಿವೆ ಮೃಗಸಂತತಿ ಗ-
ಹ್ವರದಿಂ ಪೊಱಮಟ್ಟು ಮೇಯುತಿವೆ [9] ಮೊಳೆವುಲ್ಲಂ ೨೨

---

1 ಹೊನ್ನೆಹುಳು 2 ಪ್ರವಾಹದ ಆಧಿಕ್ಯ 3 ಪಿಶಾಚಿ 4 ಹೆದರದೆ
5 ಮುದುರದೆ, ಕುಗ್ಗದೆ 6 ಸಂಕುಚಿತವಾಗು (ಚಳಿಯಿಂದ) 7 ಪೊಟರೆ
8 ದನಿಮಾಡಲು 9 ಹುಲ್ಲುಮೊಳಕೆ.

ತಿಳಿದುವು ದೆಸೆಗಳ್ ; ಹಂಸಾ-
ವಳಿ ಸಾರ್ದುವು ಪೂರ್ಣಸರಸಿಯಂ ; [1]ಬಿಸಕಂದಂ
ಮೊಳೆವೋದುವು; ಸಲಿಲಂ ನಿ-
ರ್ಮಳಮಾದುವು; ತಳೆದುದಾಗಸಂ ಧವಳತೆಯಂ ೩೩

ಇದುವೆ ಶರತ್ಸಮಯಂ ; ಮೇ-
ಲೊದವುತ್ತಿರೆ ಶೀತಕಾಲಮಗಸುತೆ, [2]ಕಾಸಾ-
ರದ ಕೆಱೆಗಳ ತೊಱೆಗಳ ಬೆ-
ಟ್ಟದ ತಪ್ಪಲ ಹಿಮದೊಳೆಸೆಯೆ ಮಾಳ್ಪುದು ತಪಮಂ ೩೪

ಎಂದು ಜಯವಿಜಯೆಗಳ್ ಬಿನ್ನಪಂಗೆಯ್ದು ಉಚಿತವಚನಾನೀಕಮಂ ಆಕರ್ಣಿಸಿ, ಮಹಾದೇವಿ ಬಡವಾದೊಡಲಂ ಬಿಡದೋಲಗಿಪ ನಾರಸೀರೆ ನಯವೇಱೆ ಪೊಱಗಣ ಮಳೆಯಿಂ ನಾಂದ ಮೆಯ್ಯ ನೀರ [3]ಬಣ್ಣಮಂ ತಣ್ಣೆಳಲೊಳ್ ಆಱಿಸಿ, ಧ್ಯಾನಾನಂದರಸದ ಸೋನೆಯಿಂದೊಳಗೆ ನಾಂದ ಕರಣಂಗಳಂ ಉಸಿರೊಳಾಱಿಸುತ್ತುಂ, ತಪೋಭಾನೂದಯಕ್ಕೆ ಮುಖಕಮಳದಳಂ ಬಿರ್ಚುವಂತೆ ಮೆಯ್ಯ ಸಂಪುಟಂ ಬಿರ್ಚೆ ಕಣ್ದೆಱೆದು, ಪರ್ವಿದ ಆಲದ ಮರದಿಂ ಗಳಿಲನೆ ಪೊಱಮಟ್ಟು,

ನಡೆತಂದು, ಮಂಜು ನೆಱೆ ಮಾ-
ಣ್ದೊಡೆ ಶೀತಂ ಮಾಣದಿರ್ಪ ತಣ್ಣೆಳಲೊಳ್, ಕಂ-
ಪಿಡಿದ ಲತಾಗೇಹಂಗಳ
ನಡುವಣ ಕಾಸಾರತಟದೊಳಂಬಿಕೆ ನಿಂದಳ್ ೩೫

ಇತ್ತಲ್ ಭೂತಳದೊಳ್ ಹಿಮ-
ಮೊತ್ತರಿಸಿತು ಭುವನಜನಮನುಱೆ ನಡುಗಿಸುತುಂ
ಸುತ್ತುತ್ತುಂ [4]ಸುಗಿಯುತ್ತುಂ
ಮುತ್ತುತ್ತುಂ ಮುಂದುಗೆಡಿಸುತುಂ ಮುಸುಕಿಡುತುಂ ೩೬

---

1 ತಾವರೆಗಡ್ಡೆ 2 ಸರೋವರ 3 ಸೀರೆ 4 ಬಾಚು ಸುಲಿ.

ಮೃಗಸಂತತಿಯಂ ಕೊಳರ್ವ-
ಕ್ಕಿಗಳಂ ಪಕ್ಕಿಗಳನದ್ರಿತಟದೊಳ್ ಕೊಳ[1]ನೊ-
ತ್ತುಗಳೊಳ್ ಕೋಟರದೊಳ್ ಮಿಗೆ
ಪುಗಿಸುತ್ತುಂ ಬಂದನಮಮ ಶಿಶಿರನೃಪಾಲಂ ೩೭

ಕಿಡಿಗಳ್ ಕೆಚ್ಚನೆಯಾಲಿಕಲ್ಲುರಿಯ ಮೊತ್ತಂ ಕೆಂದಳಿರ್; ಕೆಂಡದೊಂ-
[2]ದಡಕಿಲ್ ಮಾಣಿಕ[3]ದಿಂಡೆ; ಕಾಯ್ವ ತಪನಂ ಚಂದ್ರ; ಪೊದಳ್ದಾತಪಂ
ಗಡ ಬೆಳ್ದಿಂಗಳೆನಿಪ್ಪುದೊಂದು ಪೆಸರಂ ತಾಂ ಮಾಡಿದಂತಿರ್ದುದಾ
ಕಡುಪಿಂ ತನ್ನಯ ಕಾಲದಲ್ಲಿ ಹಿಮರಾಜಂ ಧಾರಿಣೀಚಕ್ರದೊಳ್ ೩೮

ಮಿಗೆ ಬೆಮ[4]ರಱತುದು; ನೀರಡಿ-
ಕೆಗಳಿಂಗಿದುವುಷ್ಣದುಸಿರಡಂಗಿತು; ತಪನಂ-
ಗೊಗೆದುದು ಪೆರ್ಚಿದ ತಣ್ಪಾ-
ಗ್ನಿಗೆ ಶೀತಂ ಪತ್ತಿತೇನನೆಂಬೆಂ ಹಿಮದೊಳ್ ೩೯

ಸಲೆ ರವಿ ತೇಜಂಗುಂದುತೆ
ನಿಲಲಂಜುತ್ತೋಡಿ ಪುಗುವನದ್ರಿಯ ಮಱೆಯೊಳ್,
ಗೆಲೆ ಹರಿವ ಹಾವುರಿವ ಕಿ-
ಚ್ಚೆಲೆ ನಿಂದುವು ಶಿಶಿರನೃಪತಿಯಾಜ್ಞೆಗೆ ಜಗದೊಳ್ ೪೦

ಉದಯಂ ಶೀತೋದಯಮು-
ಗ್ಗದ ಮಧ್ಯಾಹ್ನಂ ತುಷಾರ ಮಧ್ಯಾಹ್ನಂ, ಮಿ-
ಕ್ಕುದುದಸ್ತಮಯಂ ತಾನು-
ಷ್ಣದಸ್ತಮಯಮೆನಿಸಿತಮಮ ಹಿಮವಿಭ್ರಮದೊಳ್ ೪೧

ತಿಳಿವೊಡೆ ಶಶಿ ರವಿ, ರವಿ ಶಶಿ,
ಬೆಳಗುವ [5]ಜೊನ್ನಂ ಬಿಸಿಲ್, ಬಿಸಿಲ್ ತಾಂ ಜೊನ್ನಂ,

---

1 ದಡ, ಸಮೀಪ 2 ಕುಪ್ಪೆ, ಗುಡ್ಡೆ 3 ಒಟ್ಟಲು 4 ಬತ್ತಿತು 5 ಬೆಳದಿಂಗಳು

ಚಳಿ ಬಿಸುಪು, ಬಿಸುಪು ಚಳಿ, ಎನೆ-
ಬಳೆದುದು ಹಿಮರಾಜತೇಜಮಿಾ ಜಗದೆಡೆಯೊಳ್ ೪೨

[1]ಪಲ್ವಱಿಯೊಳೆ ಹುಹುಹೆಂಬಾ
ಚೆಲ್ವುಗ್ಗಡಣೆಯೊಳೆ ಹಸ್ತದಂಡಿಗೆಯೊಳ್ ತಾ-
ನೊಲ್ವನ್ನಂ ಶಿಶಿರನಟಂ
ಸಲ್ವನ್ನಂ ಜನವನಾಡಿಸಿದನುರ್ವರೆಯೊಳ್. ೪೩

ನುಡಿಯೆ ಹುಹು ನಡೆಯ ಮಾತೇ-
ಕೊಡಲೇ ಪ್ರಾಣಂಗೆ ಚಳಿಯ ಕುಪ್ಪಸಮಾಯ್ತೆಂ-
ದೊಡೆ ಹಿಮದ ಮಹಿಮೆಯಂ ಪೇ-
ಳ್ವೊಡೆ ಕೇಳ್ವವನಾವನೊರ್ವನುರ್ವೀತಳದೊಳ್ ೪೪

ಉಱೆ ಶೀತಂ ಪತ್ತಿದೊಡಿರ-
ಲಱಿಯದೆ ಜೀವಂ [2]ಬಿಗುರ್ತು ಜಠರಾಗ್ನಿಯನೆ-
ಳ್ಚಱಿಸೆ ಹೊಗೆಯುಸಿರ ಪಥದಿಂ
ಪೊಱಮಡುವುದು ಜನದ ಮುಖದೊಳಲ್ಲದೊಡುಂಟೇ ೪೫

ಈಕ್ಷಿಸಿದಳೆಳಸಿ ಬಸಿತದ
ರಕ್ಷೆಯನೊಸೆದಿಟ್ಟು ಮಂಜಿನಿಂ [3]ತೂಪಿಱಿದುಂ
ಶಿಕ್ಷಿಸಿ ಬಲ್ಪಿಂದೂಡುತೆ
ರಕ್ಷಿಸುವಳ್ ಶೀತಮಾತೆ ಶಿಖಿಬಾಲಕನಂ ೪೬

ಒದವಿ ಧರಾತಲದೊಳ್ ತೀ-
ವಿದ ಶೀತಕ್ಕಂಜಿ ಕಂಪಿಸುತ್ತುಂ ನಿಲಲಾ-
ಱದೆ ಬಡವಾಗಿ ಕರಂ ಕಾ-
ಷ್ಠದೊಳಗೆ ಪೊಕ್ಕಂ [4]ಕೃಶಾನುವೇನಂ ಪೇಳ್ವೆಂ ೪೭

---

1 ಪಲ್+ಪಱೆ: ಪಱೆ=ವಾದ್ಯ, ಶಬ್ದ 2 ಬೆದರಿ 3 ಉಃಪೆಂದು ಊದು
4 ಬೆಂಕಿ.

ಮುಚ್ಚಿ ಮುಸುಂಕಿದ ಹಿಮಮಂ
ಕಿಚ್ಚಿಂದಂ ಕಳೆಯಲಾರದಿಳೆಯ ಜನಂಗಳ್
ಚೆಚ್ಚರವೆಯ್ತಂದೊಲವಿಂ-
ದಚ್ಚರಿ ವಿರಹಿಯನೆ ಕಾಯ್ದು ಕಳೆವರ್ ಚಳಿಯಂ ೪೮

ಪರಿಪೂರ್ಣ ತಟಾಕದ ಮೇ-
ಲುರಿಯಿಲ್ಲದೆ ಧೂಮಮೊಗೆವುತಿರೆ ಮಾಗಿಯೊಳ-
ತ್ಯುರುತರಗುರುತರತಾಪ-
ಕ್ಕಿರಲಾಱದೆ ವಿರಹಿ ಪೊಕ್ಕು ಮುಳುಗದೆ ಮಾಣಂ ೪೯

ಪುಟ್ಟಿತು ಚಳಿ, ಬಳೆದುದು ಚಳಿ,
ಕೊಟ್ಟುದು ಚಳಿ, ಕೊಂಡುದೆಲ್ಲಮುಂ ಚಳಿ ಚಳಿ ಎಂ-
ದುಟ್ಟುದು ಚಳಿ, ತೊಟ್ಟುದು ಚಳಿ,
ಮೆಟ್ಟಿತು ಚಳಿ, ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್ ೫೦

ಇಂತು ನಿದಾಘನಿಷ್ಠುರತೆಯೊಳಂ, ಮಳೆಗಾಲದ ಪ್ರಳಯಜಲದೊಳಂ, ಮಾಗಿಯ ಮಹಾಶೀತಲದೊಳಂ, ಭಾಳಲೋಚನನ ಭಾಮಿನಿ, ಗಂಗಾಧರನ ಗರುವೆ, ಚಂದ್ರಧರನರಸಿಯೆನಿಪ ಗಿರಿರಾಜತನೂಜೆಯಿರ್ದ ನಿರುಪಮಮಾನತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ ಬೆರಸಿ ಬಳೆಯ್ಕೆ, ಪುರಹರನೆಳ್ಚತ್ತು, ಕೆಚ್ಚುಗಟ್ಟಿದ ಧೈರ್ಯಮನೊಡೆದು ಮೂಡಿ, ಪಿಡಿದೆಳೆವ ಕಾರುಣ್ಯಕ್ಕೆ ಪಕ್ಕಾಗಿ, ಪನ್ನಗಭೂಷಣನ್ ಇನ್ನಿರಲ್ಬಾರ-ದೆಂದು ತನ್ನೊಳ್ ಬಗೆದು, ಅತಿಸ್ವತಂತ್ರಂ ಗಿರಿಜೆಯ ಮನಮನ್ ಒರೆದು ನೋಡುವ ಭರದಿಂ ಬಂದು ನಿಂದು,

ದಶಭುಜಮಂ ಪಂಚಾಸ್ಯಮ-
ನಶೇಷಭೀಮಾಂಗವಿತತಿಯಂ ತನುವಿನೊಳಂ
ವಶಮಂ ಮಾಡುತಡಂಗಿಸಿ
ಪಶುಪತಿ ವಟುವೇಷದಿಂದಮೊಪ್ಪುತ್ತಿರ್ದಂ ೫೧

ವಿಗೆ ಶೀತಾಂಶು ಚಕೋರಿಯಲ್ಲಿಗೆ, ವಸಂತಂ ರಾಜಿವುದ್ಯಾನದ-
ಲ್ಲಿಗೆ, ಸೂರ್ಯಂ ಸರಸೀಜದಲ್ಲಿಗೆ, ವರಪ್ರಾಣಾನಿಳಂ ದೇಹದ-
ಲ್ಲಿಗೆ, ಮೇಘಂ ಶಿಖಿಯಲ್ಲಿಗೊಪ್ಪುವ [1]ಮರಾಳಂ ಪೂರ್ಣಕಾಸಾರದ-
ಲ್ಲಿಗೆ, ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ಜಗದ್ವಲ್ಲಭಂ ೫೨

ಇಂತು ಭೂಲೋಕಕ್ಕಿಳಿತಂದು ಹೇಮಕೂಟದೊಳ್ ಹೈಮವತಿಯಿರ್ಪ ತಪೋವನಮಂ ಪುಗುತಪ್ಪಾಗಳ್,

ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ-
ಕುರಿಸಿತು ಮಾವು, ಪಲ್ಲವಿಸಿತಲ್ಲಿಯಶೋಕೆ, ವಸಂತದೂತಿಯೊ-
ಪ್ಪಿರೆ ನೆಜಿ[3] [2]ಪೂತು[3]ದನ್ಯಭೃತನುನ್ನತಿಯಿಂ ಕರೆದತ್ತು, ಮಲ್ಲಿಕಾ-
ಪರಿಮಳಭಾರದಿಂ ಕುಸಿದು ಮೆಲ್ಲನೆ [4]ಶೀಡಿತು ದಕ್ಷಿಣಾನಿಳಂ ೫೩

ಜಯೆವಿಜಯೆಗಳಿದು ಪೊಸತತಿ-
ಶಯಮೀ ಶಿಶಿರದೊಳಿದೇಂ, ಭವಾನಿ, ವಸಂತೋ-
ದಯ ಸೂಚನೆಯಾದುದು ನಿ-
ಮ್ಮಯ ಪುಣ್ಯತಪಃಪ್ರಭಾವಕಾರಣಮಲ್ತೇ ೫೪

ಎನುತಿರೆ ಕಪಟವಟುವೇಷಮಂ ತಳೆದ ಘನಮಹಿಮಂ ಸ್ವತಂತ್ರವಿಭು ಕಪರ್ದಿ ಪಾರ್ವತೀದೇವಿಯರ್ ತಪದೊಳಿರ್ಪ ಸೀಮಾಸಮೀಪದ ವಿಶಾಲಬಾಲಚೂತಶೀತಳಚ್ಛಾಯೆಯೊಳ್ ಕುಳ್ಳಿರೆ, ಸಹಚರಿಯರಪ್ಪ ಜಯೆವಿಜಯೆಗಳ್ ಕಂಡು,

ತರಳನಪೂರ್ವಿಗನತಿಥಿ-
ಸ್ವರೂಪನೀಷದ್ವಿಭೂತಿಲಸಿತಲಲಾಟಂ,
ವರವಿಪ್ರನೆನುತೆ ಬಂದಾ-
ದರಿಸಿದರೊಲವಿಂದೆ ಚರಣತಳಮಂ ತೊಳೆದರ್ ೫೫

1 ಹಂಸ 2 ಹೂಬಿಡು 3 ಕೋಗಿಲೆ 4 ಬೀಸು,

ಎಳವಾಳೆಯ ಸುಳಿಯೆಲೆಯೊಳ್
ನಳನಳಿಸುವ ಕಂದಮೂಲಮಂ, ನವ[1]ಜಂಬೂ-
ಫಳ[2]ಮಾಮ್ರಫಳಂ, [3]ಕದಳೀ-
ಫಳಂಗಳಂ [4]ತೀವಿ ತಂದು ಮುಂದಿಳಿಪುತ್ತುಂ, ೫೬

ಎಲೆ ಅತಿಥಿ, ಬಳಲ್ದಿರಿಮೀ
ಫಲದಿಂದಂ ನಿಮ್ಮ ಪಸಿವನುಡುಗಿಸಿ ಎನೆ, ಹೈ
ಫಲವಂ ಕೆಯ್ಕೊಂಡಪೆವೀ-
ಲಲನೆ ಅದಾರ್, ತಪವಗಣ್ಯಪಾವನ ಪುಣ್ಯಂ ೫೭

ಎಂದು ನುಡಿಯೆ ಜಯೆವಿಜಯೆಗಳ್ ಕೇಳ್ದು,

ಇವರಿರವಿನ ಚಿಂತಾರತಿ
ನಿವಗೇಕೀ ಕ್ಷುಧೆಯನೀ ಪಥಶ್ರಮಮಂ ತೀ-
ರ್ಚುವ ಬಗೆಯಂ ಬೇಗಂ ಮಾ-
ಡುವುದೆನೆ ನಸುನಗುತೆ ವಿಪ್ರನಂದಿಂತೆಂದಂ ೫೮

ಬೆಸಗೊಂಡೊಡೆ ದೋಷಮೆ, ಈ
ಪೊಸಕನ್ನೆ ತಪೋನಿರೋಧದಿಂದಿರ್ದೊಡೆ ಸೈ-
ರಿಸಬರ್ಪುದೆ, ತಪಮಂ [5]ಮಾ-
ಣಿಸುವವರಿಲ್ಲಾ ಸಹಾಯಸಂಪದಮಿಲ್ಲಾ ೫೯

ಎನೆ ಕೇಳ್ದು ಗಿರಿಜೆ ಮನದೊಳ್
ಮುನಿಯುತ್ತುಂ ಜಪವನುಡುಗಿ ಜಪಮಾಲೆಯನೊ-
ಯ್ಯನೆ ಕೆಯ್ಯೊಳೋಸರಿಸಿ ಮೆ-
ಲ್ಲನೆ ಕಣ್ದೆರೆಯುತ್ತೆ ಕಂಡಳಾ ವರವಟುವಂ ೬೦

---

1 ನೇರಳೆಹಣ್ಣು 2 ಮಾವಿನಹಣ್ಣು 3 ಬಾಳೆಹಣ್ಣು 4 ತುಂಬ 5 ತಪ್ಪಿಸು.

ಇಂದುಗೆ ಮೇಘಂ ಕವಿದೊಡ-
ಮಂದೀ ಲೋಕಕ್ಕೆ ತಣ್ಪು ತಪ್ಪದ ತೆಱದಿಂ-
ದಿಂದುಧರಂ ವರವಟುವೇ-
ಷಂದಳೆದೊಡ[1]ಮಗಜೆಗಾದುದತಿಹರ್ಷಮುಖಂ ೬೧

ಅಂತು ಹರ್ಷವನಿಮಿತ್ತಂ ಏಕಾದವುದೆಂದು ನಿಮಿತ್ತಮನ್ ಅಱ-
ಯದೆ ಬೆಱಗಾಗಿ ನೋಡುತಿರ್ಪಲ್ಲಿ,

ಗಿರಿಸುತೆಯ ಮಧುರದೃಷ್ಟಿಗ-
[2]ಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ
ಕರಗಿ ನಿಲಲಾಱದೆಲ್ಲಾ
ತುರಪುಳಕಮನಂತುಮಿಂತು ಸಂತಮಿಡುತ್ತುಂ ೬೨

ನೆಗೆವ ಜಡೆಮುಡಿಯನೊತ್ತು-
ತ್ತೊಗೆವ ಭುಜಾಳಿಯನಡಂಗಿಸು[3]ತ್ತೂರುಗಳಿಂ
[4]ಮಿಗುವ ವೃಷೇಂಪ್ರನನಾಂಕು-
ತ್ತಗಲವೆ ನಿಜಮೂರ್ತಿಯೊಳಗೆ ಗಜಬಜಿಸುತ್ತಂ, ೬೩

ಎಂತಾನುಂ ನಿಜರೂಪಂ
ಸಂತವಿಡುತ್ತಲ್ಲಿ ವಿಪ್ರನತಿಧೈರ್ಯತೆಯಂ
ಮುಂತಿಟ್ಟು, ಗಿರಿಜೆಯೊಡನುಸಿ-
ರ್ದಂ ತಡಬಡಿಸುತ್ತೆ ಮಿಸುಪ ಪೊಸ ಪುಸಿವಾತಂ ೬೪

ಎಳಗೆಂಪನುಗುಳ್ವ ಮೃದುಕೋ-
ಮಳಪದಕಮಳಂಗಳ್ ಈಗಳತಿಕಠಿನಮೆನಿ-
ಪ್ಪಿಳೆಯೊಳ್ ಹರಹರ ಕಲ್ನೆಲ
[5]ಕಳವಟ್ಟುವಿವೆಂತು, ಬಾಲಹಂಸೀಯಾನೇ ೬೫

---

1 ಪಾರ್ವತಿ 2 ಕಡುಪು, ತೀವ್ರತೆ 3 ಕೊಡೆ 4 ಹೊರಹೊಮ್ಮು 5 ಹೊಂದು

ನಿನಗೇಕೀ ತರುಣತೆಯೊಳ್
ಘನತಪವೆಡೆಗೊಂಡುದಕಟ, ನವಲತೆಯಂ ಸೂ-
ರ್ಯನ ಬಿಸಿಲಿಂ ಕೊರಗಿಪ ದು-
ಷ್ಟನನೆನಗಱಿಪಬಲೆ, ಸೌಕುಮಾರ್ಯಾವರಣೇ ೬೬

ಎಳವೆಳ್ದಿಂಗಳ ಸೋಂಕಿಂ-
ಗಳವಡ[1]ದಳ್ಕುವ [2]ಶಿರೀಷ ಸುಕುಮಾರಾಂಗಂ
ಬಳವತ್ ಕರ್ಕಶಕರದಿಂ
ಬಳಸಿರ್ದೀ ನಾರಸೀರೆ[3]ಗಾಂತುದು ಚಿತ್ರಂ ೬೭

ವನಜಾನನೆ, [4]ಏಱುಂಜ-
ವ್ವನದೊಳ್ ವನದೊಳ್ ನಿರೋಧದೊಳ್ ಪೇಳಿಂತಾ-
ವನನುದ್ದೇಶಿಸಿ ತಪಮಿದ
ನೆನಗಱಿಪಿದೊಡೇನೊ ದೋಷಮೋ ಮೃಗನಯನೇ ೬೮

ಎಂದು ಪ್ರೇಮಿಜನ ಪ್ರಣಯಕಲಹಲೀಲಾಲೋಲಚಿತ್ತನಪ್ಪ ವಿರೂಪಾಕ್ಷಂ ಪರಮವಟುವೇಷದಿಂ ನುಡಿದ ಮೃದುಕಠಿನಾಕ್ಷೇಪಗರ್ಭಿತವಚೋವಿಳಾಸಮಂ ಶೈಳಜೆ ಕೇಳ್ದು, ಚಿಂತೆಯಂ ತಾಳ್ದು,

ಬೆಸಗೊಂಡಪನನುಳದ್ವಿಜ
ನುಸಿರಲ್ ತಾಂ ಬಾರದುಸಿರದಿರಬಾರದೆನು
ತ್ತಸದೃಶ ತಪನುಂ ಮನದು-
[5]ಬ್ಬಸದಿಂದೆ ಭವಾನಿ ಮಾನಿ ಮೆಲ್ಲನೆ ನುಡಿವಳ್ ೬೯

[6]ಬಗೆವೆರ್ಚೆ ಕೇಳುತಿರ್ದಪೆ
ಮಿಗೆ ಪೇಳ್ದಪೆನೆಲೆಲೆ ಧೂರ್ತ ವಿಪ್ರನೆ ಕೇಳ್, ಶಂ-
ಭುಗೆ ಕಾರುಣ್ಯಾಬ್ಧಿಗೆ ಶೂ-
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ ೭೦

1 ನಡಗು 2 ಬಾಗೆ ಹೂ 3 ತಾಳು, ಹೊಂದು 4 ಹರೆಯ 5 ಸಂಕಟ 6 ಉತ್ಸಾಹ.

ಎನುತುಂ ಗದ್ಗದಿಸುತೆ, [1]ಪುಳ-
ಕನಿಕಾಯಮನಾನುತಶ್ರ್ರವಂ ತಳೆಯುತ್ತುಂ,
ಘನಹರ್ಷಚಿತ್ತೆಯಾಗು-
ತ್ತೆ, ನಗೇಶ್ವರಪುತ್ರಿ ಶಂಕರನ ಪೆಸಗೊಂಡಳ್ ೭೧

ಅಕ್ಕಕ್ಕೆ, ಕಾಮಹರನೊಳ್,
ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರಮಮಂ
ಮಿಕ್ಕವನೊಳ್, ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ ೭೨

ನೀ[2]ನಿನಿಯಳ್ ವಿಷಮಾತಂ,
ನೀನತಿ ಮೃದು ಕಠಿನಗುಣಾಶ್ರಯನಾತಂ,
ನೀನಬಲೆ ಉಗ್ರನಾತಂ,
ನೀ[3]ನುರುತರಭೀರು, ಸರ್ಪಭೂಷಣನಾತಂ ೭೩

ಪುಲಿದೊವಲುಡುಗೆಯ, ಹಾವಿನ
ನೆಲೆದೊಡಿಗೆಯ, ನೊಸಲಕಣ್ಣ [4]ಖಟ್ವಾಂಗದ [5]ಪಂ-
ದಲೆಗಳ ಮಾಲೆಯ, ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ ೭೪

ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು [6]ಕನಲ್ದು [7]ಕಿನಿಸಿ ಕಿಡಿಕಿಡಿವೋಗಿ,

ತಪವಂತದಿರ್ಕೆ ಮಾಡುವ
ಜಪವಿರ್ಕೆ, ಮೃಗಾಂಕಮೌಳಿಯಂ ಭರದಿಂ ಧ್ಯಾ-
ನಿಪುದಿರ್ಕೆ; ಶಂಭುವಂ ನಿಂ-
ದಿಪುದಂ ಕೇಳ್ವೊಂದು ಪಾಪಮಿಂದೆನಗಾಯ್ತೇ. ೭೫

1 ರೋಮಾಂಚಗೊಂಡು 2 ಮನೋಹರಳು, ಸಿಹಿ 3 ಅಂಜುಬುರುಕ 4 ತಲೆಬುರುಡೆಯನ್ನು ಸಿಕ್ಕಿಸಿದ ಎಲುಬು (ಶಿವನ ಆಯುಧ) 5 ಪಚ್ಚನೆಯ+ತಲೆ : ಹಸಿಯ ತಲೆ 6 ಕೋಪಿಸಿ 7 ಸಿಟ್ಟಾಗಿ.

ಘೋರತಪದಲ್ಲಿ ಕೋಪಿಸ
ಬಾರದು; ತಾಂ ತಪದ ಕೇಡು; ಪತಿನಿಂದೆಯುಮಂ
ಸ್ಯೈರಿಸಬಾರದೆನುತ್ತೆ ವಿ
ಚಾರಮನುಳಿದಗಜೆ ಮನದ ಮುಳಿಸಿಂದಾಗಳ್ ೭೬

ಆದ ನಿರೋಧದ ನಿಂದೆಯ-
ನಾದರಿಸದೆ ಭಸಿತದಿಂದೆ ವಿಪ್ರನನಿಡೆ, ಪೋ-
ಪೋದುದು ವಟುವೇಷಂ ಶಿವ-
ನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ ೭೭

ಮುಗಿಲ ತೆಱೆ ಸರಿದ ಶಶಿಯಂ
ತೊಗೆದ ತಮಂ ತೆಗೆದ ತರುಣತರಣಿಯ ತೆಱದಿಂ.
ಪೊಗೆ[1] ತಗ್ಗಿದಗ್ನಿಯಂತಿರೆ,
ಮಿಗೆ ವೇಷಂ ತೊಲಗಿ ಶಂಭು ತೊಳಗುತ್ತಿರ್ದಂ ೭೮

ಜಡೆಮುಡಿ ಪಂಚಮುಖಂ ನೆಗೆ-
[2]ದುಡುಪತಿಕಳೆ ದಶಭುಜಂ ತ್ರಿಣೇತ್ರಂ ಗಾತ್ರಂ-
ಬಿಡಿದ ನವಭೂತಿ ಪುಲಿದೊವ-
ಲುಡಿಗೆಗಳಿಂ ಶಂಕರಂ ಕರಂ ಮೆಱೆದಿರ್ದಂ ೭೯

ಪರಿದುದು ಪುಸಿವೇಷದ ತೆಱೆ,
ಸುರಿದುದು ಕೆಯ್ನಾರ ತೆಱದೆ ಪೂವಳೆ, [3]ಸರಿಸಂ-
ಬರಿದುದು ಜೀರಿಗೆ ಬೆಲ್ಲದ
ಪರಿಯಿಂ ಮುಳಿದಿಟ್ಟ ಭಸಿತಮದೆ ಮದುವೆಯವೋಲ್ ೮೦

ಆಗಳ್ ಕಂಡಗಸುತೆ ಬೆಱ-
ಗಾಗುತ್ತೆ, ಸಂವರಿಸಿಕೊಳುತೆ ವಲ್ಕಲವಸ[4]ನಾ-

1 ಕುಗ್ಗು, ಮರೆಯಾಗು 2 ಚಂದ್ರಕಾಂತಿ 3 ಹರಡು 4 ಸಮಸ್ತ.

ಭೋಗಮನತಿಲಜ್ಜಿತೆ ತಲೆ
ವಾಗಿದಳನುರಾಗಮೇಱೆ ಪುಳುಕಿಸುತಿರ್ದಳ್ ೮೧

[1]ಅವಳೋಕನದಿಂ ಸೆಳೆದಳ್
ಶಿವನಂ ಮನದಿಂದೆ ತೆಗೆದಳಪ್ಪಿದಳತ್ಯು-
ತ್ಸವದಿಂ ಚಿತ್ತದೊಳೆಳಸುತೆ
ತವಕಂ ಮಿಗೆ ಚುಂಬಿಸಿದಳಹಂಕಾರದೊಳಂ ೮೨

ಆ ಸಮಯದೊಳ್ ಮೃಡನ್ ಒಸೆದೀಕ್ಷಿಸುತ್ತೆ ಅಪರ್ಣೆಯ ಪುಣ್ಯ ಹಸ್ತಮಂ ಪಿಡಿದು,

ಗಿರಿಸುತೆ ಅಳ್ಕಱಿಂ ನಡೆಯ ತಾರಗಿರೀಂದ್ರನಿವಾಸದಲ್ಲಿಗ-
ತ್ಯುರುತರಲೀಲೆಯಿಂದಮೆನೆ, ದೇವ, ಗಿರೀಶ್ವರನಲ್ಲಿ ಎನ್ನನಾ-
ದರದೊಳೆ ಬೇಡಿ ಊರ್ಜಿತವಿವಾಹಮದಚ್ಚರಿಯಪ್ಪ ಮಾಳ್ಕೆಯಂ
ಕರುಣಿಪುದೆಂದುದಂ ಸಲಿಸವೇಳ್ಪುದು, ಬೇಳ್ಪನಿದಂ, ಸದಾಶಿವಾ ೮೩

ಎಂದಗಜೆನುಡಿಯೆ, ಮಹಿಮಾ-
ವೃಂದನೊಡಂಬಡುತೆ ಸುಖದೊಳಿರ್ಪವಸರದೊಳ್,
ಬಂದು ರತಿ [2]ಮುಕುಳಿತಾನನೆ
ನಿಂ[3]ದುಮ್ಮಳದಿಂದೆ ಮುಂದೆ [4]ಮೆಯ್ಯಿಕ್ಕಿರ್ದಳ್ ೮೪

ರತಿ ಮೆಯ್ಯಿಕ್ಕಿರ್ದೊಡೆ ಪಾ-
ರ್ವತಿ ಬಿನ್ನಯ್ಸಿದಳಧೀಶ, ಕೇಳೀಲಲನಾ-
ಪತಿಯಪ್ಪ ಕಾಮನಂ ಪಶು-
ಪತಿ ನಿಮ್ಮಿಂ ಪಡೆದು ಕೊಡುವೆನೆಂದಾಂ ನುಡಿದೆಂ ೮೫

---

1 ನೋಟ 2 ಮುಚ್ಚಿದ ಮುಖವುಳ್ಳವಳು 2 ದುಗುಡ 4 ನಮಸ್ಕಾರ ಮಾಡು.

ಎನೆ ಕೇಳ್ದು ಶಂಕರಂ ಗಿರಿ-
ತನಯಾಮಧುರಾಸ್ಯಮಂ ನಿರೀಕ್ಷಿಸಿ ನಗುತುಂ,
ನೆನೆದಾಗಳ್ ಕಾಮನನಂ-
ಗನಾಗಿ ಕುಡುತಿರ್ಕೆ ರತಿಗೆ ಸುಖಸಂಪದಮಂ ೮೬

ಎಂದು ಪಾರ್ವತಿಯೊಡನೆ ನುಡಿಯುತ್ತುಂ, ರತಿಗೆ ಕಾಮನಂ ಸಂಕಲ್ಪಜನ್ಮನಂ ಮಾಡಿಕೊಟ್ಟು, ಗಿರಿಜೆಯಂ ಗಿರಿರಾಜನಲ್ಲಿಗೆ ಪೋಗವೇಳ್ದು, ಶೂಲಧರಂ ಕೈಲಾಸಕ್ಕೆ ಬಿಜಯಂಗೆಯ್ದನ್.

# ೫, ಮನೋಜಹರ ದಂಪತಿಗಳ್

ಇತ್ತಲ್ ಗಿರಿಸುತೆ ಶಿವನಂ ನೆನೆಯುತ್ತಂ ಹಿಮಾಚಳಮಂ ಕಳೆದು ನಿಜರಾಜಧಾನಿಯೆನಿಸಿದ ಓಷಧಿಪ್ರಸ್ಥಪುರವರಮಂ ಪುಗುತರ್ಪಾಗಳ್, ಪಾರ್ವತೀದೇವಿ ಲಬ್ಧವರ ಪ್ರಸನ್ನಮುಖಿಯಾಗಿ ತಪಮಂ ಬಿಟ್ಟು ಬರುತಿರ್ದಪಳೆಂಬ ಸಂತೋಷವಾರ್ತೆಯಂ ಕರ್ಣಪರಂಪರೆಯಿಂ ಗಿರಿರಾಜಂ ಕೇಳ್ದು, ಸಂತಸಮಂ ತಾಳ್ದು, ಸಕಳ ಪರಿಜನಸಹಿತಂ ಕಳಗೀತವಾದ್ಯ ನೃತ್ಯಂಗಳ ಮಂಗಳರವದ ನಡುವೆ ನಡೆದು ಬಂದಿದಿರ್ಗೊಂಡು,

ಭರದಿಂದಂ ನಡೆತಂದು, ರಾಜಗೃಹಮಂ ಸಂತೋಷದಿಂ ಪೊಕ್ಕು, ಭಾ
ಸ್ಕರಕೋಟಿಪ್ರಭೆಯಂ ಸಭಾಸದನದೊಳ್ ಬೀಱುತ್ತುಮಿ[1]ರ್ಪುದ್ಧವಿ-
ಷ್ಟರಮಂ ತುಷ್ಟಿಯಿನೇಱಿ, ಶೈಳಪತಿಯುಂ ಶರ್ವಾಣಿಯುಂ ಸ್ನೇಹದಿಂ-
ದಿರೆ, ಮೇನಾವಧು ಬಂದಳೀಕ್ಷಿಸಿದಳೀಷದ್ಗಾತ್ರೆಯಂ ಪುತ್ರಿಯಂ ೧

ಅಂತು ಬಂದು ಕಟ್ಟೆಳ್ಚಱಿಂ ಮುಟ್ಟೆನೋಡಿ, ತಾಯೆ, ತಪೋನಿರೋಧದೊಳೆ ಮೆಯ್ ಬಡವಾದುದು, ಲೋಚನತ್ರಯಚ್ಛಾಯೆ ಬಳಲ್ದುದು, ಆನನಸರೋಜಂ ಕಳೆಗುಂದಿತು, [2]ಕಚಂ ಜಡೆಗಟ್ಟಿತು, ಅನ್ಯಾಯಂ ಏಕೆ ಪೋದೆ ಸುತೆ, ಎಂದು ಮೇನಾದೇವಿ ಪಾರ್ವತಿಯಂ ನೋಡಿ ಕೋಡಿ ಬಾಡಿ ಬಳಲ್ದು ಕನಲ್ದು ಕಳೆಗುಂದಿ ನುಡಿಯುತ್ತಿರ್ಪಾಗಳ್,

ಗಿರಿಪತಿಯನುಮತಿಯಿಂ ಸೌಂ-
ದರಿಯರ್ ನಡೆತಂದು, ಪಾರ್ವತಿಯ ಜಡೆಗಳನೊ-
ಪ್ಪಿರೆ ಬಿಡಿಸಿ, ಕಚಭರಮನತಿ
ಭರದಿಂ ತಿರ್ದುತ್ತುಮಿರ್ದರನ್ನೆಗಮಿತ್ತಲ್; ೨

---

1 ಶ್ರೇಷ್ಠವಾದ ಸಿಂಹಾಸನ 2 ತಲೆಗೂದಲು.

ಶ್ರೀಕೈಲಾಸದೊಳಿರ್ದು ಪಿ-
ನಾಕಿ ವಿವಾಹಾರ್ಥದಿಂದೆ ವರಮೂರ್ತಿಗಳಂ
ಲೋಕೋತ್ತಮರಂ ಪುಣ್ಯ-
ಶ್ಲೋಕರನಾ ಸಪ್ತಋಷಿಯರಂ ನೆನೆಯಲೊಡಂ ೩

ಬಂದಭವಂಗತಿಸುಖಮುಖ-
ದಿಂದಂ ಮೆಯ್ಯಿಕ್ಕಿ ಹರ ಬರ್ದುಂಕಿದೆವೆನುತುಂ,
ಸಂದಣಿಸಿ ಪುಳಕಮೇಳ್ತರೆ,
ನಿಂದಿರ್ದು ಶಶಾಂಕಮೌಳಿ [1]ಬೆಸನೇನೆನುತುಂ ೪

ಇರೆ ಕಂಡು ಕರುಣದಿಂ ಶಂ-
ಕರನಾಋಷಿಗಳ್ಗೆ ಬೆಸಸಿದಂ, ಪೋಪುದು ಭೂ-
ಧರನಾಥನಲ್ಲಿಗತ್ಯಾ-
ದರಮಂ ಮಾಡುವುದು, ಬೇಡುವುದು ಗಿರಿಸುತೆಯಂ ೫

ಎಂದೊಡೆ ಹಸಾದಮೆಂದಾ-
ನಂದಂ ಮಿಗೆ ಸಪ್ತಋಷಿಗಳನುನಯದಿಂದೆ-
ಯ್ತಂದರ್, ಮಂಡಿತಪುಷ್ಪಕ-
ವೃಂದಾರೂಢರ್ ನಗೇಶಪುರಮಂ ಪೊಕ್ಕರ್. ೬

ಮನದೊಳ್ ಪರಮೋತ್ಸಾಹಂ
ಜನಿಯಿಸಿ ಗಿರಿರಾಜನೆಸೆವ ಋಷಿಗಳನಿದಿರ್ಗೊಂ-
ಡನುನಯದಿಂ ತಂದುಚ್ಚಾ-
ಸನದೊಳ್ ಕುಳ್ಳಿರಿಸಿ ವಿನಯವಿನಮಿತನಾದಂ ೭

ಸುರಲೋಕದಲ್ಲಿ ಸುಖದಿಂ-
ದಿರುತುಂ ಬರವೆಂತು ನಿಮಗೆ ದೊರಕೊಂಡುದಿದೆ-

1 ಅಪ್ಪಣೆ.

ಮ್ಮುರುತರ ಭಾಗ್ಯಮೆನುತ್ತುಂ
ಗಿರಿರಾಜಂ ಸಪ್ತಋಷಿಗಳಂ ಕೇಳಲೊಡಂ ೮

ವರಮುನಿಗಳ್ ಮನದೊಂದಾ-
ದರದಿಂ ನುಡಿದರ್: ಶಿವಂ ಶಶಾಂಕಧರಂ ಶಂ-
ಕರನಭವಂ ನಿರ್ಮಾಯಂ
ಗಿರಿಜೆಯ ಬೇಡುವೊಡೆ ತಿಳುಪಿ ಕಳುಪಿದನೆಮ್ಮಂ ೯

ಎಂದು ಸಪ್ತಋಷಿಗಳ್ ನುಡಿದ ಆಪ್ತವಚನಂ ಕರ್ಣರಸಾಯನಮಾಗೆ ಗಿರಿರಾಜಂ ಕೇಳ್ದು ಬಾಳ್ದು ಸಂದಣಿಸಿದ ಪುಳಕದಿಂ ದಳವೇಱಿ ಹಿಗ್ಗಿ ನಚ್ಚಿ ನುಡಿದಂ: ಶಿವನ ಕರುಣಂ ಎನಗಿದಿರ್ವರೆ ವಿಚಾರಮೆ; ಬರ್ದುಂಕಿದೆಂ ಬರ್ದುಂಕಿದೆಂ ಎನ್ನ ಭಾಗ್ಯದ ಬೆಳೆ[1] ತಳಿತುರ್ದುದು; ಚಂದ್ರಂಗೆ ಬೆಳ್ದಿಂಗಳ್ ಉಪಚಾರಮೆ; ಕುಸುಮಕ್ಕೆ ಪರಿಮಳಂ [2]ಪಡಿಸಣಮೆ; ಶರ್ವಂಗೆ ಪಾರ್ವತಿ [3]ಎರವೆ; ಪನ್ನಗಾಭರಣನ್ ಎನ್ನಂ ಬೇಡಲ್ವೇಳ್ಪುದೆ; ಸುರುಚಿಯಿಂ ಸಾಂಗೀಕಾರದಿಂ ಕಾಮದಿಂ ಪ್ರೇಮದಿಂ ನಿಷ್ಠೆಯಿಂ ನೆಟ್ಟನೆ ಕೊಟ್ಟೆಂ ಕೊಟ್ಟೆಂ ಎರಡಿಲ್ಲೆಂದು ಸತ್ಯವಚನಮಂ ಸಂತೋಷದಿಂ ನುಡಿದು, ಸಪ್ತಋಷಿಗಳ ಚರಣಕ್ಕೆ ಮತ್ತೆ ಮತ್ತೆಱಗುತ್ತೆ, ಅವರಂ ಹರಿಸದಿಂ ಕಳುಹಿ ಗಿರಿರಾಜಂ ಮಹೋತ್ಸಾಹದಿಂ ಮಹಾವಿವಾಹಮಂಟಪಾದಿ ಸಮಸ್ತ ವಸ್ತುಗಳಂ ವಿಸ್ತರಿಸುತಿರ್ದನ್.

ಗಿರಿಪತಿ ಚಾರರಂ ಕಳುಪಿ, ನಿರ್ಜರಲೋಕದ ವಿಶ್ವಕರ್ಮನಂ
ಬರಿಸಿ, ನಯೋಕ್ತಿಯಿಂ ನುಡಿದು ಮನ್ನಿಸಿ, [4]ಬೇಳ್ಪುದನಿತ್ತು,
ಚಂದ್ರಶೇ-
ಖರನ ಮದೀಯಪುತ್ರಿಯ ವಿವಾಹಶುಭೋಚಿತಮಂಟಪಾದಿ ಭಾ-
ಸುರವರಚಿತ್ರಪತ್ರಕುಳಮಂ ನೆಱೆ ನಿರ್ಮಿಪುದಿಂದೆ ಬೇಗದಿಂ ೧೦

---

1 ಕುಡಿಯಿಟ್ಟಿತು. 2 ಎಡೆ, ನೈವೇದ್ಯ 3 ಹೊರಗಿನವಳೆ (ಸಾಲವೆ)
4 ಬೇಕಾದುದನ್ನು.

ಎನೆ ನಲಿದು ವಿಶ್ವಕರ್ಮ್ಮಂ
ನೆನೆಯದ ಮುನ್ನಂ ಸಮುದ್ರಮುದ್ರಿತವಿಶ್ವಾ-
ವನಿಪರಿಗತವಿಭವಾಸ್ಪದ
ಘನಮಂಟಪಮೆಸೆದು ಮುಂದೆ ತೋಱತ್ತಾಗಳ್ ೧೧

ನವರತ್ನರಂಜಿತಮಾಗಿ ರವಿಮಂಡಲಮಂ [1]ಮುಂಡಾಡುವ ಸುವರ್ಣ್ಣಕಳಶದರ್ಪ್ಪಣಾಳಿಗಳಿಂ [2]ರಯ್ಯಂಬಡೆದು ಸಕಳಜಗಕ್ಕೆ ತನ್ನ ಕಾಂತಿಯೆ ಕಣ್ದೆಱವಿಯುಂಬಂತಿರ್ದ ಮಹಾತೋರಣದೊಳಮೆಯ್ಯೊಳ್ ನೆರೆದು ಕುಳ್ಳಿರ್ದ ರಾಜಪುತ್ರರಿಂ ; ಮಂಡಳಿಕರ ತಂಡದಿಂ, ಸಾಮಂತರ ಸ್ತೋಮದಿಂ, ಶಿಷ್ಯರ [3]ಮಂತಣದಿಂ, ಸೇವ್ಯರ ತಿಂತಿಣಿಯಿಂ, ಮುತ್ತೈಯ್ದೆಯ[4]ರೊತ್ತೊತ್ತೆಯಿಂ, ಸರ್ವಶಾಸ್ತ್ರ ಪ್ರವೀಣರಿಂ, [5]ಗಳಿಗೆವಟ್ಟಲಂ ಪರಿವೇಷ್ಟಿಸಿರ್ದ ನಕ್ಷತ್ರಪಾಠಕರಿಂ, ಏಕಾದಶಕ್ಕೆ ಬಂದ ನವಗ್ರಹಂಗಳಿಂ, ತೆಕ್ಕನೆ ತೀವಿರ್ದ ಮಹಾಮಂಟಪಂ ಅತಿವಿಸ್ತಾರಮನ್, ಅತಿಗಂಭೀರತೆಯನ್, ಅತ್ಯಾಶ್ಚರ್ಯ್ಯಮನ್, ಉರುತರ ಸಂಪದಮನ್, ಅತಿಸೌಂದರ್ಯ್ಯಮನ್, ಅತಿಪ್ರಸನ್ನತೆಯನ್, ಒಳಕೊಂಡು ವರನ ಬರವಂ ಬಯಸುತಿರ್ದ್ದುದು. ಆ ಪ್ರಸ್ತಾವದೊಳ್

ಒಳಗೆ ಸುವಾಸಿನಿಯರ್ ಗಿರಿ-
ಕುಳರಾಜತನೂಜೆಗೊಪ್ಪೆ ಸಿಂಗರಮಂ ಕೆಯ್-
ಕೊಳಿಸುತ್ತಿರ್ದ್ದರ್ ವರಶಶಿ-
ಕಳೆಗೆ ಸುಧಾಕಿರಣಜಾಲಮಂ ತುಡಿಸುವವೋಲ್ ೧೨

ಅಂಬಿಕೆಯ ಸುಧಾವಯವ[6]ಕ-
ದಂಬದ ಚೆಲ್ವಿಂಗೆ ದೃಷ್ಟಿಯಾಗದ ತೆಱದಿಂ
ಬಿಂಬಾಧರೆಯರ್ ತೊಡಿಸಿದ-
ರೆಂಬಂತಿರೆ ಮೆಱೆದುವರರೆ ಭೂಷಣತತಿಗಳ್ ೧೩

1 ಅಪ್ಪು, ಮುಟ್ಟು 2 ಚೆಲುವು, ಚೆಂದ 3 ಗೋಷ್ಠಿ 4 ನಿಬಿಡ, ಸಂದಣಿ
5 ಗಳಿಗೆ ಎಣಿಸಲು ಉಪಯೋಗಿಸುತ್ತಿದ್ದ ಸಾಧನ (ಗಳಿಗೆ+ಬಟ್ಟಲು) 6 ಸಮೂಹ.

ಇತ್ತಲ್ ಕೈಲಾಸಾದ್ರಿಯೊ-
ಳುತ್ತಮಗಣನಾಥರೊಳಗೆ ಮೆಱೆದಿರ್ದಂ ದೇ-
ವೋತ್ತುಂಗಂ ಪುಳಕಿತನಾ-
ಗುತ್ತುಂ ಮದುವಣಿಗತನಮನುಱೆ ನಟಿಯಿಸುತುಂ ೧೪

ಆ ಪೊಸಮದವಣಿಗನಪ್ಪ ಪಶುಪತಿಯ ಪೊಗಳ್ತೆಗೆ ಮಿಗಿಲೆನಿಸಿ ನೆಱೆಮೆಱೆವ ಪುಣ್ಯಾಗಣ್ಯಲಾವಣ್ಯಮಯ ಸುಕುಮಾರಾವಯವಂಗಳಂ ಕಂಡು ಕೌತುಕಂಗೊಂಡು ನಂದೀಶಾದಿ ಗಣನಾಯಕರ್ ಬಂದು ಬಿಸುಗಣ್ಣಂ ಭಸಿತದಿಂ [1]ಬಾಸಣಿಸಿ ಬಾಸಿಗಮನಿಕ್ಕಿ, ನಾಗಕುಂಡಲಮಂ ಕಳಲ್ಚಿ ಮಾಣಿಕ್ಯಾವತಂಸಮಂ [2]ಕೈಕೊಳಿಸಿ, ಬ್ರಹ್ಮಕಪಾಲಮಂ ನಿಲಲೀಯದೆ ಪುಣ್ಯಪವಿತ್ರಮನಿಟ್ಟು, ಗಜಚರ್ಮಮನೋಸರಿಸಿ ನಿರ್ಮಳೋತ್ತರೀಯಮಂ ಪೊದೆಯಿಸಿ, ಶಿವಯೋಗಕ್ಕೆ ಮುಕ್ತಿಯಂ, ಮುಕ್ತಿಗೆ ವೈರಾಗ್ಯಮಂ, ವೈರಾಗ್ಯಕ್ಕೆ ಶಿವಜ್ಞಾನಮಂ, ಶಿವಜ್ಞಾನಕ್ಕೆ ಭಕ್ತಿಯಂ, ಭಕ್ತಿಗೆ ಪುಣ್ಯಮಂ, ಪುಣ್ಯಕ್ಕೆ ಸತ್ಕ್ರಿಯೆಯಂ, ಸತ್ಕ್ರಿಯೆಗೆ ಪಾವನಜನ್ಮಮನ್, ಅಲಂಕರಿಸುವಂತೆ ಸತ್ಯಜ್ಞಾನಾಭರಣಂಗೆ ಪರಬ್ರಹ್ಮಚರ್ಯಾಲಂಕೃತಿ ಬ್ರಾಹ್ಮಣೋತ್ತಮನಪ್ಪ ಶ್ರೀವಿರೂಪಾಕ್ಷಂಗೆ ಸಿಂಗರಮಂ ಮಾಡಿ, [3]ಹೆಱಸಾರ್ದು ನಿಂದು ನೋಡಲಂಜಿ ಕಣ್ಮುಚ್ಚಿ ಭಯದಿಂ ಶಿವಶಿವ ಜಯಜಯಯೆನುತ್ತುಮಿರೆ; ದಧೀಚಿ ದುರ್ವಾಸ ವಸಿಷ್ಠ ವಾಮದೇವ ಭೃಗು ಕಶ್ಯಪಾದಿ ಮುನಿಜನಂಗಳ್ ಶಿವನ ಕಾಂತಿಯಂ ಕಂಡು ನಿರೀಕ್ಷಿಸಲಣ್ಮದೆ ಚೇತೋದೃಷ್ಟಿಯಿಂ ನೋಡಿ, ಅತರ್ಕ್ಯಂ ವಿರೂಪಾಕ್ಷತೇಜಂ, ಎಂದು ಪೊಗಳುತಿರ್ಪ ಸಮಯದೊಳ್ ಕೂಡೆ ನೆರೆದ ಗರುಡಗಂಧರ್ವರ, ಸಿದ್ಧವಿದ್ಯಾಧರರ ಕಿನ್ನರ ಕಿಂಪುರುಷಸ್ತೋಮದ, ಯಕ್ಷರಾಕ್ಷಸರ ಮನುಮುನಿಸುರರ ನೆರವಿಯ, ದೇವಕಾಮಿನೀನಿಕರದ, ದಿಕ್ಪಾಲನಿಕಾಯದ ಹರಿವಿರಿಂಚಿಗಳ [4]ಪಂವಿಡಿಯ ಬಿರುದುಗಣಂಗಳ [5]ತೆರಳ್ಕೆಯ; ಕುಂಜರನಿಕರದ, ತುರಂಗ ಸಂಘದ ರಥಪ್ರತಾನದ, ಪದಾತಿಬಲದಿಕ್ಕೆಲದೊಳ್ ದಿಕ್ಕರಿಗಳಮೇಲೆ ಮಿಕ್ಕು ಬರ್ಪ

1 ಮುಚ್ಚಿ 2 ಅಲಂಕರಿಸಿ 3 ಹಿಂದೆ ಸರಿದು 4 ಸಾಲು, ಕ್ರಮ
5 ಗುಂಪು.

ದೇವಾಂಗ ವಸ್ತ್ರವಿತಾನದ, ಕರ್ಪೂರ ಕರಂಡಕಾನಿಕರದ, ಪನಿನೀರ ಭಾಜನಂಗಳ, ರತ್ನಾಭರಣರಾಶಿಗಳ, ಚಿಂತಾಮಣಿಯ [1]ಮುಡಿಪುಗಳ; ಮುಂದಣ ವೃಷಭಧ್ವಜದ, ದರ್ಪಣದ ತಳಿರ್ಗಳ ಕಳಶಂಗಳಂ ಪಿಡಿದು ಮೆಲ್ಲಮೆಲ್ಲನೆ ಅಡಿಯಿಡುವ ಅರುಂಧತಿ ಅನಸೂಯಾದೇವಿ ಗಾಯತ್ರಿ ಸಾವಿತ್ರಿ ಸರಸ್ವತಿ ಶಚೀದೇವಿ ಲಕ್ಷ್ಮೀರೋಹಿಣಿಯರಾದಿಯಾದ ಪರಮ ಪತಿವ್ರತಾವಿತಾನದ; ಪೊಡೆವ ಭೇರಿಯ, [2]ಪೂರಯಿಪ ಶಂಖದ, ಬಿರುದೆತ್ತಿ ಕರೆವ ಕಹಳೆಗಳ, ಮೊಳಗುವ ಮದ್ದಳೆಯ, ಪೊಣ್ಮುವ ತಾಳದ, ಉಣ್ಮುವ ಗಾನದ, ಭೃಂಗಿಯ ನರ್ತನದ ಭೋರೆಂಬ ರವದ, ಸಮಸ್ತ ವಸ್ತುವಿಸ್ತರದ ನಡುವೆ ಧವಳಾತಪತ್ರದ ಭುವನಾಶ್ರಯಂ ಜಡೆಮುಡಿಯ ಬೆಡಂಗಂ ಮಕುಟದ ಮನೋಹರಂ ಶಶಿಕಳೆಯ ಸೊಬಗಂ ಬಾಸಿಗದ ಭಾಗ್ಯನಿಧಿ ಕರ್ಣಾವತಂಸದ ಕಮನೀಯಂ ಭಸಿತದ ಹೊಸ ಮದುವಣಿಗನೆನಿಪ ಶ್ರೀ ಪಂಪಾವಿರೂಪಾಕ್ಷಂ, ವೃಷಭಾರೂಢನಾಗಿ, ತನ್ನ ಕಾರುಣ್ಯ ಕಟಾಕ್ಷಕ್ಕೆ ಕೆಯ್ಮುಗಿವ ನಾಲ್ಕುಂ ದೆಸೆಯ ದೇವಕುಲಕ್ಕೆ ಕರುಣಿಸುತ್ತುಂ ಬರೆ; ಮುಂದೆ ಕುಲಾಂಗನೆಯರ್ ಸೂಸುವ ಮುತ್ತಿನ ಸೇಸೆಗಳಂ ಆದರದೊಳ್ ಆನುತ್ತುಂ, ನಂದೀಶ್ವರನ ಬೆನ್ನಿಂಧ ಅವನೀತಳಕ್ಕವತರಿಸುತ್ತುಂ ಪ್ರಮಥಗಣಂಗಳ್ [3]ಕೆಯ್ಮೆಯಿಂ ಕೆಯ್ಗುಡೆ ಮಹಾವಿವಾಹ ಮಂಟಪಮಂ ಪುಗುತರ್ಪಾಗಳ್ ಕಂಡು ಮೆಯ್ವಿಕ್ಕಿ ನಿಂದ ಮೇನಾದೇವಿಗಂ ಮಾವನಪ್ಪ ಗಿರಿರಾಜಂಗಂ ಕಾರುಣ್ಯಮನೀಯುತ್ತುಂ, ಸಿಂಹವಿಷ್ಟರಮನ್ ಅವಷ್ಟಂಭಿಸಿ, ಸಮಯೋಚಿತಾನ್ನಮನ್ ಉಂಡು, ಮಹಾವಿಭವಮಂ ಕಂಡು, [4]ಮಧುಪರ್ಕಮಂ ಕೆಯ್ಕೊಂಡು—

ಇರೆ, ಹರಿಯಜ[5]ರನುಮಿಸುತುಂ,
ಪರಮಶುಭಾಕರ, ಮುಹೂರ್ತಮೆಲೆಲೆ ಸಮೀಪಂ
ಕರುಣಿಪುದೆನೆ, ಮಂಗಳ ವಾ-
ಗ್ವಿರಚನೆಯಂ ಕೇಳ್ದು, ಭೋಂಕನೆಳ್ದಂ ರುದ್ರಂ ೧೫

---

1 ಮಾಸಲು 2 ಊದುವ 3 ಜಾಣ್ಮೆ 4 ಮೊಸರು ಜೇನು – ಇವುಗಳ ಮಿಶ್ರಣ; ಮದುವಣಿಗನಿಗೆ ಇದನ್ನು ಕೊಡುವುದುಂಟು. 5 ಬಾಯ್ಮಾಡು

ಅಂತೆಳ್ದು ಸುಮುಹೂರ್ತಂ [1]ಪತ್ತೆಸಾರ್ವವೋಲ್ ನಡೆತಂದು ವಿವಾಹ ಗೇಹದೊಳಪೊಕ್ಕು

ಮುತ್ತಯ್ದೆಯರೊತ್ತೊತ್ತೆಯ-
ನೊತ್ತರಿಸುತೆ, ಬೆಳಗಿನೊಳಗೆ ಹೊಸಬೆಳಗಂ ಸೂ-
ಸುತ್ತುಂ, ಸವಿನೋಟಮನೀ-
ಯುತ್ತುಂ, [2]ಜವನಿಕೆಯ ನೆಲೆಗೆ ಶಿವನೆಯ್ತಂದಂ ೧೬

ಆ ಸಮಯದೊಳ್ ಪಾರ್ವತೀದೇವಿ [3]ನಿಟ್ಟೆಯ್ದೆ ಮೆಟ್ಟಕ್ಕಿಯಂ ಮೆಟ್ಟಿ ತೆಱೆಯಂ ಮಱೆಗೊಂಡು ನಿಂದಿರ್ಪಲ್ಲಿ,

ನಲ್ಲರ ನಡುವುಪಚಾರಂ,
ಸಲ್ಲಲಿ[4]ತೇಕ್ಷಣದ ನಡುವೆ [5]ಪಕ್ಷ್ಮಪುಟಂ, ಸಂ-
ಫುಲ್ಲರದಮಧ್ಯದೊಳ್ ಮಿಗೆ
[6]ಸೊಲ್ಲಿರ್ಪಂತಿರ್ದುದಲ್ಲಿ ತೆಱೆ ಹರನಿದಿರೊಳ್ ೧೭

ಅವಿಭೇದಪ್ರಕೃತಿಗಳೆನಿ-
ಪವಯವದಿಂದೊಪ್ಪುವರ್ಧನಾರೀಶ್ವರರೊಳ್
ಜವನಿಕೆ ನಡುವೊಡ್ಡಿತು; ಕಾ
ಲವಶದಿನಾವಂಗಮಾವುದಾಗದು ಧರೆಯೊಳ್ ೧೮

ಬೆಳಗಿನ ಬೀಜಾವಳಿ[7]ಯೊ-
ಳ್ಗಳಿಯೋ, ನಕ್ಷತ್ರರಾಶಿಯೋ, ನವಪುಣ್ಯಂ-
ಗಳ [8]ಪುದುವೊ, ಚಂದ್ರಿಕಾತಂ-
ಡುಳವೋ, ಎನೆ ತೊಳಗಿ ತೋರ್ಪ ಮೆಟ್ಟಕ್ಕಿಗಳಂ, ೧೯

ಕಾಂತಿಮಯಂ ಶಶಿಚೂಡಂ,
ಶಾಂತಂ ನವಭೋಗಿಯೆನಿಪ ಲೀಲಾವಾಸಂ,

---

1 ಹತ್ತಿರ ಬರು 2 ತೆರೆ 3 ಚಿರಮುತ್ತೈದೆ 4 ಕಣ್ಣು 5 ರೆಪ್ಪೆ 6 ನಾಲಗೆ 7 ಶ್ರೇಣಿ 8 ಸೇರುವೆ.

ಸಂತಂ ಸುರುಚಿರಹರ್ಷವ-
ಯಂ ತಡೆಯದೆ ಮೆಟ್ಟಿ ನಿಂದ ಸಮನಂತರದೊಳ್; ೨೦

ಹರಿಯುಂ ಸರಸಿಜಭವನುಂ
ಪುರುಹೂತನುಮೆಸೆವ ಋಷಿಗಳುಂ ಗಣಕುಲಮುಂ
ಗಿರಿಜೇಶನ ಗಿರಿಜೆಯ ಭಾ-
ಸುರ [1]ಪರಿಧಾನದ ಸಮೀಪದೊಳ್ ನಿಂದಾಗಳ್; ೨೧

ಕಳಕಳಮಂ ನಿವಾರಿಸುತು [2]ಮಾಯತಮೇ ಎನಲ್, ಆಯತಂ; ಲಸದ್-ಗಳಬಳಮಂ ವಿಸರ್ಜಿಸುತುಮಾಯತಮೇ ಎನಲ್, ಆಯತಂ; ನಿರಾ-ಕುಳಿತಮನಂ ಬೃಹಸ್ಪತಿ ಸಮಾಯತಮೇ ಎನಲ್, ಆಯತಂ; ಮನಂ-ಗೊಳಿಸ ಮಹಾಮುಹೂರ್ತದೊಳಗಾಯತಮೇ ಎನೆ, ತಪ್ಪದಾಯತಂ ೨೨

ಅಮರಗುರು ಸಕಳವೇದಾ-
ಗಮಕೋವಿದನೊಲ್ದು ಭಕ್ತಿಯಿಂದಂ ಪುಣ್ಯಾ-
ಹಮೆನುತ್ತುಮಿತ್ತ ರಾಜತ್-
ಸುಮುಹೂರ್ತಂ ಬಂದು ತೆಱೆಯನೋಸರಿಸಲೊಡಂ, ೨೩

ಕರಡೆಗಳ ರವಂ, ನಿಸ್ಸಾ-
ಳರವಂ, ಭೇರೀರವಂ, ಮೃದಂಗರವಂ, ದೇ-
ವರ ಹೂಮಳೆಗಳ ಘೋರಂ-
ಬ ರವಂ, ಮಂಗಳರವಂಗಳುಣ್ಮಿದುವಾಗಳ್ ೨೪

ಆನಿರೆ ಮತ್ತೊರ್ವಳ್, ಗಡ,
ತಾನಿರ್ಪಳ್ ಜಡೆಯೊಳೆನುತೆ ಮುಳಿದಿಡುವಂತಾ
ಮಾನಿನಿ ಜೀರಿಗೆ ಬೆಲ್ಲದೊ-
ಳಾನುತೆ ಶಿವನುತ್ತಮಾಂಗಮಂ ಪದೆದಿಟ್ಟಳ್ ೨೫

---

1 ವಸ್ತ್ರ (ತೆರೆ) 2 ಸರಿಯೆ, ಸಿದ್ಧವೆ (ಅಪ್ಪಣೆಯೆ): ಧಾರೆಯೆರೆಯುವ ಕಾಲದಲ್ಲಿ ಸಭಿಕರನ್ನು ಕೇಳುವ ಮಾತು.

ಮೃಡನಾಗಳ್ ಗಿರಿಜೆಯ ಚೆ-
ಲ್ವಿಡಿದ ಮೊಗಂಗಂಡು ಸಾತ್ತ್ವಿಕಂ ಕೆಯ್ಕೊಂಡೊ-
ಲ್ದಿಡುವಾ ಜೀರಿಗೆ ಬೆಲ್ಲಂ
ಸಡಿಲ್ದು ಕಂಪನದೆ ಬಿಳ್ದುವಗಜೆಯ ಪದದೊಳ್ ೨೬

ಅಱಸುತ್ತಿವೆ ಪಲಕಾಲದೊ-
ಳುಱೆ ನಿನ್ನನೆನುತ್ತೆ ಶಿವನ ಮಕುಟೇಂದುಗೆ ತಾಂ
ತುಱುಗಿದ ತಾರಗೆಯೆಂಬಾ
ತೆಱದಿಂ [1]ತಂಡುಲಮನಗಜೆ ಸುರಿದಳ್ ಶಿರದೊಳ್ ೨೭

ಪರಮತಪೋನಿಧಿಯೆನಿಸಿದ
ಗಿರಿಜೆಗೆ ಪುಣ್ಯಾಂಬುವಿಂದಲಭಿಷೇಕಮನೊ-
ಪ್ಪಿರೆ ಮಾಡುವ ತೆಱದಿಂದಂ-
ಗಿರಿಶಂ ನವತಂಡುಲಂಗಳಂ ತವೆ ಸುರಿದಂ ೨೮

ನಲಿನಲಿದು ಬಂದು ಗಿರಿಪತಿ-
ಯೊಲವಿಂದಂ ಗಿರಿಜೆ ಸಹಿತವುಂ ನಾವೆಲ್ಲಂ
ನೆಲೆದೊಳ್ಕಿರ್ ಬಳೆದೊಳ್ಕಿರ್
ಸಲೆದೊಳ್ಕಿರ್ ನಿಮಗೆನುತ್ತೆ ಧಾರೆಯನೆಱೆದಂ ೨೯

ಗಿರಿಜಾತೆಯ ಸಕಲಗುಣಂ
ಹರ ನಿಮ್ಮಂ ಸುತ್ತುಗೀ ತೆಱದೊಳೆಂಬಂತೊ-
ಪ್ಪಿರೆ, ಸುತ್ತಿದರತಿಮೃದುತರ-
ಸುರುಚಿರನವಕಾಂತಿಯೆಸೆವ [2]ಗುಣಮಂ ಗುಣಮಂ ೩೦

ಅಯ್ದಂ ವದನನ ಕಾಂತೆಯ-
ನೆಯ್ದಿ ಪತಿವ್ರತೆಯರಧಿಕತರಮುದದಿಂ ಮು-
ತ್ತಯ್ದೆಯೆ ನಿಟ್ಟಯ್ದೆಯೆ ನೆಱೆ-
ಯಯ್ದೆಯೆ ಸಲೆಯಯ್ದೆಯೆಂದು ಪರಸುತ್ತಿರ್ದರ್ ೩೧

---
1 ಅಕ್ಕಿ 2 ನೂಲು.

ಇಂತು ವಿವಾಹವಿಭ್ರಮವುಂ ಕೆಯ್ಕೊಂಡು ಗಿರಿಜೆಯ ಕರತಳವುಂ ಪಿಡಿದು ಸೋಮಂ ಸೋಮಧರಂ ವ್ಯೋಮಕೇಶಿ ಹೋಮಸ್ಥಳಕ್ಕೆ ನಡೆತಂದು ಇಕ್ಕಿದ ಹಸೆಯ ಮೇಲೆ ಪಶುಪತಿ ಕುಳ್ಳಿರೆ, ಮಂತ್ರತಂತ್ರಯಂತ್ರ ಸಿದ್ಧನಪ್ಪ [1]ಪರಮೇಷ್ಠಿ ಹರನನುಜ್ಞೆಯಿಂ [2]ಸ್ಥಂಡಿಲವುಂ ಅಲಂಕರಿಸಿ, ಮೆಲ್ಲಮೆಲ್ಲನೆ ಉಲ್ಲೇಖನಂಗೆಯ್ದು, ಅಗ್ನಿಯಂ ಪ್ರತಿಷ್ಠೆಯಂ ಮಾಡಿ, ಬ್ರಹ್ಮರ್ಷಿ ದೇವರ್ಷಿ ವಿಪ್ರೋತ್ತಮರ ಅನುಮತದಿಂ ಪ್ರಾಣಾಯಾಮಂ ಮಂತ್ರಸಮಿತ್[3]ಪರಿಸ್ತರಣಂ ಪಾತ್ರಸಾಧನಂ ಆಜ್ಯಸಂಸ್ಕಾರಂ [4]ಸ್ರುಕ್‌ಸ್ರುವಸಮ್ಮಾರ್ಜನಂ ದೂರ್ವಾಯವಹಸ್ತಬಂಧನಾದಿ ಸತ್ಕ್ರಿಯೆಗಳಿಂ ಹೋಮಮಂ ಮಾಡುತ್ತಿರ್ದು,

ಭಾವಿಸಿ ಮಂತ್ರಾವಳಿಯಿಂ-
ದೋವುತೆ [5]ಹುತವಹನೋಳೆಸೆವ [6]ಲಾಜ್ಯಾಹುತಿಯಂ
ತೀವಿದನಂತರಮುಗಸುತೆ
ದೇವನ ಬಲದಿಂದೆಡಕ್ಕೆ ಬಂದಳನೂನಂ ೩೨

ಅಂತು ಬರೆ ಪೂರ್ಣಾಹುತಿಯಂ ಕೊಟ್ಟು ಹೋಮಸಮಾಪ್ತಿಯೊಳ್ ಆಪ್ತನಪ್ಪ ಕಮಳಜಂ [7]ಸಪ್ತಪದಿಯಂ ಕಟ್ಟಳ್ಕಜಿಂ ಮೆಟ್ಟಿಸಿ; ತದನಂತರಂ ಕಾಂತಾಜನಂ ಸ್ಥಿರದಂಪತಿಗಳ್, ಮಂಗಳಕರದಂಪತಿಗಳ್, ಮನೋಜಹರ ದಂಪತಿಗಳ್ ಎಂದು ಪೊಗಳುತ್ತುಂ ಇರೆಯಿರೆ; [8]ಶೈಳಜಾವರಂ ಗಿರಿರಾಜಂಗೆ ಕರುಣಿಸುತ್ತುಂ, ಮೇನಾದೇವಿಯರ ಮನ್ನಿಸುತ್ತುಂ, ವೃಷಭಸಮಾರೂಢಂ ಸಕಲದೇವಗಣಪರಿವೃತಂ ಕೈಲಾಸಾಭಿಮುಖನಾಗಿ ನಡೆತಂದು ಕೈಲಾಸಪುರದ್ವಾರವಲಯದೊಳ್ ಪುಗುತರ್ಪಾಗಳ್,

---

1 ಬ್ರಹ್ಮ 2 ವೇದಿಕೆ, ಹೋಮಕಾರ್ಯಕ್ಕಾಗಿ ಮಟ್ಟಮಾಡಿದ ಜಾಗ 3 ಹರಡುವಿಕೆ 4 ಯಜ್ಞಯಾಗಾದಿಗಳಲ್ಲಿ ಉಪಯೋಗಿಸುವ ಸೌಟು 5 ಅಗ್ನಿ 6 ಬತ್ತದ ಹರಳು 7 ಮದುವೆಯ ಕಾಲದಲ್ಲಿ ವಧೂವರರು ಇಡುವ ಏಳು ಹೆಜ್ಜೆಗಳು. ಈ ಶಾಸ್ತ್ರ ಮುಗಿದನಂತರ ಮದುವೆಯೂ ಮುಗಿದಂತೆಯೇ 8 ಈಶ್ವರ.

ಆರತಿಯೆತ್ತೆ ರುದ್ರಗಣಿಕಾನಿಕರಂ ಸರಸೀಜನಾಭನುಂ
ನೀರಜಪುತ್ರನುಂ ಹೊಗಳೆ, ದೇವಗಣಾಳಿಯುಳ್ಕಱಿಂದೆ [1]ಕೆಯ್-
ವಾರಿಸೆ, ನಂದಿಯಿಂದಮಿಳಿದುನ್ನತ ಸನ್ನುತ ಸಿಂಹಪೀಠಮುಂ
ತಾರಗಿರೀಂದ್ರನಾಥನೊಸೆದೇಱಿದನದ್ರಿಸುತಾಸಮನ್ವಿತಂ ೩೩

ಅಂತು ಸಿಂಹವಿಷ್ಟರಮನೇಱಿ ಗಿರಿಪತಿಯುಂ ಮೇನೆಯುಂ ಬೀಳ್ಕೊಳ್ಳುವಾಗಳ್ [ಅವರ್] ಸುತೆಯಂ ನೋಡಿ,

ಮಾತೆ ಶಿವಂ, ಪಿತಂ ಶಿವನನಂತಬಲಂ ಶಿವನೂರ್ಜಿತಂ ಶಿವಂ,
ನೀತಿ ಶಿವಂ, ಸ್ಥಿರಾಯು ಶಿವನೊಳ್ಪು ಶಿವಂ, ಸುಕೃತಂ ಶಿವಂ, ಘನ-
ಖ್ಯಾತಿ ಶಿವಂ, ಧನಂ ಶಿವನಪಾರಸುಖಂ ಶಿವನದ್ರಿಜಾತೆ, ಸಂ-
ಪ್ರೀತಿ ಶಿವಂ, ಶಿವಂ ನಿನಗೆ, ಚಿಂತಿಸದಿರ್ ಮಱೆದೆಮ್ಮನೊರ್ಮೆಯುಂ
೩೪

ಎಂದುಳ್ಳುದನ್ ಉಪಚಾರಮಿಲ್ಲದೆ ನುಡಿದು ಸಾದರಂ ಪೋದರ್. ಇತ್ತಲ್,

ಹರಿಸಂ ಮಿಗೆ ಕೈಲಾಸದ
ಪುರದೊಳಗೊಪ್ಪಿರ್ದನಭವನದ್ವಯರೂಪಂ
ವರಶರಣಾಳಿಗೆ ಬೇಡಿದ
ವರಮಂ ಕರುಣಿಸುತೆ ಹಂಪೆಯ ವಿರೂಪಾಕ್ಷಂ ೩೫

---

1 ಹೊಗಳು.

## ಮಂಗಳಂ

ಇಳೆಯೊಳ್ ಪೆರ್ಮಳೆಯುಂ ಸಮಸ್ತಫಲಮುಂ ಸಂತೋಷಮುಂ ಧರ್ಮಸಂ-
ಕುಳಮುಂ ಸತ್ಯಮುವಿನಾಶ್ವರಾರ್ಚನೆಯು ಸೊಂಪುಂ ಶ್ರೀಯುಮಾಯುಂ ನಿರಾ-
ಕುಳಮೆಂದುಂ ನೆಲಸಿರ್ಪುದೊಂದು ತೆಱನಂ ತಾಂ ಮಾಳ್ಕೆ ಸರ್ವೇಶ್ವರೀ-
ವಿಳಸತ್ಸಂಗಸುಖಾಬ್ಧಿಶೀತಕಿರಣಂ ಪಂಪಾಪುರಾಧೀಶ್ವರಂ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ-
ಹರಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ-
ಕರಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ

# ಪರಿಶಿಷ್ಟ ೧

## ಟಿಪ್ಪಣಿಗಳು

೧. ಶ್ರೀಮಚ್ಛೈಲೇಂದ್ರಪುತ್ರೀ ಗುರುತರ ಹೃದಯ ಕ್ಷೀರವಾರಾಶಿ ಚಂದ್ರಂ ........(ನಾಂದೀ ಪದ್ಯ—೧)

ಗಿರಿರಾಜಪುತ್ರಿಯ ವಿಮಲಹೃದಯವೆಂಬ ಪಾಲ್ಗಡಲಿಗೆ ಚಂದ್ರನಂತಿರುವವನೂ, (ಪೂರ್ಣಚಂದ್ರನ ಉದಯವಾದಾಗ ಕಡಲು ಉಕ್ಕುವುದುಂಟು. ಇಲ್ಲಿ ಪಾರ್ವತಿಯ ಹೃದಯವನ್ನು ಕ್ಷೀರಸಮುದ್ರಕ್ಕೂ ಶಿವನನ್ನು ಚಂದ್ರನಿಗೂ ಹೋಲಿಸಿದೆ.) ಆಕಾಶ, ಸೂರ್ಯ, ಚಂದ್ರ, ಪೃಥ್ವಿ, ಆತ್ಮ, ಅಗ್ನಿ, ಜಲ, ವಾಯು ಇವುಗಳೇ ಶರೀರವಾಗುಳ್ಳವನೂ ಅಂದರೆ ವಿಶ್ವವನ್ನೇ ಒಡಲಾಗುಳ್ಳವನೂ (ಶಿವನಿಗೆ ಅಷ್ಟಮೂರ್ತಿಯೆಂಬ ಹೆಸರೂ ಉಂಟು. ವಾಸ್ತವವಾಗಿ ಪರಮೇಶ್ವರ ಇವೆಲ್ಲವನ್ನು ಒಳಕೊಂಡು, ಇವನ್ನು ಮೀರಿದ್ದಾನೆ), ಮತ್ತು ದೇವತೆಗಳಿಂದ ವಂದಿತನೂ ಆದ ಪಂಪಾಪುರಪತಿ ವಿರೂಪಾಕ್ಷನು ನಮಗೆ ಭಕ್ತಿಯನ್ನು ಈಯಲಿ.

೨. ಕಲ್ಗಳೆಲ್ಲಂ ಪರುಷಂ........ಸಿದ್ಧರಸಮೆನಿಕುಮುಂತಾ ನಾಡೊಳ್.
(ಸಂಧಿ ೧ ಪದ್ಯ ೨)

ಪಾರ್ವತಿ ಆದಿಶಕ್ತಿಯ ಅವತಾರ. ಆಕೆ ಮೂಡಿ ಬಂದ ನಾಡ್ಕೂ ಆ ನಾಡಿನ ಚರಾಚರವಸ್ತುಗಳೂ ಮಾಹಾತ್ಮ್ಯದಿಂದ ಕೂಡಿಬರುತ್ತವೆಂಬುದು ಕವಿದ್ರಷ್ಟಾರನ ಕಾಣ್ಕೆ. ಸಾಮಾನ್ಯನ ದೃಷ್ಟಿಗೆ ಅತಿಶಯವೆಂದು ಕಾಣಬಹುದಾದುದೆಲ್ಲ ಆ ಕವಿಯ ದೃಷ್ಟಿಗೆ ಸ್ವಾಭಾವಿಕವಾಗಿ ಕಾಣುತ್ತದೆ. ಪ್ರಪಂಚದ ಪ್ರತಿಯೊಂದು ವಸ್ತುವೂ ದಾರ್ಶನಿಕ ಕವಿಗೆ ಭಗವಂತನ ಅಂಶವೆಂತಲೇ ಬೋಧೆಯಾಗುತ್ತದೆಯೆಂಬುದನ್ನು ಮಹಾದೇವಿಯಕ್ಕನ ಈ ವಚನದಲ್ಲಿಯೂ ನೋಡಬಹುದು.

"ವನವೆಲ್ಲ ಕಲ್ಪತರು, ಗಿಡುವೆಲ್ಲ ಮರುಜೀವಣಿ, ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತಕ್ಷೇತ್ರ. ಜಲವೆಲ್ಲ ನಿರ್ಜರಾವೃತ, ಮೃಗವೆಲ್ಲ ಪುರುಷಮೃಗ, ಎಡಹುವ ಹರಳುಗಳೆಲ್ಲ ಚಿಂತಾಮಣಿ, ಚೆನ್ನಮಲ್ಲಿಕಾರ್ಜುನಯ್ಯನ ಮೆಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ ಬನವ ಕಂಡೆ ನಾನು."

೩. ಸಿರಿತಂದಿಕ್ಕಿದಶೋಕೆ........ಸಾರ್ವರ್ತುಕೋದ್ಯಾನದೊಳ್

(ಸಂಧಿ ೧ ಪದ್ಯ ೫)

ಜಗತ್ತಿನ ಸೃಷ್ಟಿಗೆ ಆದಿಶಕ್ತಿಯೇ ಕಾರಣ. ಅವಳು ಮಾನವ ರೂಪದಿಂದ ಇಳೆಯಲ್ಲಿ ಜನಿಸುವಾಗ ಇಡೀ ಜಗತ್ತೇ ರೋಮಾಂಚನ ಗೊಳ್ಳುತ್ತದೆ; ನವಚೈತನ್ಯದಿಂದ ಕೂಡಿರುತ್ತದೆ. ಅವಳು ಹುಟ್ಟುವ ನಾಡಿನ ಪ್ರತಿಯೊಂದು ಚರಾಚರವಸ್ತುವಿನಲ್ಲಿಯೂ ದೈವತ್ವಸಂಚಾರವಾಗುತ್ತದೆ. ಗಿರಿರಾಜನ ಉದ್ಯಾನವನದ ತರುಲತೆಗಳು ವಿಶೇಷವಾದ ಶೋಭೆಯಿಂದ ಕೂಡಿರುತ್ತವೆ. ಅಶೋಕವೃಕ್ಷದ ಉಜ್ಜ್ವಲವಾದ ಬೆಳವಣಿಗೆಯನ್ನು ನೋಡಿದರೆ ಸಾಕ್ಷಾತ್ ಲಕ್ಷ್ಮಿಯೇ ಅದನ್ನು ಬೆಳೆಸಿರುವಂತೆ ಕಾಣುತ್ತದೆ. ಸರ್ವಋತುಗಳಲ್ಲಿಯೂ ತಳಿರು, ಹೂ, ಮಿಡಿ, ಕಾಯ್, ಹಣ್ಣುಗಳಿಂದ ಇಡಿದಿರುವ ಮಾವಿನ ಮರದಲ್ಲಿ ಕೇಳಿಬರುತ್ತಿರುವ ಕೋಗಿಲೆಯ ಕಂಠರುತಿ, ಗಿಳಿಯ ಗಳಪ, ಅಳಿಯ ಝೇಂಕಾರಗಳನ್ನು ನೋಡಿದರೆ ಸರಸ್ವತಿಯೇ ವೀಣೆಯನ್ನು ನುಡಿಸುತ್ತ ಅಲ್ಲಿ ನೆಲಸಿರುವಂತೆಯೂ, ಅವಳೇ ಆ ಮಾವಿನಮರವನ್ನು ಬೆಳೆಸಿರುವಂತೆಯೂ ಭಾಸವಾಗುತ್ತದೆ. ಹಾಗೆಯೇ ಭೋಗಾಧಿಪತಿಯಾದ ದೇವೇಂದ್ರನ ಸತಿ ಶಚೀದೇವಿಯೆ ಅರನೇರಿಳೆಯನ್ನು ಬೆಳೆಸಿರುವಂತೆಯೂ, ಸೌಕುಮಾರ್ಯಕ್ಕೆ ಹೆಸರಾಗಿರುವ ರಂಭೆಯೆ (ಬಾಳೆಯ ಗಿಡಕ್ಕೂ ರಂಭೆಯೆಂದು ಹೆಸರುಂಟು) ಬಾಳೆಯ ತೋಟವನ್ನು ಪೋಷಿಸಿರುವಂತೆಯೂ ಪವಿತ್ರಾತ್ಮರೂ ಸಹಜಸುಂದರರೂ ಆದ ದೇವಸ್ತ್ರೀಯರೆ ತಾವರೆಯನ್ನು ಬೆಳೆಸಿರುವಂತೆಯೂ, ಸೌಂದರ್ಯನಿಧಿಯಾದ ಊರ್ವಶಿಯೆ ಅಡಕೆಮರಗಳನ್ನೂ ರತಿಯೆ ದಾಳಿಂಬೆಯ ಸಂದಣಿಯನ್ನೂ ಬೆಳೆಸಿರುವಂತೆಯೂ ಭಾವಗೋಚರವಾಗುತ್ತದೆ. ಲಕ್ಷ್ಮಿ

ವಾಗ್ದೇವಿ, ಶಚಿ, ರತಿ ಮೊದಲಾದವರು ಆದಿಶಕ್ತಿಯ ಅಂಶಗಳು. ಎಲ್ಲೆಲ್ಲಿ ವಿಭೂತಿತ್ವ ವ್ಯಕ್ತವಾಗುತ್ತದೆಯೋ ಅಲ್ಲೆಲ್ಲ ಇವರು ನೆಲೆಗೊಂಡಿರುತ್ತಾರೆ.

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥

ಭಗವದ್ಗೀತೆಯ ಈ ಶ್ಲೋಕವೂ ಮೇಲಣ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ. ಆದುದರಿಂದ ಈ ಪದ್ಯದಲ್ಲಿ ಅಡಕವಾಗಿರುವ ವಿಷಯ ಸಾಮಾನ್ಯರ ಹೊರನೋಟಕ್ಕೆ ಉತ್ಪ್ರೇಕ್ಷೆ ಎಂದು ಕಂಡುಬಂದರೂ ಕವಿ ದೃಷ್ಟಾರನ ಮತ್ತು ಸಹೃದಯನ ಕಣ್ಣಿಗೆ ಸಹಜವಾಗಿ ತೋರದಿರದು.

೪. ಇಂತು ಪಿತೃಗಳ ಮನದೊಳ್ ಪುಟ್ಟಿದ ಸಕಳಗುಣಾಲಂಕೃತೆಯಪ್ಪ ಮೇನಾದೇವಿ ನಿಜವಲ್ಲಭೆಯಾಗೆ

(ಸಂಧಿ ೧-೭ ನೆಯ ಪದ್ಯದಡಿಯ ಗದ್ಯ)

ಪಿತೃಗಳು ಸ್ವರ್ಗದ ದೇವತೆಗಳಲ್ಲೊಂದು ಪಂಗಡ. ಇವರು ಸಾಧಾರಣ ಪಿತೃಗಳಂತೆ ಪುಣ್ಯಕ್ಷೀಣವಾದೊಡನೆ ಅಲ್ಲಿಂದ ಮರ್ತ್ಯಕ್ಕಿಳಿಯುವವರಲ್ಲ. ಸದಾ ಅಲ್ಲಿಯೇ ಇರತಕ್ಕವರು. ಇವರು ಮಹಾ ತೇಜಸ್ವಿಗಳು. ಇವರಲ್ಲಿ ಅಗ್ನಿಷ್ವಾತ್ತರು, ಬರ್ಹಿಷದರು, ಸೋಮಪರು ಎಂದು ಮುಂತಾದ ಹಲವಾರು ಪಂಗಡಗಳಿವೆ. ಪಾರ್ವತಿಯ ತಾಯಾಗುವ ಮೇನಾದೇವಿ ಈ ತೇಜಸ್ವಿಗಳ ಮಾನಸಪುತ್ರಿ; ಅಂದರೆ ಅವಳು ಸಾಮಾನ್ಯರಂತೆ ಹುಟ್ಟಿದವಳಲ್ಲ.

೫. ತ್ರಿಣಯನ ವಿರಹಿತ ಯಾಗಕ್ಕಣಿಯರದಿಂ........ವಿಮಳಯೋಗದಿಂ ನಡೆತಂದಳ್. (ಸಂಧಿ ೧-ಪದ್ಯ ೧೩)

ಒಮ್ಮೆ ದಾಕ್ಷಾಯಣಿಯ (ಸತೀದೇವಿ) ತಂದೆಯಾದ ದಕ್ಷನು ದೇವಸಭೆಗೆ ಹೋದನು. ಅಲ್ಲಿ ಅಳಿಯನು ತನಗೆ ಮರ್ಯಾದೆಮಾಡಲಿಲ್ಲವೆಂಬ ಆಗ್ರಹದಿಂದ ದಕ್ಷನು ಶಿವನನ್ನು ಅಲಕ್ಷ್ಯಗೈದು ಯಾಗವನ್ನು ಮಾಡತೊಡಗಿದನು. ಸತಿ ತನಗೆ ಆಮಂತ್ರಣವಿಲ್ಲದಿದ್ದರೂ ಯಾಗಶಾಲೆಗೆ ಹೋದಳು. ತಂದೆ ಮಗಳನ್ನು ಗಮನಿಸಲಿಲ್ಲ. ಅಲ್ಲದೆ ನಿರ್ಗುಣ

ನಾದ ಶಂಕರನನ್ನು ನಿಂದಿಸಿದನು. ಆ ಅಪಮಾನ ತಿರಸ್ಕಾರಗಳನ್ನು ಸಹಿಸಲಾರದೆ ದಾಕ್ಷಾಯಣಿ ಯೋಗಸಮಾಧಿಯಿಂದ ದೇಹತ್ಯಾಗಮಾಡಿದಳು. ಇದೇ ಸಮಯದಲ್ಲಿ ಮೇನೆ ಭವಾನಿಯನ್ನು ಕುರಿತು ತಪಸ್ಸು ಮಾಡುತ್ತಿದ್ದಳಷ್ಟೆ. ಭವಾನಿಯ ಉಜ್ಜ್ವಲವಾದ ತೇಜಸ್ಸು ಮೇನೆಯ ಅಂತರ್ಜ್ಯೋತಿಯೊಡನೆ ಬೆರೆತು ಬೆಳಗಿತು

೬. ಪದೆಪಿಂ ಮೇನೆಯ ಹೃತ್ಕಮಲದ ಬೆಳಗಿಳಿತಂದು……ಭವಾನಿ ಯುಜ್ಜ್ವಳತೇಜಂ. (ಸಂಧಿ ೧-ಪದ್ಯ ೧೮)

ಮೇನೆಯ ಉತ್ಕಟವಾದ ತಪೋನಿಷ್ಠೆಗೆ ಮೆಚ್ಚಿದ ಭವಾನಿ ಆಕೆಯ ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿದ್ದಳಷ್ಟೆ.

(ಇದೇ ಸಂಧಿಯ ೧೫ನೆಯ ಪದ್ಯವನ್ನು ನೋಡಿ) ಆ ದಿವ್ಯವಾದ ಮಹಾತೇಜಸ್ಸು ಇತರ ಭೌತಿಕಶಕ್ತಿಗಳೊಡನೆ ಕೂಡಿ ಮೇನೆಯ ಪುಣ್ಯಗರ್ಭದಲ್ಲಿ ಬೆಳೆಯುತ್ತಿತ್ತು.

೭. ಸುಮುಹೂರ್ತಂ ಕಾದಿರ್ದುವು ಭರದೊಳಿಮಗೆ ತಮಗೆನುತಾಗಳ್ (ಸಂಧಿ ೧ ಪದ್ಯ ೧೯)

ಸಾಮಾನ್ಯವಾಗಿ ಮಕ್ಕಳು ಒಳ್ಳೆಯ ಮುಹೂರ್ತದಲ್ಲಿ ಹುಟ್ಟಲೆಂಬುದೇ ಎಲ್ಲರ ಬಯಕೆ ಹಾಗೆ ಒಳ್ಳೆಯ ಮುಹೂರ್ತದಲ್ಲಿ ಹುಟ್ಟಿದ ಮಕ್ಕಳು ಶ್ರೇಷ್ಠರಾಗುತ್ತಾರೆಂಬುದು ರೂಢಿಯ ನಂಬಿಕೆ. ಆದರೆ ಇಲ್ಲಿ ಎಲ್ಲ ಶುಭಮುಹೂರ್ತಗಳೂ ಪಾರ್ವತಿಯನ್ನು ಎದುರುಗೊಳ್ಳಲು ತಾನು ಮುಂದು ನಾನು ಮುಂದು ಎಂದು ಕಾದಿದ್ದುವು. ಪಾರ್ವತಿ ಯಾವ ಮುಹೂರ್ತದಲ್ಲಿ ಜನಿಸಿದರೆ ಆ ಮುಹೂರ್ತ ಪಾವನವಾಗುತ್ತದೆಂಬುದೇ ಇಲ್ಲಿಯ ಭಾವ. ಯಾವೊಂದು ಮುಹೂರ್ತದಲ್ಲಿ ಪಾರ್ವತಿ ಜನಿಸಿದುದರಿಂದ ಅವಳಿಗೆ ಹಿರಿಮೆಯೊದಗುವುದಿಲ್ಲ; ಪಾರ್ವತಿ ಯಾವ ಮುಹೂರ್ತದಲ್ಲಿ ಜನಿಸಿರುವಳೋ ಆ ಮುಹೂರ್ತಕ್ಕೆ ಹಿರಿಮೆ.

೮. ಬೇರ್ಪಡದೆ ಕೂಡೆ ತಾನೆಯಡರ್ಪ ಖಿಳಕ್ಕೆಂಬ ಸ್ವೈಜಮಂ ಮಱೆಯಿಸುತುಂ……ಬಾಲ್ಯಮಂ ನಟಿಯಿಸುತುಂ (ಸಂಧಿ ೧ ಪದ್ಯ ೩೦)

ಇಲ್ಲಿ ಕವಿ ಪಾರ್ವತಿಯ ಶೈಶವಲೀಲೆಗಳನ್ನು ವರ್ಣಿಸುತ್ತಿದ್ದಾನೆ. ಅವನ ದೃಷ್ಟಿಯಲ್ಲಿ ಅವಳು ಎಲ್ಲರಂತಹ ಸಾಮಾನ್ಯ ಶಿಶುವಲ್ಲ. ಮೈತಳೆದು ಬಂದ ಆದಿಶಕ್ತಿಯೇ ಅವಳು. ಅವಳ ಪ್ರತಿಯೊಂದು ಕ್ರಿಯೆ ಮತ್ತು ಕ್ರೀಡೆಗಳು ಕವಿಯ ದೃಷ್ಟಿಯಲ್ಲಿ ಒಂದೊಂದು ಲೀಲೆ. ಶಿಶು ಪಾರ್ವತಿ ಆಗ ತಾನೆ ಗೋಡೆಯನ್ನು ನೆಮ್ಮಿ ನಿಲ್ಲುವ ಶಕ್ತಿಯನ್ನು ಪಡೆದಿದ್ದಾಳೆ. ನಿಜವಾಗಿಯೂ ಅಖಿಳಪ್ರಪಂಚಕ್ಕೆ ಆಶ್ರಯವಾಗಿರುವ ಪಾರ್ವತಿಗೆ ಗೋಡೆ ಆಶ್ರಯವಾಗುವುದೆಂತು? ಆದರೆ ಮಾನವರೂಪವನ್ನು ತಳೆದ ಅವಳು ತನ್ನ ಸ್ವಭಾವವನ್ನು ಮರೆಸಿ ಎಲ್ಲರಂತೆ ಬಾಲ್ಯವನ್ನು ಕಳೆಯುತ್ತಾಳೆ.

೯. ವರನನಿಂದುಧರನೇ ಬಲ್ಲಂ (ಸಂಧಿ ೨ ಪದ್ಯ ೪)

ಪಾರ್ವತಿಯ ಯೌವನೋದಯವನ್ನೂ ರೂಪಾತಿಶಯವನ್ನೂ ಕಂಡು ಬೆರಗಾದ ತಂದೆತಾಯಿಯರು ತಮ್ಮ 'ತಪಕ್ಕೆ ದಾಕ್ಷಾಯಣಿ ಕರುಣಿಸಿ ಬಂದಳೆಂಬುದನತ್ಯಾಶ್ಚರ್ಯದಿಂ ಮಱೆದು' ಆಕೆಗೆ ಅನುರೂಪ ನಾದ ವರನು ಯಾರೆಂಬುದನ್ನು 'ಇಂದುಧರನೇ ಬಲ್ಲಂ' ಎನ್ನುವರು. ಇಂದುಧರನೇ ಅವಳ ಪತಿಯೆಂಬುದೂ ಸತ್ಯ, ಅದು ಆಗುವುದೂ ಸತ್ಯ. ಆ ವಿಷಯ ಅವರಿಗೆ ತಿಳಿದಿಲ್ಲ. ಕವಿ ಧ್ವನಿಪೂರ್ಣವಾಗಿ ಈ ಮಾತು ಗಳನ್ನು ಅವರ ಬಾಯಲ್ಲಿ ಆಡಿಸಿದ್ದಾನೆ.

೧೦. ಕರೆಯವು ಕೋಕಿಲೆ..........ಸಮಾಧಿಭೀತಿಯಿಂದಾ ನಗದೊಳ್ (ಸಂಧಿ ೨ ಪದ್ಯ ೨೩)

ಈಶ್ವರನು ತಪಸ್ಸುಮಾಡುತ್ತಿದ್ದ ಹೇಮಕೂಟಪ್ರಾಂತದ ಗಭೀರ ಶಾಂತತೆಯ ಚಿತ್ರ ಇಲ್ಲಿ ಮೂಡಿದೆ. ಪರಮೇಶ್ವರನ ಸಮಾಧಿಭೀತಿಯಿಂದ ಸಮಸ್ತ ಸಚರಾಚರ ವಸ್ತುಗಳು ನಿಶ್ಚೇಷ್ಟಿತವಾಗಿದ್ದುವು. ಕೋಗಿಲೆಗಳ ಕೂಜನವಿಲ್ಲ, ದುಂಬಿಗಳ ಮೊರೆತವಿಲ್ಲ, ಗಿಳಿಗಳ ಗಳಪವಿಲ್ಲ; ಇಷ್ಟೇ ಅಲ್ಲ ಗಾಳಿಯು ಸಹ ಮಿಸುಕುತ್ತಿರಲಿಲ್ಲ. ಕಾಳಿದಾಸನ ಕುಮಾರಸಂಭವದ ಮೂರನೆಯ ಸರ್ಗದ ಇದೇ ಭಾವ ತೋರುವ ಕೆಳಗಣ ಪದ್ಯದೊಡನೆ ಈ ಕಂದವನ್ನು ಹೋಲಿಸಿ ನೋಡಬಹುದು.

ವೃಕ್ಷಕಂಪನ ನಿಂತು ಭ್ರಮರ ಸಂಭ್ರಮ ನಿಂತು
ಅಂಡಜಧ್ವನಿ ನಿಂತು ಮೃಗಚಲನ ನಿಂತು
ಆತನಾಣತಿ ಸಂದು ಸರ್ವಕಾನನಮುಂದು
ಚಿತ್ರಾರ್ಪಿತಾರಂಭಮಾಗಿರ್ದುದಂದು

(ಶ್ರೀ ಪರಮೇಶ್ವರಭಟ್ಟರ ಭಾಷಾಂತರ)

೧೧. ಭಿನ್ನಾಭಿನ್ನಂ ಜ್ಞಾನಮಯಂ........ಅಭವನವ್ವಯರೂಪಂ.

(ಸಂಧಿ ೨ ಪದ್ಯ ೩೨)

ಕಾರ್ಯಕಾರಣಸಂಬಂಧದಿಂದ ಈಶ್ವರ ಭಿನ್ನನೂ ಅಭಿನ್ನನೂ ಆಗಿ ತೋರ್ಪಡುತ್ತಾನೆ. ಇದೇ ಭಾವ ಸ್ಪಷ್ಟವಾಗಿ ವ್ಯಕ್ತಗೊಂಡಿರುವ ವಚನವೊಂದನ್ನು ಇಲ್ಲಿ ಉದ್ಧರಿಸಿದೆ:

"ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತವಿಶ್ವವನು. ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ. ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿ ಸ್ಥಿತಿಲಯಕ್ಕೊಳಗಾದನೇ? ಇಲ್ಲ. ಅದೇನು ಕಾರಣವೆಂದಡೆ ಅಜಾತನಾಗಿ ಉತ್ಪತ್ತಿ ಇಲ್ಲ, ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ, ಮರಣರಹಿತನಾಗಿ ಲಯಕ್ಕೊಳಗಲ್ಲ, ಇಂತೀ ಗುಣತ್ರಯಂಗಳ ಹೊದ್ದಲರಿಯ. ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ, ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸಾಗಬಲ್ಲ. ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲ."

ತನ್ನ ಅಂಶಮಾತ್ರದಿಂದ ವಿಶ್ವಸೃಷ್ಟಿಯಾದರೂ ಪರಮಾತ್ಮ ಅದಕ್ಕೆ ಹೊದ್ದದೆ ನಿರ್ಲಿಪ್ತನಾಗಿರುವುದರಿಂದ ಭಿನ್ನನೂ, ಅವನು ವಿಶ್ವವ್ಯಾಪಕನೂ ವಿಶ್ವಾಂತರ್ಯಾಮಿಯೂ ಆದುದರಿಂದ ಅಭಿನ್ನನೂ (ಅದ್ವಯ) ಎಂದು ಸ್ಥೂಲವಾಗಿ ಹೇಳಬಹುದು. ಕೇವಲ ಜ್ಞಾನಸ್ವರೂಪನಾದ ಅವನು ತನ್ನನ್ನು ಬಿಟ್ಟು ಬೇರಾವ ವಸ್ತುವನ್ನು ಕುರಿತು ತಪಸ್ಸು ಮಾಡಿ

ಯೊನು? ಆದುದರಿಂದ ಅವನು ತನ್ನನ್ನೇ ಧ್ಯಾನಿಸುತ್ತ ಅಚಲನಾಗಿದ್ದನು. ಇದೇ ಅರ್ಥ ವ್ಯಕ್ತಗೊಂಡಿರುವ, ಕಾಳಿದಾಸನ ಕುಮಾರ ಸಂಭವದ ಎರಡನೆಯ ಸರ್ಗದಲ್ಲಿ ಬರುವ ಶ್ಲೋಕದೊಡನೆ ಇದನ್ನು ಹೋಲಿಸಿ ನೋಡಬಹುದು :

" ಆತ್ಮನನ್ ಆತ್ಮನಿಂದರಿವೆ ನೀನಾತ್ಮನೊಳೆ ಆತ್ಮನನ್ ಸೃಜಿಪೆ;
ಶಕ್ತಿನಾನ್ ಆತ್ಮನಿಂದಾತ್ಮನೊಳೆ ನೀನ್ ಮತ್ತೆ ಲೀನಗೊಳಲಿರ್ಪೆ "

(ಶ್ರೀ ಪರಮೇಶ್ವರಭಟ್ಟರ ಭಾಷಾಂತರ)

೧೨. ಮಾತಿನ ವೇಧೆಯ ಬೋಧೆಯ........ತಾನೆ ತಾನಾಗಿರ್ದಂ

(ಸಂಧಿ ೨ ಪದ್ಯ ೩೩)

ಮಾತಿನ ಎಲ್ಲೆಕಟ್ಟಿಗೂ ಬುದ್ಧಿಶಕ್ತಿಗೂ ಎಟುಕದೆ, ಭೂತಾದಿಯಾದ ಇಪ್ಪತ್ತೈದು ತತ್ವಗಳನ್ನೂ, ಜ್ಞಾತೃ, ಜ್ಞಾನ, ಜ್ಞೇಯ (ಅರಿಯುವವನು, ಅರಿವು, ಅರಿಯತಕ್ಕದ್ದು) ಗಳ ತ್ರಿಪುಟಿಗಳನ್ನೂ ಮೀರಿ ನಿಜ ಧ್ಯಾನಾಸಕ್ತನಾದ ಈಶ್ವರ ತಾನೇ ತಾನಾಗಿದ್ದನು. ಇದು ಪರಬ್ರಹ್ಮನ ಕೇವಲ ಸ್ವರೂಪ.

[ಪಂಚವಿಂಶತಿ ತತ್ತ್ವಗಳು: ಇವು ಸೃಷ್ಟಿಯ ಮೂಲತತ್ತ್ವಗಳು. ಇವು ಇಷ್ಟೇ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಸಾಂಖ್ಯದರ್ಶನದ ಪ್ರಕಾರ ಪಂಚಕರ್ಮೇಂದ್ರಿಯಗಳು (ವಾಕ್, ಪಾಣಿ, ಪಾದ, ಗುದ, ಗುಹ್ಯ), ಪಂಚಜ್ಞಾನೇಂದ್ರಿಯಗಳು (ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ), ಪಂಚವಿಷಯಗಳು (ಶಬ್ದ, ಸ್ಪರ್ಶ, ರೂಪ, ರಸ, ಗಂಧ), ಕರಣಚತುಷ್ಟಯಗಳು (ಪ್ರಕೃತಿ, ಮಹತ್, ಅಹಂಕಾರ, ಮನಸ್ಸಿನ ಎರಡು ಅವಸ್ಥೆಗಳು), ಪಂಚಭೂತಗಳು (ಆಕಾಶ, ಪೃಥ್ವಿ, ಅಪ್ಪು, ವಾಯು, ತೇಜಸ್ಸು), ಜೊತೆಗೆ ಜೀವ, ಇವಿಷ್ಟು ಪಂಚವಿಂಶತಿತತ್ತ್ವಗಳೆಂದು ಹೇಳುತ್ತಾರೆ. ಇವನ್ನೇ ಅಲ್ಪಸ್ವಲ್ಪವಾಗಿ ವ್ಯತ್ಯಾಸಗೊಳಿಸಿ ಒಂದೊಂದು ಪಂಥದವರು ಒಂದೊಂದು ವಿಧವಾಗಿ ವಿವರಿಸುತ್ತಾರೆ.]

೧೩. ಅನಿರ್ದಂತಿರದೇಕೆ ಬೇಡ ತಪ........ನೋಡಿದಳ್
(ಸಂಧಿ ೨ ಪದ್ಯ ೩೭)

ಪಾರ್ವತೀದೇವಿ ಸಮಾಧಿಸ್ಥನಾದ ಶಿವನನ್ನು ಮೊಟ್ಟಮೊದಲು ಕಂಡು ಪೊಡೆಮುಟ್ಟಿ ನಿಂದಾಗ ಅವಳ ಹೃದಯದಲ್ಲಿ ಉಬ್ಬೆದ್ದ ಭಾವ ತರಂಗಗಳಿವು: ತನ್ನಂತಹ ರೂಪವತಿಯಿರುವಾಗ ನಿನಗೆ ಏಕೆ ತಪಸ್ಸು ಬೇಡ ಬಿಡು ಎಂಬ ಅಹಂಕಾರ, ದೇವದೇವನಾದ ನೀನೇ ನನಗೆ ಸದ್ಗತಿ ಕರುಣಿಸು ಎಂಬ ಕಾರ್ಪಣ್ಯ, ಆನಂದವೇ ತಾನಾದ ಅವನಿಗೆ ತನ್ನ (ಪಾರ್ವತಿಯ) ಅರಿವು ಏಕೆ ಬಂದೀತು ಎಂಬ ನಿರ್ವೇದ, ಎಂದು ತಾನು ಅವನನ್ನು ಕೂಡಿಯೇನು ಎಂಬ ಕಾತರತೆಯಿಂದೊಡಗೂಡಿದ ಆಸೆ.

೧೪. ಇಸುವೆನ್ನೀ ಮನಮಂ........ಜಲಧಿವಸನ ವಸುಧೆಯೊಳುಂಟೇ
(ಸಂಧಿ ೩ ಪದ್ಯ ೧೫)

'ತೃಣಮಪಿ ನ ಚಲತಿ ತೇನ ವಿನಾ': ಈಶ್ವರನ ಸಂಕಲ್ಪವಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲುಗದು. ಅವನು ಪ್ರತಿಯೊಂದು ಸಚರಾಚರ ವಸ್ತುವಿನ ಅಂತರಾಳದಲ್ಲಿ ವ್ಯಾಪಿಸಿರುವುದಲ್ಲದೆ ವಿಶ್ವದ ಎಲ್ಲ ಆಗುಹೋಗುಗಳಿಗೆ ಕಾರಣನೂ ಕರ್ತನೂ ಆಗಿದ್ದಾನೆ. ಮನ್ಮಥನು ಈಶ್ವರನ ಮೇಲೆ ಬಾಣಪ್ರಯೋಗಮಾಡಲು ಈಶ್ವರಪ್ರೇರಣೆಯೇ ಆವಶ್ಯಕ. ಅಂದ ಮೇಲೆ ಇಂತಹ ಅಖಿಲಲೋಕ ಗುರುವನ್ನು ಎದುರಿಸುವುದು ಯಾರಿಗೆ ತಾನೆ ಸಾಧ್ಯ!

೧೫. ಜಲದೊಳಗಣ ಜಲಜದವೋಲ್........ಕಾಮುನೆಸುಗೆ ಕೆಯ್ಕೊಂಡಪುದೇ. (ಸಂಧಿ ೩ ಪದ್ಯ ೩೯)

ಎಳ್ಳಿನಲ್ಲಿ ಎಣ್ಣೆಯೂ, ಕಾಷ್ಠದಲ್ಲಿ ಬೆಂಕಿಯೂ ಅಂತಸ್ಥವಾಗಿರುವಂತೆ ಪರಮಾತ್ಮ ಎಲ್ಲ ವಸ್ತುಗಳಲ್ಲಿಯೂ ಅಂತಸ್ಥನಾಗಿದ್ದಾನೆ. ಆದರೆ ಅವನು ನೀರಿನೊಳಗಣ ತಾವರೆಯಂತೆ ಅವುಗಳಿಗೆ ಅಂಟಿಯೂ ಅಂಟದಿದ್ದಾನೆ; ಅವುಗಳ ಗುಣಧರ್ಮಗಳು ಅವನನ್ನು ಹೊದ್ದಲಾರವು. ಎಳ್ಳಿನಲ್ಲಿ

ರುವ ಎಣ್ಣೆಯಂತೆ ಕಾಷ್ಠದಲ್ಲಿರುವ ಬೆಂಕಿಯಂತೆ ಅವನು ಕಣ್ಣಿಗೆ ಕಾಣುವು ದಿಲ್ಲ. ಯಾವ ಶಸ್ತ್ರಾಸ್ತ್ರಗಳೂ ಅವನನ್ನು ಬಾಧಿಸಲಾರವು. ಕೇವಲ ಸಾಧನೆಗೆ ಮಾತ್ರ ಅವನು ನಿಲುಕುವವನು. ಆದುದರಿಂದ ಕಾಮನ ಬಾಣಗಳು ಅವನನ್ನು ಮುಟ್ಟುವುದುಂಟೆ. ವಚನಕಾರರು ಸಹ ಪರ ಮಾತ್ಮನ ಸ್ವರೂಪವನ್ನು ಇದೇ ರೀತಿಯಲ್ಲಿ ಇಂಥದೇ ಹೋಲಿಕೆಗಳಿಂದ ವಿವರಿಸುವುದನ್ನು ಕೆಳಗಣ ವಚನಗಳಲ್ಲಿ ನೋಡಬಹುದು :

"ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬ ದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ಶರಣಸಂಬಂಧ."

"ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ತಿಲದ ಮರೆಯ ತೈಲದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವನಾರು ಅರಿಯ ಬಾರದು."

೧೬. ಪಂಚಾಗ್ನಿಯ ನಡುವಗಜೆ ವಿಪುಳತಪದೊಳ್ ನಿಂದಳ್.
(ಸಂಧಿ ೪ ಪದ್ಯ ೫)

ಕವಿಯ ಪ್ರಕಾರ ಐದು ಅಗ್ನಿಗಳಿವು: 'ಮಿಗೆ ಸುತ್ತಿರ್ದ ದವಾಗ್ನಿ, ಕಾಯ್ವ ರವಿಕಾಂತೋಚ್ಚಾಗ್ನಿ, ಅತ್ಯುಷ್ಣಮಂ ನೆಗವುತಿರ್ಪುದರಾಗ್ನಿ, ಕವಿತರ್ಪ ಆದಿತ್ಯ ತೀವ್ರಾಗ್ನಿ, ಬೇಸಗೆಯಗ್ನಿ.' (ಯಜ್ಞಕಾಲದಲ್ಲಿ ಹೋಮಾದಿ ಕಾರ್ಯಗಳಿಗಾಗಿ ಉಪಯೋಗಿಸುವ ಪಂಚಾಗ್ನಿ ಬೇರೆ. ಶರೀರದಲ್ಲಿ ನಿಗೂಢವಾಗಿರುವ ಅಗ್ನಿಶಕ್ತಿಗಳೇ ಬೇರೆ.)

೧೭. ಜಳಜಸಖನ್ ಅನಿಲಸಖನ್........ನಿಂದುರಿದು ಹೋಗರೇ ಬೇಸಗೆ ಯೊಳ್ (ಸಂಧಿ ೪ ಪದ್ಯ ೧೪).

ಬೇಸಗೆಯ ಉರಿಬಿಸಿಲಿನಲ್ಲಿ ಇಡೀ ಜಗತ್ತೇ ಸೀದು ಹೋಗುತ್ತಿತ್ತು. ಮರಗಿಡ ಮೃಗಪಕ್ಷಿ ನೆಲನೀರು ಎಲ್ಲ ತಾರಿಹೋಗಿದ್ದುವು. ಸೂರ್ಯ ಮತ್ತು ಅಗ್ನಿ ಇಬ್ಬರೂ 'ಜಳಜ' (ಅಂದರೆ ನೀರಿನಲ್ಲಿ ಹುಟ್ಟಿದ ತಾವರೆಯ

ಗೆಳೆಯ) ಮತ್ತು 'ಅನಿಲಸಖ' (ಅಂದರೆ ವಾಯುವಿನ ಸ್ನೇಹಿತ) ಎಂಬ ಹೆಸರನ್ನು ಹೊಂದಿದ್ದಾರೆ. ಹೀಗೆ ನೀರಿನ ಮತ್ತು ಗಾಳಿಯ ಸ್ನೇಹ ಸಂಪರ್ಕವನ್ನು ಉಳ್ಳವರಾದುದರಿಂದ ಅವರು ಆ ಬೇಗೆಯಿಂದ ಬದುಕಿದ ರೆಂದು ಕವಿ ಚಮತ್ಕಾರಪೂರ್ವಕವಾಗಿ ಹೇಳಿದ್ದಾನೆ. ಬೇಸಗೆಯ ಉರು ಬನ್ನು ಅನುಭವಕ್ಕೆ ತಂದುಕೊಡುವುದೇ ಈ ಚಮತ್ಕಾರದ ಉದ್ದೇಶ.

೧೮. ಧ್ಯಾನಾನಂದರಸದ ಸೋನೆಯಿಂದೊಳಗೆ ನಾಂದ ಕರಣಂಗಳಂ ಉಸಿರೊಳಾಱಿಸುತ್ತುಂ, (ಸಂಧಿ ೪, ೩೪ ನೆಯ ಪದ್ಯದಡಿಯ ಗದ್ಯ)

ಕರಣಗಳು ನಾಲ್ಕು: ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಇವು ಆತ್ಮನಿಗೆ ಸಂಬಂಧಪಟ್ಟುವು. ಧ್ಯಾನಾನಂದರಸದಲ್ಲಿ ತೊಯ್ದಿದ್ದ ಈ ಅಂತಃಕರಣಗಳನ್ನು ಪಾರ್ವತೀದೇವಿ ತನ್ನ ಉಸಿರಿನಿಂದ ಆರಿಸುವಳು. ತಪೋಮಗ್ನಳಾಗಿದ್ದವಳು ಎಚ್ಚರವಾಗುತ್ತಿದ್ದಳೆಂಬುದೇ ಇದರ ಭಾವ.

೧೯. ಪಲ್ವಱಿಯೊಳೆ........ಜನವನಾಡಿಸಿದನುರ್ವರೆಯೊಳ್.

(ಸಂಧಿ ೪ ಪದ್ಯ ೪೩)

ಚಳಿಗಾಲದ ವರ್ಣನೆಯಿದು. ಕೊರೆಯುವ ಚಳಿಯಲ್ಲಿ ಸಿಕ್ಕಿದವರ ಪಾಡು ಎಂಥದೆಂಬುದು ಎಲ್ಲರ ಅನುಭವಕ್ಕೂ ಬಂದ ಸಂಗತಿಯಾಗಿದೆ. ಆ ಕೊರೆಯುವ ಚಳಿಯಲ್ಲಿ ಜನರ ಹಲ್ಲುಗಳು ತಾವಾಗಿಯೇ ಒಂದ ಕ್ಕೊಂದು ತಾಕಿ ಮಸೆಯುತ್ತಿರುತ್ತವೆ; ಅವರ ಬಾಯಿಂದ ಹು ಹು ಹು ಎಂಬ ದನಿ ಕೇಳುತ್ತಿರುತ್ತದೆ; ಕೈಗಳು ಗದಗದಿಸುತ್ತಿರುತ್ತವೆ. ಈ ಅಂಗ ಭಂಗಿಗಳನ್ನು ಕಂಡ ಕವಿ ಅವರನ್ನು ನಟರಿಗೆ ಹೋಲಿಸಿದ್ದಾನೆ. ಅವರನ್ನು ಕುಣಿಸುವ ನಾಟ್ಯಾಚಾರ್ಯನೇ ಶಿಶಿರನಟ.

೨೦. ಇಂತು ನಿದಾಘನಿಷ್ಠುರತೆಯೊಳಂ........ಚಂದ್ರಧರನರಸಿಯೆನಿಪ ಗಿರಿರಾಜತನೂಜೆ. (ಸಂಧಿ ೪, ೫೦ ನೆಯ ಪದ್ಯದಡಿಯ ಗದ್ಯ)

ಪಾರ್ವತೀದೇವಿ ಉಳಿಯುವ ಬೇಸಗೆಯಲ್ಲಿಯೂ ಹಗಲಿರುಳು ಸುರಿಯುವ ಬಿರುವಳೆಯಲ್ಲಿಯೂ, ಕೊರೆಯುವ ಚಳಿಯಲ್ಲಿಯೂ ಧೃತಿ

ಗೆಡದೆ ಶಿವನನ್ನು ಕುರಿತು ತಪಸ್ಸುಮಾಡುವಳು. ಈ ಮೂರು ಋತುಗಳ ಉಗ್ರತೆಯನ್ನು ಅವಳು ಸಹಿಸಿದುದಕ್ಕೆ ಕವಿ ಚಮತ್ಕಾರವಾಗಿ ಮೂರು ಕಾರಣಗಳನ್ನು ಕೊಡುತ್ತಾನೆ. ಅವಳು ಭಾಳಲೋಚನನ ಅಂದರೆ ಉರಿಗಣ್ಣನ ಮಡದಿಯಾಗುವವಳಾದುದರಿಂದ ಬೇಸಗೆಯ ನಿಷ್ಠುರತೆಯನ್ನು, ಗಂಗಾಧರನ ಅಂದರೆ ಗಂಗೆಯನ್ನು ಧರಿಸಿದವನ ಹೆಂಡತಿಯಾಗುವವಳಾದುದರಿಂದ ಮಳೆಗಾಲದ ಉರುಬನ್ನೂ, ಚಂದ್ರಧರನ ಅಂದರೆ ಚಂದ್ರನನ್ನು ಧರಿಸಿದವನ ಪತ್ನಿಯಾಗುವವಳಾದುದರಿಂದ ಕೊರೆಯುವ ಚಳಿಯನ್ನೂ ತಡೆದುಕೊಳ್ಳುವಳು. ಹಾಗಲ್ಲದೆ ಸಾಮಾನ್ಯ ಸ್ತ್ರೀಯಾಗಿದ್ದರೆ ಇಷ್ಟನ್ನು ಸಹಿಸಲಾಗುತ್ತಿರಲಿಲ್ಲವೆಂಬುದೇ ಕವಿಯ ಭಾವ.

೨೧. ಬರೆ ಗಿರಿಶಂ ವಸಂತಋತುವಲ್ಲದೊಡಂ........ಸಲ್ಲನೆ ತೀಡಿತು ದಕ್ಷಿಣಾನಿಳಂ. (ಸಂಧಿ ೪ ಪದ್ಯ ೫೪)

ಪಾರ್ವತೀದೇವಿಯ ಉಗ್ರತಪಸ್ಸಿಗೆ ಮೆಚ್ಚಿದ ವಿರೂಪಾಕ್ಷನು ವಟುವೇಷವನ್ನು ಧರಿಸಿ ಆಕೆಯಿದ್ದ ಹೇಮಕೂಟಪ್ರಾಂತವನ್ನು ಪ್ರವೇಶಿಸುವನು. ಕೂಡಲೇ ಮಾವು, ಅಶೋಕೆ ಮೊದಲಾದ ವೃಕ್ಷಗಳು ಚಿಗುರುವುವು; ಕೋಗಿಲೆ ಇಂಚರಗೈಯುವುವು; ಮಲ್ಲಿಗೆ ಅರಳಿ ಎಲ್ಲೆಡೆಯೂ ನರುಗಂಪನ್ನು ಬೀರುವುವು; ತೆಂಕಣಗಾಳಿ ತಣ್ಣನೆ ತೀಡುವುದು. ಆಗ ವಸಂತಋತುವಲ್ಲದಿದ್ದರೂ ವಸಂತ ಆಗಮಿಸುವನು. ಹಿಂದೆ ಮನ್ಮಥ ಋತುನಿಯಮವನ್ನು ಮೀರಿ, ವಿಶ್ವನಿಯಂತೃವಿನ ಸಂಕಲ್ಪಕ್ಕೆ ವಿರುದ್ಧವಾಗಿ ವರ್ತಿಸಿದನು. ಆಗ ಅಕಾಲದಲ್ಲಿ ಈಶ್ವರೇಚ್ಛೆಗೆ ವಿರುದ್ಧವಾಗಿ ವಸಂತೋದಯವಾಯಿತು. ಅದರ ಪರಿಣಾಮವಾಗಿ ಮನ್ಮಥನು ಈಶ್ವರನ ಉರಿಗಣ್ಣಿಗೆ ಪಕ್ಕಾಗಿ ಭಸ್ಮವಾದನು. ಇಲ್ಲಿಯೂ ಅಕಾಲದಲ್ಲಿ ವಸಂತ ಆಗಮಿಸಿದ್ದಾನೆ. ಆದರೆ ಇದು ಈಶ್ವರನ ಇಚ್ಛೆಯ ಪೂರ್ತಿಕೆಗಾಗಿ ಬಂದಿರುವುದರಿಂದ ಉಪಾದೇಯವಾದುದೇ.

೨೨. ಶಿವನಾದೊಡೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್
(ಸಂಧಿ ೪, ಪದ್ಯ ೭೭)

ವಟುವೇಷದ ಶಿವನು ಮಾಡುತ್ತಿದ್ದ ಶಿವನಿಂದೆ ಪಾರ್ವತಿಗೆ ಹಿಡಿಸದೆ ತನ್ನ ಕೈಯಲ್ಲಿದ್ದ ವಿಭೂತಿಯನ್ನು ಅವನ ಮೇಲೆ ಎಸೆಯುವಳು. ಕೂಡಲೇ

ವಟುವೇಷ ಮಾಯವಾಗಿ ಶಿವನ ನಿಜರೂಪವು ಕಾಣಿಸಿಕೊಳ್ಳುವುದು ತಪಸ್ವಿನಿಯಾದ ಪಾರ್ವತಿಯ ಮುಂದೆ ಪರಮೇಶ್ವರನ ಹುಸಿಯಾಟ ಹೆಚ್ಚು ಹೊತ್ತು ಸಾಗುವುದಿಲ್ಲ. ಸತ್ಯಕ್ಕೆ ಶಿವನಾದರೂ ತಲೆಬಾಗುತ್ತಾನೆಂಬುದೇ ಕವಿಯ ಅಭಿಪ್ರಾಯ.

೨೩. ಏಕಾದಶಕ್ಕೆ ಬಂದ ನವಗ್ರಹಂಗಳಿಂ

(ಸಂಧಿ ೫, ೧೧ ನೆಯ ಪದ್ಯದಡಿಯ ಗದ್ಯ)

ಎಲ್ಲ ಗ್ರಹಗಳು (ಒಂಬತ್ತು) ಸಾಮಾನ್ಯವಾಗಿ ಏಕಸ್ಥಾನದಲ್ಲಿರುವುದಿಲ್ಲ. ಆದರೆ ಇವೆಲ್ಲವೂ ಪ್ರಕೃತಲಗ್ನದಿಂದ ಪ್ರಶಸ್ತವಾದ ಹನ್ನೊಂದನೆಯ ಸ್ಥಾನದಲ್ಲಿದ್ದುವೆಂದು ಕವಿ ಹೇಳುತ್ತಾನೆ. ಇದು ಈಶ್ವರ ಪಾರ್ವತಿಯರ ಮದುವೆಯಾದುದರಿಂದ ಅಸಾಮಾನ್ಯಘಟನೆ ಸಂಭವಿಸುವುದು ಅಸಂಭವವಲ್ಲ.

೨೪. ಅವಿಭೇದಪ್ರಕೃತಿಗಳೆನಿಪನಯುವದಿಂದೊಪ್ಪುವ........ಆವುದಾಗದು ಧರೆಯೊಳ್. (ಸಂಧಿ ೫, ಪದ್ಯ ೧೮)

ಮೂಲಪ್ರಕೃತಿ ಲೋಕಸೃಷ್ಟಿಗಾಗಿ ನರನಾರಿಯರಾಗಿ ಒಡೆಯುವುದು. ತಾತ್ತ್ವಿಕವಾಗಿ ಇವೆರಡೂ ಬೇರೆ ಬೇರೆ ಅಲ್ಲ. ಈ ಅರ್ಧನಾರೀಶ್ವರರ ಸಾಕಾರರೂಪವೇ ಮಹೇಶ್ವರಪಾರ್ವತಿಯರು. ತಾತ್ತ್ವಿಕವಾಗಿ ಬೇರೆ ಬೇರೆ ಅಲ್ಲದ ಈ ಎರಡು ಪ್ರಕೃತಿಗಳ ಮಧ್ಯೆ ತೆರೆ ನಿಲ್ಲುವುದು. ಸರ್ವತಂತ್ರಸ್ವತಂತ್ರರೂ ಜಗನ್ನಿಯಾಮಕರೂ ಆದ ಈ ಶಕ್ತಿಗಳು ಸಹ ಲೋಕನಿಯಮವನ್ನು ಮೀರುವುದಿಲ್ಲ.

೨೫. ಸ್ಥಿರದಂಪತಿಗಳ್........ಮನೋಜಹರ ದಂಪತಿಗಳ್.

(ಸಂಧಿ ೫, ೩೫ ನೆಯ ಪದ್ಯದಡಿಯ ಗದ್ಯ)

ಶಿವಶಕ್ತಿಯರೆ ಈಶ್ವರಪಾರ್ವತಿಯರು. ಇವರೇ ಜಗತ್ತಿನ ಮಾತಾಪಿತೃಗಳು. ಇವರ ದಾಂಪತ್ಯ ಅನಾದಿಯಾದುದು, ಅನಂತವಾದುದು. ಆದುದರಿಂದ ಅವರ ಕಲ್ಯಾಣ ವಿಶೇಷತಮವಾದುದು, ಲೋಕಕ್ಕೆ ಕ್ಷೇಮಂಕರವಾದುದು. ಅವರ ದಾಂಪತ್ಯ ಕಾಮವಾಸನೆಯಿಂದ ಕಲುಷಿತವಾದುದಲ್ಲ; ಆದುದರಿಂದಲೇ ಅವರು 'ಮನೋಜಹರ' ದಂಪತಿಗಳು.

# ಪರಿಶಿಷ್ಟ ೨

## ಅ. ಶಿವಪುರಾಣದ ಪಾರ್ವತೀಖಂಡದ ಕಥಾಸಾರ

ಪೃಥ್ವಿಯನ್ನು ಅಳೆಯುವ ಮಾನದಂಡದಂತೆ ಪರ್ವತರಾಜನು ಉತ್ತರದಿಕ್ಕಿನಲ್ಲಿ ಶೋಭಿಸುತ್ತಿರುವನು. ಅವನ ಇನ್ನೊಂದು ಚರರೂಪವೇ ಗಿರಿರಾಜ. ಅವನ ಮಡದಿ ಮೇನಾದೇವಿ ಅಯೋನಿಜೆ, ಪಿತೃದೇವತೆಗಳ ಮಾನಸಪುತ್ರಿ. ಅವರಿಬ್ಬರ ತಪಸ್ಸಿನ ಫಲವಾಗಿ ಸತೀದೇವಿ ಅವರಿಗೆ ಮಗಳಾಗಿ ಜನಿಸುವಳು. ವಿಷ್ಣು ಮೊದಲಾದ ದೇವತೆಗಳು ಹಿಮವಂತನ ಮನೆಗೆ ಬಂದು ಜಗನ್ಮಾತೆಯನ್ನು ಸ್ತುತಿಸುವರು. ದಿನಗಳು ಜಾರಿದಂತೆಲ್ಲ ಗಿರಿಜೆ ವರ್ಷಾಸಮಯದ ಗಂಗಾಪ್ರವಾಹದಂತೆಯೂ ಶುಕ್ಲಪಕ್ಷದ ಚಂದ್ರ ಕಲೆಯಂತೆಯೂ ಬೆಳೆಯುವಳು. ಗಿರಿರಾಜ ಮೇನೆಯರಿಗೆ ಅನೇಕ ಜನ ಮಕ್ಕಳಿದ್ದರೂ ಪಾರ್ವತಿಯಲ್ಲಿಯೇ ಹೆಚ್ಚು ಮಮತೆ, ಮಧುಮಾಸದಲ್ಲಿ ದುಂಬಿಗಳು ಅನಂತಾನಂತ ಪುಷ್ಪರಾಶಿಯನ್ನು ಬಿಟ್ಟು ಮಾವಿನ ನನೆ ಯಲ್ಲಿಯೇ ನೆರೆಯುವಂತೆ.

ಬಾಲ್ಯದಲ್ಲಿಯೇ ಶಿವನನ್ನು ಕುರಿತು ತಪಸ್ಸುಮಾಡಬೇಕೆಂಬ ಹಂಬಲ ಗಿರಿಜೆಗೆ, ಅದನ್ನು ತಪ್ಪಿಸಬೇಕೆಂಬ ಚಿಂತೆ ತಾಯಿಗೆ. ಆದುದ ರಿಂದಲೇ ಪಾರ್ವತಿಗೆ ಉಮೆ (ಉ-ಎಲೌ ಪಾರ್ವತಿ, ಮಾ-ತಪಸ್ಸು ಬೇಡ) ಎಂಬ ಹೆಸರೂ ಅನ್ವರ್ಥವಾಗುವುದು. ಸಾಮಾನ್ಯ ಬಾಲಿಕೆಯರಂತೆ ಅವಳೂ ಚೆಂಡಾಟ ಗೊಂಬೆಯಾಟಗಳಲ್ಲಿ ಮಗ್ನಳಾಗುವಳು. ಆಗಾಗ್ಗೆ ಗಂಗಾನದಿಯ ಮರಳುದಿಣ್ಣೆಗಳಲ್ಲಿ ವಿಹರಿಸುವಳು. ಸಕಾಲದಲ್ಲಿ ಗುರು ಗಳಿಂದ ವಿದ್ಯೆಯನ್ನೂ ಕಲಿಯುವಳು.

ಒಂದು ದಿನ ಹಿಮವಂತನ ಅರಮನೆಗೆ ನಾರದ ಮಹರ್ಷಿಯು ಆಗಮಿಸಿ, ಪಾರ್ವತಿಯ ಭವಿಷ್ಯವನ್ನು ಕುರಿತು ಈಕೆಯು ಸಕಲ ಶುಭ ಲಕ್ಷಣಗಳಿಂದ ಬೆಳಗುತ್ತಿದ್ದರೂ ಅಮಂಗಳವೇಷದ, ತಾಯಿತಂದೆಯ

ರಿಲ್ಲದ ನಿರ್ಗುಣನಾದ ದಿಗಂಬರನು ಇವಳ ಪತಿಯಾಗುವನು ಎನ್ನುವನು. ಆ ಮಾತುಗಳನ್ನು ಕೇಳಿ ಮೇನಾ ಹಿಮವಂತರು ದುಃಖಿತರಾಗುವರು. ಶಿವನೇ ತನ್ನ ಪತಿಯೆಂದು ಅರಿತ ಪಾರ್ವತಿ ಮನಸ್ಸಿನಲ್ಲಿಯೆ ಹಿಗ್ಗುವಳು. ಆಗ ನಾರದನು ದಕ್ಷನ ಮಗಳಾದ ದಾಕ್ಷಾಯಣಿಯೆ ಅವರಿಗೆ ಮಗಳಾಗಿ ಹುಟ್ಟಿರುವಳೆಂದು ಅವರನ್ನು ಎಚ್ಚರಿಸಿ, ಜಗದೊಡೆಯನಾದ ಶಂಭುವು ಅನೇಕ ರೂಪಗಳನ್ನು ಧರಿಸಬಲ್ಲನೆಂದೂ, ಕೆಟ್ಟ ಲಕ್ಷಣಗಳಂತೆ ಕಾಣುವುವೆಲ್ಲ ಅವನಲ್ಲಿ ಸದ್ಗುಣಗಳೇ ಆಗಿವೆಯೆಂದೂ ಗಿರಿಜೆಗೆ ಶಿವನೇ ತಕ್ಕ ವರನೆಂದೂ ಸಮಾಧಾನ ಹೇಳಿ, ಆಕೆಯು ತಪಸ್ಸಿನಿಂದಲೇ ಶಿವನನ್ನು ಒಲಿಸಬೇಕೆಂದು ತಿಳಿಸಿ ಹೊರಟುಹೋಗುವನು.

ಆದರೆ ಹಡೆದ ತಾಯಿಗೆ ಮಗಳು ಸುಂದರನೂ ಸುಲಕ್ಷಣನೂ ಸತ್ಕುಲಪ್ರಸೂತನೂ ಆದ ವರನನ್ನು ಮದುವೆಯಾಗಬೇಕೆಂಬ ಇಷ್ಟ. ಪರ್ವತರಾಜನು ಪತ್ನಿಯನ್ನು ಉಚಿತ ವಚನಗಳಿಂದ ಸಮಾಧಾನಗೊಳಿಸಿ ತಪಸ್ಸಿನ ವಿಧಿನಿಯಮಗಳನ್ನು ಮಗಳಿಗೆ ಉಪದೇಶಮಾಡುವಂತೆ ಹೇಳಿ ಕಳುಹಿಸುವನು. ಪತಿಯ ಆಣತಿಯನ್ನು ಹೊತ್ತು ಮೇನೆ ಮಗಳ ಬಳಿಗೆ ಹೋಗುವಳು. ಮಗಳ ಸುಕುಮಾರ ಶರೀರ ಅವಳ ಕಣ್ಣಿಗೆ ಕಂಡ ಕೂಡಲೇ, ಕಣ್ಣುಗಳಲ್ಲಿ ನೀರು ಮುಕ್ಕುಳಿಸುವುದು, ಅವಳ ಬಗೆ ಕವಡುವುದು. ಸರ್ವಜ್ಞೆಯಾದ ಪಾರ್ವತಿ ತಾಯಿಯ ಇಂಗಿತವನ್ನು ಅರಿತವಳಾಗಿ, ಅಂದು ಅಜಮುಹೂರ್ತದಲ್ಲಿ ಒಬ್ಬ ಬ್ರಾಹ್ಮಣ ತಪಸ್ವಿ ಬಂದು ಪ್ರೀತಿಪೂರ್ವಕವಾಗಿ ಶಿವನನ್ನು ಕುರಿತು ತಪಸ್ಸುಮಾಡು ಎಂದು ಹೇಳಿ ಹೊರಟುಹೋದಂತೆ ತಾನು ಕನಸು ಕಂಡುದಾಗಿ ತಿಳಿಸುವಳು. ನಾರದನು ಹೇಳಿದಂತಹ ಲಕ್ಷಣಗಳುಳ್ಳ ಒಬ್ಬ ಮಹಾತಪಸ್ವಿಯು ತಪವನ್ನಾಚರಿಸಲು ತನ್ನ ನಗರದ ಸಮೀಪಕ್ಕೆ ಬಂದಂತೆಯೂ, ತಾನು ಪಾರ್ವತಿಯೊಡನೆ ಅವನ ಬಳಿಗೆ ಹೋಗಿ ನೋಡಿದಾಗ ಆ ಮಹಾತಪಸ್ವಿ ಶಂಕರನೇ ಆಗಿದ್ದುದಾಗಿಯೂ, ಪಾರ್ವತಿಗೂ ಶಂಕರನಿಗೂ ಮಾತುಕತೆ ನಡೆದನಂತರ ಶಂಕರನ ಆಜ್ಞೆಯಿಂದಲೇ ಆಕೆ ಶಿವನನ್ನು ಭಕ್ತಿಯಿಂದ ಸೇವಿಸತೊಡಗುತ್ತಿದ್ದಂತೆಯೂ, ತಾನೂ ಅದೇ ಮುಹೂರ್ತದಲ್ಲಿ ಕನಸು ಕಂಡುದಾಗಿ ಹಿಮವಂತನು ಪತ್ನೀ ಪುತ್ರಿಯರಿಗೆ ಅರುಹುವನು. ಅನಂತರ ಅವರು

ಸ್ವಪ್ನಫಲಪ್ರಾಪ್ತಿಯ ನಿರೀಕ್ಷೆಯಲ್ಲಿ ಕೆಲವು ದಿನಗಳನ್ನು ನೂಕುವರು.

ಸತೀವಿರಹದಿಂದ ವ್ಯಗ್ರನಾದ ಪರಮೇಶ್ವರನು ಅಲ್ಲಲ್ಲಿ ಅಲೆದಾಡುತ್ತ ತಪಸ್ಸಿಗಾಗಿ ಕೆಲವು ಗಣಗಳೊಡನೆ ಹಿಮಾಲಯಕ್ಕೆ ಆಗಮಿಸುವನು. ಗಿರಿರಾಜನು ಅವನ ಬಳಿಗೆ ಹೋಗಿ ಭಕ್ತಿಭಾವದಿಂದ ಸ್ತುತಿಸಿ ತನ್ನ ಕೈಂಕರ್ಯವನ್ನು ಸ್ವೀಕರಿಸಬೇಕೆಂದು ಅವನನ್ನು ಬೇಡಿಕೊಳ್ಳುವನು. ಈಶ್ವರನು ಪ್ರಸನ್ನವದನನಾಗಿ ಆ ತಪ್ಪಲಲ್ಲಿ ರಹಸ್ಯವಾಗಿ ತಪವನ್ನಾಚರಿಸಲು ತಾನು ಬಂದಿರುವುದಾಗಿಯೂ, ತನ್ನ ತಪಸ್ಸಿಗೆ ಯಾವ ಅಡ್ಡಿಯೂ ಬರದಂತೆ ನೋಡಿಕೊಳ್ಳಬೇಕೆಂದೂ ಗಿರಿರಾಜನಿಗೆ ಹೇಳುವನು. ಆಮೇಲೆ ಗಿರಿರಾಜನು ಮನೆಗೆ ಹಿಂದಿರುಗಿ ಶಿವನ ತಪಸ್ಸಿಗೆ ಯಾವ ಅಡ್ಡಿಯೂ ಆಗದಂತೆ ಏರ್ಪಾಡು ಮಾಡುವನು.

ಮತ್ತೊಂದು ದಿನ ಪರ್ವತರಾಜನು ಮಗಳನ್ನು ಶಿವನ ಸೇವೆಗೆ ನಿಯಮಿಸುವ ಉದ್ದೇಶದಿಂದ ಶಂಕರನಲ್ಲಿಗೆ ಕರೆವೊಯ್ದು "ಈ ನನ್ನ ಪುತ್ರಿಯು ನಿನ್ನನ್ನು ಸೇವಿಸಲು ಬಂದಿದ್ದಾಳೆ. ಇಬ್ಬರು ಸಖಿಯರೊಡಗೂಡಿದ ಈಕೆಯನ್ನು ಇಲ್ಲಿ ನಿನ್ನ ಸೇವೆಗಾಗಿ ಇರಿಸಿ ಹೋಗಬಹುದಾದರೆ ನಾನು ಅನುಗೃಹೀತನಾದಂತೆಯೆ" ಎಂದು ಹೇಳುವನು. ಆಗ ಈಶ್ವರನು ಪ್ರಥಮಾರೂಢಯೌವನೆಯಾದ ಉಮೆಯನ್ನು ನೋಡಿ ಮತ್ತೆ ಧ್ಯಾನಾರೂಢನಾಗುವನು. ಗಿರಿರಾಜನು ಪುನಃ ಪುನಃ ಪ್ರಾರ್ಥಿಸಲು ಈಶ್ವರ ಬಹಿರ್ಮುಖನಾಗಿ "ಗಿರಿಜೆಯು ಇಲ್ಲಿ ಸುಳಿಯಕೂಡದು; ಇವಳನ್ನು ಕರೆತರುವುದಾದರೆ ನಿನಗೆ ದರ್ಶನವು ದೊರೆಯಲಾರದು" ಎನ್ನುವನು. ಹಿಮವಂತನ ವಾದಕ್ಕೆ ಶಂಕರ ಸಗ್ಗುವುದಿಲ್ಲ. ಗಿರಿಜೆಯೇ ಮುಂದೆ ಬಂದು ಶಂಕರನಿಗೆ ನಮಸ್ಕರಿಸಿ ಅವನೊಡನೆ ವಾದಿಸುವಳು. "ಓ ಜ್ಞಾನವಿಶಾರದನಾದ ಯೋಗೀಶ್ವರ, ನೀನು ಯಾರು? ಪ್ರಕೃತಿ ಯಾರು? ನಿನ್ನ ತಪಶ್ಶಕ್ತಿಯೇ ಪ್ರಕೃತಿಯಲ್ಲವೆ? ಪ್ರಕೃತಿಯಿಲ್ಲದಿದ್ದರೆ ನಿನಗೆ ಲಿಂಗರೂಪವು ಹೇಗೆ ಉಂಟಾಗುತ್ತಿತ್ತು? ಆ ಪ್ರಕೃತಿಯೇ ನಾನಲ್ಲವೆ?" ಎಂದು ಪ್ರಶ್ನಿಸುವಳು. "ಅದು ಸಾಂಖ್ಯಶಾಸ್ತ್ರದ ಮಾತಾಯಿತು. ಆದರೆ ವೇದಾಂತದರ್ಶನದಲ್ಲಿ ಹೇಳುವಂತೆ ನಾನು ಶುದ್ಧಬ್ರಹ್ಮನು. ಮಾಯೆಯಿಂದ ಈಶ್ವರನಾಗಿದ್ದೇನೆ. ಆ ಮಾಯೆ ನನಗೆ ಅಧೀನಳು"

ಎಂದು ಈಶ್ವರನು ಮಾರುತ್ತರವೀಯುವನು. ಕೊನೆಗೆ ಪಾರ್ವತಿಯೇ ಗೆಲ್ಲುವಳು. ಈಶ್ವರ ಪರ್ವತರಾಜನ ಬೇಡಿಕೆಗೆ 'ಅಸ್ತು' ಎನ್ನುವನು. ಪ್ರತಿದಿನವೂ ಗಿರಿಜೆ ಅರಮನೆಯಿಂದ ಬಂದು ಷೋಡಶೋಪಚಾರಗಳಿಂದ ಶಂಕರನನ್ನು ಅರ್ಚಿಸಿ ಹಿಂದಿರುಗುವಳು. ಬಹುಕಾಲದವರೆಗೆ ಈ ಕ್ರಮ ನಡೆಯುವುದು. ಆಗಾಗ್ಗೆ ಅವಳು ಶಂಕರನಿಗೆ ಕಾಮೋದ್ರೇಕವುಂಟಾಗುವಂತೆ ತಾಳಲಯಬದ್ಧವಾಗಿ ಸುಶ್ರಾವ್ಯವಾಗಿ ಗಾನಮಾಡುವಳು. ಪುಷ್ಪ, ದರ್ಭೆ, ಸಮಿತ್ತುಗಳನ್ನು ತಾನೇ ತಂದು ಶಿವನಿಗೆ ಕೈಮುಟ್ಟಿ ಕೊಡುವಳು. ಶಂಕರನ ತಪೋಭೂಮಿಯನ್ನು ಆಗಾಗ್ಗೆ ಚೊಕ್ಕಟಮಾಡುವಳು. ಒಮ್ಮೊಮ್ಮೆ ಚಂದ್ರಶೇಖರನ ಸುಂದರ ವದನವನ್ನು ಬಯಕೆ ತುಂಬಿದ ಕಣ್ಣುಗಳಿಂದ ನೋಡುತ್ತ ನೋಡುತ್ತ ಶಂಕರನನ್ನು ಚಕಿತಗೊಳಿಸುವಳು. ಆದರೆ ಅವಳು ಎಷ್ಟೇ ಚೆಲುವೆಯಾಗಿದ್ದರೂ ಮನುಷ್ಯದೇಹವನ್ನು ಧರಿಸಿ ಅಶುದ್ಧಳಾಗಿರುವುದರಿಂದ ತಪಸ್ಸನ್ನು ಮಾಡಿ ಪರಿಶುದ್ಧಳಾಗುವ ತನಕ ಅವಳನ್ನು ಸ್ವೀಕರಿಸುವುದಿಲ್ಲವೆಂದು ಯೋಚಿಸಿ ಮೊದಲಿನಂತೆ ಧ್ಯಾನಾಸಕ್ತನಾಗುವನು.

ಅತ್ತ ತಾರಕನು ಹುಟ್ಟಿ, ಸುದೀರ್ಘಕಾಲ ತಪಸ್ಸುಮಾಡಿ, ಬ್ರಹ್ಮನಿಂದ ವರವನ್ನು ಪಡೆದು ಮೂರು ಲೋಕಗಳಿಗೂ ಕಂಟಕಪ್ರಾಯನಾಗಿ ಮೆರೆಯುತ್ತಿರುತ್ತಾನೆ. ದೇವತೆಗಳು ಅವನ ಪೀಡೆಯನ್ನು ತಾಳಲಾರದೆ ಹಿರಣ್ಯಗರ್ಭನಲ್ಲಿ ಮೊರೆಯಿಡುವರು. ಪಾರ್ವತಿಯಲ್ಲಿ ಶಿವನಿಂದ ಹುಟ್ಟಿದ ಕುಮಾರನಿಂದಲ್ಲದೆ ತನ್ನಿಂದಾಗಲಿ ವಿಷ್ಣುವಿನಿಂದಾಗಲಿ ತಾರಕಾಸುರನ ಸಂಹಾರ ಸಾಧ್ಯವಿಲ್ಲೆಂದೂ, ಶಂಕರನು ಬಹಿರ್ಮುಖನಾಗಿ ಪಾರ್ವತಿಯ ಕೈಹಿಡಿಯುವಂತೆ ಪ್ರಯತ್ನಮಾಡುವುದೇ ಕ್ಷೇಮಕರ ಎಂದೂ ಬ್ರಹ್ಮನು ನುಡಿಯುವನು. ಅನಂತರ ದೇವೇಂದ್ರನು ಮನ್ಮಥನನ್ನು ಸ್ಮರಿಸಿ ಬರಮಾಡಿಕೊಂಡು ದೇವತೆಗಳಿಗೆ ಒದಗಿರುವ ಸಂಕಟವನ್ನು ಮನಕರಗುವಂತೆ ಚಿತ್ರಿಸುವನು.

ದಾತುಃ ಪರೀಕ್ಷಾ ದುರ್ಭಿಕ್ಷೇ ರಣೇ ಶೂರಸ್ಯ ಜಾಯತೇ ।
ಆಪತ್ಕಾಲೇ ತು ಮಿತ್ರಸ್ಯಾ ಶಕ್ತೌ ಸ್ತ್ರೀಣಾಂ ಕುಲಸ್ಯ ಹಿ ॥

ವಿನಯೋ ಸಂಕಟೇ ಪ್ರಾಪ್ತೇಽವಿತಥಸ್ಯ ಪರೋಕ್ಷತಃ ।
ಸುಸ್ನೇಹಸ್ಯ ತಥಾ ತಾತ ನಾನ್ಯಥಾ ಸತ್ಯವಿಚಾರಿತಂ ॥

ಎಂಬಂತೆ "ಸಂಕಟದಲ್ಲಿ ಸ್ನೇಹ ಪರೀಕ್ಷೆಗೀಡಾಗುತ್ತದೆ; ಈಗ ಲೋಕ ಕಲ್ಯಾಣಕಾರಕವಾದ ಈ ಕಾರ್ಯ ನಿನ್ನಿಂದ ಆಗಬೇಕಾಗಿದೆ. ಇದರಿಂದ ನಿನ್ನ ಪ್ರತಾಪವೂ ಲೋಕದಲ್ಲಿ ಚಿರಕಾಲ ನಿಲ್ಲುತ್ತದೆ" ಎಂದು ಒತ್ತಿಹೇಳಿ ಅವನನ್ನು ಪುಸಲಾಯಿಸುವನು. "ಸಂಕಟೇ ಬಹು ಯೋ ಬ್ರೂತೇ ಸ ಕಿಂ ಕಾರ್ಯಂ ಕರಿಷ್ಯತಿ" (ಸಂಕಟ ಸಂಭವಿಸಿದಾಗ ಬಹುವಾಗಿ ಮಾತಾಡುವವನು ಏನೂ ಮಾಡಲಾರ) ಎಂದು ಮನ್ಮಥ ಇಂದ್ರನಲ್ಲಿ ಆಶ್ವಾಸನವನ್ನು ಹುಟ್ಟಿಸಿ ಶಿವನ ಮಾಯೆಯಿಂದ ಆವರಿಸಲ್ಪಟ್ಟವನಾಗಿ ಮುಂದಿನ ಕಾರ್ಯಕ್ಕೆ ಸಂತೋಷದಿಂದ ಒಪ್ಪುವನು.

ಪತ್ನೀಪರಿವಾರ ಸಮೇತನಾದ ಮನ್ಮಥ ಗರ್ವಿಷ್ಠನಾಗಿ ಮಹೇಶನ ತಪೋವನವನ್ನು ಪ್ರವೇಶಿಸುವನು. ಅಕಾಲದಲ್ಲಿ ವಸಂತೋದಯವಾಗುವುದು. ಎಲ್ಲ ಪ್ರಾಣಿಗಳಿಗೂ ಕಾಮವಿಕಾರ ಉಂಟಾಗುವುದು. ಆದರೆ ಆ ಸ್ಥಾಣು ಚಲಿಸುವುದಿಲ್ಲ ಮನ್ಮಥನು ತುಂಬಾ ಭಯಗೊಳ್ಳುವನು. ಆ ಸಮಯಕ್ಕೆ ಸರಿಯಾಗಿ ಪಾರ್ವತಿಯು ಶಿವಪೂಜೆಗಾಗಿ ಪುಷ್ಪಗಳನ್ನು ತೆಗೆದುಕೊಂಡು ಸಖಿಯರೊಡನೆ ಅಲ್ಲಿಗೆ ಬರುವಳು. ಸೌಂದರ್ಯನಿಧಿಯಾದ ಪರ್ವತಾತ್ಮಜೆಯ ಆಗಮನದಿಂದ ಶಿವನು ಧ್ಯಾನವನ್ನು ಬಿಟ್ಟು ಬಹಿರ್ಮುಖನಾಗುವನು. ಅದೇ ಸಮಯವನ್ನು ಕಾಯುತ್ತಿದ್ದ ಮನ್ಮಥನು ಶಂಕರನ ಮೇಲೆ ಬಾಣಪ್ರಯೋಗ ಮಾಡುವನು. ಅಂಗಾಂಗಗಳಲ್ಲಿ ಶೃಂಗಾರಭಾವವನ್ನು ಪ್ರಕಟಿಸುತ್ತ ಸ್ತ್ರೀ ಸ್ವಭಾವವಾದ ಲಜ್ಜೆಯಿಂದ ನಿಂತಿದ್ದ ಗಿರಿಜೆಯನ್ನು ನೋಡಿದ ಶಂಕರನು ಆಕೆಯ ಸೌಂದರ್ಯವನ್ನು ಮೆಚ್ಚಿ ಅಂಗಾಂಗಗಳನ್ನು ಮನಸ್ಸಿನಲ್ಲಿಯೇ ವರ್ಣಿಸತೊಡಗುವನು. ಆ ಮಹಾಯೋಗಿ ಮತ್ತೆ ಕೂಡಲೇ ಎಚ್ಚತ್ತು "ಘೋರತಪಸ್ವಿಯಾದ ನನ್ನ ಮನಸ್ಸು ಚಂಚಲವಾಗುವುದಕ್ಕೆ ಕಾರಣವೇನು? ಯಾವನೋ ದುಷ್ಟನು ನನ್ನ ಮನಸ್ಸು ವಿಕಾರಹೊಂದುವಂತೆ ಮಾಡಿರಬೇಕು" ಎಂದುಕೊಂಡು ಸುತ್ತಲೂ ಕಣ್ಣು ಹೊರಳಿಸಿ ನೋಡುತ್ತಾನೆ. ಆ ಕೂಡಲೇ

ಬಾಣವನ್ನು ಹೆದೆಗೇರಿಸಿ ಎಳೆಯುತ್ತ ಗರ್ವದಿಂದ ಮೆರೆಯುತ್ತಿದ್ದ ಮೂಢ ಚೇತಸನಾದ ಮದನನು ಕಾಣುವನು. ಶಂಕರನು ಮಹಾಕ್ರೋಧದಿಂದ ನೋಡುತ್ತಿರುವಾಗಲೇ ಮನ್ಮಥನು ಅಂತರಿಕ್ಷದಲ್ಲಿ ನಿಂತು ಮಹಾಬಲಿಷ್ಠ ವಾದೊಂದು ಪುಷ್ಪಬಾಣವನ್ನು ಪ್ರಯೋಗಿಸುವನು. ಆ ಬಾಣ ಕೋಪ ಗೊಂಡ ಮಹೇಶ್ವರನಲ್ಲಿ ಹಾಗೆಯೇ ಶಾಂತವಾಗುವುದು. ವ್ಯರ್ಥಪ್ರಯತ್ನ ನಾಗಿ ಭಯಗೊಂಡ ಮನ್ಮಥನು ಮತ್ತೆ ದೇವತೆಗಳನ್ನು ಸ್ಮರಿಸುವನು. ಅವರು ಬಂದು ಶಿವನಿಗೆ ನಮಸ್ಕರಿಸಿ ಸ್ತೋತ್ರಮಾಡುತ್ತಿದ್ದಂತೆಯೇ ಕ್ರುದ್ಧನಾದ ರುದ್ರನ ಹಣೆಗಣ್ಣಿನಿಂದ ಪ್ರಲಯಾಗ್ನಿ ಹೊರಚಿಮ್ಮಿ ಮನ್ಮಥ ನನ್ನು ಸುಟ್ಟು ಭಸ್ಮಮಾಡುವುದು. ನಿರಾಶಳಾದ ಪಾರ್ವತಿ ದುಗುಡ ದಿಂದ ಮನೆಗೆ ಹಿಂದಿರುಗುವಳು.

ಪತಿವಿರಹಿತೆಯಾದ ರತಿ ದುಃಖಾತಿಶಯದಿಂದ ಮೂರ್ಛೆ ಹೊಂದು ವಳು. ಮತ್ತೆ ಪ್ರಜ್ಞೆ ತಿಳಿದ ಮೇಲೆ ವಿಧವಿಧವಾಗಿ ಗೋಳಾಡುವಳು. ಇಂದ್ರಾದಿ ದೇವತೆಗಳು ಅಲ್ಲಿಗೆ ಬಂದು ರತೀದೇವಿಯನ್ನು ಸಮಾಧಾನ ಗೊಳಿಸಿ, ಮದನನ ಭಸ್ಮವನ್ನು ತೆಗೆದಿಟ್ಟಿರಬೇಕೆಂದೂ, ಶಂಕರನು ಪುನಃ ಅವನನ್ನು ಬದುಕಿಸುವನೆಂದೂ, ಅವಳ ಎದೆಯಲ್ಲಿ ಧೈರ್ಯದ ಬೀಜ ವನ್ನು ಬಿತ್ತಿ ಈಶ್ವರನ ಸಮೀಪಕ್ಕೆ ಹೋಗಿ "ಪರೋಪಕಾರಕ್ಕಾಗಿ ಪ್ರಾಣ ವನ್ನು ತೆತ್ತ ಮದನನನ್ನು ಬದುಕಿಸಿಕೊಡಬೇಕು" ಎಂದು ಬೇಡಿಕೊಳ್ಳು ವರು. ಈ ಮನ್ಮಥನೆ ಮುಂದೆ ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀಕೃಷ್ಣನ ಮಗನಾಗಿ ಹುಟ್ಟುವನೆಂದೂ, ಅಲ್ಲಿಯವರೆಗೆ ಇವನು ಅನಂಗನಾಗಿಯೇ ಇರುವನೆಂದೂ ಈಶ್ವರನು ಹೇಳುವನು.

ಇತ್ತ ತಂದೆಯ ಮನೆಯನ್ನು ಸೇರಿದ ಗಿರಿಜೆ ವಿರಹವೇದನೆಯಿಂದ ಕೊರಗುವಳು. ತನ್ನ ರೂಪಲಾವಣ್ಯವನ್ನು ನಿಂದಿಸಿಕೊಳ್ಳುವಳು. ಎಲ್ಲಿ ದ್ದರೂ ಶಿವನ ಚಿಂತೆ; ಶಿವಧ್ಯಾನ. ಒಂದೊಂದುಬಾರಿ ವಿರಹವ್ಯಥೆಯನ್ನು ತಾಳಲಾರದೆ ಮೂರ್ಛೆ ಹೋಗುವಳು. ಹೀಗಿರಲು ಕಾಮಚಾರಿಯಾದ ನಾರದನು ಬಂದು ಉಮೆಯನ್ನು ಕರೆದು 'ನೀನು ಮಹಾದೇವನನ್ನು ತೃಪ್ತಿಕರವಾಗಿ ಸೇವಿಸಿರುವೆ. ಆದರೆ ಆ ಪೂಜೆಯಲ್ಲಿ ಸೌಂದರ್ಯಗರ್ವ

ಬೆರೆತಿದ್ದಿತು. ಆ ಗರ್ವವನ್ನು ದೀನದಯಾಳುವಾದ ಈಶ್ವರನು ದಗ್ಧಗೊಳಿಸಿದ್ದಾನೆ. ಅವನು ಭಕ್ತವತ್ಸಲನು. ಅಂಥವನನ್ನು ನಿಯಮಬದ್ಧವಾದ ತಪಸ್ಸಿನಿಂದ ಬಹುಕಾಲ ಆರಾಧಿಸಬೇಕು. ತಪಸ್ಸಿನಿಂದ ಪರಿಶುದ್ಧಳಾದ ನಿನ್ನನ್ನು ಅವನು ವರಿಸುವನು, ಎಂದು ಹೇಳಿ ಅವಳಿಗೆ ಶಿವಪಂಚಾಕ್ಷರೀ ಮಂತ್ರವನ್ನು ವಿಧಿವತ್ತಾಗಿ ಉಪದೇಶಮಾಡುವನು.

ಪಾರ್ವತೀದೇವಿ ತಪಸ್ಸು ಮಾಡುವುದು ಮೇನಾದೇವಿಗೆ ಒಪ್ಪಿಗೆ; ಆದರೆ ಮನೆಯಲ್ಲಿಯೇ ಇದ್ದುಕೊಂಡು ತಪಸ್ಸುಮಾಡಲೆಂಬುದೇ ಅವಳ ಬಯಕೆ. ಇದರಿಂದ ಉಮೆಯು ತುಂಬ ದುಃಖಿತಳಾಗುವಳು. ಮಗಳ ಅಪಾರ ದುಃಖವನ್ನು ನೋಡಲಾರದೆ, ಅವಳ ಮೇಲಣ ಅನುರಾಗದಿಂದ ಮೇನೆಯೂ ಸಮ್ಮತಿಸುವಳು. ಬಳಿಕ ಪಾರ್ವತಿ ತಪೋಯೋಗ್ಯವಾದ ಉಡಿಗೆಗಳನ್ನು ಧರಿಸಿಕೊಂಡು ತಪೋಭೂಮಿಯನ್ನು ಸೇರಿ ತಪಸ್ಸನ್ನಾರಂಭಿಸುವಳು.

ಗಿರಿಜೆಯ ತಪಸ್ಸು ಸಾಮಾನ್ಯವಾದುದಲ್ಲ. ಉರಿಬೇಸಗೆಯಲ್ಲಿ ಪ್ರಜ್ವಲಿಸುವ ಅಗ್ನಿಯ ನಡುವೆ ಕುಳಿತು ಶಿವಪಂಚಾಕ್ಷರಿಯನ್ನು ಜಪಿಸುವಳು. ಮಳೆಗಾಲದ ಸುರಿಮಳೆಯಲ್ಲಿ ಸುತ್ತುವರಿದ ಹರಿನೀರಿನಲ್ಲಿ ಶೀತಲವಾದ ಶಿಲೆಯಮೇಲೆ ಕುಳಿತು ತಪವನ್ನಾಚರಿಸುವಳು. ಹೇಮಂತಋತುವಿನಲ್ಲಿ ನೀರಿನಲ್ಲಿ ನಿಂತು ಧ್ಯಾನಪರಳಾಗುವಳು. ಶಿಶಿರಋತುವಿನಲ್ಲಿ ಅನ್ನ ನೀರು ಮುಟ್ಟದೆ ಶಿವಧ್ಯಾನದಲ್ಲಿ ಲೀನವಾಗುವಳು. ಆದರೂ ತಾನು ಬೆಳೆಸಿದ ವೃಕ್ಷಗಳಿಗೆ ಅವಕಾಶವಿದ್ದಾಗ ನೀರೆರೆಯುವುದನ್ನಾಗಲಿ, ಬಂದ ಅತಿಥಿಗಳಿಗೆ ಸತ್ಕಾರ ನೀಡುವುದನ್ನಾಗಲಿ ಅವಳು ಮರೆಯುವುದಿಲ್ಲ. ಹೀಗೆ ಬಹುಕಾಲ ಯಾವ ಕ್ಲೇಶಕಂಟಕಗಳನ್ನೂ ಗಣನೆಗೆ ತಂದುಕೊಳ್ಳದೆ ತಪಸ್ಸು ಮಾಡುವಳು. ಕೊನೆಕೊನೆಗೆ ಉಪವಾಸವಿದ್ದು ಜಪದಲ್ಲಿ ಲೋಕವನ್ನೇ ಮರೆಯುವಳು. ಹೀಗೆ ಅರವತ್ತುಸಾವಿರ ವರ್ಷಗಳು ಜಾರುವುವು. ಅವಳ ಉಗ್ರತಪಸ್ಸನ್ನು ಕಂಡ ಮಿಕ್ಕೆಲ್ಲ ಮುನಿಗಳು ಚಕಿತರಾಗುವರು.

ಒಂದಾನೊಂದು ದಿನ ಹಿಮವಂತನು ಪತ್ನೀಪುತ್ರರೊಂದಿಗೆ ಪಾರ್ವತಿಯ ತಪೋನಿವೇಶನಕ್ಕೆ ಬಂದು, ಅವಳನ್ನು ಕುರಿತು "ಎಲೌ ಶಿವೆ,

ನಿನ್ನೀ ತಪಸ್ಸು ನಿರರ್ಥಕ. ವಿರಕ್ತನಾದವನು ಎಲ್ಲಿಯಾದರೂ ಅನುರಕ್ತನಾಗುವುದುಂಟೆ? ಸುಮಕೋಮಲಳಾದ ನೀನು ಕಾಯಕ್ಲೇಶಗಳನ್ನು ಸಹಿಸಿ ತಪಸ್ಸುಮಾಡುವುದು ಉಚಿತವಲ್ಲ. ಕಾಮಾರಿಯಾದ ಶಿವನು ಕಾಮಿಯಾಗನು. ಆಕಾಶದ ಚಂದ್ರ ಹೇಗೆ ದುರ್ಲಭನೋ ಶಂಕರನೂ ಹಾಗೆಯೆ ದುರ್ಲಭನು ಎಂದು ಹೇಳುವನು. ಅದೇ ರೀತಿ ಇತರ ಬಂಧುಗಳೂ ನಿವೇದಿಸಿಕೊಳ್ಳುವರು. ಆದರೆ ಪಾರ್ವತಿಯ ಛಲ ಚಲಿಸುವುದಿಲ್ಲ. ಬಂದ ಬಂಧುಗಳು ವಿಫಲರಾಗಿ ಮರಳುವರು.

ಪಾರ್ವತಿಯ ತಪೋಜ್ವಾಲೆಯಿಂದ ಇಡೀ ವಿಶ್ವವೆ ತಳಮಳಗುಟ್ಟುವುದು. ದೇವತೆಗಳೆಲ್ಲ ಬ್ರಹ್ಮನಲ್ಲಿ ಮೊರೆಯಿಡುವರು. ಬ್ರಹ್ಮ ಅವರೊಡನೆ ಮಹೇಶ್ವರನ ಬಳಿಗೆ ತೆರಳಿ ಅವನನ್ನು ಪರಿಪರಿಯಾಗಿ ಸ್ತುತಿಸುವನು. ಶಂಕರನು ಪ್ರಸನ್ನನಾಗುವನು. ಆದರೆ ಪಾರ್ವತಿಯನ್ನು ಮದುವೆಯಾಗಲು ಅವನು ಇಷ್ಟಪಡುವುದಿಲ್ಲ; ದೇವತೆಗಳ ಇಷ್ಟಾರ್ಥ ನೆರವೇರುವುದಿಲ್ಲ. ಮತ್ತೆ ಈಶ್ವರ ಧ್ಯಾನಮಗ್ನನಾಗುವನು. ನಂದೀಶ್ವರನ ಸಲಹೆಯಂತೆ ಅವರು ಪುನಃ ಸ್ತೋತ್ರಗೈಯುವರು. ಶಿವನು ಮತ್ತೊಮ್ಮೆ ಬಹಿರ್ಮುಖನಾಗಿ ಸ್ತ್ರೀ ಸಂಬಂಧದಿಂದ ಉಂಟಾಗುವ ಕೇಡುಗಳನ್ನೆಲ್ಲ ದೇವತೆಗಳಿಗೆ ಬಿತ್ತರಿಸುವನು. ಕೊನೆಗೆ ಭಕ್ತರ ಅನನ್ಯಭಕ್ತಿಗೆ ಕಟ್ಟುಬಿದ್ದು ಭಕ್ತವತ್ಸಲನಾದ ಶಿವ ಗಿರಿಜೆಯನ್ನು ಮದುವೆಮಾಡಿಕೊಳ್ಳಲು ಸಮ್ಮತಿಸುವನು.

ಕೆಲವು ದಿನಗಳ ನಂತರ ಸಪ್ತರ್ಷಿಗಳು ಈಶ್ವರನ ಕರೆಯನ್ನು ಮನ್ನಿಸಿ ಬರುವರು. ಪಾರ್ವತಿಯ ಮನಸ್ಸಿನ ದೃಢತೆಯನ್ನು ಒರೆದು ನೋಡಿ ಬರಬೇಕೆಂದು ಶಂಕರನು ಅವರಿಗೆ ಅಪ್ಪಣೆಮಾಡುವನು. ಅವರು ಪಾರ್ವತಿಯ ಸಮೀಪವನ್ನು ಸೇರಿ ಈಶ್ವರನನ್ನು ಜರೆದು, ವಿಷ್ಣುವೇ ಅವಳಿಗೆ ಯೋಗ್ಯನಾದ ಪತಿಯೆಂದು ಹೇಳುವರು. ಆದರೆ ಅಚಲಪುತ್ರಿ ಶಿವನ ಕಲ್ಯಾಣಗುಣಗಳನ್ನು ವಿವರಿಸಿ ಅವನೇ ತನ್ನ ಪತಿಯೆಂದು ನಿಶ್ಚಿತವಾಗಿ ನುಡಿಯುವಳು. ಋಷಿಗಳು ಅವಳನ್ನು ಹರಸಿ ಹಿಂದಿರುಗುವರು.

ಅನಂತರ ಶಿವನು ವೃದ್ಧಬ್ರಹ್ಮಚಾರಿಯಾಗಿ ಪಾರ್ವತಿಯ ತಪೋವನಕ್ಕೆ ಬರುವನು. ಅತಿಥಿಸನ್ಮಾನ ಪರಸ್ಪರ ಕುಶಲಸಂಭಾಷಣೆಗಳಾದ

ನಂತರ ವೃದ್ಧನು ಆಕೆಯನ್ನೂ ಆಕೆಯ ಸೌಂದರ್ಯಾತಿಶಯವನ್ನೂ ಹೊಗಳಿ ತಪಸ್ಸಿಗೆ ಕಾರಣವೇನೆಂದು ಕೇಳುವನು. ಪಾರ್ವತಿ ತನ್ನ ಮನೋ ನಿಶ್ಚಯವನ್ನು ವ್ಯಕ್ತಪಡಿಸಿ, ಈಶ್ವರ ತನ್ನ ತಪಸ್ಸಿಗೆ ಪ್ರಸನ್ನವಾಗಿಲ್ಲ ವಾದುದರಿಂದ ತಾನು ಅಗ್ನಿಪ್ರವೇಶಮಾಡಿ ಶರೀರವನ್ನು ತ್ಯಜಿಸುವುದಾಗಿ ಹೇಳಿ ಅಗ್ನಿಯನ್ನು ಪ್ರವೇಶಿಸುವಳು. ಅಗ್ನಿ ಅವಳನ್ನು ದಹಿಸದೆ ಚಂದ ನದಂತೆ ಶೀತಲವಾಗುವುದು.

ಆಗ ವೃದ್ಧಬ್ರಹ್ಮಚಾರಿ ಪಾರ್ವತಿಯ ತಪಃಪ್ರಭಾವದ ವಿಷಯದಲ್ಲಿ ವಿಸ್ಮಯವನ್ನು ಸೂಚಿಸಿ ಈಶ್ವರನನ್ನು ವಿಧವಿಧವಾಗಿ ಹಳಿದು ಅವನು ಅವಳಿಗೆ ಅನುರೂಪನಾದ ಪತಿಯಲ್ಲವೆಂದು ಭರ್ತ್ಸನೆಮಾಡುವನು. ನಿರ್ಗು ಣನೂ, ಮೃತ್ಯುಂಜಯನೂ, ಪರಬ್ರಹ್ಮನೂ ಆದ ಪರಮೇಶ್ವರನ ಮಹಿಮಾ ಸ್ವರೂಪವನ್ನು ಪಾರ್ವತಿ ಎಷ್ಟು ವಿಧವಾಗಿ ಬಣ್ಣಿಸಿದರೂ ಆ ವೃದ್ಧ ಶಿವ ನಿಂದೆಯನ್ನು ಬಿಡುವುದಿಲ್ಲ. ಶಿವನಿಂದೆಯನ್ನು ಮಾಡುವಷ್ಟೇ ಶಿವನಿಂದೆ ಯನ್ನು ಕೇಳುವುದೂ ಪಾಪಕರವೆಂದು ಯೋಚಿಸಿ, ವಧ್ಯನಲ್ಲದ ದುಷ್ಟ ಬ್ರಾಹ್ಮಣನನ್ನು ತ್ಯಜಿಸಿ ಸಖಿಯರೊಡನೆ ಪಾರ್ವತಿ ಬೇರೆ ಕಡೆಗೆ ಹೊರಡ ಲುದ್ಯುಕ್ತಳಾಗುವಳು. ಕೂಡಲೇ ಶಿವನು ಅವಳ ಕೈಯನ್ನು ಹಿಡಿದು ಕೊಳ್ಳುವನು. ತನ್ನೆದುರಿಗೆ ಪ್ರತ್ಯಕ್ಷವಾದ ತನ್ನ ಆರಾಧ್ಯದೇವತೆಯನ್ನು ಕಂಡು ಪಾರ್ವತಿ ಲಜ್ಜೆಯಿಂದ ತಲೆತಗ್ಗಿಸುವಳು. ಆಗ ಶಿವನು ಗಿರಿಜೆ ಯನ್ನು ಕುರಿತು 'ಇದು ಮೊದಲುಗೊಂಡು ನಾನು ನಿನ್ನ ದಾಸನು. ನೀನು ತಪಸ್ಸಿನಿಂದಲೂ ಸೌಂದರ್ಯದಿಂದಲೂ ನನ್ನನ್ನು ಕೊಂಡು ಕೊಂಡುಬಿಟ್ಟಿರುವೆ. ಈಗ ನನಗೆ ಒಂದು ಕ್ಷಣವೂ ಒಂದು ಯುಗದಂತಾ ಗಿದೆ. ಲೋಕಲೀಲೆಯನ್ನನುಸರಿಸಿ ನಿನ್ನನ್ನು ಬಹುವಿಧವಾಗಿ ಪರೀಕ್ಷಿಸಿ ದೆನು. ಆ ನನ್ನ ಅಪರಾಧವನ್ನು ಕ್ಷಮಿಸು. ಸರ್ವವಿಧದಿಂದಲೂ ನಾನು ನಿನ್ನ ಅಧೀನನು. ನಿನ್ನೊಡನೆ ಈ ಕೂಡಲೇ ನನ್ನ ಸ್ಥಾನವಾದ ಕೈಲಾಸಕ್ಕೆ ತೆರಳುವೆನು' ಎನ್ನುವನು. "ಈಗ ನೀನು ಹಿಮವಂತನ ಮನೆಗೆ ಹೋಗಿ ಅಲ್ಲಿ ನನ್ನ ಪಾಣಿಗ್ರಹಣಕ್ಕಾಗಿ ನನ್ನ ತಂದೆಯ ಅನು ಮತಿಯನ್ನು ಯಾಚಿಸಬೇಕು. ನನ್ನ ತಂದೆಯ ಗೃಹಸ್ಥಾಶ್ರಮವನ್ನು ಸಾರ್ಥಕಗೊಳಿಸಬೇಕು. ಹಿಂದೆ ನಾನು ದಕ್ಷಕನ್ಯೆಯಾಗಿದ್ದಾಗ ನೀನು

ವಿಧಿವತ್ತಾಗಿ ನನ್ನೊಡನೆ ಮದುವೆಮಾಡಿಕೊಳ್ಳಲಿಲ್ಲ" ಎಂದು ಪಾರ್ವತಿ ಉತ್ತರವೀಯುವಳು. ಶಂಕರನು ಹಾಗೆಯೇ ಆಗಲೆಂದು ಅಂಗೀಕರಿಸಿ ಕೈಲಾಸಕ್ಕೆ ತೆರಳುವನು.

ಇತ್ತ ಪಾರ್ವತೀದೇವಿ ತನ್ನ ಸೌಂದರ್ಯವು ಸಾರ್ಥಕವಾಯಿತೆಂದು ಮನಸ್ಸಿನಲ್ಲಿಯೇ ಹಿಗ್ಗುತ್ತ ಸಖಿಯರೊಡನೆ ಮನೆಗೆ ಹಿಂದಿರುಗುವಳು. ತಂದೆತಾಯಿಯರು ಬಂಧುಪರಿವಾರ ಸಮೇತರಾಗಿ ಮಗಳನ್ನು ಇದಿರುಗೊಳ್ಳುವರು. ಇದೇ ಸಮಯದಲ್ಲಿ ಶಂಕರನು ನಟನ ವೇಷವನ್ನು ಧರಿಸಿ ಮೇನಾದೇವಿಯ ಬಳಿಗೆ ಬಂದು ಬಗೆಬಗೆಯಾಗಿ ನರ್ತಿಸುವನು. ಅವನ ಅಭಿನಯಕೌಶಲವನ್ನು ಮೆಚ್ಚಿದ ಮೇನೆ ರತ್ನಾಭರಣಗಳ ಮೆಚ್ಚನ್ನು ಕೊಡುವಳು ನಟನು ಅವುಗಳನ್ನು ಸ್ವೀಕರಿಸದೆ ಗಿರಿಜೆಯನ್ನು ತನಗೆ ಕೊಡಬೇಕೆಂದು ಯಾಚಿಸುವನು. ಮೇನಾದೇವಿಯೂ, ಆಗತಾನೆ ಹೊರಗಿನಿಂದ ಬಂದ ಹಿಮವಂತನೂ ಕುಪಿತರಾಗಿ ಅವನನ್ನು ಹೊರಗೆ ಕಳುಹಿಸುವಂತೆ ಸೇವಕರಿಗೆ ಆಜ್ಞೆಮಾಡುವರು. ಆದರೆ ಯಾರ ಪ್ರಯತ್ನವೂ ಅವನ ಮುಂದೆ ಸಾಗುವುದಿಲ್ಲ. ಅನಂತರ ಹಿಮವಂತನು ಆ ನಟಭಿಕ್ಷುಕನಲ್ಲಿ ನಾನಾ ವಿಶ್ವರೂಪಗಳನ್ನು ಕಂಡು ಆನಂದಪರವಶನಾಗುವನು. ಆದರೆ ಶಿವಮಾಯೆಯಿಂದ ಮೋಹಗೊಂಡ ಹಿಮವಂತನು ಅವನಿಗೆ ತನ್ನ ಮಗಳನ್ನು ಕೊಡಲೊಪ್ಪುವುದಿಲ್ಲ. ಶಿವನು ಅಲ್ಲಿಯೇ ಅಂತರ್ಧಾನನಾಗುವನು. ನೃತ್ಯಗಾನವಿಶಾರದನಾದ ಆ ವ್ಯಕ್ತಿಯು ಯಾರೆಂಬುದು ಅನಂತರ ಗೊತ್ತಾಗಿ ಹಿಮವಂತ ಮೇನೆಯರು ಮಿಡುಕುವರು.

ದೇವತೆಗಳೆಲ್ಲ ಸಭೆಸೇರಿ ಬೃಹಸ್ಪತಿಯ ಬಳಿಗೆ ಹೋಗಿ ಅವನನ್ನು ಕುರಿತು 'ನೀನು ಹೋಗಿ ಹಿಮವಂತನೆದುರಿಗೆ ಶಂಕರನನ್ನು ನಿಂದಿಸಬೇಕಲ್ಲದೆ ಫಲೇಚ್ಛೆಯಿಲ್ಲದೆ ಉಮೆಯನ್ನು ಕೊಡಬೇಡವೆಂದು ಅವನಿಗೆ ಬೋಧಿಸಬೇಕು' ಎಂದು ಕೇಳಿಕೊಳ್ಳುವರು. ಬೃಹಸ್ಪತಿ ಸಮ್ಮತಿಸುವುದಿಲ್ಲ. ಬ್ರಹ್ಮನನ್ನೂ ಅದೇ ರೀತಿ ಪ್ರಾರ್ಥಿಸಲಾಗುವುದು. ಅವನೂ ಆ ಕಾರ್ಯಕ್ಕೆ ಒಪ್ಪುವುದಿಲ್ಲ. ಆ ಕೆಲಸಮಾಡುವುದಕ್ಕೆ ಶಿವನನ್ನೇ ಪ್ರಾರ್ಥಿಸಿರಿ ಎಂದು ಹೇಳುವನು. ಶಿವನು ಅವರ ಪ್ರಾರ್ಥನೆಯನ್ನು ಮನ್ನಿಸಿ

ವೈಷ್ಣವಬ್ರಾಹ್ಮಣ ವೇಷದಿಂದ ಹಿಮವಂತನಲ್ಲಿಗೆ ಹೋಗಿ ಶಿವನನ್ನು ಪರಿಪರಿಯಾಗಿ ನಿಂದಿಸುವನು. ಆ ನಿಂದೆ ಪರಿಣಾಮಕಾರಿಯಾಗುವುದು. ಮೇನಾದೇವಿ ಮಗಳನ್ನು ಖಂಡಿತವಾಗಿಯೂ ಆ ಗೊರವನಿಗೆ ಕೊಡಲಾರೆ ನೆಂದು ಹೇಳಿ ಶೋಕದಿಂದ ಅನ್ನ ನೀರು ಬಿಟ್ಟು ಬರಿಯ ನೆಲದ ಮೇಲೆ ಮಲಗುವಳು. ಶಂಕರನಿಗೆ ಮತ್ತೆ ಪೀಕಲಾಟ! ಸಪ್ತಋಷಿಗಳನ್ನು ಸ್ಮರಿಸುವನು. ಅವರು ಕೂಡಲೆ ಬಂದು ಎಲ್ಲ ಸಂಗತಿಯನ್ನೂ ಶಿವನಿಂದ ಅರಿತವರಾಗಿ, ಶಿವನ ಅಭೀಷ್ಟವೇನೆಂಬುದನ್ನು ಅರಿತು ಹಿಮವಂತ ಮೇನೆ ಯರೆಡೆಗೆ ತೆರಳುವರು. ಆದರೆ ಹಿಮವಂತನು ಅವರ ಬೋಧೆಗೆ ಕಿವಿ ಗೊಡುವುದಿಲ್ಲ. ಅರುಂಧತಿಯು ಮೇನಕೆಯ ಬಳಿಗೆ ಹೋಗಿ ಆಕೆಗೆ ಹಿತೋಪದೇಶಮಾಡಿ ಸಪ್ತಋಷಿಗಳಲ್ಲಿಗೆ ಕರೆತರುವಳು. ಮತ್ತೆ ಋಷಿಗಳು ತಮ್ಮ ವಾಕ್ಚಾತುರ್ಯದಿಂದ ಹಿಮವಂತ ಮೇನೆಯರನ್ನು ಒಪ್ಪಿಸುವರು. ವಿವಾಹಕ್ಕಾಗಿ ಸಕಲ ಸಿದ್ಧತೆಗಳೂ ನಡೆಯುವುವು.

ಮದುವೆಗಾಗಿ ದೇವಾಧಿದೇವತೆಗಳೂ ಅಖಿಲಗಣಗಳೂ ಬಿಜಯ ಮಾಡುವರು. ಕಲ್ಯಾಣಮಂಟಪವು ಸಾಕ್ಷಾತ್ ವಿಶ್ವಕರ್ಮನಿಂದಲೇ ರಚಿಸಲ್ಪಡುವುದು. ಶಂಕರನು ತನ್ನ ಭಯಂಕರವಾದ ಉಡಿಗೆ ತೊಡಿಗೆ ಗಳನ್ನು ತ್ಯಜಿಸಿ ಮದುವಣಿಗನಂತೆಯೇ ವೇಷಭೂಷಣಗಳನ್ನು ಧರಿಸು ವನು. ಕನ್ಯಾದಾನದ ಸಮಯದಲ್ಲಿ ಶಿವನ ಗೋತ್ರಪ್ರವರಾದಿಗಳ ವಿಷಯವಾಗಿ ಸ್ವಲ್ಪ ಜಿಜ್ಞಾಸೆ ನಡೆಯುವುದು. ಕೊನೆಗೆ ನಾರದನು ವೀಣೆ ಯನ್ನು ನುಡಿಸಿ ಶಿವನ ಗೋತ್ರವೂ ಕುಲವೂ ಓಂಕಾರರೂಪವಾದ ನಾದವೇ ಎಂದು ತಿಳಿಸುವನು. ಹಿಮವಂತನು ತನ್ನ ಬಂಧುಗಳಾದ ಪರ್ವತಶ್ರೇಷ್ಠರ ಮತ್ತು ಬ್ರಹ್ಮನ ಪ್ರೇರಣೆಯಂತೆ ಶಿವನಿಗೆ ಹೈಮವತಿ ಯನ್ನು ಧಾರೆಯೆರೆದುಕೊಟ್ಟು ಕೃತಾರ್ಥನಾಗುವನು.

# ಆ. ಸ್ಕಾಂದಪುರಾಣದ ಕೌಮಾರಿಕಾಖಂಡದ ಕಥಾಸಾರಾಂಶ

ಹಿಮವಂತ ಮೇನೆಯರಿಗೆ ಸತೀದೇವಿ ಮಗಳಾಗಿ ಹುಟ್ಟುವಳು. ಜನನಕಾಲದಲ್ಲಿ ಇಡೀ ವಿಶ್ವವೇ ಆನಂದದಿಂದ ಪುಲಕಿತವಾಗುತ್ತದೆ. ಪಾರ್ವತಿ ಹಿಮವಂತನ ಮನೆಯಲ್ಲಿ ಬೆಳೆಯುತ್ತಿದ್ದಾಗ ಒಂದು ದಿನ ನಾರದ ತಾರಕನ ತುಂಟತನದಿಂದ ತಾರಿಹೋದ ಇಂದ್ರನ ಪ್ರಾರ್ಥನೆಯ ಮೇರೆಗೆ ಹಿಮವಂತನ ಮನೆಗೆ ಬರುತ್ತಾನೆ. ಸಕಲೋಪಚಾರಗಳು ಮತ್ತು ಕುಶಲ ಸಂಭಾಷಣೆ ನಡೆದ ನಂತರ ನಾರದ ಹಿಮವಂತನ ತೊಡೆಯಮೇಲಿದ್ದ ಪಾರ್ವತಿಯನ್ನು ಕರೆದು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುವನು. ಅವನು ಆಶೀರ್ವಾದ ಮಾಡದಿದ್ದುದನ್ನು ಗಮನಿಸಿದ ಮೇನೆ, ಕುತೂಹಲಾವಿಷ್ಟಳಾಗಿ ಮಗಳ ಭವಿಷ್ಯವನ್ನು ಕೇಳುವಳು. ಆಗ ನಾರದ ಪಾರ್ವತಿ ಅಭವನನ್ನೇ ಮದುವೆಯಾಗುವಳೆಂದು ತಿಳಿಸಿ, ಮತ್ತೆ ದೇವೇಂದ್ರನ ಆಸ್ಥಾನಕ್ಕೆ ಹೋಗಿ, ತಾನು ಎಸಗಿದ ಕಾರ್ಯವಿಷಯವನ್ನು ವಿಸ್ತರಿಸಿ, ಮುಂದಿನ ಕಾರ್ಯಸಿದ್ಧಿಗಾಗಿ ಮನ್ಮಥನನ್ನು ಪ್ರೇರೇಪಿಸುವಂತೆ ಹೇಳಿ ಕಳುಹಿಸುವನು.

ಈ ಕಡೆ ಹಿಮವಂತನು ಇಬ್ಬರು ಸಖಿಯರೊಡನೆ ಪಾರ್ವತಿಯನ್ನು ಮಹಾದೇವನ ಆರಾಧನೆಯನ್ನೆಸಗಲು ಕಳುಹಿಸುವನು. ಪಾರ್ವತಿಯ ಸೌಶೀಲ್ಯವನ್ನು ಮೆಚ್ಚಿದ ಈಶ್ವರ ಪುಷ್ಪಫಲಾದಿಗಳನ್ನು ಸಂಗ್ರಹಿಸುವುದಕ್ಕಾಗಿ ಅವಳನ್ನು ನಿಯೋಜಿಸಿಕೊಳ್ಳುವನು.

ಅತ್ತ ದೇವೇಂದ್ರ ಮನ್ಮಥನನ್ನು ಸ್ಮರಿಸಿ, ಬರಿಸಿ, ವಿಧವಿಧವಾಗಿ ಹೊಗಳಿ, ಉಬ್ಬಿಸಿ, ಈಶ್ವರನ ತಪೋಭಂಗಕ್ಕಾಗಿ ಕಳುಹಿಸುವನು. ಮನ್ಮಥ ದುಂಬಿಗಳ ಝೇಂಕಾರಧ್ವನಿಯ ಮೂಲಕ ಈಶ್ವರನ ಮನಸ್ಸನ್ನು ಹೊಗುವನು. ಈಶ್ವರನು ಕಣ್ಣುತೆರೆದು ಅಭಿಲಾಷೆಯಿಂದ ಪಾರ್ವತಿಯನ್ನು ಸ್ಮರಿಸುವನು. ಆ ಸಮಯಕ್ಕೆ ಸರಿಯಾಗಿ ಪಾರ್ವತಿ ಆಶ್ರಮವನ್ನು ಪ್ರವೇಶಿಸುವಳು. ಈಶ್ವರ ಮತ್ತೆ ಜಾಗ್ರತನಾಗಿ ಮನ್ಮಥನ ಮೇಲಿನ

ಕೃಪೆಯಿಂದ ಅನೇಕ ಸ್ಥಳಗಳಲ್ಲಿ ಸಂಚರಿಸತೊಡಗುವನು. ಹೂವಿಲ್ಲ ಅವನನ್ನು ಬಿಡದೆ ಹಿಂಬಾಲಿಸುವನು. ಕೊನೆಗೆ ಬೇಸರಗೊಂಡ ತ್ರಿಣೇತ್ರ ತನ್ನ ಫಾಲನೇತ್ರದಿಂದ ಮನ್ಮಥನನ್ನು ಭಸ್ಮಮಾಡುವನು.

ಪತಿವಿರಹವೇದನೆಯಿಂದ ಪ್ರಲಾಪಿಸುತ್ತಿದ್ದ ರತಿಯನ್ನು ಈಶ್ವರನೇ ಸಮಾಧಾನಪಡಿಸಿ, ಆಕೆಯ ಪತಿ ಸದಾ ಅನಂಗನಾಗಿರುವನೆಂದೂ, ಮುಂದೆ ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀಕೃಷ್ಣನಿಗೆ ಮಗನಾಗಿ ಹುಟ್ಟುವ ನೆಂದೂ ಹೇಳುವನು.

ಅನಂತರ ಈಶ್ವರನು ಪಾರ್ವತಿಯನ್ನು ತ್ಯಜಿಸಿ ಕೈಲಾಸಕ್ಕೆ ಹೋಗು ವನು. ಪಾರ್ವತಿ ತನ್ನ ರೂಪವನ್ನು ತಾನೇ ನಿಂದಿಸಿಕೊಂಡು, ಅಲಂಕಾರ ಗಳನ್ನು ತ್ಯಜಿಸಿ, ನಾರುಡೆಯುಟ್ಟು ಕಠೋರತಪೋನಿರತಳಾಗುವಳು. (ಇಲ್ಲಿ ತಪಸ್ಸಿನ ವರ್ಣನೆ ಅತಿಯಾಗಿಲ್ಲ.) ಶಿವ ವಟುವಿನ ವೇಷವನ್ನು ಧರಿಸಿ ಬರುವನು. ಪಾರ್ವತಿ ಆ ಸಮಯದಲ್ಲಿ ಧ್ಯಾನಮಗ್ನಳಾಗಿರುವಳು. ಸ್ವಲ್ಪ ಹೊತ್ತು ತಡೆದರೆ ಪಾರ್ವತಿ ಬಹಿರ್ಮುಖಳಾಗುವಳೆಂದು ಸಖಿಯರು ವಟು ವಿಗೆ ತಿಳಿಸುವರು. ಆಗ ಶಿವನು ಸರೋವರವನ್ನು ನೋಡುವ ನೆಪದಿಂದ ಹೋಗಿ ನೀರಿನಲ್ಲಿಳಿದು ಮುಳುಗುವವನಂತೆ ನಟಿಸುತ್ತ ಕೂಗಿಕೊಳ್ಳಲು ಪಾರ್ವತಿಯ ಸಖಿಯರು ಬಂದು ಕೈಹಿಡಿದು ಮೇಲೆತ್ತಲು ಪ್ರಯತ್ನ ಪಡುವರು. ಅಶುಚಿಯಾದ ಸ್ತ್ರೀಯರನ್ನು ಮುಟ್ಟುವುದಿಲ್ಲವೆಂದು ಈಶ್ವರ ಅವರ ಸಹಾಯವನ್ನು ತಿರಸ್ಕರಿಸುವನು. ಅಷ್ಟರಲ್ಲಿ ಪಾರ್ವತಿಯೇ ಬಂದು ತನ್ನ ಬಲಗೈ ಈಶ್ವರನಿಗೆ ಸಮರ್ಪಿತವಾಗಿದ್ದುದರಿಂದ ಎಡಗೈಯನ್ನು ನೀಡುವಳು. ಅಶುದ್ಧಮನಸ್ಸಿನ ಸಹಾಯವೂ ಬೇಡವೆಂದು ಮತ್ತೆ ಈಶ್ವರ ನಿರಾಕರಿಸಲು ಪಾರ್ವತಿ ತನ್ನ ಬಲಗೈಯನ್ನೇ ನೀಡಿ, ಸಂಸಾರಸಾಗರದಲ್ಲಿ ಮುಳುಗಿ ಒದ್ದಾಡುತ್ತಿರುವ ಮಾನವರನ್ನು ಉದ್ಧರಿಸಲು ಸ್ತ್ರೀಯೆ ಶಕ್ತ ಳಾದವಳೆಂಬುದನ್ನು ತೋರುವಂತೆ, ಅವನನ್ನು ಮೇಲೆತ್ತುವಳು. ಆ ಪರ ಪುರುಷನ ದೇಹಸ್ಪರ್ಶದಿಂದ ಅಶುಚಿಯಾದ ತನ್ನ ದೇಹವನ್ನು ಯೋಗಾಗ್ನಿ ಯಿಂದ ದಹಿಸುವುದಾಗಿ ಯೋಚಿಸಿ ಪಾರ್ವತಿ ಸಮಾಧಿಗೆ ಕೂರಲುದ್ಯುಕ್ತ ಳಾಗುವಳು. ತನ್ನೊಡನೆ ಸ್ವಲ್ಪ ಹೊತ್ತು ಮಾತಾಡಿ ಅನಂತರ ಹಾಗೆ

ಮಾಡಬಹುದೆಂದು ಆ ವಟು ಕೇಳಿಕೊಳ್ಳುವನು. ಪಾರ್ವತಿ ಸಮ್ಮತಿಸಲು ಅವನು ಶಿವನನ್ನು ತುಂಬ ನಿಂದಿಸುವನು. ಆದರೆ ಪಾರ್ವತಿ ಈಶ್ವರನನ್ನು ನಾನಾವಿಧವಾಗಿ ಸ್ತುತಿಸುವಳು. ಆ ಕಪಟ ವಟು ಮತ್ತೆಯೂ ಶಿವ ನಿಂದೆಯನ್ನು ಮುಂದುವರಿಸುತ್ತಿರಲು, ಅದನ್ನು ಕೇಳಿದರೆ ಪಾಪ ಪ್ರಾಪ್ತ ವಾಗುವುದೆಂದು ಕಿವಿಮುಚ್ಚಿಕೊಂಡು ಸಖಿಯರೊಡನೆ ಹೊರಡುವಳು. ಕೂಡಲೆ ಶಿವನು ಅವಳ ಸೆರಗನ್ನು ಹಿಡಿದುಕೊಂಡು ನಿಜರೂಪದಲ್ಲಿ ಪ್ರತ್ಯಕ್ಷನಾಗುವನು. ತನ್ನ ತಂದೆಯ ಬಳಿಗೆ ಬಂದು, ಅವನ ಸಮ್ಮತಿ ಯನ್ನು ಪಡೆದು, .ವಿವಾಹಮಾಡಿಕೊಳ್ಳುವಂತೆ ಪಾರ್ವತಿ ಶಿವನನ್ನು ಬೇಡಿ ಕೊಳ್ಳುವಳು. ಹಿಮವಂತನು ಸ್ವಯಂವರವನ್ನು ಏರ್ಪಡಿಸಲೆಂದು ಶಿವ ಪಾರ್ವತಿಗೆ ತಿಳಿಸುವನು.

ಮಗಳ ಅಭೀಷ್ಟದಂತೆ ಹಿಮವಂತನು ಸ್ವಯಂವರಕ್ಕೆ ತಕ್ಕ ಸಿದ್ಧತೆ ಗಳನ್ನು ಮಾಡಿಸುವನು. ಸುರಾಸುರರ ನೆರವಿ ನೆರೆಯುವುದು. ವರಣ ಮಾಲಿಕಾಸಮರ್ಪಣಕಾಲದಲ್ಲಿ ಶಿವನು ಶಿಶುಸ್ವರೂಪವನ್ನು ತಾಳುವನು. ದೇವತೆಗಳು ಮತ್ತು ತಾರಕಪ್ರಮುಖರಾಕ್ಷಸರು ಆಕ್ರೋಶದಿಂದ ಶಿಶುವಿನ ಮೇಲೆ ಕೈಮಾಡಿ ನಿರ್ವೀರ್ಯರಾಗಿ ಕಾಲ್ದೆಗೆಯುವರು. ಬ್ರಹ್ಮನ ಬುದ್ಧಿ ವಾದದಿಂದ ದೇವತೆಗಳಿಗೆ ಜ್ಞಾನೋದಯವಾಗಿ ಈಶ್ವರನನ್ನು ಸ್ತುತಿಸು ವರು. ಶಿವನು ವಿಶ್ವರೂಪವನ್ನು ಪ್ರದರ್ಶಿಸುವನು. ಅನಂತರ ಅವನ ಇಷ್ಟದ ಮೇರೆಗೆ ಸಪ್ತರ್ಷಿಗಳು ನಿಶ್ಚಿತಾರ್ಥಪತ್ರಗಳನ್ನು ಮಾಡಿಸುವರು. ದೇವತೆಗಳೆಲ್ಲರು ಈಶ್ವರನನ್ನು ಅಲಂಕರಿಸುವರು. ಕನ್ಯಾದಾನ ಸಮಯ ದಲ್ಲಿ ಪರ್ವತರಾಜನಿಗೆ ಶಿವನ ಕುಲಗೋತ್ರಗಳ ವಿಷಯ ತಿಳಿಯದೆ ಮಿಡು ಕಾಡುವನು. ಆಗ ವಿಷ್ಣುವು 'ಆತ್ಮದೌಹಿತ್ರನೂ ಆತ್ಮಪುತ್ರನೂ ಆದ ನಿನಗೆ ಪುತ್ರಿಯನ್ನು ಕೊಡುತ್ತೇನೆ' ಎಂದು ಹೇಳುವಂತೆ ಪರ್ವತರಾಜನಿಗೆ ತಿಳಿಸುವನು. ಮದುವೆ ಮುಗಿದು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳುವರು.

# ಪರಿಶಿಷ್ಟ ೩

ಮಹಾಕಾವ್ಯದ ಸಾಂಪ್ರದಾಯಿಕ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಹರಿಹರನು ಗಿರಿಜಾಕಲ್ಯಾಣವನ್ನು ಬರೆದಿರುವಂತೆ ಕಾಣುತ್ತದೆ. ಕಾವ್ಯದ ನಡುವೆ ಬರುವ ಬೇಟೆಯ ವರ್ಣನೆ, ರಾತ್ರಿಯ ವರ್ಣನೆ ಮೊದಲಾದುವು ಮುಖ್ಯ ಕಥೆಯ ದೃಷ್ಟಿಯಿಂದ ಅನಾವಶ್ಯಕವೆಂದು ತೋರಬಹುದು. ಆದರೆ ಈ ವರ್ಣನೆಗಳಲ್ಲಿ ಸಹಜ ಸೌಂದರ್ಯವಿದೆ. ಕೆಲವು ಕಡೆಗಳಲ್ಲಂತು ಭಾವಗೀತೆಗಳ ಕಾವಿದೆ. ಕೆಲವು ಭಾಗಗಳನ್ನು ಹಾಗೆಯೇ ಬೇರೆ ತೆಗೆದಿಟ್ಟರೆ ಅವು ಅಖಂಡ ಭಾವಗೀತೆಗಳಂತೆ ಕಾಣು ತ್ತವೆ. (ಉದಾಹರಣೆಗಾಗಿ ಮುಂದೆ ಕೊಟ್ಟಿರುವ 'ಬಿಬ್ಬಿರ ಬಿರಿವಂತಪ್ಪಿ ದುದು ದೇಹವೊಂದೆಂಬಿನೆಗಂ' ಎಂಬ ಭಾವವನ್ನು ನೋಡಬಹುದು.) ಹಾಗೆಯೇ ಅವನು ವರ್ಣಿಸುವ ಕೆಲವು ಚಿತ್ರಗಳಂತು ಕಣ್ಣಿಗೆ ಕಟ್ಟಿ ದಂತಿರುತ್ತವೆ. (ಉದಾಹರಣೆಗಾಗಿ ವನದ ಭಲ್ಲೂಕನಿಕಾಯದ ಅಥವಾ ಮರ್ಕಟಗಳ ವರ್ಣನೆಯನ್ನೂ, ಗಿಳಿ ಮಾವಿನ ಹಣ್ಣನ್ನು ಸವಿಯುವ ಬಗೆಯ ವರ್ಣನೆಯನ್ನೂ ನೋಡಬಹುದು.) ಮೂಕಪ್ರಾಣಿಗಳ ವಿಷಯ ದಲ್ಲಿ ಹರಿಹರನಿಗೆ ಎಷ್ಟು ಮಮತೆ, ಎಷ್ಟು ಆತ್ಮೀಯತೆ ಎಂಬುದನ್ನು 'ಚೆನ್ನ ಕುನ್ನಿಯೊಡನಳಿವೆಂ' ಎಂಬ ಭಾಗದಲ್ಲಿ ನೋಡಬಹುದು. ಈ ಭಾಗವಂತು ಪ್ರಪಂಚದ ಅತ್ಯುತ್ತಮ 'ಚರಮಗೀತೆ' ಗಳಲ್ಲೊಂದು ಎಂದು ಧಾರಾಳವಾಗಿ ಹೇಳಬಹುದು.

ಸಂಗ್ರಹದಲ್ಲಿ ಬಿಟ್ಟುಹೋಗಿರುವ ಇಂತಹ ಕೆಲವು ವರ್ಣನಾಮಯ ವಾದ ಪದ್ಯಗಳನ್ನು ಇಲ್ಲಿ ಆರಿಸಿಕೊಟ್ಟಿದೆ.

# ೧. ನಡೆದುದುದ್ಯತ್ ಕಿರಾತ ಪ್ರಜಾತಂ

## (ಅ) ಪುಳಿಂದರಟ್ಟೆ ಮುಟ್ಟುತ್ತಿಚ್ಚರ್

ಶಬರಾನೀಕದ ಜನ್ಮಸ್ಥಲಮೆನಿಪ್ಪರಣ್ಯ [ದೊಳ್] ಪುಳಿಂದಬಲಂ ಬೇಂಟೆಗೆಂದೊರ್ಬುಳಿಗೊಂಡು ಮುರ್ಬು ಮಸಗಿದಂತೆ ಸಡಗರಿಸಿ ಸಮುಕಟ್ಟಿ ಸನ್ನೆದೋಱ,

ಬಡಿಕೋಲ್ ಕಿಗ್ಗಟ್ಟು ಹಾಸಂ ಶುನಕವಿತತಿ ಹೇರಿಟ್ಟ ಕೂರಂಬುಗಳ್ ಕೆಯ್-
ಪೊಡೆ ಬಿಲ್ ಪುಲ್ದಂಡೆ ಬೆಳ್ಳಾರ್ಪಟ ಮೆರೆ ಬಲೆಗಳ್ ಸಾಳುವಂ ಕೂಳಿಗಾಳಂ
ಗಿಡುಗಂ ಬಲ್ವಿಂಡಿಯೊಳ್ ದೀಹದಪುಲಿ ನಿಶಿತಾಸ್ತ್ರಂಗಳುಗ್ರತ್ವಮಂ ಸಂ-
ಗಡಿಸುತ್ತಿರ್ದೊಪ್ಪೆ ವಿಂಧ್ಯಾಟವಿಗೆ ನಡೆದುದುದ್ಯತ್ಕಿರಾತ ಪ್ರಜಾತಂ ೧

ತಡಿಕೆವಲೆ ಕಣ್ಣಿವಲೆ ನಿ-
ಟ್ಟಡಿಕಿಲ್ವಲೆ ಗೂಂಟವಲೆ ಪೊಣರ್ಚುವ ಬಲೆ ಮುಂ-
ಬಿಡುವಲೆ ನಡುವಲೆ ತಡೆವಲೆ
ಸಿಡಿವಲೆ ನಿಡುವಲೆಗಳೊಪ್ಪಿದುವು ಲುಬ್ಧಕರೊಳ್ ೨

ಇಡು ಮೊಲನಂ ತೆರಳ್ಚದಿಸು ಪುಲ್ಲೆಗಳಂ ಬಲೆಯೊಡ್ಡಿ ಖಡ್ಗಿಯಂ
ಪಿಡಿ ಮರೆವಿಂಡನೆಬ್ಬು ಪುಲಿಯಂ ಛಲದಿಂದಿಱ ಪಂದಿಯೊತ್ತುಗೊಂ-
ಡೊಡೆ ಬಿಡು ನಾಯ್ಗಳಂ ಸಮೆದ ಪೆರ್ಗುಳಿಯೊಳ್ ಕರಿಪೋತಕಂಗಳಂ
ಕೆಡೆಪು ಮರಳ್ಚು ಸಿಂಹಮನೆನಿಪ್ಪ ಘನಧ್ವನಿಯಾಯ್ತರಣ್ಯದೊಳ್ ೩

ಆ ಸಂಭ್ರಮದೊಳೊರ್ವ ಪುಳಿಂದಂ ತನ್ನ ನಚ್ಚಿನ ನಾಯಂ ಮೊಲನಂ ಸರುವಂ ತೋಱ ಕೇಱ ಬಿಟ್ಟಾಗಳ್,

ನಡೆನಡೆದು ನಸುಬಳಂಕು-
ತ್ತೆಡಬಲನಂ ನೋಡಿ ಕೂಡೆಯಾಘ್ರಾಣಿಸುತುಂ
ಗಿಡುವಿನ ಸರುವಿನ ದರುವಿನ
ಮಡುವಿನ ಬಳಿಗೊಂಡು ಶುನಕನಟ್ಟಿತು ಮೊಲನಂ ೪

ಅಟ್ಟಿದೊಡೆ ತಿರುಗಿ ಮುರಿಮುರಿ-
ದೊಟ್ಟೈಸುತ್ತೆ ಕೊಂಕಿ ಪರಿಯುತೆಡನಂ ಬಲನಂ
ದಿಟ್ಟಿಸುತೆ ನಿಂದು ನಿಲ್ಲದೆ
ನಿಟ್ಟೋಟದೊಳೋಡಿತೆಸೆವ ಮುಸಕದ ಶಶಕಂ ೫

ಬಿಡದೋಡೆ ಕಂಡು ಶಬರಂ
ಕಡುಮುಳಿದಱಿಯಟ್ಟೆ ತಿರುಗೆ ತಿರುಗುತ್ತುಂ ಸಂ-
ಗಡಿಸಿ ಪರಿದುಬುಬೆನುತ್ತುಂ
ಬಡಿಕೋಲಿಂದಿಟ್ಟನಧಿಕಬಲನಾ ಮೊಲನಂ ೬

ಇಡೆ ತಿರುಗುತ್ತೆ ಬರ್ಪ ಬಡಿಕೋಲೊಳೆ ಸಿಲ್ಕುತೆ ಸಿಲ್ಕದಾ ಮೊಲಂ
ಗಿಡುಗಳೊಳೋಡಿ ಪೊಕ್ಕು ಪದದೊಳ್ ಘನರಾಹುವ ಕೋಳ್ಗೆ ಭೀತಿಗೊಂ-
ಡುಡುಪತಿ ಬಿಂಬದಿಂದೆ ಸರಿದೋಡಿ ಮುಗಿಲ್ಗಳೊಳೆಯ್ದಿ ಪೊಕ್ಕು ಗಂ-
ಡುಡುಗಿ ಸುರುಳ್ದ ತಚ್ಛಶಕನಂ ನೆಱೆ ಪೋಲ್ತುದು ಕಾಡ ಪೆರ್ಮೊಲಂ ೭

ಮತ್ತೊಂದೆಡೆಯೊಳೊಂದು ಕುರಂಗಮಂ ಶಬರನಿಸೆ

ತಿರುಗುವ ತನು ಬೆರ್ಚುವ ಕಣ್
ಪರಿವ ಮನಂ ನಟ್ಟ ಕಿವಿಯಡಂಗುವ ಸುಯ್ಯಂ
ಸರಳಂ ಮಾಱುತೆ ಹರಿಣಂ
ಸರಳಿಸಿತಯ್ದಾಱನೇಳನೆಂಟೊಂಬತ್ತಂ ೮

## (ಆ) ಎನ್ನಯ ಚೆನ್ನಕುನ್ನಿಯೊಡನಳಿವೆಂ

ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಷ್ಮವಕ್ತ್ರಂ ಘನ-
ಕ್ರೂರಂ ವಜ್ರಸಮಾನ ರೋಮನಿಚಯಂ ಸಂಪೂರ್ಣಕಾಯಂ ಸ್ಥಿರಂ
ಶೂರಂ ರೌದ್ರಗಭೀರಚಿತ್ತನತಿಮಾನಿ ಸ್ವಲ್ಪಪುಚ್ಛಾನ್ವಿತಂ
ಘೋರಾರಣ್ಯಚರಂ ವಿರಾಜಿಸಿದುದುದ್ಯದ್ಭೀಕರಂ ಸೂಕರಂ ೯

ಬರೆ ಕಾಣುತ್ತಲ್ಲಿ ಭಿಲ್ಲಪ್ರಕರಮುಡಸಿ ಕೂರ್ನಾಯ್ಗಳಂ ಬಿಟ್ಟು ಬೊಬ್ಬಿ-
ಟ್ಟರರೇ ಕೆಯ್ಕೊಂಡು ನಾಲ್ಕುಂ ದೆಸೆಗೆ ಮಸಗೆ ಕಂಡೆಕ್ಕಲಂ ದಾಡೆಗುಟ್ಟು-
ತ್ತೆರಡುಂ ಕಣ್ಣಿಂ ಸ್ಫುಲಿಂಗಂ ಸುರಿದಪುವೆನೆ ನೋಡುತ್ತೆ ತೀಡುತ್ತೆ ಕಲ್ಲಿಂ
ದುರುದಂಷ್ಟ್ರಾಗ್ರಂಗಳಂ ಭೂಮಿಯನುಱದೆ ಬೆಱಂಟುತ್ತೆ ಮುಂಗಾಲ್ಗ
ಳಿಂದಂ ೧೦

ನಟ್ಟಡವಿಯೊಳಗೆ ಮುಳಿಸಿಂ
ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದುಱೆ ಕಿ
ರ್ಗುಟ್ಟುತೆ ಮುಂದಟ್ಟೆ ಪೆಡಂ
ಮುಟ್ಟುತೆ ಸೂಕರನಡರ್ದು ಸಾರ್ದುದು ಮೆಳೆಯಂ ೧೧

ಕುಪ್ಪಳಿಸಿ ತುರುಗಿ ಪರ್ವಿದ
ಱೊಪ್ಪವನಿರದಂಡುಗೊಂಡು ಪಂದಿಯು ಬಳಿಯೊಳ್
ನೊಪ್ಪುನೆಗೆದುರ್ಬಿ ಪಾಯುತೆ
ಚಪ್ಪರಿಸುತ್ತುಗಿದು ಬಗಿದು ತೆಗೆದುವು ನಾಯ್ಗಳ್ ೧೨

ಮತ್ತಮವಱೊಳಗೊಂದು ಜಾತಿಜಾಯಿಲಂ ಪೋಗದೆ ನಿಂದು,

ಮುಳಿದಟ್ಟೆ ತಿರುಗಿ ನೋಡು
ತ್ತೊಳಪೊಕ್ಕು ಮರಳ್ದು ಮತ್ತೆ ಬೆನ್ನಟ್ಟೆ ಕರಂ
ಕಳಿದು ಪೆಡಂಬಾಯ್ದುಳಲಿಂ
ಬಳಸುತ್ತಿರೆ ನಿಂದ ಪಂದಿಯುಂ ಶುನಕೇಂದ್ರಂ ೧೩

ಮಿಕ್ಕು ಪುಗಲಿತ್ತು ಕಿರ್ಗ
ಣ್ಣಿಕ್ಕುತ್ತೊಳಪೊಕ್ಕ ಜಾಯಿಲನ ಬಡನಡುವಂ
ಚಕ್ಕನೆ ತುಂಡಿಸಿ ಮಲೆಯುತೆ
ಧಿಕ್ಕರಿಸಿತ್ತತುಳಕೋಪ ಸೀಡಂ ಕ್ರೋಡಂ ೧೪

ಅಳ್ಕಿ ಪುಳಿಂದಂ ಕಾಣುತೆ
ತಳ್ಳೈಸಿಯೆ ಕೊಂಡು ಶುನಕನೆರಡುಂ ಕಡಿಯಂ

ಕಾಳ್ಕಿರ್ಚು ತಗುಳ್ದ ತೆಱದಿಂ
ನಿಳ್ಕೃಸದೆ ನೊಂದು ಬೆಂದು ಬಳಲುತ್ತೆಂದಂ ೧೫

ಪಾಸಿನ ಮೇಲೆ ಪಟ್ಟಿರಿಸಿ ಪಾಲೆಱೆದೆನ್ನೊಡಗೂಡಿ ಬಾಲಕಾ-
ಭ್ಯಾಸದಿನೆತ್ತಿ ಸತ್ತಿಗೆಯ ತಣ್ಣೆಳಲೊಳ್ ಬಳೆವಂತು ಮಾಡಿಯು-
ಚ್ಛ್ವಾಸನದಲ್ಲಿ ಕುಳ್ಳಿರಿಸಿಯೋವಿದ ಕುನ್ನಿಯಾನೀ ವರಾಹನೀ
ಸಾಸಿಗನೀ ಕಠೋರಮನನೆನ್ನಯ ಮುಂದೆ ಸಮಂತು ಕೊಲ್ವುದೇ ೧೬

ಒಡನೂಡುತ್ತೊಡವೆಳೆಸು-
ತ್ತೊಡನಾಡಿಸಿದೆನ್ನ ಚೆನ್ನಕುನ್ನಿಯನೀ ಕ-
ಕ್ಕಡವಂದಿ ಕೊಂದುದಿನ್ನಿದ-
ಱೊಡನಳಿವೆಂ ಕೊಲ್ಲದುಳಿಯೆನೀ ಸೂಕರನಂ ೧೭

ಎಂದು ಪುಳಿಂದನಾಥನುರಿದಾರುತೆ ಕೂರಲಗಿಂ ಕಱುತ್ತು ಪೆ-
ರ್ಬಂದಿಯನೆಯ್ದೆ ತಳ್ತಿಱಿದೊಡುಂಗುಟದಿಂದೆ ಶಿರಂಬರಂ ವರಾ-
ಹಂ ದಿಟಮೆತ್ತೆ ಮತ್ತಿಱಿಯೆ ಮತ್ತೆ ಕರಂ ಸೆಳೆದೆತ್ತೆ ನೊಂದು ತಾ-
ನೊಂದೆಸೆಯೊಳ್ ವರಾಹಪತಿಯೊಂದೆಸೆಯೊಳ್ ಕೆಡೆದತ್ತರಣ್ಯದೊಳ್ ೧೮

## (ಇ) ಶಬರಿಯಿಲ್ಲದೊಂದಡಿಯನಿಡಂ

ಮತ್ತಮೊಂದೆಡೆಯೊಳ್ ಶಬರ [ನೊರ್ವಂ]

ಮತ್ತಗಜ ಮಸ್ತಕದ ಪೊಸ-
ಮುತ್ತಂ ಬಳ್ಳಿಂದೆ ತಂದೆನೆಂದೊಲವಿಂದಂ
ಮತ್ತೋತ್ತುಂಗ ಪಯೋಧರಿ-
ಗಿತ್ತಂ ಮತ್ತೊರ್ವ ಶಬರಿ ಮಿಗೆ ನಗೆ ವನದೊಳ್ ೧೯

ನೃತ್ತಮದಲ್ಲದೆ ಘನಸುಖ-
ಚಿತ್ತಂ ಚಿತ್ತಜನ ಪೋಲೆ ಮನ್ಮಥರಾಗೋ-
ನ್ಮತ್ತನದೊರ್ವಂ ಲುಬ್ಧಕ-
ನತ್ತಿತ್ತಂ ಶಬರಿಯಿಲ್ಲದೊಂದಡಿಯನಿಡಂ ೨೦

ಕೆಲದೊಳ್ ಪುಳಿಂದಿಯಿರೆ ಪೆ-
ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ
ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮಱೆದು ತಣಿದು ಬೇಡಂ ಬೇಡಂ ೨೧

ತಳಿರ್ಗಳ ಸೀರೆಯುಟ್ಟು ಗುರುಗಂಜಿಯ ಹಾರಮನಾಂತು ಮುಂದೆ ಶೀ-
ತಳಶಶಿಕಾಂತದಿಂ ಸಮೆದೊರಲ್ಗಳೊಳಂ ಬಿದಿರಕ್ಕಿಯಿಕ್ಕಿ ನಿ-
ಚ್ಚಳಮನ ಸುವ್ವಿ ಕಾಡೊಡೆಯ ಸುವ್ವಿ ಮನೋಹರ ಸುವ್ವಿ ಸುವ್ವಿಯಂ-
ದಳವಡೆ ರಾಗದಿಂ ತಳಿಸಿದರ್ ವನದಲ್ಲಿ ಪುಳಿಂದಕಾಂತೆಯರ್ ೨೨

ಮತ್ತಮೊಂದೆಡೆಯೊಳ್,

ಇನೆಯನೊಡಗೂಡಲೆಂದಿಂ-
ಪಿನ ರಮ್ಯಸ್ಥಳಮನಱಿಸಿ ಬರುತುಂ ನವಯೌ-
ವನೆ ಮುಗ್ಧೆ ತುಱುಗಿ ಪರ್ವಿದ
ವನದೊಳಗಣ ಮೆಳೆಗಳೊಳಗೆ ಪುಗುವನ್ನೆವರಂ ೨೩

ಬೆಳಗಂ ಕಳ್ತಲಿಸುವ ಮೆಳೆ
ಮೆಳೆಯಂ ಪೊಕ್ಕಲ್ಲಿ ತನ್ನ ಕಣ್ಗಳ ಬೆಳಗಿಂ
ಬೆಳಗಾಗಿರೆ ಬೆಳಗಿಲ್ಲದ
ಮೆಳೆಯಿಲ್ಲೆಂದಬಲೆ ಶಬರಿ ಸೊಬಗಳಿದಿರ್ದಳ್ ೨೪

ಇರೆ ಸುಪ್ರೌಢಕಿರಾತಂ
ತರುಣಿಯ ಮುಗ್ಧತೆಗೆ ಮೆಚ್ಚಿ ಮುಗ್ಧೆಯ ಕಣ್ಣಂ
ಬರೆ ಮುಚ್ಚಿ ಇಡಿದ ಕಳ್ತಲೆ
ದೊರೆಕೊಂಡತ್ತೆಂದು ನೆರೆದು ಸುಖಿಯಾಗಿರ್ದಂ ೨೫

## (ಈ) ಮೃಗಸಂತಾನದ ನೆಲೆಯರಣ್ಯಂ

ಮತ್ತಮೊಂದೆಡೆಯೊಳ್ ಪಸಿವೆತ್ತು ಮಸಗಿ ಬಂದು ಬಿಲಂಗಳೊಳ ಗಣೆಱುಂಪೆಗಳಂ ಮೊಗಮಿಟ್ಟೂದಿಯೂದಿ ತಣಿಯದೆ ತವಕದಿಂ ನಡೆ

ನಡೆದು ನಳನಳಿಸುವ ಬೆಳಲಮರದ ತಳದೊಳುದಿರ್ದ ಪಕ್ವಫಲಂಗಳ ನಾಯ್ದುಕೊಂಡು ಗಳಗಳನೆ ಪರಿದು ಪಾಸಱೆಯ ಮೇಲಾಸುರದಿಂದೊಡೆದೊಟ್ಟಿ ಜೇನಹುಟ್ಟುಗಳನಿಟ್ಟೆಟ್ಟಲಸದೆ ಕಲಸಿ ತಣಿವಿನಂ ತಿಂದು ತೇಗಿ ತೂಗಿ ಕೆಲೆಕೆಲೆದು ಕುಪ್ಪಿಕುಪ್ಪಿಯುರ್ಬಿ ಕೊರ್ಬಿ ನಲಿದಾಡುವ ಭಲ್ಲೂಕನಿಕಾಯದಿಂ; ಮತ್ತಮೊಂದೆಡೆಯೊಳ್ ಎಳವುಲ್ಗಳಂ ಮೇದು ತಿಳಿನೀರ ನೀಂಟಿ ನೆಳಲೊಳ್ ಪಟ್ಟಿರ್ದು ಬೆಂಡೇಳ್ವ ಲೋಳೆಹಿಂಡಿಲ್ಗಟ್ಟಿ ಮೇವಂ ಮಗುಳ್ಚಿ ಕಟ್ಟಿದಿರ ಪುಲಿಯಂ ತೊಟ್ಟನೆ ಕಂಡು ಭೋಂಕನೆಳ್ದು ಮೊಗಮನೆತ್ತಿ ಕಡುಮುಳಿದು ಖಾತಿಗೊಂಡು ಚಲದಿಂ ಮಲೆದು ಘಳಿಲನೆಯ್ದಿ ಪಾಯ್ದು ಪೊಯ್ದು ಕೋಡಿಟ್ಟು ಜಲ್ಲಿಸಿ ಬಿಸುಟ್ಟು ನೊಸಲ ತೀಂಟೆ ತೀಱದೆ ಕೊಣಕಿಟ್ಟು ಮುರಿದು ಪಿರಿದಪ್ಪ ಪುತ್ತಿನೊಳೊತ್ತಿ ಪೋರ್ದು ಮೆತ್ತಿದ ಕರ್ದಮಂ ನಿಟಿಲತಟದೊಳ್ ಪತ್ತಿರ್ದ ಧೂಳಿ ಮೆಯ್ಯೊಳೆ ಮೆಱೆಯೆ ಪಲವೋತ್ಕರದಿಂ ಪೊಱಮಟ್ಟ ಕಾಳರಕ್ಕಸರಂತಿರ್ಪ ಕಾಳ್ಕೋಣಂಗಳಿಂ; ಮತ್ತಮೊಂದೆಡೆಯೊಳ್ ಮರದಿಂ ಮರಕ್ಕೆ ತಿರುಗಿ ಪಾಯ್ದೆಳೆಗೊಂಬ ನಲ್ಲಾಡಿ ತೂಗಿ ತೊನೆದಳ್ಳಿಱಿದು ಕುಳ್ಳಿರ್ದು ಕಾಲ್ಗಳಂ ನೀಡಿ ಬರಿಯಂ ಬೆರಂಟಿ ಬಿಸಿಲ್ಗಾಯ್ದು ಪಸಿವೆತ್ತಿ ಮೇಲಂ ನೋಡಿ ನೀಡಿ ನೆಗೆದು ತಿಣ್ಣಗೊಂಬಿನೊಳ್ ಬಣ್ಣವಳಿಯದ ಪಣ್ಣಂ ತಿಂದು ತಣ್ಣನೆ ತಣಿದು ಕಣ್ಣಂ ಬಿಟ್ಟು ಪುರ್ಬಿಕ್ಕಿ ಪಲ್ಗಿಱಿದು ಹುರ್ರೆಂದು ಕಿರಾತಕಾಂತೆಯರಂ ಮಿಗೆ ನಗಿಸುತಿರ್ಪ ಮರ್ಕಟಪ್ರಕರದಿಂ ಒಪ್ಪಿರ್ದುದುದ್ಯನ್ನಗಂ.

## ೨. ತನ್ನಂದನಮೆ ಘನವನಶ್ರೀಗೆ ರೂಪಾಗಿ ತೋರ್ಕುಂ

### ಮಾವಿಮ್ಮಾವಳಿ ಮದಾಳಿ ಗಿಳಿಯರಗಿಳಿಗಳ್

ನೀರೆಱೆದುಪಕಾರಕ್ಕೆಳ-
ನೀರಂ ರುಚಿವೆರಸು ತೀವೆ ವನಪಾಲಕರಂ
ಪಾರುತ್ತಿರ್ಪಂತಿರ್ಪುವು
ಸಾರಾಯಫಲಾಳಿ ನಾಳಿಕೇರಂ ಬನದೊಳ್ ೨೬

ವನಲಕ್ಷ್ಮಿಗೆ ಸಕಲ ವಿಲಾ-
ಸಿನಿಯರ್ ಬಳಿದೋಳ್ಗಳಿಂದೆ ಚಾಮರಮಿಕ್ಕಲ್
ತನತನಗೆ ನಿಂದರೆನೆ ತದ್-
ವನದೊಳ್ ಪೊಂಬಾಳೆಯಿಂದೆ ಪೂಗಮಡೆಸೆಗುಂ ೨೭

ಅಳಿಗಿಳಿ ಪಿಕಕುಲರವದಿಂ
ನೆಳಲಿಂ ರೂಪಿಂ ಫಲಂಗಳಿಂ ಪೂವಿಂಡಂ
ಬಳಸಿ ತಣಿಪುವುದು ಪೊಸಮಾ-
ವೆಳಸಿದ ಪಾಂಥಪ್ರತಾನ ಪಂಚೇಂದ್ರಿಯಮಂ ೨೮

ಕಾವಂಗೆಂದು ವಸಂತಂ
ಭಾವಿಸಿ ಸಮೆದಿಟ್ಟ ನೀಲದರಮನೆಯೆನಿಕುಂ
ಮಾವಿನ ಹೂವಿನ ಕಾವಿನ
ಠಾವಿನ ಮೊದಲಿಂದೆ ತೀವಿದಳಿಗಳ ಬಳಗಂ ೨೯

ಬಿಗಿಯಪ್ಪಿ ಮೊಗಮನಿಟ್ಟಾ-
ಲಿಗಳವು ನಸುಮುಚ್ಚಿ ಪಕ್ಷಯುಗಮೆಳಲೆ ರಸಂ-
ದೆಗೆವ ದನಿ ನಿಮಿರೆ ನಾಲಗೆ
ಚಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ ೩೦

ಬಿಗಿಯಪ್ಪಿ ಪುಷ್ಪರಸಮಂ
ತೆಗೆದೀಂಟಿ ತುಳುಂಕಿ ತೂಱಿ ತೇಂಕಾಡಿ ಮನಂ
ಮಿಗೆ ಸೊರ್ಕಿ ಜಿನುಗಿ ಜೀವಿಸಿ
ಮುಗಮುಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ ೩೧

ಆ ನವಗಂಧಕ್ಕೆಳಸಿಯ-
ನೂನಂ ಮಧುಕರನಿಕಾಯಮೊಲ್ದನವರತಂ
ನಾನಾಮಂಜುಳನಿನದದೊ-
ಳಾನಂದಂ ಮಿಕ್ಕು ಕಂಪನೀಂಟುತ್ತಿರ್ಕುಂ ೩೨

# ೩. ಬಿಬ್ಬಿರ ಬಿರಿವಂತಪ್ಪಿದುದು ದೇಹಮೊಂದೆಂಬಿನೆಗಂ

ನಳಿನದ ಕರ್ಣಿಕೆಯೊತ್ತಿನೊ-
ಳಳವಡೆ ಕಣ್ಮುಚ್ಚಿ ಮುಗ್ಗುಲಿಕ್ಕಿಯಜಸ್ರಂ
ತಳರದೆ ನಿದ್ರಾಸುಖದಿಂ
ಕಳಹಂಸೆಯು ಮಱಿಗಳಿರ್ಪುವಂತಾ ಕೊಳನೊಳ್ ೩೩

ಅತಿಭರದಿಂ ನವಕುವಲಯ
ತತಿಯೊಳ್ ಕಾಸಾರದೊಳ್ ಕುಶೇಶಯಚಯದೊಳ್
ಲತೆವನೆಯೊಳ್ ವನದೊಳ್ ಪುಳಿ-
ನತಳದೊಳಱಸಿದುದು ಕಾಂತೆಯಂ ಕಳಹಂಸಂ ೩೪

ಪುಳಿನಮುನಡಿಗಡಿಗೇಱುತೆ
ಕೊಳನೊಳಗಡಿಗಡಿಗೆ ಪೊಕ್ಕು ಪೊಱಮಡುತೆ ಲತಾ-
ವಳಿಗಳೊಳಡಿಗಡಿಗಾಲಿಸು-
ತಳವಳಿದಡಿಗಡಿಗೆ ಬಳಲುತಿರ್ದುದು ಹಂಸಂ ೩೫

ಬಱಿದೆ ಗಳಗಳನೆ ನಡೆವುದು
ಪೆಱಸಾರ್ವುದು ಬೆರ್ಚುವುದು ಬಳಲ್ವುದು ಮತ್ತೆ-
ಳ್ಚುಱಿಗೊಳಿರ್ಪುದು ಕಣ್ಗಳನರೆ-
ದೆಱೆವುದು ನೆನೆನೆನೆದು ಕಾಂತೆಯಂ ಕಳಹಂಸಂ ೩೬

ಇರೆ ಸಿರಿ ಬರ್ಪಂದದೆ ಸುಂ-
ದರಿ ಬರೆ ಪರಿತಂದು ಚಂಚುಗೂಡುತೆ ಪಕ್ಷಾಂ-
ತರದೊಳ್ ಮುಸುಂಕಿ ಬಿಬ್ಬಿರ-
ಬಿರಿವಂತಪ್ಪಿದುದು ದೇಹಮೊಂದೆಂಬಿನೆಗಂ

# ೪. ಅಂಬರದ ಪುಳಿಂದಿ ತಾಳ್ದಿಸೆವ ಮೂಗಿನ ಮುತ್ತು

ಅದು ಪೊಸಪವಳದ ಬಂಧೂ-
ಕದ ಕೆಂದಾವರೆಯ ದಾಸಣದ ಪೂವಿನ ವ-
ರ್ಣದ ಸಂಪದದಿಂ ಮುದದಿಂ
ಮುದದಿಂದೊಪ್ಪಿತ್ತು ಚಂದ್ರಬಿಂಬವಿಡಂಬಂ ೩೮

ಹರನುದ್ಧೂಳಿಸಿದತ್ಯನೂನಭಸಿತಪ್ರದ್ಯೋತಮೋ ಚಂದ್ರಶೇ-
ಖರನಾನಂದಮಯಾಟ್ಟಹಾಸರುಚಿಯೋ ಸರ್ವೇಶ ಸತ್ಕೀರ್ತಿಯೋ
ಪರಮೋತ್ತುಂಗಮರುನ್ನದೀ ಪ್ರಬಳಗೌರಚ್ಛಾಯೆ ಭೂಭಾಗದೊಳ್
ಪರೆದತ್ತೋ ಎನೆ ಪರ್ವಿತುರ್ವಿಯನಗುರ್ವಿಂ ಸಾಂದ್ರ ಚಂದ್ರಾತಪಂ ೩೯

ಮುಡಿವೊಡೆ ಮಲ್ಲಿಕಾಪ್ರತತಿ ಪೂಸುವೊಡುತ್ತಮುನವ್ಯಚಂದನಂ
ತುಡುವೊಡೆ ಮೌಕ್ತಿಕಾಭರಣವೀಸುವೊಡಂತಪ್ಪೃತಾಬ್ಧಿ ಪೊರ್ದುಕೊ-
ಳ್ವೊಡೆ ಧವಳೋತ್ತರೀಯಮೊಸೆದೀಂಟುವೊಡಾ ನವದುಗ್ಧಮೊಲ್ದು ನೋ-
ಳ್ಪೊಡೆ ರಜತಾದ್ರಿಯೆಂದೆನಿಸಿ ತೋಱಿತು ಮಾಱಿದ ಚಂದ್ರಿಕೋಜ್ವಳಂ
೪೦